ಭಾನುವಾರ, ಜೂನ್ 19, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಘಟಿಕೋತ್ಸವ
ಮುಂಬೈನ ರಮೇಶ್ ಸಿಪ್ಪಿ ಅಕಾಡೆಮಿ ಆಫ್ ಸಿನಿಮಾ ಆ್ಯಂಡ್ ಎಂಟರ್‌ಟೈನ್‌ಮೆಂಟ್‌ನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಘಟಿಕೋತ್ಸವದಲ್ಲಿ ನಟ ರವೀನಾ ಟಂಡನ್ ಪಾಲ್ಗೊಂಡಿದ್ದರು

UNIVERSAL
GROUP OF INSTITUTIONS

A ray of hope for success

A Ray of Hope for Success

23 Years of EXPERIENCE / Produced 7810+ OFFICERS

1st INTEGRATED UPSC CONCEPT COLLEGE!!

ಯುನಿವರ್ಸಲ್ ಸಂಸ್ಥೆಯೊಂದಿಗೆ ನಿಮ್ಮ ಯಶಸ್ಸಿನ ಪಯಣ ಆರಂಭಿಸಿ.

ನಮ್ಮ ಸುಭದ್ರ ಅಡಿಪಾಯದೊಂದಿಗೆ
ನಿಮ್ಮ ಸ್ಪರ್ಧಾತ್ಮಕ ಪರೀಕ್ಷೆಯ ಕನಸನ್ನು ನನಸಾಗಿಸಿಕೊಳ್ಳಿ.

Join Our College & add your name to the list of
UPSC TOP RANK Holders

ADMISSIONS OPEN 2022-23

2 YEARS Pre University
ARTS & COMMERCE

3 YEARS BA
with integrated Coaching for
- IAS
- IPS
- KAS
- KPSC
- UPSC

3 YEARS B.Com
with integrated Coaching for
- IAS
- IPS
- KAS
- KPSC
- UPSC

5 YEARS BA.LLB
with integrated Coaching
- IAS
- IPS
- KAS
- AIJS Judiciary Exams

New IAS/KAS Batches starts at Vijayanagar Branch 15th July 2022

FOR COLLEGE ADMISSION ENQUIRY CALL
9686664985 | 9686664983 | 6366816611

FACILITIES

- RESIDENTIAL CAMPUS
- WIFI ENABLED CAMPUS
- SPORTS
- INTERNSHIP FOR STUDENTS
- MEDICAL DISPENSARY
- CAMPUS PLACEMENT
- MENTORSHIP
- HEALTHY & HYGIENIC FOOD
- CAFETERIA
- 24/7 SECURITY

ಪದವಿ ಜೊತೆಗೆ ಇಂಟಿಗ್ರೇಟೆಡ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಯೂನಿವರ್ಸಲ್ ಗ್ರೂಫ್ ಆಫ್ ಇನ್ಸಿಟ್ಯೂಶನ್, ಬೆಂಗಳೂರು ಈ ಸಂಸ್ಥೆಯು ರಾಜ್ಯದಲ್ಲಿ ಪದವಿ B.A, B.COM, B.A.L.L.B ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಯ (UPSC/KPSC) ತರಬೇತಿಯನ್ನು ಪ್ರಾರಂಭಿಸಿದ ಮೊಟ್ಟ ಮೊದಲ ಸಂಸ್ಥೆಯಾಗಿದ್ದು, ಸತತ 23 ವರ್ಷಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ನೀಡುತ್ತಿದ್ದು, 7810ಕ್ಕೂ ಹೆಚ್ಚು ಆಫೀಸರ್‌ಗಳನ್ನು ಸೃಷ್ಟಿಸಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಮೊದಲ ಬಾರಿಗೆ ಇಂಟಿಗ್ರೇಟೆಡ್ ಪರಿಕಲ್ಪನೆಯನ್ನು ಛೇರ್ಮನ್ ಆರ್. ಉಪೇಂದ್ರ ಶೆಟ್ಟಿಯವರ ಮಾರ್ಗದರ್ಶನದಲ್ಲಿ ಪ್ರಾರಂಭಿಸಿದ್ದು ರಾಜ್ಯದ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ವಿಯಾಗಿ ಗುರಿ ಸಾಧಿಸಲು ಭದ್ರ ಬುನಾದಿಯನ್ನು ನಮ್ಮ ಸಂಸ್ಥೆಯು ಹಾಕುತ್ತಿದೆ. ಈ ಸುವರ್ಣ ಅವಕಾಶವನ್ನು ಪಡೆದುಕೊಂಡು ಗುರಿ ಸಾಧಿಸುವ ನಿಮ್ಮ ಕನಸನ್ನು ನನಸಾಗಿಸಿಕೊಳ್ಳಿ.

Few of Our IAS/IPS Rank Holders From Karnataka

Koushik H. R IAS	Gopal Krishna IAS	Dr.Thrilokchandra IAS	Dr. Venkatesh IAS	Dr. Ajay IAS
Jubin Mohapatra IAS	Snehal IAS	Randeep IAS	Preetham IAS	Basavaraju IAS
Shilpa IAS	Ravi Kumar IAS	Manjushree IAS	Dr.Vinay IAS	Lokesh IAS
Rashmi IAS	Sukhaputra N.O IAS	Dr.Praphulla IFS	Soumya C IFS	Chethan R IPS

Congratulations on your Well-deserved success
Shri. R. Upendra Shetty
Founder Chairman

Scan to visit website

info@universalinstitutions.com
www.universalinstitutions.com

Address: Gururayanapura, Kolur Village, Tavarekere Hobli, Ramohalli Post, Bengaluru South Taluk, Bengaluru-74

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

'ಡೆಕ್ಕನ್ ಹೆರಾಲ್ಡ್', 'ಪ್ರಜಾವಾಣಿ' ದಿನಪತ್ರಿಕೆಗಳ 75ರ ಸಂಭ್ರಮದ ಈ ಹೊತ್ತಿನಲ್ಲಿ, ಈ ಎರಡೂ ಪತ್ರಿಕೆಗಳ ಸ್ಥಾಪಕ ಕೆ.ಎನ್. ಗುರುಸ್ವಾಮಿ ಮತ್ತು ಅಜ್ಜಿ ಕದಿರಮ್ಮ ಅವರ ಕುರಿತು ಮೊಮ್ಮಗ ಕೆ.ಎನ್. ಹರಿಕುಮಾರ್ ಅವರ ನೆನಪುಗಳು...

ಕಾಬೂಲ್: ಗುರುದ್ವಾರದ ಮೇಲೆ ಉಗ್ರರ ದಾಳಿ – ಇಬ್ಬರ ಸಾವು 8

ಭಾರತ–ದಕ್ಷಿಣ ಆಫ್ರಿಕಾ ಟಿ20 ಸರಣಿ

ವರ್ಷಾಂತ್ಯಕ್ಕೆ 25 ನಗರಗಳಲ್ಲಿ 5ಜಿ 14

ಚಿನ್ನಸ್ವಾಮಿ ಅಂಗಳದಲ್ಲಿ 'ಫೈನಲ್' ಇಂದು 15

ಪಠ್ಯಪುಸ್ತಕ ವಾಪಸ್‌ಗೆ 10 ದಿನ ಗಡುವು

ಬೆಂಗಳೂರು: ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ನೇತೃತ್ವದಲ್ಲಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಿದ ರಾಜ್ಯದ ವಿವಿಧ ಸಮುದಾಯಗಳ ಮಠಾಧೀಶರು, ಸಾಹಿತಿಗಳು, ಹೋರಾಟಗಾರರು ಮತ್ತು ರಾಜಕೀಯ ಮುಖಂಡರು, ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ರೂಪಿಸಿರುವ ಪರಿಷ್ಕೃತ ಪಠ್ಯಪುಸ್ತಕಗಳನ್ನು 10 ದಿನಗಳೊಳಗೆ ವಾಪಸ್ ಪಡೆಯುವಂತೆ ರಾಜ್ಯ ಸರ್ಕಾರಕ್ಕೆ ಗಡುವು ನೀಡಿದರು. 7

ಅಗ್ನಿವೀರರಿಗೆ ಶೇ 10 ಮೀಸಲಾತಿ

ನವದೆಹಲಿ: 'ಅಗ್ನಿಪಥ' ನೇಮಕಾತಿ ಯೋಜನೆಗೆ ಪ್ರತಿಭಟನಕಾರರಿಂದ ವ್ಯಕ್ತವಾಗಿರುವ ಆಕ್ರೋಶವನ್ನು ತಣಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಈ ಯೋಜನೆಯಡಿ ನೇಮಕಗೊಂಡ ಅಗ್ನಿವೀರರು ನಾಲ್ಕು ವರ್ಷಗಳ ಅವಧಿ ಪೂರೈಸಿದ ಬಳಿಕ, ವಿವಿಧ ನೇಮಕಾತಿಗಳಲ್ಲಿ ಶೇ 10ರಷ್ಟು ಮೀಸಲಾತಿ ನೀಡುವುದಾಗಿ ಘೋಷಿಸಿದೆ. 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಆಡಳಿತದಲ್ಲಿ ಪಾರದರ್ಶಕತೆ ತರುವ ಆಶಯಕ್ಕೆ ಮುಕ್ಕು

ಮಾಹಿತಿ ತಡೆಗೆ ಅಕ್ರಮ ದಾರಿ

• ವಿಜಯಕುಮಾರ್ ಎಸ್.ಕೆ.

ಒಳನೋಟ

ಆರ್‌ಟಿಐ: ಈಡೇರದ ಆಶಯ

ಪ್ರತಿಕ್ರಿಯಿಸಿ: 9606038256
feedback@prajavani.co.in

ಬೆಂಗಳೂರು: ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಕ್ರಮ–ಅವ್ಯವಹಾರಗಳ ವಿರುದ್ಧದ ಕಾನೂನು ಸಮರ ಹಾಗೂ ಆಡಳಿತದಲ್ಲಿ ಪಾರದರ್ಶಕತೆ ತರಲು ಬ್ರಹ್ಮಾಸ್ತ್ರವೆಂಬಂತೆ ಬಿಂಬಿಸಿದ್ದ 'ಮಾಹಿತಿ ಹಕ್ಕು ಕಾಯ್ದೆ' ಈಗ ಮಾಹಿತಿ ಮುಚ್ಚಿಡಲು ಬಳಕೆಯಾಗುತ್ತಿದೆ.

ಹಲವು ಹಗರಣಗಳನ್ನು ಬಯಲಿಗೆ ಎಳೆದಿರುವ ಈ ಕಾಯ್ದೆಯನ್ನು 'ವಿಳಂಬ' ಎಂಬ ಪ್ರತ್ಯಸ್ತ್ರದ ಮೂಲಕ ಬಲಹೀನಗೊಳಿಸುವ ಪ್ರಯತ್ನ ಸರ್ಕಾರದ ಕಡೆಯಿಂದಲೇ ನಡೆಯುತ್ತಿದೆ. ಕಾಯ್ದೆ ಮುಚ್ಚಿಡಲು ಹಲವು ಕಳ್ಳದಾರಿಗಳನ್ನು ಹುಡುಕುವ ವಿದ್ಯೆಯನ್ನು ಅಧಿಕಾರಶಾಹಿ ಸಿದ್ಧಿಸಿಕೊಂಡಿದ್ದು, ಕಾಯ್ದೆಯ ಆಶಯವೇ ಬುಡಮೇಲಾಗುವ ಅಪಾಯ ಎದುರಾಗಿದೆ.

2005ರಲ್ಲಿ ಜಾರಿಗೆ ಬಂದ ಮಾಹಿತಿ ಹಕ್ಕು ಕಾಯ್ದೆ ಹಲವು ಹಗರಣಗಳನ್ನು ಬಯಲಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಸಾಮಾನ್ಯ ಜನರೂ ಸರ್ಕಾರದಿಂದ ಸುಲಭವಾಗಿ ಮಾಹಿತಿ ಪಡೆದುಕೊಳ್ಳುವ ಅವಕಾಶವನ್ನು ಈ ಕಾಯ್ದೆ ಮಾಡಿಕೊಟ್ಟಿದೆ. ಇತ್ತೀಚಿನ ದಿನಗಳಲ್ಲಿ ಈ ಕಾಯ್ದೆಯಲ್ಲಿರುವ ಕೆಲ ದೋಷಗಳನ್ನೇ ಲಾಭ ಮಾಡಿಕೊಂಡು ಮಾಹಿತಿ ನಿರಾಕರಿಸುವ ಪರಿಪಾಟವನ್ನು ಅಧಿಕಾರಿಗಳು ಬೆಳೆಸಿಕೊಂಡಿದ್ದಾರೆ.

ಯಾವುದೇ ಮಾಹಿತಿ ಕೋರಿ ಇಲಾಖೆಗೆ ಅರ್ಜಿ ಸಲ್ಲಿಸಿದರೆ 30 ದಿನಗಳಲ್ಲಿ ಮಾಹಿತಿ ನೀಡಬೇಕು ಅಥವಾ ಮಾಹಿತಿ ನೀಡದಿರಲು ಸಕಾರಣ ಮತ್ತು ಅದಕ್ಕೆ ಕಾಯ್ದೆಯಲ್ಲಿರುವ ವಿನಾಯಿತಿ ನಮೂದಿಸಿ ಹಿಂಬರಹ ನೀಡಬೇಕು. ಹಿಂಬರಹ ತೃಪ್ತಿ ಎನಿಸದಿದ್ದರೆ ಅಥವಾ ಹಿಂಬರಹ ನೀಡದಿದ್ದರೆ ಅದೇ ಇಲಾಖೆಯ ಉನ್ನತ ಅಧಿಕಾರಿಗೆ ಮೊದಲನೇ ಮೇಲ್ಮನವಿ ಸಲ್ಲಿಸಲು ಅವಕಾಶ ಇದೆ. ಆ ಅಧಿಕಾರಿ 45 ದಿನಗಳಲ್ಲಿ ಮಾಹಿತಿ ನೀಡಲು ಆದೇಶಿಸಬಹುದು. ಇಲ್ಲವೇ, ಮಾಹಿತಿ ನೀಡದಿರಲು ಕಾರಣಗಳನ್ನು ವಿವರಿಸಿ ಅರ್ಜಿಯನ್ನು ವಜಾಗೊಳಿಸಬಹುದು. ಬಳಿಕ ಇದನ್ನು ಪ್ರಶ್ನಿಸಿ ಮಾಹಿತಿ ಹಕ್ಕು ಆಯೋಗಕ್ಕೆ ಎರಡನೇ ಮೇಲ್ಮನವಿ ಸಲ್ಲಿಸಲು 90 ದಿನಗಳ ಅವಕಾಶ ಇದೆ.

ಅಂಕಿ–ಅಂಶ

30,358 ಆಯೋಗದಲ್ಲಿ ಬಾಕಿ ಇರುವ ಅರ್ಜಿಗಳು

12,702 ಬೆಂಗಳೂರು ವಿಭಾಗ

2,678 ಮೈಸೂರು ವಿಭಾಗ

8,191 ಬೆಳಗಾವಿ ವಿಭಾಗ

6,787 ಕಲಬುರಗಿ ವಿಭಾಗ

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6

ಪಿಯುಸಿ: ವಿದ್ಯಾರ್ಥಿನಿಯರದ್ದೇ ಹೆಗ್ಗಳಿಕೆ

ದ್ವಿತೀಯ ಪಿಯುಸಿ ಫಲಿತಾಂಶ: ಶೇ 61.88ರಷ್ಟು ವಿದ್ಯಾರ್ಥಿಗಳು ಉತ್ತೀರ್ಣ

ಪ್ರಜಾವಾಣಿ ವಾರ್ತೆ



ಮಾಧ್ಯಮವಾರು ಫಲಿತಾಂಶ

ಮಾಧ್ಯಮ	ಹಾಜರಾದವರು	ತೇರ್ಗಡೆ	ಶೇಕಡಾ
ಕನ್ನಡ	2,98,102	1,53,164	51.38
ಇಂಗ್ಲಿಷ್	3,85,461	2,69,802	69.99

ಬೆಂಗಳೂರು: 2021–22ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ 61.88ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಫಲಿತಾಂಶದಲ್ಲಿ ಈ ಬಾರಿಯೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ.

ಮಲ್ಲೇಶ್ವರದಲ್ಲಿರುವ ಪದವಿ ಪೂರ್ವ ಶಿಕ್ಷಣ ಇಲಾಖೆಯ ಕಚೇರಿಯಲ್ಲಿ ಶನಿವಾರ ಫಲಿತಾಂಶ ಪ್ರಕಟಿಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, '2019–20ನೇ ಸಾಲಿನಲ್ಲಿ ಶೇ 61.80ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಈ ಬಾರಿ ಉತ್ತೀರ್ಣ ಪ್ರಮಾಣ 0.08ರಷ್ಟು ಏರಿಕೆಯಾಗಿದೆ' ಎಂದರು.

ಕೋವಿಡ್ ಕಾರಣದಿಂದ 2020–21ನೇ ಸಾಲಿನಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ನಡೆದಿರಲಿಲ್ಲ. ಅದಕ್ಕೂ ಹಿಂದಿನ ಸಾಲಿನಲ್ಲಿ ವಿದ್ಯಾರ್ಥಿಗಳು ತೋರಿದ್ದ ಸಾಧನೆ ಪರಿಗಣಿಸಿ ಮುಂದಿನ ತರಗತಿಗೆ ಬಡ್ತಿ ನೀಡಲಾಗಿತ್ತು. ಹೀಗಾಗಿ, ಈ ಬಾರಿಯ ಫಲಿತಾಂಶವನ್ನು 2019–20ನೇ ಸಾಲಿನ ಫಲಿತಾಂಶಕ್ಕೆ ಹೋಲಿಸಲಾಗಿದೆ. ಹಿಜಾಬ್ ಗದ್ದಲದ ಮಧ್ಯೆ ಈ ಬಾರಿ ಪರೀಕ್ಷೆ ನಡೆದಿತ್ತು.

'2019–20ನೇ ಸಾಲಿನಲ್ಲಿ ನಗರ ಭಾಗದಲ್ಲಿನ ಕಾಲೇಜುಗಳ ಫಲಿತಾಂಶ ಉತ್ತಮವಾಗಿತ್ತು. ಈ ಬಾರಿ ಗ್ರಾಮಾಂತರ ಪ್ರದೇಶಗಳ ಕಾಲೇಜುಗಳ ಫಲಿತಾಂಶ ಉತ್ತಮವಾಗಿದೆ' ಎಂದು ಸಚಿವರು ಹೇಳಿದರು.

7ನೇ ಪುಟ ನೋಡಿ

'ಅಗ್ನಿಪಥದಿಂದ ದೇಶವೇ ಅಗ್ನಿಗೆ ಆಹುತಿ'

ಬೆಂಗಳೂರು: 'ಕೇಂದ್ರ ಸರ್ಕಾರ ಅಗ್ನಿಪಥ ಯೋಜನೆ ಬಗ್ಗೆ ಮರು ಚಿಂತನೆ ಮಾಡಬೇಕು' ಎಂದು ರಾಜ್ಯಸಭೆ ಕಾಂಗ್ರೆಸ್ ಸದಸ್ಯ ಎಲ್. ಹನುಮಂತಯ್ಯ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಈ ಯೋಜನೆಗೆ ಹರಿಯಾಣ, ಬಿಹಾರ, ತೆಲಂಗಾಣದ ಯುವ ಜನಾಂಗ ತೀವ್ರ ವಿರೋಧ ವ್ಯಕ್ತಪಡಿಸಿ ಪ್ರತಿಭಟನೆ ನಡೆಸುತ್ತಿದೆ. ಇದರಿಂದ ಸಾರ್ವಜನಿಕ ಆಸ್ತಿಪಾಸ್ತಿ ನಷ್ಟವಾಗುತ್ತಿದೆ. ರೈಲುಗಳಿಗೆ ಬೆಂಕಿ ಹಾಕಲಾಗಿದೆ. ಕಾಂಗ್ರೆಸ್ ಕೂಡ ಯೋಜನೆಯ ಬಗ್ಗೆ ಮರು ಚಿಂತನೆ ಮಾಡಲು ಒತ್ತಾಯಿಸಿದೆ' ಎಂದರು.

'ಈ ಯೋಜನೆ ದೇಶವನ್ನು ಅಗ್ನಿಗೆ ಆಹುತಿಯಾಗುವ ಪರಿಸ್ಥಿತಿ ನಿರ್ಮಾಣ ಮಾಡಿದೆ. ಕಾಂಗ್ರೆಸ್ ಯುವಕರ ಪರವಾಗಿದ್ದು, ಅವರಿಗೆ ಉದ್ಯೋಗ ನೀಡುವುದರ ಪರವಾಗಿದೆ. ಸರ್ಕಾರ ಅವರಿಗೆ ಅರೆಕಾಲಿಕ ಹುದ್ದೆ ನೀಡುವುದನ್ನು ನಿಲ್ಲಿಸಿ, ಪೂರ್ಣಾವಧಿ ಉದ್ಯೋಗ ನೀಡಬೇಕು. ಇದುವರೆಗೂ ಸೇನೆಯ ನೇಮಕಾತಿ ಹೇಗೆ ಮಾಡಲಾಗುತ್ತಿತ್ತೋ ಆ ಮೂಲಕ ನೇಮಕಾತಿ ಆರಂಭಿಸಬೇಕು. ಈ ಯೋಜನೆ ನಿರುದ್ಯೋಗ ನಿವಾರಣೆ ಮಾಡುವ ಯೋಜನೆ ಅಲ್ಲ' ಎಂದರು.

500 ಮಕ್ಕಳಿಗೆ ಶಸ್ತ್ರಚಿಕಿತ್ಸೆ ನಡೆಸಲು ₹ 32 ಕೋಟಿ ಅನುದಾನ ಮೀಸಲು

ಶ್ರವಣದೋಷ ನಿವಾರಣೆಗೆ ಕಾಕ್ಲಿಯರ್ ಇಂಪ್ಲಾಂಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರು ವರ್ಷದೊಳಗಿನ ಮಕ್ಕಳಲ್ಲಿನ ಶ್ರವಣದೋಷ ಸಮಸ್ಯೆ ನಿವಾರಣೆಗೆ ಆರೋಗ್ಯ ಇಲಾಖೆಯು ಕಾಕ್ಲಿಯರ್ 'ಇಂಪ್ಲಾಂಟ್' ಶಸ್ತ್ರಚಿಕಿತ್ಸಾ ಯೋಜನೆ ಹಮ್ಮಿಕೊಂಡಿದ್ದು, ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ಆವರಣದಲ್ಲಿ ಇದೇ ಸೋಮವಾರ ಚಾಲನೆ ಸಿಗಲಿದೆ.

'ಶ್ರವಣದೋಷ ಸಮಸ್ಯೆಗೆ ಸಂಬಂಧಿಸಿದಂತೆ ಕಳೆದ ಸಾಲಿನಲ್ಲಿ 26,959 ಮಕ್ಕಳನ್ನು ತಪಾಸಣೆಗೆ ಒಳಪಡಿಸಲಾಗಿದ್ದು, 2,959 ಮಕ್ಕಳಲ್ಲಿ ತೀವ್ರತರವಾದ ಕಿವುಡುತನ ಕಂಡುಬಂದಿದೆ. 2022-23ನೇ ಸಾಲಿನಲ್ಲಿ ತೀವ್ರ ಶ್ರವಣದೋಷ ಸಮಸ್ಯೆ ಇರುವ 500 ಮಕ್ಕಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಅಳವಡಿಸಿ, ಅವರ ವಾಕ್-ಶ್ರವಣ ಶಕ್ತಿಯನ್ನು ಉತ್ತಮಪಡಿಸಲಾಗುತ್ತದೆ. ಇದಕ್ಕೆ ₹ 32 ಕೋಟಿ ಅನುದಾನ ಮೀಸಲಿಡಲಾಗಿದೆ. ಹೆಚ್ಚಿನ ಮಕ್ಕಳಿಗೆ ಕಿವುಡುತನವು ಹುಟ್ಟಿನಿಂದಲೇ ಬಂದಿರುತ್ತದೆ' ಎಂದು ಇಲಾಖೆ ತಿಳಿಸಿದೆ.

ಮುಖ್ಯಾಂಶಗಳು
- ಕಳೆದ ಸಾಲಿನಲ್ಲಿ 26,959 ಮಕ್ಕಳ ತಪಾಸಣೆ
- ಶಸ್ತ್ರಚಿಕಿತ್ಸೆ ನಂತರ ಒಂದು ವರ್ಷದ ಅವಧಿಯವರೆಗೆ ಪುನರ್ವಸತಿ ಸೌಲಭ್ಯ

'ಹುಟ್ಟು ಕಿವುಡುತನ ಸಮಸ್ಯೆ ಎದುರಿಸುತ್ತಿರುವವರಿಗೆ ಸರಿಯಾದ ಸಮಯದಲ್ಲಿ ತಪಾಸಣೆ ನಡೆಸಿ, ಸೂಕ್ತ ಶ್ರವಣ ಯಂತ್ರ ಅಳವಡಿಸಬೇಕು. ಅಷ್ಟಾಗಿಯೂ ಸಮಸ್ಯೆ ನಿವಾರಣೆಯಾಗದಿದ್ದಲ್ಲಿ 8 ತಿಂಗಳಿಂದ 5 ವರ್ಷದೊಳಗಿನ ಮಕ್ಕಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ನಡೆಸಬೇಕು. ಜಿಲ್ಲೆಗಳಲ್ಲಿ ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರು, ವೈದ್ಯಕೀಯ ಅಧೀಕ್ಷಕರ ಅಧ್ಯಕ್ಷತೆಯ ಸಮಿತಿಯು ಶ್ರವಣದೋಷ ಸಮಸ್ಯೆ ಇರುವ ಮಕ್ಕಳನ್ನು ಮೌಲ್ಯಮಾಪನ ನಡೆಸಲಿದೆ. ಬಳಿಕ ಕಾಕ್ಲಿಯರ್ 'ಇಂಪ್ಲಾಂಟ್ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಗುತ್ತದೆ' ಎಂದು ಹೇಳಿದೆ.

ಉಚಿತ ಚಿಕಿತ್ಸೆ: 'ಬೆಂಗಳೂರಿನ ಕೆ.ಸಿ. ಜನರಲ್, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಹಾಗೂ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆ ಈ ಶಸ್ತ್ರಚಿಕಿತ್ಸೆಗೆ ಯೋಜನೆಯಡಿ ನೋಂದಾಯಿತವಾಗಿವೆ. ಇತರೆ ತೃತೀಯ ಆರೈಕೆ ಕೇಂದ್ರಗಳನ್ನು ವಿಭಾಗೀಯ ಮಟ್ಟದಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿಯಲ್ಲಿ ನೋಂದಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಒಬ್ಬರಿಗೆ ಚಿಕಿತ್ಸಾ ಪ್ಯಾಕೇಜ್ ₹ 6.20 ಲಕ್ಷವಾಗಿದ್ದು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಭರಿಸಲಾಗುತ್ತದೆ' ಎಂದು ಇಲಾಖೆ ವಿವರಿಸಿದೆ.

'ಕಾಕ್ಲಿಯರ್ ಇಂಪ್ಲಾಂಟ್ ಅಳವಡಿಕೆ ಮತ್ತು ಶಸ್ತ್ರಚಿಕಿತ್ಸೆಯ ನಂತರ ಒಂದು ವರ್ಷದ ಅವಧಿಯವರೆಗೆ ಪುನರ್ವಸತಿ ಸೌಲಭ್ಯ ಇರಲಿದೆ. ಇದಕ್ಕೆ ತಗಲುವ ಸಂಪೂರ್ಣ ವೆಚ್ಚವನ್ನು ಟ್ರಸ್ಟ್ ಅಡಿಯಲ್ಲಿ ಭರಿಸಲಾಗುವುದು' ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

25– 26ಕ್ಕೆ ವಧು-ವರರ ಸಮಾವೇಶ

ಬೆಂಗಳೂರು: ರಾಜಾಜಿನಗರ ಬ್ರಾಹ್ಮಣ ಸಭಾ ಹಾಗೂ ಸಪ್ತಪದಿ ಫೌಂಡೇಶನ್ ಟ್ರಸ್ಟ್ ಜಂಟಿಯಾಗಿ ಇದೇ 25 ಹಾಗೂ 26 ರಂದು ಎನ್.ಆರ್. ಕಾಲೊನಿಯ ಡಾ.ಸಿ. ಅಶ್ವತ್ಥ್ ಕಲಾ ಭವನದಲ್ಲಿ ರಾಜ್ಯಮಟ್ಟದ ಬ್ರಾಹ್ಮಣ ವಧು-ವರರ ಸಮಾವೇಶ ಹಮ್ಮಿಕೊಂಡಿದೆ.

ಬೆಳಿಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ವಧು-ವರರ ಸಮಾವೇಶ ನಡೆಯಲಿದೆ. ಎಲ್ಲ ವಿದ್ಯಾರ್ಹತೆಯುಳ್ಳ ವಧು-ವರರು ಭಾಗವಹಿಸಬಹುದು. ಹೆಣ್ಣುಮಕ್ಕಳು ಹಾಗೂ ಅಂಗವಿಕಲರಿಗೆ ನೋಂದಣಿ ಉಚಿತ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 8217876335 ಅಥವಾ 9449425536

ಅಭಿನಂದನೆಗಳು

ಡಾ.ಕೆ.ಪಿ.ವೆಂಕಟೇಶ್, LLM, PhD

ವಕೀಲರಾದ ಕೆ.ಪಿ.ವೆಂಕಟೇಶ್ ಅವರ ಬಾಲಾಪರಾಧಿಗಳ ಕುರಿತ ವಿಶಿಷ್ಟ ಸಂಶೋದನಾ ಪ್ರಬಂಧಕ್ಕೆ ಕುವೆಂಪು ವಿಶ್ವವಿದ್ಯಾಲಯವು ಡಾಕ್ಟರೇಟ್ ನೀಡಿದೆ. ಹತ್ತು ವರ್ಷಗಳ ಇವರ ಪರಿಶ್ರಮಕ್ಕೆ ಇದೀಗ ಗೌರವ ದೊರೆತಿದೆ. ಇವರಿಗೆ ಗೆಳೆಯರ ಬಳಗದಿಂದ ಹೃದಯಪೂರ್ವಕ ಅಭಿನಂದನೆಗಳು. 19.06.2022ರಂದು ನೃಪತುಂಗ ರಸ್ತೆಯ ಯವನಿಕಾದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯಸಭಾ ಸದಸ್ಯರಾದ ಎಲ್.ಹನುಮಂತಯ್ಯ, ಬೆಂ.ವಿವಿ ಕುಲಸಚಿವ ಡಾ.ಡಿ.ಡೊಮಿನಿಕ್, ವಕೀಲರ ಸಂಘದ ಅಧ್ಯಕ್ಷ ವಿವೇಕರೆಡ್ಡಿ, ಅಲೆಯನ್ಸ್ ವಿವಿ ಡೀನ್ ಡಾ.ಬಿ.ಎಸ್.ರೆಡ್ಡಿ, ಮಾವಳ್ಳಿ ಶಂಕರ್, ಪ್ರೊ.ವಿ.ಸುದೇಶ್ ಅವರು ಅಭಿನಂದಿಸಲಿದ್ದಾರೆ.

ಶುಭಾಶಯ ಕೋರುವವರು:
ಡಾ.ಕೆ.ಪಿ.ವೆಂಕಟೇಶ್ ಅಭಿಮಾನಿ ಬಳಗ

ಡಿ–ನೋಟಿಫೈ: ಬಿಎಸ್‌ವೈಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಡಿ-ನೋಟಿಫಿಕೇಷನ್ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಇಲ್ಲಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ಯಡಿಯೂರಪ್ಪ ಸಲ್ಲಿಸಿದ್ದ ಅರ್ಜಿಯನ್ನು 'ಶಾಸಕರು--ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ.ಜಯಂತ ಕುಮಾರ್ ಶನಿವಾರ ಮಾನ್ಯ ಮಾಡಿದರು.

ದೂರುದಾರರ ಪರ ವಕೀಲ ಕೆ.ವಿ. ಧನಂಜಯ ಆಕ್ಷೇಪಣೆ ಸಲ್ಲಿಸಿ, 'ಜಾಮೀನು ಮಂಜೂರು ಮಾಡಲು ಆದೇಶಿಸುವ ಬಗ್ಗೆ ನಮ್ಮ ಅಭ್ಯಂತರವಿಲ್ಲ' ಎಂದು ತಿಳಿಸಿದರಲ್ಲದೆ, ಪ್ರಕರಣದ ತ್ವರಿತ ವಿಚಾರಣೆ ನಡೆಯಲು ಆರೋಪಿ ಸಹಕರಿಸುವಂತೆ ಕೋರಿದರು. ಇದಕ್ಕೆ ಅರ್ಜಿದಾರರ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ಸಹಮತ ವ್ಯಕ್ತಪಡಿಸಿದರು.

ಕುಳಿತುಕೊಳ್ಳಿ: ವಿಚಾರಣೆಗೆ ಕೂಗಿದ ತಕ್ಷಣ ಎದ್ದುನಿಂತ ಯಡಿಯೂರಪ್ಪನವರು ಕೆಲ ನಿಮಿಷಗಳ ನಂತರ ಸುಸ್ತಾದಂತೆ ಕಂಡುಬಂದರಲ್ಲದೆ ನಿಂತುಕೊಂಡಿರಲು ಕಷ್ಟಪಡಲಾರಂಭಿಸಿದರು. ಇದನ್ನು ಗಮನಿಸಿದ ಧನಂಜಯ, 'ಸ್ವಾಮಿ, ಅರ್ಜಿದಾರರಿಗೆ ಕುಳಿತುಕೊಳ್ಳಲು ಅನುವು ಮಾಡಿಕೊಡಬೇಕು' ಎಂದರು.

ತಕ್ಷಣ ನ್ಯಾಯಾಧೀಶರ ಸಮ್ಮತಿಯಂತೆ ಕುಳಿತಕೊಂಡ ಯಡಿಯೂರಪ್ಪ ಅವರನ್ನು ಗಮನಿಸಿದ ಜಯಂತ ಕುಮಾರ್, 'ಏನು ಇಷ್ಟೊಂದು ಜನ ಬಂದಿದ್ದಾರಲ್ಲಾ' ಎಂದು ಪ್ರಶ್ನಿಸಿದರು.

ಇದಕ್ಕೆ ನಾಗೇಶ್, 'ಹೌದು ಸ್ವಾಮಿ, ಅರ್ಜಿದಾರರು ಕೊಂಚ ಆತಂಕಗೊಂಡಿರುವುದು ನಿಜ. ಅಂತೆಯೇ ಅವರ ಹಿತೈಷಿಗಳು, ಅಭಿಮಾನಿಗಳು ಮತ್ತು ಕಾನೂನು ವಿದ್ಯಾರ್ಥಿಗಳು ಕಲಾಪ ಅವಲೋಕಿಸಲು ಬಂದಿದ್ದಾರೆ' ಎಂದರು.

'ಅರ್ಜಿದಾರರು ವೈಯಕ್ತಿಕ ಕಾರಣಕ್ಕಾಗಿ ವಿದೇಶಕ್ಕೆ ಹೋಗಬೇಕಿದೆ. ಆದ್ದರಿಂದ, ಷರತ್ತಿನಲ್ಲಿ ಈ ಸಂಬಂಧ ಯಾವುದೇ ನಿರ್ಬಂಧ ವಿಧಿಸಬಾರದು ಎಂದೂ ನಾಗೇಶ್ ಕೋರಿದರು. ಇದಕ್ಕೆ ನ್ಯಾಯಾಧೀಶರು, 'ಸದ್ಯ ಆ ಬಗ್ಗೆ ದೂರುದಾರರು ಯಾವುದೇ ಪ್ರಸ್ತಾಪ ಮಾಡಿಲ್ಲ' ಎಂದು ಪ್ರಾಸಿಕ್ಯೂಷನ್ ಸಾಕ್ಷ್ಯದ ವಿಚಾರಣೆಯನ್ನು ಜುಲೈ 16ಕ್ಕೆ ಮುಂದೂಡಿದರು.

ಬೆಂಗಳೂರಿನ ಬೆಳ್ಳಂದೂರು ಮತ್ತು ದೇವರ ಬೀಸನಹಳ್ಳಿಯಲ್ಲಿ ಸ್ವಾಧೀನ ಪಡಿಸಿಕೊಂಡಿದ್ದ 15 ಎಕರೆ 30 ಗುಂಟೆ ಜಮೀನನ್ನು ಅಕ್ರಮವಾಗಿ ಡಿ-ನೋಟಿಫೈ ಮಾಡಿದ ಆರೋಪವನ್ನು ಯಡಿಯೂರಪ್ಪ ಎದುರಿಸುತ್ತಿದ್ದಾರೆ.

ಮಗಳ ಮನವಿ: ಅಪ್ಪನ ಮರುನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿಕಿತ್ಸೆ ಕೊಡಿಸಲು ಅಪ್ಪನ ಬಳಿ ದುಡ್ಡಿಲ್ಲ, ದುಡಿಮೆಯೂ ಇಲ್ಲ. ಜೀವನ ನಡೆಸುವುದೇ ಕಷ್ಟವಾಗಿದೆ, ದಯವಿಟ್ಟು ಅಪ್ಪನಿಗೆ ಕೆಲಸ ಕೊಡಿ' ಎಂದು ಕೃತಕ ಕೈ ಜೋಡಣೆ ಮಾಡಿಸಿಕೊಂಡಿರುವ ಎಂಟು ವರ್ಷದ ಬಾಲಕಿ ಮಾಡಿದ ಒಂದೇ ಮನವಿಗೆ ಕರಗಿದ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್, ಸ್ಥಳದಲ್ಲೇ ಮರುನೇಮಕ ಆದೇಶ ಹೊರಡಿಸಿ ಮಾನವೀಯತೆ ಮೆರೆದರು.

ಚಿಕ್ಕಮಗಳೂರು ವಿಭಾಗದ ಚಾಲಕ ಕಂ ನಿರ್ವಾಹಕ ಲೋಕೇಶ್ ಅವರು ದೀರ್ಘಕಾಲದ ಗೈರು ಹಾಜರಿಯಿಂದ ವಜಾಗೊಂಡಿದ್ದರು. ಅದರ ನಡುವೆ ಎಡಗೈ ಕಳೆದುಕೊಂಡ ಮಗಳಿಗೆ ಕೃತಕ ಕೈಜೋಡಣೆ ಮಾಡಿಸಲು ಸುತ್ತಾಡಿ ಸುಸ್ತಾಗಿದ್ದರು. ಮಗಳು ಭೂಮಿಕಾ ಜತೆ ಕಚೇರಿಗೆ ಬಂದು ಅನ್ಬುಕುಮಾರ್ ಅವರನ್ನು ಭೇಟಿಯಾದರು.

ಮರುನೇಮಕ ಆದೇಶ ಪಡೆದ ಲೋಕೇಶ್ ಅವರು ವಿ.ಅನ್ಬುಕುಮಾರ್ ಅವರಿಗೆ ಧನ್ಯವಾದ ಸಲ್ಲಿಸಿದರು

ಬಾಲಕಿಗೆ ಚಾಕೊಲೇಟ್ ನೀಡಿದ ಅನ್ಬುಕುಮಾರ್, 'ಅಪ್ಪನಿಗೆ ಕೆಲಸ ಕೊಡಬೇಕಾ' ಎಂದು ಪ್ರಶ್ನಿಸಿದರು. 'ಹೌದು ಸರ್, ಕೆಲಸ ಬೇಕು' ಎಂದು ಮಗು ಕೇಳಿದ ಮುಗ್ಧತೆಗೆ ಮರುಗಿ ಸ್ಥಳದಲ್ಲೇ ಮರುನೇಮಕ ಆದೇಶ ಹೊರಡಿಸಿದರು.

'ಮಗುವಿಗಾಗಿ ಕೆಲಸಕ್ಕೆ ಮರು ನೇಮಕ ಮಾಡಿಕೊಳ್ಳುತ್ತಿದ್ದೇನೆ. ಮತ್ತೊಮ್ಮೆ ಗೈರು ಹಾಜರಿಯಾದರೆ ವಿನಾಯಿತಿ ನೀಡದೆ ಕಠಿಣ ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಲೋಕೇಶ್‌ಗೆ ಎಚ್ಚರಿಕೆಯನ್ನೂ ನೀಡಿದರು.

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣಿ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್: 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/13/2022–23 ದಿನಾಂಕ: 17.06.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಶ್ರೀ ಎಂ. ಸುರೇಶ್ ಬಿನ್ ಮುನಿಯಪ್ಪ	ಆನೇಕಲ್	ಸರ್ಜಾಪುರ	ಮುತ್ತಾನಲ್ಲೂರು	169/6	0–14	ಕೃಷಿ	ವಸತಿ	

ಷರಾ: ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ತುಂಬಾ ಅನುಕೂಲವಾಗುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ದೊರಕುತ್ತದೆ. ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಹಾಗೂ ನಾಗರೀಕ ಸೌಲಭ್ಯ ಜಾಗಗಳು, ದೊರಕುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/973/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ
ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (ರಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಗರ ಕಾರ್ಯಕ್ರಮ ವ್ಯವಸ್ಥಾಪನೆ ಅಧಿಕಾರಿಯವರ ಕಛೇರಿ,
ಅನೆಕ್ಸ್–3, 3ನೇ ಮಹಡಿ, ಬಿಬಿಎಂಪಿ ಪ್ರಧಾನ ಕಛೇರಿ, ಬೆಂಗಳೂರು – 560002.

ಸಂಖ್ಯೆ:ಸಿಪಿಎಂಒ/ಎನ್‌ಯುಹೆಚ್‌ಎಂ/ಪಿಆರ್/ಪ್ಯಾಕೇಜ್–01-02-03/2022–23 ದಿನಾಂಕ: 16–06–2022

ಟೆಂಡರ್ ರದ್ದತಿ ಪ್ರಕಟಣೆ
(ಜಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದನ್ವಯ ಕರೆಯಲಾಗಿದ್ದ ಈ ಕೆಳಕಂಡ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಸಕ್ಷಮ ಪ್ರಾಧಿಕಾರಿಯು ಅನಿವಾರ್ಯ ಕಾರಣಗಳಿಂದ ರದ್ದುಪಡಿಸಿದ್ದಾರೆ.

1) ಯುಪಿಹೆಚ್‌ಸಿಗಳಿಗೆ ಗ್ರೂಪ್–ಡಿ ಒದಗಿಸುವುದು – ಸಿಪಿಎಂಒ/ಎನ್‌ಯುಹೆಚ್‌ಎಂ/ಪಿಆರ್/ಪ್ಯಾಕೇಜ್–1/2021–22 (ಅಧಿಸೂಚನೆ ದಿನಾಂಕ: 28–07–2021)
2) ಯುಪಿಹೆಚ್‌ಸಿಗಳಿಗೆ ಎಲ್‌ಡಿಸಿ ಒದಗಿಸುವುದು – ಸಿಪಿಎಂಒ/ಎನ್‌ಯುಹೆಚ್‌ಎಂ/ಪಿಆರ್/ಪ್ಯಾಕೇಜ್–2/2021–22 (ಅಧಿಸೂಚನೆ ದಿನಾಂಕ: 28–07–2021)
3) ವಲಯಗಳಿಗೆ ಡಿಇಒ ಒದಗಿಸುವುದು – ಸಿಪಿಎಂಒ/ಎನ್‌ಯುಹೆಚ್‌ಎಂ/ಪಿಆರ್/ಪ್ಯಾಕೇಜ್–3/2021–22 (ಅಧಿಸೂಚನೆ ದಿನಾಂಕ: 28–07–2021)

ಹೆಚ್ಚಿನ ವಿವರಗಳನ್ನು ನಗರ ಕಾರ್ಯಕ್ರಮ ವ್ಯವಸ್ಥಾಪನೆ ಅಧಿಕಾರಿಯವರ ಕಛೇರಿ, 3ನೇ ಮಹಡಿ, ಬಿಬಿಎಂಪಿ ಪ್ರಧಾನ ಕಛೇರಿ, ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬೆಂಗಳೂರು – 560002 ಇಲ್ಲಿಂದ ಪಡೆಯಬಹುದು ಅಥವಾ ಫೋನ್: 080–22110445 ಸಂಪರ್ಕಿಸಬಹುದು.

ಸಹಿ/– ಸದಸ್ಯ ಕಾರ್ಯದರ್ಶಿ,
ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಬಿಬಿಎಂಪಿ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈರುತ್ಯ ರೈಲ್ವೆ

ಹರಾಜು ಕಾರ್ಯಕ್ರಮದ ಸೂಚನೆ ಸಂಖ್ಯೆ: S/XIII/02/2022-23

ನೈರುತ್ಯ ರೈಲ್ವೆಯ ಜನರಲ್ ಸ್ಟೋರ್ಸ್ ಡಿಪೋ / ಹುಬ್ಬಳ್ಳಿ, & ಮೆಕ್ಯಾನಿಕಲ್ ಜನರಲ್ ಸ್ಟೋರ್ಸ್ ಡಿಪೋ / ಅಶೋಕಪುರಂ ಡಿಪೋ ಮತ್ತು ಹುಬ್ಬಳ್ಳಿ, ಮೈಸೂರು ಮತ್ತು ಬೆಂಗಳೂರು ವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಆನ್‌ಲೈನ್ ಮತ್ತು ಡಿಪೋ ಸ್ಕ್ರ್ಯಾಪ್ ಮಾರಾಟಕ್ಕಾಗಿ ಜುಲೈ, ಆಗಸ್ಟ್, ಸೆಪ್ಟೆಂಬರ್–2022 ತಿಂಗಳಲ್ಲಿ ನಡೆಯಲಿರುವ ಇ–ಹರಾಜು ಹರಾಜಿನ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ.

ಹರಾಜಿನ ವಿಧ	ಸ್ಥಳ	ಜುಲೈ–2022		ಆಗಸ್ಟ್–2022		ಸೆಪ್ಟೆಂಬರ್–2022	
ಇ–ಹರಾಜು (09:00 ಗಂಟೆಯಿಂದ)	ಜನರಲ್ ಸ್ಟೋರ್ಸ್ ಡಿಪೋ / ಹುಬ್ಬಳ್ಳಿ	4ನೇ	18ನೇ	1ನೇ	16ನೇ	1ನೇ	15ನೇ
	ಮೆಕ್ಯಾನಿಕಲ್ & ಜನರಲ್ ಸ್ಟೋರ್ಸ್ ಡಿಪೋ / ಅಶೋಕಪುರಂ (ಮೈಸೂರು)	14ನೇ	28ನೇ	10ನೇ	24ನೇ	5ನೇ	19ನೇ
	ಹುಬ್ಬಳ್ಳಿ ವಿಭಾಗ	12ನೇ	26ನೇ	11ನೇ	25ನೇ	7ನೇ	21ನೇ
	ಬೆಂಗಳೂರು ವಿಭಾಗ	6ನೇ	20ನೇ	2ನೇ	17ನೇ	6ನೇ	20ನೇ
	ಮೈಸೂರು ವಿಭಾಗ	5ನೇ	19ನೇ	4ನೇ	18ನೇ	8ನೇ	22ನೇ

ಹೆಚ್ಚಿನ ಮಾಹಿತಿಗಾಗಿ www.ireps.gov.in/E-auction ವೆಬ್‌ಸೈಟ್‌ಗೆ ಲಾಗಿನ್ ಆಗಿ

PUB/156/AAV/PRB/SWR/2022-23 — ಪ್ರಧಾನ ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ಹುಬ್ಬಳ್ಳಿ

S.W.Railways | sw_rly | SWRRLY | southwesternrailway | SWRRLY

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,

ಕೋಲಾರ ವಿಭಾಗ, ಕೋಲಾರ-563101. ದೂ: 08152–222022,
ಫ್ಯಾಕ್ಸ್: 08152–227443 e-mail: eepwdkolar07@gmail.com
Website: www.kpwd.gov.in

ಇ–ಟೆಂಡರ್ ಪ್ರಕಟಣೆ ಕೆ.ಡಬ್ಲ್ಯು–4
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 9/2022–23 ದಿನಾಂಕ: 15.06.2022

ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 8443–ಠೇವಣಿ ವಂತಿಗೆ ಅಡಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ: **ರೂ.200.00 ಲಕ್ಷಗಳು**, ಇ.ಎಂ.ಡಿ ಮೊತ್ತ: **ರೂ. 3.00 ಲಕ್ಷಗಳು**, ಕಾಲಾವಧಿ: **11 ತಿಂಗಳು** ನಿರ್ವಹಿಸಲು 3ನೇ ದರ್ಜೆ ಮತ್ತು ಮೇಲ್ಪಟ್ಟ ಲೋ.ಇ. ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯು–4ರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (Viz., http://eproc. karnataka. gov.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **05.07.2022** ರಂದು ಸಂಜೆ **16.00** ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: **06.07.2022 ರಂದು ಸಂಜೆ 16.30 ಗಂಟೆಯ ನಂತರ** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (Viz., http://eproc. karnataka.gov.in)ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್, ಲೋ.ಇ, ಕೋಲಾರ ವಿಭಾಗ, ಕೋಲಾರ.
ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 150/ಎಂಸಿಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ

ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು–560001, ದೂರವಾಣಿ: 080–22355065/22262865

ಸಂಖ್ಯೆ: ಕರಾಆ/ಆಡಳಿತ/67/2020 ದಿನಾಂಕ: 06.06.2022

ಅಧಿಸೂಚನೆ
(ಮಧ್ಯಸ್ಥಿಕೆಗಾರರ ಆಯ್ಕೆಗಾಗಿ)

ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ ಕಲಂ 75, ಗ್ರಾಹಕ ಸಂರಕ್ಷಣಾ (ಮಧ್ಯಸ್ಥಿಕೆ) ನಿಯಮಗಳು, 2020, ಗ್ರಾಹಕ ಸಂರಕ್ಷಣಾ (ಮಧ್ಯಸ್ಥಿಕೆ) ರೆಗ್ಯುಲೇಷನ್ಸ್ 2020 ರ ಅನುಸಾರ ಮಧ್ಯಸ್ಥಿಕೆಗಾರರನ್ನು ಆಯ್ಕೆ ಮಾಡುವ ಸಲುವಾಗಿ, ಈ ಕೆಳಕಂಡ ಅರ್ಹತೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

(i) ಭಾರತದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು
(ii) ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು
(iii) ಗ್ರಾಹಕ ಆಯೋಗಗಳ ನಿವೃತ್ತ ಸದಸ್ಯರು
(iv) ನಿವೃತ್ತ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು, ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಅಥವಾ ರಾಜ್ಯದ ಇತರೆ ಉನ್ನತ ನ್ಯಾಯಾಂಗ ಸೇವೆಗಳ ನಿವೃತ್ತ ಸದಸ್ಯರುಗಳು
(v) **10 ವರ್ಷಗಳಿಗೆ** ಕಡಿಮೆ ಇಲ್ಲದಂತೆ ಅನುಭವವನ್ನು ಹೊಂದಿರುವ ನಿವೃತ್ತ ನ್ಯಾಯಾಂಗ ಅಧಿಕಾರಿಗಳು
(vi) ಕನಿಷ್ಠ **10 ವರ್ಷಗಳು** ವಕೀಲರಾಗಿ ಸೇವೆ ಸಲ್ಲಿಸಿ ಅನುಭವವಿರುವವರು
(vii) ಭಾರತದ ಸರ್ವೋಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯ ಅಥವಾ ಜಿಲ್ಲಾ ನ್ಯಾಯಾಲಯದಲ್ಲಿನ ಮಧ್ಯಸ್ಥಿಕೆ ಕೋಶದ ಮಧ್ಯಸ್ಥಿಕೆಗಾರರ ಪಟ್ಟಿಯಲ್ಲಿರುವವರು.
(viii) **5 ವರ್ಷಗಳು** ಮಧ್ಯಸ್ಥಿಕೆಗಾರರಾಗಿ ಅಥವಾ ಸಂಧಾನಕಾರರಾಗಿ ಅನುಭವವಿರುವ ವ್ಯಕ್ತಿಗಳು.
(ix) ತಜ್ಞರು ಅಥವಾ ಇತರೆ ವೃತ್ತಿಯಲ್ಲಿ ಕನಿಷ್ಠ **15 ವರ್ಷಗಳ** ಅನುಭವವನ್ನು ಹೊಂದಿರುವವರು ಅಥವಾ ನಿವೃತ್ತ ಹಿರಿಯ ಅಧಿಕಾರಿಗಳು ಅಥವಾ ನಿವೃತ್ತ ಕಾರ್ಯನಿರ್ವಾಹಕರು.

2. ಗ್ರಾಹಕ ಸಂರಕ್ಷಣಾ (ಮಧ್ಯಸ್ಥಿಕೆ) ರೆಗ್ಯುಲೇಷನ್ಸ್ 2020ರ ರೆಗ್ಯುಲೇಷನ್ 4ರ ಅನುಸಾರ ಈ ಕೆಳಕಂಡ ಮಾನದಂಡದ ಅಡಿಯಲ್ಲಿ ಬರುವಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವುದಕ್ಕೆ ಅನರ್ಹರಾಗಿರುತ್ತಾರೆ.
   (i) ನ್ಯಾಯಾಲಯದಲ್ಲಿ ಸುಸ್ತಿದಾರನೆಂದು ತೀರ್ಮಾನಿಸಲ್ಪಟ್ಟ ವ್ಯಕ್ತಿ
   (ii) ಅಪರಾಧಿಕ ನ್ಯಾಯಾಲಯದಿಂದ ನೈತಿಕ ಪ್ರಕ್ಷುಬ್ಧತೆಯನ್ನು ಒಳಗೊಂಡ ಅಪರಾಧಿಕ ಆರೋಪವನ್ನು ಹೊರಿಸಲಾಗಿರುವ ಮತ್ತು ಎದುರಿಸುತ್ತಿರುವ ವ್ಯಕ್ತಿ
   (iii) ನೈತಿಕ ಪ್ರಕ್ಷುಬ್ಧತೆ ಒಳಗೊಂಡಿರುವ ಯಾವುದೇ ಅಪರಾಧಕ್ಕಾಗಿ ಅಪರಾಧಿಕ ನ್ಯಾಯಾಲಯದಿಂದ ಶಿಕ್ಷೆಗೊಳಗಾದ ವ್ಯಕ್ತಿ
   (iv) ಶಿಸ್ತು ಪ್ರಾಧಿಕಾರದಿಂದ ಶಿಸ್ತು ಪ್ರಕ್ರಿಯೆಗಳಿಗೆ ಒಳಗಾಗಿರುವ ಅಥವಾ ಗುರಿಯಾಗಿರುವ ವ್ಯಕ್ತಿ.
3. ಮಧ್ಯಸ್ಥಿಕೆಗಾರರ ಶುಲ್ಕವನ್ನು ಗ್ರಾಹಕ ಸಂರಕ್ಷಣಾ (ಮಧ್ಯಸ್ಥಿಕೆ) ರೆಗ್ಯುಲೇಷನ್ಸ್ 2020ರ ರೆಗ್ಯುಲೇಷನ್ 8ರಂತೆ ಪಾವತಿಸಲಾಗುವುದು.
4. ರಾಜ್ಯ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಒಳಗೊಂಡ ಮಧ್ಯಸ್ಥಿಕೆಗಾರರ ಆಯ್ಕೆ ಸಮಿತಿಯು ಕರ್ನಾಟಕ ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಆವರಣದಲ್ಲಿ ಗ್ರಾಹಕ ಸಂರಕ್ಷಣಾ (ಮಧ್ಯಸ್ಥಿಕೆ) ನಿಯಮಗಳು ಹಾಗೂ ರೆಗ್ಯುಲೇಷನ್ಸ್ ಅನುಸಾರ ಗ್ರಾಹಕ ವ್ಯಾಜ್ಯಗಳನ್ನು ಮಧ್ಯಸ್ಥಿಕೆ ಮೂಲಕ ಇತ್ಯರ್ಥಪಡಿಸುವ ಸಲುವಾಗಿ, ಅಭ್ಯರ್ಥಿಗಳು ಗ್ರಾಹಕ ವ್ಯಾಜ್ಯಗಳನ್ನು ಪರಿಹರಿಸುವ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಅವರ ಅರ್ಹತೆಯನ್ನು ಪರಿಶೀಲಿಸಿದ ನಂತರ ಸೂಕ್ತ ಅಭ್ಯರ್ಥಿಗಳನ್ನು ಮಧ್ಯಸ್ಥಿಕೆಗಾರರ ಪಟ್ಟಿಗೆ ಸೇರಿಸಲು ಕ್ರಮವಹಿಸಲಾಗುತ್ತದೆ.
5. ಮೇಲಿನ ಅರ್ಹತಾ ಮಾನದಂಡಗಳನ್ನು ಹೊಂದಿರುವ ಹಾಗೂ ಕರ್ನಾಟಕ ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಆವರಣದಲ್ಲಿ ಮಧ್ಯಸ್ಥಿಕೆಗಾರರಾಗಿ ಕಾರ್ಯನಿರ್ವಹಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿನ ಅರ್ಜಿಯನ್ನು **ದಿನಾಂಕ 15.07.2022ರಂದು ಸಂಜೆ 5:00 ಘಂಟೆಯ** ಒಳಗಾಗಿ ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿ, ಕರ್ನಾಟಕ ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ಬಸವ ಭವನ, ಬೆಂಗಳೂರು–560001, ಇವರಿಗೆ ಸಲ್ಲಿಸಬಹುದಾಗಿರುತ್ತದೆ.
6. ಅರ್ಜಿ ನಮೂನೆಯನ್ನು ರಾಜ್ಯ ಆಯೋಗದ ಜಾಲತಾಣ **https://kscdrc.karnataka.gov.in** ಇಲ್ಲಿಂದ ಪಡೆಯಬಹುದಾಗಿರುತ್ತದೆ.
7. ನಿಗದಿತ ದಿನಾಂಕ ಹಾಗೂ ಸಮಯದ ನಂತರ ಸ್ವೀಕರಿಸುವ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳದೇ ತಿರಸ್ಕರಿಸಲಾಗುವುದು.

ಮಾನ್ಯ ಅಧ್ಯಕ್ಷರ ಆದೇಶಾನುಸಾರ,
ಸಹಿ/– ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿ,
ಕರ್ನಾಟಕ ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು.

DIPR/CP/AAPL/RO976/22-23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

CHHATTISGARH STATE MINOR FOREST PRODUCE CO-OPERATIVE FEDETATION, LTD

Van Dhan Bhawan, Sector 24, Atal Nagar, Raipur (C.G.)
Phone: 0771-2513100 to 2513110
E-mail mfpfed.cg@nic.in, Website: www.cgmfpfed.org

Notification No.-MSP/E-Auction/2022/I, Dated: 16.06.2022

Summary of e-Auction Notice for the Sale of Imli with Seed, Imli Flower Seed Less, Bhelwa, Baheda, Giloy, Jamun Seed Dry, Dhawai Flower, Mahul Leaf, Kaju Grade 02, Bel Guda, Kutaki, Kodo, Ragi, Imli Bricks packet 500gm., Phool Jhaadu (Plastic Cane), Phool Jhaadu (Plastic Cane) Premium, Phool Jhaadu (Plastic Pipe) Premium, Kaju (Cashew) Purchased and Godowned in MSPs Units for Collection Season 2022 under Minimum Support Price Scheme of Govt. of India.

(1) Starting and Ending of e-Auction : **Bidders can be participated in e-Auction Link https://cgmfpfed.neml.in from 11.00 A.M to 16.00 P.M on 07.07.2022 (Excluding extension time)**
(2) **Earnest Money Deposit:** Only online payment of 10% of the purchase Capacity.
(3) **Registration:** The bidders will have to be registered for participation in e-Auction in **NCDEX e Markets Ltd., Mumbai.**
Link for Registration: https://cgmfpreg.neml.in

The auction notice along with bidder's agreement, lot-list and other Annexures for e-Auction may be downloaded from 24.06.2022 from Federation's above mentioned website or our Service Provider's website www.neml.in only. Amendments / Notices will be available on above Federation's website and Service Provider's website.

For any assistance please contact service provider **NCDEX e Markets Ltd., Mumbai on following contact details.**
Phone No.: 022-61201000, E-mail ID - askus@neml.in
Mr. Ashwani Singh (Mb-08123560664), Mr. Y. Praveen (Mb-06304467770)

S-32912/4 **Managing Director**

farnazfever

ಸಂಕ್ಷಿಪ್ತ ಸುದ್ದಿ

ವಸತಿನಿಲಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಬಡಗನಾಡು ಬ್ರಾಹ್ಮಣ ಮಹಾಸಭಾವು 2022–23ರ ಶೈಕ್ಷಣಿಕ ಸಾಲಿನ ವಸತಿನಿಲಯ ಪ್ರವೇಶಕ್ಕಾಗಿ ಪಿಯುಸಿ, ಪದವಿ, ಎಂಜಿನಿಯರಿಂಗ್ ಮತ್ತು ಮೆಡಿಕಲ್ ಓದುವ ಗ್ರಾಮೀಣ ಭಾಗದ ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಆಸಕ್ತ ವಿದ್ಯಾರ್ಥಿಗಳು ಜುಲೈ 7ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ: 080 2344 5944 ಮತ್ತು 080 23445945ಗೆ ಸಂಪರ್ಕಿಸಬೇಕು ಎಂದು ಮಹಾಸಭಾವು ಪ್ರಕಟಣೆಯಲ್ಲಿ ತಿಳಿಸಿದೆ.

ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಒಂದು ವರ್ಷದ ಲೈಬ್ರರಿ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅಂಗೀಕೃತ ವಿಶ್ವವಿದ್ಯಾಲಯದಿಂದ ಮಾಸ್ಟರ್ ಆಫ್ ಲೈಬ್ರರಿ ಅಂಡ್ ಇನ್‌ಫರ್ಮೇಷನ್ ಸೈನ್ಸ್ ಪದವಿಯಲ್ಲಿ ಉತ್ತೀರ್ಣರಾಗಿರುವ ಆಸಕ್ತರು ಅರ್ಜಿ ಸಲ್ಲಿಸಬಹುದು.

ವಿವಿಯ ಜಾಲತಾಣ: www.bcu.ac.inನಲ್ಲಿ ಅರ್ಜಿಗಳು ಲಭ್ಯ. ಭರ್ತಿ ಮಾಡಿದ ಅರ್ಜಿಗಳನ್ನು ಕುಲಸಚಿವ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು 560 001–ಇಲ್ಲಿಗೆ ಜೂನ್ 24ರ ಒಳಗೆ ಅರ್ಜಿ ಸಲ್ಲಿಸಬಹುದು.

2022-23ನೇ ಸಾಲಿನಲ್ಲಿ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳೂ ಅರ್ಜಿ ಸಲ್ಲಿಸಬಹುದಾಗಿದೆ. ತರಬೇತಿ ಅವಧಿಯಲ್ಲಿ ₹ 15 ಸಾವಿರ ಶಿಷ್ಯವೇತನ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಚಲನಚಿತ್ರ ಕಾರ್ಯಾಗಾರ

ಬೆಂಗಳೂರು: 'ಅಪ್ರಿಷಿಯೇಟಿಂಗ್ ಸಿನಿಮಾ' ಎಂಬ 5 ದಿನಗಳ ಚಲನಚಿತ್ರ ಕಾರ್ಯಾಗಾರದ ಭಾಗವಾಗಿ ಚಲನಚಿತ್ರ ನಿರ್ದೇಶಕ, ಸಾಹಿತಿ ಗಿರೀಶ್ ಕಾಸರವಳ್ಳಿಯವರು ಜುಲೈ 21ರಂದು 'ಮಾಸ್ಟರ್ ಕ್ಲಾಸ್' ನಡೆಸಿಕೊಡಲಿದ್ದಾರೆ.

ಆರ್.ವಿ.ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಲಿಬರಲ್ ಆರ್ಟ್ಸ್ ಆ್ಯಂಡ್ ಸೈನ್ಸ್ ಮತ್ತು ಇಂಡಿಯನ್ ಚಾಪ್ಟರ್ ಆಫ್ ದಿ ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಫಿಲ್ಮ್ ಕ್ರಿಟಿಕ್ಸ್ (ಎಫ್–ಪಿಆರ್‌ಇಎಸ್‌ಸಿಐ, ಇಂಡಿಯಾ) ಸಹಯೋಗದಲ್ಲಿ ಜುಲೈ 18ರಿಂದ 22ರವರೆಗೆ ಮೈಸೂರು ರಸ್ತೆಯಲ್ಲಿರುವ ಆರ್.ವಿ.ವಿಶ್ವವಿದ್ಯಾಲಯದ ಆವರಣದಲ್ಲಿ ಕಾರ್ಯಾಗಾರ ನಡೆಯಲಿದೆ.

ಚಲನಚಿತ್ರಗಳು, ಡಿಜಿಟಲ್ ಕಲೆ ಮತ್ತು ನೂತನ ಮಾಧ್ಯಮ ಅಡಿಯಲ್ಲಿ ಬರುವ ಇತ್ತೀಚಿನ ಅಭಿವೃದ್ಧಿಗೆ ಸಂಬಂಧಿಸಿದ ಮಾಹಿತಿ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಚಲನಚಿತ್ರ ಅಧ್ಯಯನದ ಚಟುವಟಿಕೆಗಳನ್ನು ಪರಿಚಯಿಸುವ ಉದ್ದೇಶವನ್ನು ಕಾರ್ಯಾಗಾರ ಹೊಂದಿದೆ.
ಆಸಕ್ತರು ಜೂನ್ 22ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಕೋರ್ಸ್‌ನ ಸಮನ್ವಯಕಾರ ಪ್ರೊ.ಡಾ.ದೇಬ್‌ಜಾನಿ ಹಲ್ದರ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ debjanih@rvu.edu.inಗೆ ಸಂಪರ್ಕಿಸಿ.

ವಿದ್ಯುತ್ ಅದಾಲತ್: ಬೇಡಿಕೆಗಳ ಮಹಾಪೂರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಭಾಗದ ವಿದ್ಯುತ್ ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಬೆಸ್ಕಾಂ ವ್ಯಾಪ್ತಿಯ 104 ಗ್ರಾಮಗಳಲ್ಲಿ ಶನಿವಾರ ನಡೆದ ಮೊದಲ ವಿದ್ಯುತ್ ಅದಾಲತ್‌ಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಗ್ರಾಹಕರು ವಿದ್ಯುತ್ ಸಂಬಂಧಿತ ಸಮಸ್ಯೆಗಳ ಕುರಿತು ಹಿರಿಯ ಅಧಿಕಾರಿಗಳ ಗಮನ ಸೆಳೆದರು.

ಹೊಸ ಪರಿವರ್ತಕಗಳು, ಹೆಚ್ಚುವರಿ ವಿದ್ಯುತ್ ಕಂಬಗಳು, ಹೊಸ ವಿದ್ಯುತ್ ಸಂಪರ್ಕ, ಗುಣಮಟ್ಟದ ವಿದ್ಯುತ್ ಪೂರೈಕೆ, ಹಳೇ ಲೈನ್ ಬದಲಾವಣೆ ಸೇರಿದಂತೆ ಹಲವು ಬೇಡಿಕೆಗಳನ್ನು ಗ್ರಾಹಕರು ಬೆಸ್ಕಾಂ ಅಧಿಕಾರಿಗಳ ಮುಂದಿಟ್ಟರು.

ಬಿಲ್ಲಿಂಗ್, ವಿದ್ಯುತ್ ವ್ಯತ್ಯಯ, ಹೊಸ ಸಂಪರ್ಕ, ಹೊಸ ವಿದ್ಯುತ್ ಪರಿವರ್ತಕ, ಎಲ್‌ಟಿ ಲೈನ್ ಬೇಡಿಕೆ ಸೇರಿದಂತೆ ಹಲವು ಸಮಸ್ಯೆಗಳ ಕುರಿತು ಗ್ರಾಹಕರು ಅದಾಲತ್‌ನಲ್ಲಿ ಗಮನ ಸೆಳೆದರು ಎಂದು ಅಧಿಕಾರಿಗಳು ತಿಳಿಸಿದರು.

ಸುಮಾರು 150 ಮಂದಿ ಅದಾಲತ್‌ನಲ್ಲಿ ಭಾಗವಹಿಸಿದ್ದರು. ಹೊಸ ವಿದ್ಯುತ್ ಸಂಪರ್ಕಗಳಿಗೆ ಗ್ರಾಹಕರಿಂದ ಬೇಡಿಕೆ ವ್ಯಕ್ತವಾಯಿತು. ಬೆಳಕು ಯೋಜನೆ ಮತ್ತಿತರ ಬೆಸ್ಕಾಂ ವಿದ್ಯುತ್ ಯೋಜನೆಗಳಿಗೆ ಗ್ರಾಹಕರು ನಿರ್ದೇಶಕರಿಗೆ ಬೇಡಿಕೆ ಸಲ್ಲಿಸಿದರು.

ಅದಾಲತ್‌ಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹೊಸ ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿರುವ ಗ್ರಾಹಕರಿಗೆ ಶೀಘ್ರ ವಿದ್ಯುತ್ ಸಂಪರ್ಕ ನೀಡುವ ಭರವಸೆ ನೀಡಲಾಗಿದೆ ಎಂದು ಬೆಸ್ಕಾಂ ನಿರ್ದೇಶಕ ಡಿ. ನಾಗಾರ್ಜನ ಚಿಂತಾಮಣಿ ತಿಳಿಸಿದರು.

ಚಂದಾಪುರದ ವೀರಸಂದ್ರ ಉಪ ವಿಭಾಗದ ಮುತ್ತನಲ್ಲೂರಿನಲ್ಲಿ ನಡೆದ ಅದಾಲತ್‌ನಲ್ಲಿ ಭಾಗವಹಿಸಿದ್ದ ಗ್ರಾಹಕರು, ನೀರು ಸಂಪರ್ಕ ಮತ್ತು ಮನೆಗಳ ವಿದ್ಯುತ್ ಸಂಪರ್ಕಕ್ಕೆ ಒದಗಿಸಿರುವ ವಿದ್ಯುತ್ ಪರಿವರ್ತಕದ ಲೋಡ್ ಸಾಮರ್ಥ್ಯ ಹೆಚ್ಚಿಸುವಂತೆ ಬೆಸ್ಕಾಂನ ಪ್ರಧಾನ ವ್ಯವಸ್ಥಾಪಕ (ಗ್ರಾಹಕ ಸಂಪರ್ಕ) ಎಸ್.ಆರ್. ನಾಗರಾಜಗೆ ವಿನಂತಿಸಿದರು.

ಸಮಾಜ ಕಲ್ಯಾಣ ಇಲಾಖೆ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀ ಕೋಟಾ ಶ್ರೀನಿವಾಸ ಪೂಜಾರಿರವರು ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವುದು

ಅಸ್ಪೃಶ್ಯತೆ ನಿವಾರಣೆ ಮತ್ತು ಅಂತರ್ಜಾತೀಯ ವಿವಾಹದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ

"ಸಮಾನತೆಯ ಕಡೆಗೆ"

ಎಂಬ ಕನ್ನಡ ಚಲನಚಿತ್ರವನ್ನು
ದೂರದರ್ಶನದ ಚಂದನ ವಾಹಿನಿಯಲ್ಲಿ
ಮರುಪ್ರಸಾರ ಮಾಡಲಾಗುತ್ತದೆ.
ದಿನಾಂಕ: 19.06.2022ರ ಭಾನುವಾರ
ಮಧ್ಯಾಹ್ನ: 2.00 ಗಂಟೆ ಇಂದ ಸಂಜೆ: 4.00 ಗಂಟೆ ವರೆಗೆ

ಸಾರ್ವಜನಿಕರು ಈ ಚಲನಚಿತ್ರವನ್ನು ವೀಕ್ಷಿಸಲು ಕೋರಿದೆ.

ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ
ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ

ಅಗ್ನಿಪಥ: ಎಐಡಿಎಸ್‌ಒ ಖಂಡನೆ

ಬೆಂಗಳೂರು: ಸಶಸ್ತ್ರ ಪಡೆಗಳ ಮೂರೂ ವಿಭಾಗಗಳ ನೇಮಕಾತಿ ನಿಯಮಗಳಲ್ಲಿ ಬದಲಾವಣೆ ತಂದು, ನೇಮಕಾತಿಯನ್ನು ಕೇವಲ ನಾಲ್ಕು ವರ್ಷಗಳಿಗೆ ಸೀಮಿತಗೊಳಿಸಿ ಕೇಂದ್ರ ಸರ್ಕಾರ ದೇಶದ ವಿದ್ಯಾರ್ಥಿಗಳಿಗೆ ಮೋಸ ಮಾಡುತ್ತಿದೆ ಎಂದು ಎಐಡಿಎಸ್‌ಒ ಕರ್ನಾಟಕ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಟೀಕಿಸಿದ್ದಾರೆ.

ದೇಶದ ಲಕ್ಷಾಂತರ ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಬಗೆಗೆ ಚಿಂತಿತರಾಗಿ, ಹಗಲು ರಾತ್ರಿ ಶ್ರಮಿಸಿ ಸೈನ್ಯದ ಹುದ್ದೆಗೆ ತಯಾರಾಗುತ್ತಾರೆ. ಹಲವು ರಾಜ್ಯಗಳ ವಿದ್ಯಾರ್ಥಿಗಳು ಪರೀಕ್ಷೆ ಮುಗಿಸಿದ ನಂತರ ನೇಮಕಾತಿಗಾಗಿ ಅತ್ಯಂತ ತವಕದಿಂದ ಕಾಯುತ್ತಿದ್ದರು. ಆದರೆ ಅಚಾನಕ್ ಅವೆಲ್ಲವೂ ರದ್ದಾಗಿದೆ ಎಂದು ಸರ್ಕಾರ ಹೇಳಿತು. ಸೈನಿಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವುದರ ಹಿಂದಿರುವ ಉದ್ದೇಶದಿಂದಲೇ ಜನರ ಜವಾಬ್ದಾರಿ ತೆಗೆದುಕೊಳ್ಳುವುದರಿಂದ ಸರ್ಕಾರ ತಪ್ಪಿಸಿಕೊಳ್ಳುತ್ತಿರುವುದು ಸ್ಪಷ್ಟವಾಗುತ್ತದೆ ಎಂದಿದ್ದಾರೆ.

SESHADRIPURAM INSTITUTIONS
ADMISSION ENQUIRIES OPEN
for 1st Year Degree Programmes: 2022-23

Seshadripuram College
NAAC Accredited 'A'
27, Nagappa Street, Seshadripuram, Bengaluru - 560020.
Contact : Dr. Meera H. N., Principal Tel: 22955354.
website: www.spmcollege.ac.in
B.Com | B.Com FA | B.B.A. | B.C.A. | M.Com | M.Com IB | M.Com FA

Seshadripuram Evening Degree College
27, Nagappa Street, Seshadripuram, Bengaluru - 560020.
Contact : Prof. N. S. Satish, Principal Tel: 22955356. www.sedc.ac.in
B.Com | B.B.A. | B.C.A.

Seshadripuram Institute of Commerce & Management
40, Girls' School Street, Seshadripuram, Bengaluru - 560020.
Contact : Prof. Vidya Shivannanavar, Principal Tel : 22955382. www.sicm.edu.in
B.Com | B.B.A.

Seshadripuram Academy of Business Studies
18, 2nd Main, Kengeri Satellite Town, Bengaluru - 560060.
Contact : Prof. Jayarama, Principal Tel : 28488676 website: www.sabs.ac.in
B.Com | B.B.A. | B.C.A.

Seshadripuram Commerce College
65, 10th Cross, Magadi Road, Bengaluru - 560023.
Contact : Prof. C. Sumathi., Principal, Tel : 22955383 website: www.scc.ac.in
B.Com

Seshadripuram First Grade College
NAAC Accredited 'A'
26, Yelahanka New Town, Bengaluru - 560064.
Contact : Dr. S. N. Venkatesh Principal Tel : 22955369 website: www.sfgc.ac.in
B.Com, B.Com BDA, B.B.A., B.C.A., B.Sc. EMC / BBG, M.Com, M.Com FA

Seshadripuram Law College
1, Govinda Rao Street, Seshadripuram, Bengaluru - 560020.
website: www.spmlawcollege.ac.in.
Contact : Dr. B. S. Praneetha Principal Tel : 22955367
LL.B. (3 Years)
B.A., LL.B. (5 Years)

N. R. Pandith Aradhya, President
Dr. Wooday P. Krishna, Honorary General Secretary

ಸಹನಟನ ಕೊಲೆ: ಬಾಮೈದ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರ ಠಾಣೆ ವ್ಯಾಪ್ತಿಯಲ್ಲಿ ಸಿನಿಮಾ ಸಹನಟ ವಜ್ರ ಸತೀಶ್ (32) ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಬಾವಮೈದುನ ಸೇರಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

'ಪಟ್ಟಣಗೆರೆಯ ಬಾಡಿಗೆ ಮನೆಯಲ್ಲಿ ವಾಸವಿದ್ದ ಸತೀಶ್ ಅವರನ್ನು ಶುಕ್ರವಾರ ರಾತ್ರಿ ಕೊಲೆ ಮಾಡಲಾಗಿದೆ. ಮನೆ ಮಾಲೀಕ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡು, ಬಾವಮೈದುನ ಸುದರ್ಶನ್ ಹಾಗೂ ಸಂಬಂಧಿ ನಾಗೇಂದ್ರ ಎಂಬುವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಸತೀಶ್

'ಸಲೂನ್‌ನಲ್ಲಿ ಕೆಲಸ ಮಾಡುತ್ತಿದ್ದ ಸತೀಶ್, 'ಲಗೋರಿ' ಸೇರಿದಂತೆ ಹಲವು ಸಿನಿಮಾಗಳಲ್ಲಿ ಸಹನಟನಾಗಿ ಅಭಿನಯಿಸಿದ್ದರು. ಯುವತಿಯೊಬ್ಬರನ್ನು ಪ್ರೀತಿಸಿ, ಮದುವೆಯಾಗಿದ್ದರು. ದಂಪತಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಮಗುವೂ ಇತ್ತು. ಆದರೆ, ಮೂರು ತಿಂಗಳ ಹಿಂದೆಯಷ್ಟೇ ಪತ್ನಿ ತೀರಿಕೊಂಡಿದ್ದರು. ಸತೀಶ್ ಒಂಟಿಯಾಗಿ ಮನೆಯಲ್ಲಿದ್ದರು' ಎಂದು ತಿಳಿಸಿದರು.

ಮಗು ವಿಚಾರಕ್ಕೆ ಗಲಾಟೆ: 'ಸತೀಶ್ ನೀಡುತ್ತಿದ್ದ ಕಿರುಕುಳದಿಂದ ಪತ್ನಿ ಮೃತಪಟ್ಟಿದ್ದಾರೆಂದು ತವರು ಮನೆಯವರು ಅಂದುಕೊಂಡಿದ್ದರು. ಪತ್ನಿ ತೀರಿಕೊಂಡ ನಂತರ ಮಗುವನ್ನು ತವರು ಮನೆಯವರೇ ಕರೆದುಕೊಂಡು ಹೋಗಿ ಸಾಕುತ್ತಿದ್ದರು. ಮಗುವನ್ನು ತಮಗೆ ಕೊಡುವಂತೆ ಸತೀಶ್ ಪೀಡಿಸುತ್ತಿದ್ದನೆಂದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಮಗು ವಿಚಾರಕ್ಕಾಗಿ ಜಗಳ ನಡೆದಿತ್ತು. ಪತ್ನಿಯ ತಮ್ಮ ಸುದರ್ಶನ್, ಸತೀಶ್‌ನಿಗೆ ಒಂದು ಗತಿ ಕಾಣಿಸಬೇಕೆಂದು ಕಾಯುತ್ತಿದ್ದ. ಸಂಬಂಧಿ ನಾಗೇಂದ್ರ ಜೊತೆ ಸತೀಶ್ ಮನೆಗೆ ಹೋಗಿದ್ದ ಸುದರ್ಶನ್, ಚಾಕುವಿನಿಂದ ಇರಿದು ಕೊಂದು ಬಾಗಿಲು ಲಾಕ್ ಮಾಡಿಕೊಂಡು ಪರಾರಿಯಾಗಿದ್ದ' ಎಂದರು.

'ಮಾಲೀಕರ ಬಳಿ ಇದ್ದ ನಕಲಿ ಕೀ ಬಳಸಿ ಬಾಗಿಲು ತೆರೆದಾಗಲೇ ಮೃತದೇಹ ಕಂಡಿತ್ತು' ಎಂದರು.

ಕೊಲೆಗೆ ಯತ್ನ

ಬೆಂಗಳೂರು: ಬಸವೇಶ್ವರನಗರ ಠಾಣೆ ವ್ಯಾಪ್ತಿಯ ನವ್ಯಾ ಬಾರ್‌ನಲ್ಲಿ ವ್ಯಕ್ತಿಯೊಬ್ಬರ ಮೇಲೆ ಲಾಂಗ್ ಬೀಸಿ ಕೊಲೆಗೆ ಯತ್ನಿಸಿದ್ದ ಆರೋಪದಡಿ ಮಹಾದೇವ ಸ್ವಾಮಿ ಯನ್ನು ಪೊಲೀಸರು ಬಂಧಿಸಿದ್ದಾರೆ.

'ಮಹಾದೇವಸ್ವಾಮಿ, ಸ್ನೇಹಿತನ ಜೊತೆ ಜೂನ್ 5ರಂದು ಬಾರ್‌ಗೆ ಹೋಗಿದ್ದ. ಸಿಗರೇಟ್ ಸೇದಲೆಂದು ಪಕ್ಕದ ಟೇಬಲ್‌ನಲ್ಲಿ ಕುಳಿತಿದ್ದ ಜನಾರ್ದನ್ ಬಳಿ ಲೈಟರ್ ಪಡೆದಿದ್ದ. ನಂತರ ಜನಾರ್ದನ್ ಲೈಟರ್ ವಾಪಸು ಕೇಳಿದ್ದರು. ಅಷ್ಟಕ್ಕೆ ಜಗಳ ತೆಗೆದಿದ್ದ ಆರೋಪಿ, ಲಾಂಗ್‌ನಿಂದ ತಲೆಗೆ ಹೊಡೆದಿದ್ದ' ಎಂದು ಮೂಲಗಳು ಹೇಳಿವೆ.

ಸಮಾಜ ಕಲ್ಯಾಣ ಇಲಾಖೆ

ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳಿಗೆ
ಅಭಿವೃದ್ಧಿಯ ಸದಾವಕಾಶ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಕೆಳಕಂಡ ಯೋಜನೆಗಳಿಗೆ ಅರ್ಜಿ ಆಹ್ವಾನ

ತರಬೇತಿ
1) 60 ದಿನಗಳ ಕೌಶಲ್ಯಾಭಿವೃದ್ಧಿ ತರಬೇತಿ
2) ಕೌಶಲ್ಯ ಉನ್ನತೀಕರಣ ಯೋಜನೆ:–
(i) 3 ವರ್ಷಗಳ ಡಿಪ್ಲೊಮಾ ಇನ್ ಲೆದರ್ ಟೆಕ್ನಾಲಜಿ – KILT, ಬೆಂಗಳೂರು.
(ii) ಪಾದರಕ್ಷೆ ವಿನ್ಯಾಸ ಮತ್ತು ಉತ್ಪಾದನಾ ತಾಂತ್ರಿಕತೆಯಲ್ಲಿ 1 ವರ್ಷದ ಡಿಪ್ಲೊಮಾ– NIFT, ಚೆನ್ನೈ
(iii) ಪಾದರಕ್ಷೆ ತಯಾರಿಕೆ ಮತ್ತು ನಿರ್ವಹಣಾ ಅಧ್ಯಯನದಲ್ಲಿ ಒಂದೂವರೆ ವರ್ಷದ ಸ್ನಾತಕೋತ್ತರ ಡಿಪ್ಲೋಮಾ – CFTI, ಚೆನ್ನೈ

ಸ್ವಯಂ ಉದ್ಯೋಗ
1) ಸ್ವಾವಲಂಬಿ / ಸಂಚಾರಿ ಮಾರಾಟ ಮಳಿಗೆ
2) ನೇರ ಸಾಲ ಯೋಜನೆ
3) "ಚರ್ಮಶಿಲ್ಪ" ಯೋಜನೆ
4) ಮಹಿಳಾ ಕುಶಲಕರ್ಮಿಗಳಿಗೆ "ಕಾಯಕಸ್ಫೂರ್ತಿ" ಯೋಜನೆ
5) "ಪಾದುಕೆ ಕುಟೀರ" ಯೋಜನೆ
6) ಮಾರುಕಟ್ಟೆ ಸಹಾಯ ಯೋಜನೆ

ವಸತಿ ಕಾರ್ಯಾಗಾರ
(Living cum Work Shed for Leather Artisans)
ಡಾ. ಬಾಬು ಜಗಜೀವನ ರಾಂ ವಸತಿ ಕಾರ್ಯಾಗಾರ ನಿರ್ಮಾಣ ಯೋಜನೆ
ಫಲಾಪೇಕ್ಷಿಗಳು ಅರ್ಜಿಗಳನ್ನು ಸುವಿಧಾ ಪೋರ್ಟಲ್ ಲಿಂಕ್ http://suvidha.karnataka.gov.in ಮೂಲಕ ಸಲ್ಲಿಸುವುದು.
ವಿಶೇಷ ಸೂಚನೆ: (i) ಮಂಡಳಿ ವಿವೇಚನಾ ಕೋಟಾ ಅಥವಾ ಸರ್ಕಾರದ ಸಾಂಸ್ಥಿಕ ಕೋಟಾದಡಿ ಸ್ವೀಕರಿಸುವ ಅರ್ಜಿಗಳನ್ನು ಸಹ ಸುವಿಧಾ ಪೋರ್ಟಲ್ ಮೂಲಕವೇ ಸಲ್ಲಿಸುವುದು. (ii) ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸುವುದು. ನಂತರ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

ಪೋರ್ಟಲ್‌ನಲ್ಲಿ ಅರ್ಜಿಗಳನ್ನು ದಿನಾಂಕ 20–06–2022ರ ಮಧ್ಯಾಹ್ನ 12:00 ಗಂಟೆಯಿಂದ ಸ್ವೀಕರಿಸಲು ಪ್ರಾರಂಭಿಸಲಾಗುವುದು.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಹಾಗೂ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಮತ್ತು ಲಿಡ್‌ಕರ್ ಅಧ್ಯಕ್ಷರಾದ ಪ್ರೊ. ಎನ್. ಲಿಂಗಣ್ಣರವರು ಲಿಡ್‌ಕರ್ ಚರ್ಮೋತ್ಪನ್ನಗಳನ್ನು ವೀಕ್ಷಿಸುತ್ತಿರುವುದು.

ಹೆಚ್ಚಿನ ಮಾಹಿತಿಗಾಗಿ ನಿಗಮದ ಜಿಲ್ಲಾ ಸಂಯೋಜಕರುಗಳ ಕಛೇರಿ
ಅಥವಾ ನಿಗಮದ ವೆಬ್‌ಸೈಟ್ http://lidkar.com
ಅಥವಾ ಕಲ್ಯಾಣಮಿತ್ರ ಏಕೀಕೃತ ಎಸ್.ಸಿ/ಎಸ್.ಟಿ
24x7 ಸಹಾಯವಾಣಿ 9428300400 ಸಂಪರ್ಕಿಸುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30-07-2022

ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿ.,
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ವ್ಯವಸ್ಥಾಪಕ ನಿರ್ದೇಶಕರು, ಬಿಜೆ–ಲಿಡ್‌ಕರ್
ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ
ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಮಾಸ್ಕ್ ಧರಿಸಿ · ದೈಹಿಕ ಅಂತರ ಪಾಲಿಸಿ · ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಚಿತ್ರಕಲಾ ಪರಿಷತ್ತು: ನೇರ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಗೆ ನಡೆಯುತ್ತಿರುವ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಇಬ್ಬರ ನಡುವೆ ಸ್ಪರ್ಧೆ ಏರ್ಪಟ್ಟಿದೆ.

ಹಾಲಿ ಅಧ್ಯಕ್ಷ ಬಿ.ಎಲ್. ಶಂಕರ್ ಹಾಗೂ ಶಿಕ್ಷಣ ತಜ್ಞ ಪ್ರೊ.ಕೆ.ಇ. ರಾಧಾಕೃಷ್ಣ ಅವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಪ್ರೊ. ಕೆ.ಎಸ್. ಅಪ್ಪಾಜಯ್ಯ, ಎಂ.ಎಸ್. ಮೂರ್ತಿ, ಟಿ. ಪ್ರಭಾಕರ್, ರಾಮಕುಮಾರ್ ಹಾಗೂ ಎ. ರಾಮಕೃಷ್ಣಪ್ಪ ಅವರು ಸ್ಪರ್ಧಿಸಿದ್ದಾರೆ. ಪ್ರಧಾನ ಕಾರ್ಯದರ್ಶಿ ಸ್ಥಾನ ಬಯಸಿ ಡಾ.ಜೆ. ಲಕ್ಷ್ಮೀಪತಿ ಹಾಗೂ ಎಸ್. ಶಶಿಧರ್ ಕಣದಲ್ಲಿದ್ದಾರೆ.

ಟಿ. ಚಂದ್ರಶೇಖರ್ ಮತ್ತು ಬಿ.ಎಲ್. ಶ್ರೀನಿವಾಸ ಅವರು ಸಹಾಯಕ ಕಾರ್ಯದರ್ಶಿ ಸ್ಥಾನಕ್ಕೆ, ಎಸ್. ರಾಮಸುಬ್ರಮಣಿಯನ್, ಎನ್. ಲಕ್ಷ್ಮೀಪತಿ ಬಾಬು ಅವರು ಖಜಾಂಚಿ ಸ್ಥಾನಕ್ಕೆ, ಅಮೃತ ವಿಮಲನಾಥನ್, ಸಿ.ಪಿ. ಉಪಾರಾಣಿ, ಟಿ.ವಿ. ತಾರಕೇಶ್ವರಿ, ಪಿ. ದಿನೇಶ್ ಮಗರ್, ಆರ್.ಜಿ. ಭಂಡಾರಿ, ಬಿ.ವೈ. ವಿನೋದಾ, ವೇಮಗಲ್ ಡಿ. ನಾರಾಯಣಸ್ವಾಮಿ, ಸುಬ್ಬಣ್ಣ ಕುಕ್ಕೆ ಹಾಗೂ ಟಿ.ಡಿ. ಸುರೇಶ್ ಅವರು ಕಾರ್ಯಕಾರಿ ಸಮಿತಿ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.

ಇದೇ 26ರಂದು ಪರಿಷತ್ತಿನ ಆವರಣದಲ್ಲಿ ಚುನಾವಣೆ ನಡೆಯಲಿದೆ.

MUDALIAR SEVA SANGAM (Regd.)
No. 8, 6th Cross, Prakashnagar, Bengaluru - 21
ELECTION OF MANAGING COMMITTEE MEMBERS 2022

Sl No.	Candidate Name	Symbol
9	V.N. SARAVANAN	LADDER

V. N. SARAVANAN
L.M. 2040 / S-396

Sl No.	Candidate Name	Symbol
11	V. THIRUNAVUKARASAN	CHAIR

V. THIRUNAVUKARASAN
L.M. 2008 / T-30

Date- 19-06-2022 Sunday Morning 09.00 am to Evening 03.00 pm
Venue : Mudaliar Seva Sangam No.8, 6th Cross, Prakashnagar, Bengaluru-560021

ಕುವೆಂಪುಗೆ ಅವಮಾನ • ಪರಿಷ್ಕೃತ ಪಠ್ಯಪುಸ್ತಕ ವಾಪಸ್ ಪಡೆಯಲು ಆಗ್ರಹಿಸಿ ಬೃಹತ್ ಜಾಥಾ

ಪ್ರತಿಭಟನೆ ವೇಳೆ ಗಲಾಟೆ: ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ವತಿಯಿಂದ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ 'ಸಂವಾದ' ಯೂಟ್ಯೂಬ್ ಚಾನೆಲ್ ಪ್ರತಿನಿಧಿ ಹಾಗೂ ಪ್ರತಿಭಟನಕಾರರ ಮಧ್ಯೆ ಗಲಾಟೆ ನಡೆದಿದ್ದು, ಈ ಸಂಬಂಧ ದೂರು-ಪ್ರತಿದೂರು ದಾಖಲಾಗಿದೆ.

ಸ್ವಾತಂತ್ರ್ಯ ಉದ್ಯಾನದಲ್ಲಿದ್ದ ಪ್ರತಿಭಟನೆ ಬಗ್ಗೆ ವರದಿ ಮಾಡಲೆಂದು ಪ್ರತಿನಿಧಿ ಬಂದಿದ್ದರು. ಛಾಯಾಗ್ರಾಹಕನ ಜೊತೆ ಸೇರಿ ವಿಡಿಯೊ ಚಿತ್ರೀಕರಣ ಮಾಡುತ್ತಿದ್ದರು. ಅವರನ್ನು ಪ್ರಶ್ನಿಸಿದ ರಣಧೀರ ಪಡೆ ರಾಜ್ಯ ಘಟಕದ ಅಧ್ಯಕ್ಷ ಬೈರಪ್ಪ ಹರೀಶ್ ಕುಮಾರ್, 'ನಿಮ್ಮದು ಆರ್.ಎಸ್.ಎಸ್. ಚಾನೆಲ್. ಇಲ್ಲಿಗೆ ಏಕೆ ಬಂದಿದ್ದೀರಾ?' ಎಂದಿದ್ದರು. ಸುದ್ದಿಗೆಂದು ಬಂದಿರುವುದಾಗಿ ಪ್ರತಿನಿಧಿ ಉತ್ತರಿಸಿದ್ದರು ಎಂದು ಗೊತ್ತಾಗಿದೆ.

ಈ ವೇಳೆ ಕೆಲವರು, 'ಆರ್.ಎಸ್.ಎಸ್.ಗೆ ಧಿಕ್ಕಾರ' ಎಂದು ಕೂಗಿದರು. ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಪ್ರತಿನಿಧಿಯ ಅಂಗಿ ಹರಿದಿದ್ದ ಪ್ರತಿಭಟನಕಾರರು, ಥಳಿಸಿದ್ದರು. ಮಧ್ಯ-ಪ್ರವೇಶಿದ ಪೊಲೀಸರು, ಪ್ರತಿನಿಧಿಯನ್ನು ಸ್ಥಳದಿಂದ ಕರೆದೊಯ್ದು ಪರಿಸ್ಥಿತಿ ತಿಳಿಗೊಳಿಸಿದರು.

'ಸುದ್ದಿಗೆ ತೆರಳಿದ್ದ ವೇಳೆ ಕೆಲವರು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ' ಎಂದು ಉಪ್ಪಾರಪೇಟೆ ಠಾಣೆಗೆ ಪ್ರತಿನಿಧಿ ದೂರು ನೀಡಿದ್ದಾರೆ.

ಪ್ರತಿ ದೂರು ನೀಡಿರುವ ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ಪದಾಧಿಕಾರಿಗಳು ಹಾಗೂ ಬೈರಪ್ಪ ಹರೀಶ್ ಕುಮಾರ್, 'ಅಪರಿಚಿತ ದುಷ್ಕರ್ಮಿಯೊಬ್ಬ ಮಹಿಳೆಯರ ವಿಡಿಯೊ ಚಿತ್ರೀಕರಣ ಮಾಡಿಕೊಂಡು ಅನುಚಿತವಾಗಿ ವರ್ತಿಸುತ್ತಿದ್ದ. ಶಾಂತಿ ಕದಡಲು ಯತ್ನಿಸಿ, ಅದನ್ನು ಪ್ರಶ್ನಿಸಿದ್ದಕ್ಕಾಗಿ ಪ್ರತಿಭಟನಕಾರರ ಮೇಲೆಯೇ ಹಲ್ಲೆ ಮಾಡಿದ್ದಾನೆ' ಎಂದು ಆರೋಪಿಸಿದ್ದಾರೆ.

ಗೃಹ ಸಚಿವರ ಖಂಡನೆ

'ಸಾರ್ವಜನಿಕ ಕಾರ್ಯಕ್ರಮದ ವರದಿ ಮಾಡಲು ತೆರಳಿದ್ದ ಪತ್ರಕರ್ತರೊಬ್ಬರ ಮೇಲೆ ಅಮಾನವೀಯವಾಗಿ ಹಲ್ಲೆ ಮಾಡಿದ ಘಟನೆಯನ್ನು ಖಂಡಿಸುತ್ತೇನೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಪ್ರಜಾಪ್ರಭುತ್ವ ಹಾಗೂ ಪತ್ರಿಕಾ ಸ್ವಾತಂತ್ರ್ಯದ ವಿರೋಧಿ ಮನಸ್ಥಿತಿ ವ್ಯಕ್ತಿಗಳ ಕುಮ್ಮಕ್ಕಿನಿಂದ ನಡೆದಿರುವ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಜ್ಞಾನೇಂದ್ರ ಅವರು ಹೇಳಿದರು.

ಸ್ವಾಮೀಜಿ ಗೈರು: ಹಲವರ ಅಸಮಾಧಾನ

ಬೆಂಗಳೂರು: ಪರಿಷ್ಕೃತ ಪಠ್ಯಪುಸ್ತಕಗಳ ವಿರುದ್ಧ 'ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ' ಶನಿವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಗೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಗೈರಾಗಿದ್ದಕ್ಕೆ ಹಲವರು ವೇದಿಕೆಯಲ್ಲೇ ಅಸಮಾಧಾನ ವ್ಯಕ್ತಪಡಿಸಿದರು.

ಪ್ರಾಸ್ತಾವಿಕ ಭಾಷಣದಲ್ಲೇ ಅಸಮಾಧಾನ ಹೊರಹಾಕಿದ ಸಮಿತಿಯ ಗೌರವಾಧ್ಯಕ್ಷ ಸಿ.ಎಚ್. ಹನುಮಂತರಾಯ, 'ಶಿಕ್ಷಣ ಸಚಿವರು ಕಡತ ಎತ್ತಿಕೊಂಡು ಸ್ವಾಮೀಜಿ ಬಳಿ ಹೋಗಿದ್ದರು. ಒಂದೇ ಸಮುದಾಯದ ಒಂಬತ್ತು ಮಂದಿಯನ್ನು ಪಠ್ಯಪುಸ್ತಕ ಪರಿಶೀಲನಾ ಸಮಿತಿಗೆ ನೇಮಿಸಿದ್ದರ ಹಿಂದಿನ ಉದ್ದೇಶವೇನು ಎಂಬುದನ್ನು ಸ್ವಾಮೀಜಿ ಪ್ರಶ್ನಿಸಬೇಕಿತ್ತು. ನಂಜಾವಧೂತ ಸ್ವಾಮೀಜಿಯವರೇ ಸಮಸ್ತ ಒಕ್ಕಲಿಗರಿಗೆ ಗುರುವಾಗಬೇಕಿತ್ತು' ಎಂದು ಪ್ರೊ.ಎಲ್.ಎನ್. ಮುಕುಂದರಾಜ್ ದನಿಗೂಡಿಸಿದರು.

ನಿರ್ಮಲಾನಂದನಾಥ ಸ್ವಾಮೀಜಿಯವರು ಪ್ರತಿಭಟನೆಯಲ್ಲಿ ಭಾಗವಹಿಸದೇ ಇರುವುದನ್ನು ಪರೋಕ್ಷವಾಗಿ ಪ್ರಸ್ತಾಪಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಈ ವಿಚಾರದಲ್ಲಿ ಕೆಲವು ಮಠಾಧೀಶರು ಮೈತುಂಬಾ ಎಣ್ಣೆ ಹಚ್ಚಿಕೊಂಡಿದ್ದಾರೆ' ಎಂದು ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರ ಗದ್ದಲ

ಪ್ರತಿಭಟನಾ ಸಭೆಯ ಪ್ರಧಾನ ವೇದಿಕೆಯಲ್ಲಿ ತಮ್ಮ ಬಣದ ಮುಖಂಡರಿಗೆ ಆಸನ ನೀಡಿಲ್ಲ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಟಿ.ಎ. ನಾರಾಯಣ ಗೌಡ ಬಣದ ಕಾರ್ಯಕರ್ತರು ಗದ್ದಲ ನಡೆಸಿದರು.

ಮತ್ತೊಂದು ಬಣದ ಮುಖಂಡರಾದ ಶಿವರಾಮೇಗೌಡ, ಪ್ರವೀಣ್ ಶೆಟ್ಟಿ ಸೇರಿದಂತೆ ಕೆಲವು ಸಂಘಟನೆಗಳ ಮುಖಂಡರಿಗೆ ಪ್ರಧಾನ ವೇದಿಕೆಯಲ್ಲಿ ಅವಕಾಶ ನೀಡಲಾಗಿತ್ತು. ನಾರಾಯಣ ಗೌಡ ಪ್ರತಿಭಟನೆಗೆ ಗೈರಾಗಿದ್ದರು. ಅವರ ಸಂಘಟನೆಯ ಯಾರಿಗೂ ಪ್ರಧಾನ ವೇದಿಕೆಯಲ್ಲಿ ಅವಕಾಶ ಕಲ್ಪಿಸಿಲ್ಲ ಎಂದು ಆಕ್ಷೇಪಿಸಿದ ಹಲವು ಕಾರ್ಯಕರ್ತರು ಕೆಲಕಾಲ ಏರು ಧ್ವನಿಯಲ್ಲಿ ಘೋಷಣೆಗಳನ್ನು ಕೂಗಿದರು.

ಸುಧಾ ಓದಿರಿ...

ವಲಯದ ಕಡೆ ಮುಖ್ಯ ಆಯುಕ್ತರ ನಡೆ

ಬೆಂಗಳೂರು: ವಲಯವಾರು ಸಾರ್ವಜನಿಕರಿಂದ ಅಹವಾಲು ಪಡೆಯಲು ಮುಂದಾಗಿರುವ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ತಿಂಗಳಿಗೊಮ್ಮೆ ವಲಯಕ್ಕೆ ಭೇಟಿ ನೀಡುವ ವೇಳಾಪಟ್ಟಿ ಬಿಡುಗಡೆ ಮಾಡಿದ್ದಾರೆ.

ಪ್ರತಿ ತಿಂಗಳ ಮೊದಲನೇ ಮಂಗಳವಾರ ಪೂರ್ವ ವಲಯ, ಮೊದಲನೇ ಶುಕ್ರವಾರ ಪಶ್ಚಿಮ ವಲಯ, ಎರಡನೇ ಮಂಗಳವಾರ ದಕ್ಷಿಣ ವಲಯ, ಎರಡನೇ ಶುಕ್ರವಾರ ರಾಜರಾಜೇಶ್ವರಿ ನಗರ, ಮೂರನೇ ಮಂಗಳವಾರ ಬೊಮ್ಮನಹಳ್ಳಿ, ಮೂರನೇ ಶುಕ್ರವಾರ ಮಹದೇವಪುರ, ನಾಲ್ಕನೇ ಮಂಗಳವಾರ ಯಲಹಂಕ ಮತ್ತು ನಾಲ್ಕನೇ ಶುಕ್ರವಾರ ದಾಸರಹಳ್ಳಿಗೆ ಭೇಟಿ ನೀಡಲಾಗುವುದು. ಮಧ್ಯಾಹ್ನ 2ರಿಂದ ಸಂಜೆ 5 ಗಂಟೆ ತನಕ ಅಹವಾಲು ಆಲಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಕನ್ನಡದ ಜಾಗೃತ ಸ್ಥಾನವಾದ ಮಾಸ್ತಿ'

ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ ಮೆಚ್ಚುಗೆ • ಏಳು ಸಾಧಕರಿಗೆ 'ಮಾಸ್ತಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾರಸ್ವತ ಲೋಕದಲ್ಲಿ ಕೆಲವು ಜಾಗೃತ ಸ್ಥಾನಗಳಿವೆ. ಮಾಸ್ತಿ ಕೂಡ ಜಾಗೃತ ಸ್ಥಾನವಾಗಿದ್ದಾರೆ. ಕನ್ನಡದ ಶ್ರದ್ಧಾವಂತ ಸಾಹಿತ್ಯ ಉಪಾಸಕರು, ಶತಮಾನದಿಂದ ಮಾಸ್ತಿ ಅವರ ಮಹನೀಯತೆಯನ್ನು ತಮ್ಮ ಬೆಳವಣಿಗೆಯ ಸಂಬಂಧದಲ್ಲಿ ಕಂಡುಕೊಂಡಿದ್ದಾರೆ' ಎಂದು ವಿದ್ವಾಂಸ ಟಿ.ವಿ. ವೆಂಕಟಾಚಲ ಶಾಸ್ತ್ರಿ ಮೆಚ್ಚುಗೆ ವ್ಯಕ್ತಪಡಿಸಿದರು.

ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಕೆ.ವಿ. ನಾರಾಯಣ, ಓ.ಎಲ್. ನಾಗಭೂಷಣಸ್ವಾಮಿ, ಶಶಿಕಲಾ ವಸ್ತ್ರದ, ರಾಘವೇಂದ್ರ ಪಾಟೀಲ, ವಿ.ಚಂದ್ರಶೇಖರ ನಂಗಲಿ, 'ಸಂಯುಕ್ತ ಕರ್ನಾಟಕ' ಸಮೂಹ ಸಂಪಾದಕ ಹುಣಸವಾಡಿ ರಾಜನ್ ಹಾಗೂ 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರಿಗೆ 2022ನೇ ಸಾಲಿನ 'ಮಾಸ್ತಿ ಪ್ರಶಸ್ತಿ' ಪ್ರದಾನ ಮಾಡಿದರು. ಪ್ರಶಸ್ತಿಯು ಫಲಕ ಮತ್ತು ₹25 ಸಾವಿರ ನಗದು ಒಳಗೊಂಡಿದೆ.

'ಬಹುಭಾಷಾ ಪಂಡಿತರಾಗಿದ್ದ ಮಾಸ್ತಿ ಅವರು, ಘನತೆ, ಗಾಂಭೀರ್ಯದಿಂದ ಜೀವನ ನಡೆಸಿದರು. ವ್ಯಕ್ತಿಯಾಗಿ ಅವರನ್ನು ಕಂಡವರು, ಬರವಣಿಗೆಯನ್ನು ಓದಿದವರು ಎಂದಿಗೂ ಮಾಸ್ತಿಯವರನ್ನು ಮರೆಯುವುದಿಲ್ಲ. ಅವರ ವರ್ಚಸ್ಸು, ಪಾಂಡಿತ್ಯ ಸದಾಕಾಲ ನೆನಪಿನಲ್ಲಿ ಇರುತ್ತದೆ. ಅನೇಕ ಉದಯೋನ್ಮುಖ ಲೇಖಕರ ಬರಹ ಗಳನ್ನು ಮಾಸ್ತಿ ಅವರು ಪ್ರಕಟಿಸಿ, ಪ್ರೋತ್ಸಾಹಿಸಿದ್ದರು' ಎಂದು ಟಿ.ವಿ. ವೆಂಕಟಾಚಲ ಶಾಸ್ತ್ರಿ ಹೇಳಿದರು.

ಅನುವಾದದಿಂದ ಜ್ಞಾನ ವೃದ್ಧಿ: ವಿಮರ್ಶಕ ಓ.ಎಲ್. ನಾಗಭೂಷಣ ಸ್ವಾಮಿ, 'ಮಾಸ್ತಿ, ಕುವೆಂಪು, ಕಾರಂತ ಅವರು ನನ್ನನ್ನು ಚಿಕ್ಕಂದಿನಿಂದ ಬೆಳೆಸಿದ ಚೇತನಗಳು. ಅನುವಾದ ಎನ್ನುವುದು ಅಹಂಕಾರ ಕಳೆದುಕೊಳ್ಳಲು ಇರುವ ಏಕೈಕ ಮಾರ್ಗ. ಅನುವಾದ ಉತ್ತಮವಾಗಿದ್ದರೆ ಅದರ ಶ್ರೇಯ ಮೂಲ ಲೇಖಕರಿಗೆ ಹೋಗಲಿದೆ. ಅನುವಾದ ಕೆಟ್ಟದಾಗಿದ್ದರೆ ಅದರ ಹೊಣೆಯನ್ನು ಅನುವಾದಕರು ಹೊರಬೇಕಾಗುತ್ತದೆ. ಅನುವಾದದಲ್ಲಿ ಬದಲಾವಣೆಗೆ ಅವಕಾಶ ವಿರುವುದರಿಂದ ಪ್ರತಿಯೊಂದು ಅನುವಾದವೂ ನಮ್ಮ ಜ್ಞಾನ ಬೆಳೆಸುತ್ತದೆ' ಎಂದು ತಿಳಿಸಿದರು.

ಹುಣಸವಾಡಿ ರಾಜನ್, 'ಸಂವಾದ ಸಂಸ್ಕೃತಿ ಹೇಗಿರಬೇಕು ಎಂಬುದನ್ನು ಮಾಸ್ತಿ ತೋರಿಸಿಕೊಟ್ಟಿದ್ದರು. ಈಗ ದೇಶದಲ್ಲಿ ವಾದ–ಪ್ರತಿವಾದ, ಸಂವಾದದ ಸಂಸ್ಕೃತಿ ಮರೆಯಾಗಿ, ವಿವಾದದ ಸಂಸ್ಕೃತಿ ಬೆಳೆಯುತ್ತಿದೆ. ಎಲ್ಲಿ ಸಾರ್ವಜನಿಕ ಸಂವಾದ ಇರುವುದಿಲ್ಲವೋ ಅಲ್ಲಿ ಮುಖ್ಯವಾದ ಚರ್ಚೆ, ದೃಷ್ಟಿ ಹಾಗೂ ಬದುಕು ಇರಲು ಸಾಧ್ಯವಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ವಿಮರ್ಶಕ ಡಾ.ವಿ.ಚಂದ್ರಶೇಖರ ನಂಗಲಿ, 'ಮಾಸ್ತಿ ಅವರ ಎಲ್ಲ ಕಥೆಗಳೂ ನಿತ್ಯ ನೂತನವಾದವು' ಎಂದರು.

ಟ್ರಸ್ಟ್‌ನ ಅಧ್ಯಕ್ಷ ಮಾವಿನಕೆರೆ ರಂಗನಾಥನ್, 'ಜ್ಞಾನಜ್ಯೋತಿ ಬಡಾವಣೆಯಲ್ಲಿ ಮಾಸ್ತಿ ಭವನದ ಶಿಲಾನ್ಯಾಸ ಇತ್ತೀಚೆಗೆ ನೆರವೇರಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಎರಡು ವರ್ಷದಲ್ಲಿ ನೂತನ ಭವನ ನಿರ್ಮಿಸಿ, ಅಲ್ಲಿಯೇ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸಲಾಗುತ್ತದೆ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರವೀಂದ್ರ ಭಟ್ಟ, ವಿ. ಚಂದ್ರಶೇಖರ ನಂಗಲಿ, ಶಶಿಕಲಾ ವಸ್ತ್ರದ, ಹುಣಸವಾಡಿ ರಾಜನ್, ಓ.ಎಲ್. ನಾಗಭೂಷಣಸ್ವಾಮಿ, ರಾಘವೇಂದ್ರ ಪಾಟೀಲ ಹಾಗೂ ಕೆ.ವಿ. ನಾರಾಯಣ ಅವರಿಗೆ 'ಮಾಸ್ತಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯರಾದ ಬಿ.ಆರ್ ಲಕ್ಷ್ಮಣ ರಾವ್, ಬಿ.ಎಸ್ ವೆಂಕಟಾಚಲಪತಿ, ಕೃಷ್ಣಮೂರ್ತಿ ಹನೂರು, ಉಷಾ ಕೇಸರಿ, ಟಿ.ವಿ. ವೆಂಕಟಾಚಲ ಶಾಸ್ತ್ರಿ, ವಿಮರ್ಶಕಿ ಎಲ್‌ಜಿ. ಮೀರಾ, ಮಾವಿನಕೆರೆ ರಂಗನಾಥನ್, ಪತ್ರಕರ್ತ ಜಿ.ಎನ್ ರಂಗನಾಥರಾವ್ ಹಾಗೂ ಟ್ರಸ್ಟ್‌ನ ಸದಸ್ಯ ಕಾರ್ಯದರ್ಶಿ ಎನ್ ನರೇಂದ್ರ ಬಾಬು ಇದ್ದಾರೆ — ಪ್ರಜಾವಾಣಿ ಚಿತ್ರ

> ಕಥೆಗಳ ಮೂಲಕ ಒಬ್ಬ ಲೇಖಕ ಪ್ರಮುಖ ಬರಹಗಾರ ಆಗುವುದು ಸಾಧ್ಯ ಎನ್ನುವುದನ್ನು ಮಾಸ್ತಿ ಅವರು ಸಾಧಿಸಿ ತೋರಿಸಿದರ
> **ರಾಘವೇಂದ್ರ ಪಾಟೀಲ,** ಸಾಹಿತಿ

> ಕನ್ನಡ ಸಾಹಿತ್ಯದಲ್ಲಿ ಮಾಸ್ತಿ ಅವರ ಸಾಹಿತ್ಯ ವೈವಿಧ್ಯ ಹಾಗೂ ಗುಣಮಟ್ಟದಿಂದ ಕೂಡಿದೆ. ಅವರು ತಮ್ಮ ವಾರಿಗೆಯ ಸಾಹಿತಿಗಳನ್ನು ಪ್ರೋತ್ಸಾಹಿಸಿದರು.
> **ಮಾವಿನಕೆರೆ ರಂಗನಾಥನ್,** ಮಾಸ್ತಿ ಟ್ರಸ್ಟ್ ಅಧ್ಯಕ್ಷ

ಗ್ರಂಥಾಲಯ ಡಿಪ್ಲೊಮಾ ಪ್ರವೇಶ

ಬೆಂಗಳೂರು: ನಗರದ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ ಮೂರು ವರ್ಷದ ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ ಡಿಪ್ಲೊಮಾ ಕೋರ್ಸ್‌ಗೆ ಪ್ರವೇಶ ಪಕ್ರಿಯೆ ಶುರುವಾಗಿದ್ದು, ದಾಖಲಾತಿಗೆ ಸೋಮವಾರ ಕಡೆಯ ದಿನವಾಗಿದೆ. ಎಸ್‌ಎಸ್‌ಎಲ್‌ಸಿ ಪಾಸಾದವರು ಈ ಕೋರ್ಸ್ ಸೇರಬಹುದು. ಈ ಕೋರ್ಸ್ ಮಾಡಿಕೊಂಡವರು ಸರ್ಕಾರಿ ಹಾಗೂ ಖಾಸಗಿ ವಲಯದಲ್ಲಿ ಗ್ರಂಥಪಾಲಕರಾಗಿ ಕಾರ್ಯನಿರ್ವಹಿಸಬಹುದು. ವಿದ್ಯಾರ್ಥಿನಿಯಗೆ ಹಾಸ್ಟೆಲ್ ಸೌಲಭ್ಯ ಇದೆ. ಕೋರ್ಸ್ ಶುಲ್ಕ ವಾರ್ಷಿಕ ₹1500. ಪ್ರತಿಭಾವಂತ ಹಾಗೂ ಬಡ ವಿದ್ಯಾರ್ಥಿನಿಯರಿಗೆ ಸ್ಕಾಲರ್‌ಶಿಪ್ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9964420060, 9886394884, 9538203769

ಸ್ಕೂಲ್ ಬ್ಯಾಗ್ ವಿತರಣೆ

ಸಾರಕ್ಕಿ ಸರ್ಕಾರಿ ಶಾಲೆಯ 1500 ಬಡ ಮಕ್ಕಳಿಗೆ ಸ್ಕೂಲ್ ಬ್ಯಾಗ್ ಮತ್ತು ಪುಸ್ತಕವನ್ನು ಶಾಸಕಿ ಸೌಮ್ಯ ರೆಡ್ಡಿ ವಿತರಿಸಿದರು. ಪಾಲಿಕೆ ಮಾಜಿ ಸದಸ್ಯ ನಾಗರಾಜು ಜೆ.ಪಿ. ನಗರ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಅರುಣ್ ಕುಮಾರ್ ಉಪಸ್ಥಿತರಿದ್ದರು - ಪ್ರಜಾವಾಣಿ ಚಿತ್ರ

ಮಣ್ಣಿನ ಸಮಸ್ಯೆಯನ್ನು ಪ್ರತ್ಯೇಕವಾಗಿ ನೋಡಿ: ಸದ್ಗುರು

ಬೆಂಗಳೂರು: 'ಮಣ್ಣಿನ ಮಹತ್ವ ದೊಡ್ಡದು. ಅದು ಉದ್ಯಮಗಳು, ಕೈಗಾರಿಕೆಗಳು ಅಥವಾ ಯಾವುದೇ ಲಾಬಿಗಳ ಜೊತೆ ಘರ್ಷಿಸುವುದಿಲ್ಲ. ಹೀಗಾಗಿ ಉಳಿದ ಪರಿಸರ ಸಮಸ್ಯೆಗಳಿಂದ ಮಣ್ಣಿನ ಸಮಸ್ಯೆಯನ್ನು ಪ್ರತ್ಯೇಕಿಸಿ ನೋಡಬೇಕಿದೆ' ಎಂದು ಈಶಾ ಫೌಂಡೇಶನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್ ಪ್ರತಿಪಾದಿಸಿದರು.

'ಮಣ್ಣು ಉಳಿಸಿ' ಅಭಿಯಾನದ ಭಾಗವಾಗಿ 27 ಸಾವಿರ ಕಿ.ಮೀ ಪ್ರಯಾಣಿಸಿರುವ ಅವರು, ಶನಿವಾರ ಕರ್ನಾಟಕಕ್ಕೆ ಬಂದಿದ್ದಾರೆ. ಈ ವೇಳೆ ಸುದ್ದಿಗಾರರ ಜತೆ ಮಾತನಾಡಿದ ಅವರು, ತಮ್ಮ ಅಭಿಯಾನಕ್ಕೆ 74 ದೇಶಗಳ ಬೆಂಬಲ ಸಿಕ್ಕಿದೆ. ಸಾಮಾಜಿಕ ಜಾಲತಾಣಗಳಲ್ಲಿ ಕೋಟ್ಯಂತರಜನ ಬೆಂಬಲ ಕೊಟ್ಟಿದ್ದಾರೆ. ಹೀಗಾಗಿ ಮಣ್ಣು ಉಳಿಸುವ ನೀತಿಗಳು ಜಾರಿಯಾಗುವುದರಲ್ಲಿ ಸಂಶಯವಿಲ್ಲ ಎಂದು ಹೇಳಿದರು.

ಬರಗಾಲ ಮಾನವನಿಗೆ ಬಂದೆರಗುವ ದೊಡ್ಡ ಆಪತ್ತು. ಹಸಿರು ಕ್ರಾಂತಿಯು ಬರಗಾಲದಿಂದ ತಪ್ಪಿಸಿಕೊಳ್ಳಲು ಒಂದು ದಾರಿಯಂತೆ ದೇಶಕ್ಕೆ ಒದಗಿ ಬಂತು. ಈಗ ನಾವು ನೆಲದ ಮೇಲೆ ಗಟ್ಟಿಯಾಗಿ ನಿಲ್ಲದಿದ್ದರೆ, ನಮ್ಮದು ತ್ರಿಶಂಕು ಪರಿಸ್ಥಿತಿ ಆಗುತ್ತದೆ. ಇವತ್ತು ಕೃಷಿ ಆರ್ಥಿಕ ಪರಿಸ್ಥಿತಿ ಬಹಳ ದುರ್ಬಲವಾಗಿರುವುದರಿಂದಲೇ ಹತಾಶೆಗೊಂಡ ರೈತರು ಆತ್ಮಹತ್ಯೆಯ ಮೊರೆ ಹೋಗುತ್ತಾರೆ. ಗುಣಮಟ್ಟ ಕುಸಿದ ಮಣ್ಣಿನಲ್ಲಿ ಅವರ ಕಠಿಣ ಪರಿಶ್ರಮಕ್ಕೆ ಸರಿಯಾದ ಫಲ ಸಿಗದಿರುವುದು ಇದಕ್ಕೆ ಒಂದು ಕಾರಣ ಎಂದು ಅವರು ಅಭಿಪ್ರಾಯಪಟ್ಟರು.

ಮಾರ್ಚ್ 21 ರಂದು ಶುರುವಾದ ತಮ್ಮ ನೂರು ದಿನದ ಪಯಣ ಇದೇ 21ರಂದು ಕಾವೇರಿ ಕೂಗಿನ ಯೋಜನೆ ಅನುಷ್ಠಾನದಲ್ಲಿರುವ ಕಾವೇರಿ ನದಿ ತೀರದಲ್ಲಿ ಅಂತಿಮಗೊಳ್ಳಲಿದೆ. ಕಾವೇರಿ ಕೂಗಿನ ಯೋಜನೆಯಡಿ ಸುಮಾರು 50 ಸಾವಿರ ರೈತರು ಅರಣ್ಯ ಕೃಷಿಯನ್ನು ತಮ್ಮದಾಗಿಸಿಕೊಂಡಿದ್ದಾರೆ ಎಂದರು.

ಮಹದೇಶ್ವರ ಸ್ವಾಮಿ ದೇವಾಲಯದ ಹುಂಡಿಯಲ್ಲಿ 35 ದಿನಗಳಲ್ಲಿ 2.3 ಕೋಟಿ ಸಂಗ್ರಹ

ಮಹದೇಶ್ವರ ಬೆಟ್ಟ: ₹2 ಕೋಟಿ ಸಂಗ್ರಹ

ಮಹದೇಶ್ವರ ಬೆಟ್ಟ: ಮಲೆ ಮಹದೇಶ್ವರ ದೇವಾಲಯದ ಹುಂಡಿಯ ಹಣ ಎಣಿಕೆ ಶುಕ್ರವಾರ ನಡೆದಿದ್ದು, ₹ 2.3 ಕೋಟಿ ಹಣ ಸಂಗ್ರಹವಾಗಿದೆ.

35 ದಿನಗಳಿಂದ ಸಂಗ್ರಹವಾಗಿದ್ದ ಹಣ ಹಾಗೂ ಚಿನ್ನಾಭರಣ ಎಣಿಕೆ ಹಾಗೂ ಪರ್ಕಾವಣೆ ಕಾರ್ಯವು ಬೆಟ್ಟದ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣದಲ್ಲಿ ನಡೆಯಿತು. ₹2,03,25,354 ಸಂಗ್ರಹವಾಗಿದ್ದು, 110 ಗ್ರಾಂ ಚಿನ್ನ ಹಾಗೂ 3.560 ಕೆಜಿ ಬೆಳ್ಳಿ ಪದಾರ್ಥಗಳನ್ನು ಭಕ್ತರು ಅರ್ಪಿಸಿದ್ದಾರೆ.

ಅಸ್ಸಾಂ ಪ್ರವಾಹ: ಮತ್ತೆ 8 ಮಂದಿ ಸಾವು

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಭಾರಿ ಮಳೆಯಿಂದಾಗಿ ಮತ್ತೆ 8 ಮಂದಿ ಮೃತಪಟ್ಟಿದ್ದು, ಪ್ರವಾಹ ಪರಿಸ್ಥಿತಿ ಮುಂದುವರಿದಿದೆ.

'ಬರ್ಪೇಟಾ ಮತ್ತು ಕರೀಂಗಂಜ್‌ನಲ್ಲಿ ತಲಾ ಇಬ್ಬರು, ದರ್ರಾಂಗ್, ಹೈಲಕಂಡಿ, ನಲ್ಬರಿ ಮತ್ತು ಸೋನಿತ್‌ಪುರ ಜಿಲ್ಲೆಗಳಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. 32 ಜಿಲ್ಲೆಗಳ 31 ಲಕ್ಷ ಮಂದಿ ಪ್ರವಾಹದಿಂದ ಸಂತ್ರಸ್ತರಾಗಿದ್ದಾರೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಮೊಬೈಲ್‌ಗಾಗಿ ಕಾರ್ಮಿಕನ ಕೊಲೆ: ಇಬ್ಬರ ಬಂಧನ

ಬೆಂಗಳೂರು: ಮೊಬೈಲ್‌ಗಾಗಿ ಕಾರ್ಮಿಕ ಬಿಕಾಸ್ ಮೋಡಿ ಅವರನ್ನು ಕೊಲೆ ಮಾಡಿದ್ದ ಆರೋಪದಡಿ ಮಜರ್ ಹಾಗೂ ಕಾರ್ತಿಕ್ ಎಂಬುವವರನ್ನು ಪುಲಿಕೇಶಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೊಲೆ ಯತ್ನ, ಸುಲಿಗೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಮಜರ್, ಮದ್ಯ ಖರೀದಿಗೆ ಹಣ ಹೊಂದಿಸಲು ಸುಲಿಗೆ ಮಾಡುತ್ತಿದ್ದ. ಮೆಟ್ರೊ ಕಾಮಗಾರಿ ಸ್ಥಳದಲ್ಲಿ ಬಿಕಾಸ್ ಕೆಲಸ ಮಾಡುತ್ತಿದ್ದರು. ತಾವು ವಾಸವಿದ್ದ ಸ್ಥಳದಿಂದ ನಸುಕಿನಲ್ಲಿ ಎದ್ದು ಕೆಲಸಕ್ಕೆ ಹೊರಟಿದ್ದಾಗ ಅವರನ್ನು ಅಡ್ಡಗಟ್ಟಿದ್ದ ಆರೋಪಿಗಳು, ಮೊಬೈಲ್ ಕಿತ್ತುಕೊಳ್ಳಲು ಯತ್ನಿಸಿದ್ದರು. ಆದರೆ, ಬಿಕಾಸ್ ಪ್ರತಿರೋಧವೊಡ್ಡಿದ್ದರು.' ಎಂದು ಪೊಲೀಸರು ಹೇಳಿದರು.

'ಮೊಬೈಲ್ ಕೊಡುವಂತೆ ಬಿಕಾಸ್ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದರು. ಬಿಕಾಸ್ ಮೃತದೇಹ ನೋಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದೂ ವಿವರಿಸಿದರು.

ಮಿಲಿಟರಿ ಪೊಲೀಸ್ ಸೆಂಟರ್ (ಸಿಎಂಪಿ ಸೆಂಟರ್ & ಸ್ಕೂಲ್)
ಹೊಸೂರ್ ರಸ್ತೆ, ಬೆಂಗಳೂರು-25.
ಫೋನ್ ನಂ. 08025577121 ಇ-ಮೇಲ್: cmptrcell@gmail.com

ಟಾಟಾ ವಿಂಗರ್ 14 ಸೀಟರ್ ಮಿನಿ ಬಸ್ ಹರಾಜು (ಡಿ + 13 ಸೀಟರ್)

ಅಕ್ಟೋಬರ್ 2012 ವಿಂಗರ್, ಬಿಳಿ ಬಣ್ಣದ, ತಾಂತ್ರಿಕವಾಗಿ ಉತ್ತಮ ಸ್ಥಿತಿಯಲ್ಲಿರುವ, 58651 ಕಿ.ಮೀ. ಸಂಚರಿಸಿರುವ, ಅಪರೂಪವಾಗಿ ಬಳಸಲಾಗಿರುವ, ಎಲ್ಲಾ ತೆರಿಗೆಗಳನ್ನು ಪಾವತಿಸಲಾಗಿರುವ ಮತ್ತು 09 ನವಂಬರ್ 2022 ರವರೆಗೆ ವಿಮೆ ಹೊಂದಿರುವ ಟಾಟಾ ವಿಂಗರ್ 14 ಸೀಟರ್ (ಡಿ + 13 ಸೀಟರ್) ಮಿನಿ ಬಸ್ ವಾಹನವನ್ನು, 24 ಜೂನ್ 2022 ರಂದು 10.00 ಗಂಟೆಗೆ ಸಿಎಂಪಿ ಸೆಂಟರ್ ಮತ್ತು ಸ್ಕೂಲ್ ಪ್ರಾಂಗಣದಲ್ಲಿ ಹರಾಜು ಮಾರಾಟ ಮಾಡಲಾಗುತ್ತದೆ.

ಸಹಿ/-
ಅಕೌಂಟ್ಸ್ ಆಫೀಸರ್, ಸಿಎಂಪಿ ಸೆಂಟರ್ & ಸ್ಕೂಲ್

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
KARNATAKA POWER CORPORATION LTD.
CIN : U85110KA1970SGC001919
ಸಂ: KPCL/2022-23/BD/WORK_INDENT12399/Call-2 ದಿ: 17.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ-2ನೇ ಕರೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿ ಹೆಸರು: ಕೆಪಿಸಿಎಲ್‌ನ ಶಕ್ತಿಭವನ ಕಟ್ಟಡದಲ್ಲಿ ಹೊಸ ಒಳಚರಂಡಿ ಕೊಳವೆಗಳನ್ನು ಒದಗಿಸುವ, ಕೋಬಲ್ ಸ್ಟೋನ್ ಇಂಟರ್‌ಲಾಕ್ ಪೇವರ್ ಬ್ಲಾಕ್‌ಗಳನ್ನು ಮರುಹೊಂದಿಸುವ ಹಾಗೂ ಸಣ್ಣ ದುರಸ್ತಿಯ ಕಾಮಗಾರಿ.
ಇಎಂಡಿ ಮೊತ್ತ: ರೂ.39,875/-. ಗುತ್ತಿಗೆ ಅವಧಿ: 45 ದಿನಗಳ ಕೆಲಸದ ಕಾಲಾವಧಿ ಜೊತೆ ಒಂದು ವರ್ಷದ ನಿರ್ವಹಣಾ ಅವಧಿ.
ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.07.2022 ಸಂಜೆ 4.00 ಗಂಟೆಯವರೆಗೆ. ಇತರೆ ಮಾಹಿತಿಯನ್ನು ಟೆಂಡರ್ ಸೆಕ್ಷನ್‌ನ ಅಡಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ನಲ್ಲಿ ಪರಿವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ. ಕೆಲಸದ ವೇಳೆಯಲ್ಲಿ ಅಧೀಕ್ಷಕ ಅಭಿಯಂತರರು (ಕಾ) ಆರ್‌ಓ, ನಂ.82, ಶಕ್ತಿಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001, ಮೊ: 9141609628 ಇಲ್ಲಿಂದ ಪಡೆಯಬಹುದು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, 1ನೇ ಮಹಡಿ,
ನ್ಯೂ ಕೋಲಾರ ಆಸ್ಪತ್ರೆ ಕಟ್ಟಡ, ಕುವೆಂಪು ನಗರ, ಕೋಲಾರ-563101
ದೂ: 08152-229225 ಇ-ಮೇಲ್: cdpoklr@gmail.com
ಸಂ: ತಾಪಂಕೋ:ಆ.ಪ.ಸಾ:ಟೆಂಡರ್:2022-23 ದಿ: 15.06.2022

ಇ-ಟೆಂಡರ್ ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನೆ, ಕೋಲಾರ ವ್ಯಾಪ್ತಿಯ 464 ಅಂಗನವಾಡಿ ಕೇಂದ್ರಗಳಿಗೆ ಎಂ.ಎಸ್.ಪಿ.ಸಿ. ಕಳ್ಳಿಪುರ ಗೋಧಾಮಿನಿಂದ ಅಥವಾ ಶಿಶು ಅಭಿವೃದ್ಧಿ ಯೋಜನೆ ಕೋಲಾರ ಗೋಧಾಮಿನಿಂದ 2022-23ನೇ ಸಾಲಿನ ಅಥವಾ ಶಿಶು ಅಭಿವೃದ್ಧಿ ಯೋಜನೆ ಕೋಲಾರ ಗೋಧಾಮಿನಿಂದ 2022-23ನೇ ಸಾಲಿಗೆ ಅಥವಾ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಂದ ಮುಂದಿನ ಆದೇಶದವರೆಗೆ ಆಹಾರ ಸಾಮಗ್ರಿಗಳನ್ನು ಸಾಗಾಣಿಕೆ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, eproc.karnataka.gov.in ನಲ್ಲಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೇಲಿನ ವಿಳಾಸ/ದೂರವಾಣಿ: 08152-229225ರವರನ್ನು ಸಂಪರ್ಕಿಸುವುದು. (1) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸ್ವೀಕರಿಸುವ ಪ್ರಾರಂಭ ದಿನಾಂಕ: 10.06.2022. (2) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30.06.2022. (3) ಟೆಕ್ನಿಕಲ್ (ತಾಂತ್ರಿಕ) ಬಿಡ್ ತೆರೆಯುವ ದಿನಾಂಕ: 01.07.2022. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 04.07.2022. (5) ಸಲ್ಲಿಸಬೇಕಾದ ಇಎಂಡಿ ಮೊತ್ತ: ರೂ.50,000/-. (ಐವತ್ತು ಸಾವಿರ ರೂಪಾಯಿ)ಗಳು. (6) ವಾರ್ಷಿಕ ಅಂದಾಜು ಟೆಂಡರ್ ಮೊತ್ತ: ರೂ.12.00 ಲಕ್ಷಗಳು.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ156/ಎಂ.ಸಿ.ಎ/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈಋತ್ಯ ರೈಲ್ವೆ
Azadi Ka Amrit Mahotsav
ಇ-ಟೆಂಡರ್ ಸೂಚನೆ ಸಂ. SWR/W/TS/2022/06/E
ದಿನಾಂಕ: 13.06.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಐಟಂ-ಎ: 60 ಕೆಜಿ ರೈಲ್‌ಗಳಿಗೆ ಕಾಂಕ್ರೀಟ್ ಸ್ಲೀಪರ್‌ಗಳ ಮೇಲೆ ಎಲಾಸ್ಟಿಕ್ ರೈಲ್ ಕ್ಲಿಪ್ಸ್ ಎಮ್‌ಕೆ-III ಫ್ಲ್ಯಾಟ್ ಟೋ ಗಳೊಂದಿಗೆ ಬಳಕೆಗೆ ಮೆಟಲ್ ಲೈನರ್‌ಗಳಿಗೆ ಐಆರ್‌ಎಸ್ ಸ್ಪೆಸಿಫಿಕೇಷನ್ ನೊಂದಿಗೆ ಡಿಆರ್‌ಜಿ ಸಂ. ಆರ್‌ಡಿ-ಎಸ್‌ಓ/ಟಿ-3740 ಆಲ್ಟ್-6 ಗೆ ಮೆಟಲ್ ಲೈನರ್‌ಗಳ ತಯಾರಿಕೆ ಮತ್ತು ಸರಬರಾಜು. ಐಟಂ-ಬಿ: 52 ಕೆಜಿ ರೈಲ್‌ಗಳಿರುವ 60 ಕೆಜಿ ಕಾಂಕ್ರೀಟ್ ಸ್ಲೀಪರ್‌ಗಳ ಮೇಲೆ ಎಲಾಸ್ಟಿಕ್ ರೈಲ್ ಕ್ಲಿಪ್ಸ್ ಎಮ್‌ಕೆ-III ಫ್ಲ್ಯಾಟ್ ಟೋ ಗಳೊಂದಿಗೆ ಬಳಕೆಗೆ ಮೆಟಲ್ ಲೈನರ್‌ಗಳಿಗೆ ಐಆರ್‌ಎಸ್ ಸ್ಪೆಸಿಫಿಕೇಷನ್‌ನೊಂದಿಗೆ ಡಿಆರ್‌ಜಿ ಸಂ. ಆರ್‌ಡಿಎಸ್‌ಓ/ಎಸ್‌ಓ/ಟಿ-3741 ಆಲ್ಟ್-6 (ಗೇಜ್ ಸೈಡ್ ಲೈನರ್) ಮತ್ತು ಆಲ್ಟ್6 (ನಾನ್ ಗೇಜ್ ಸೈಡ್ ಲೈನರ್) ಗೆ ಮೆಟಲ್ ಲೈನರ್‌ಗಳ ತಯಾರಿಕೆ ಮತ್ತು ಸರಬರಾಜು. (ಇ-ಟೆಂಡರ್ ಸಂ. SWRTS063740)	ರೂ. 9,86,22,846/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12-07-2022, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನೀಯರ್/ಟ್ರ್ಯಾಕ್ ಪ್ರೊಕ್ಯೂರ್‌ಮೆಂಟ್ ಎಚ್‌ಕ್ಯೂ/ಹುಬ್ಬಳ್ಳಿ
PUB/154/AAV/PRB/SWR/2022-23
S.W.Railways SWRRLY SWRRLY

ಉಪ ನಿರ್ದೇಶಕರು (ಗ್ರಾ. ಕೈ.) ರವರ ಕಛೇರಿ
ಕೈಗಾರಿಕಾ ವಸಾಹತು, ಬಿ. ಎಂ. ರಸ್ತೆ, ರಾಮನಗರ ಜಿಲ್ಲೆ.
ಸಂಖ್ಯೆ : ಉನಿ(ಗ್ರಾ.ಕೈ.)/ಬಾಡಿಗೆ ವಾಹನ/01/2022-23 ದಿನಾಂಕ : 17-06-2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಪ ನಿರ್ದೇಶಕರು (ಗ್ರಾ. ಕೈ.), ಜಿಲ್ಲಾ ಪಂಚಾಯತ್, ರಾಮನಗರ ಕಛೇರಿಯ ಅಧಿಕೃತ ಕೆಲಸ ಕಾರ್ಯಗಳಿಗಾಗಿ ಮಾಸಿಕ ಬಾಡಿಗೆ ಆಧಾರದ ಮೇಲೆ ಟ್ಯಾಕ್ಸಿ ಸೇವೆಯನ್ನು ಒಂದು ವರ್ಷ ಅಥವಾ ಮುಂದಿನ ಆದೇಶದವರೆಗೆ ಪಡೆಯಲು ಮಾಸಿಕ ಗರಿಷ್ಠ ಮೊತ್ತ ರೂ. 35,000/- ಗಳಿಗೆ (ರೂ. 35,000 ಗಳು + ತೆರಿಗೆ ಸೇರಿ) ಟ್ಯಾಕ್ಸಿ ಸೇವೆ ಒದಗಿಸಲು ಆಸಕ್ತಿ ಟ್ರಾವೆಲ್ಸ್ ಸಂಸ್ಥೆಗಳಿಂದ ಉಪ ನಿರ್ದೇಶಕರು (ಗ್ರಾ. ಕೈ.), ಕೈಗಾರಿಕಾ ವಸಾಹತು, ಬಿ. ಎಂ. ರಸ್ತೆ, ರಾಮನಗರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಿ, ಟೆಂಡರ್ ಡಾಕ್ಯೂಮೆಂಟ್ ಪಡೆದು ದ್ವಿ-ಲಕೋಟೆಯಲ್ಲಿ ಬಿಡ್ ಸಲ್ಲಿಸುವುದು. ಭರ್ತಿ ಮಾಡಿದ ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ : 01-07-2022 ರ ಸಂಜೆ 4.00 ಗಂಟೆ ಒಳಗಾಗಿ ಈ ಕಛೇರಿಗೆ ಸಲ್ಲಿಸುವುದು.

ಸಹಿ/- ಉಪ ನಿರ್ದೇಶಕರು (ಗ್ರಾ. ಕೈ.),
ಜಿಲ್ಲಾ ಪಂಚಾಯತ್, ರಾಮನಗರ
ಡಿಐಪಿಆರ್/ರಾಮನಗರ/105/ಮಣಿಪಾಲ್/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಜಂಟಿ ಆಯುಕ್ತರು (ಕಂದಾಯ)ರವರ ಕಛೇರಿ,
ನಗರ ಪಾಲಿಕೆ ಕಛೇರಿಗಳು, ಎನ್. ಆರ್. ಚೌಕ, ಬೆಂಗಳೂರು-560 002
ಸಂಖ್ಯೆ : ಜಆ(ಕಂ)/ಎನ್.ಎ/ಪಿ.ಆರ್/03/2022-23 ದಿನಾಂಕ:15.06.2022

ಪ್ರಕಟಣೆ

ನಗರದ ಕೆರೆ ಮತ್ತು ಉದ್ಯಾನವನದ ನಾಮಕರಣ ನಿರ್ಣಯಕ್ಕೆ ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಆಹ್ವಾನ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ 11, ಕುವೆಂಪು ನಗರ ವ್ಯಾಪ್ತಿಯ ಸಿಂಗಾಪುರ ಗ್ರಾಮದ ಸರ್ವೆ ಸಂಖ್ಯೆ : 102 ರಲ್ಲಿರುವ ಸರ್ಕಾರಿ ಕೆರೆ ಮತ್ತು ಪಾರ್ಕ್ ಜಾಗಕ್ಕೆ "ಭಗವಾನ್ ಬುದ್ಧ ಬಾಬಾಸಾಹೇಬ್ ಡಾ. ಅಂಬೇಡ್ಕರ್ ಲೇಕ್ ಪಾರ್ಕ್" ಎಂದು ನಾಮಕರಣ ಮಾಡುವುದೆಂದು ದಿನಾಂಕ 08.06.2022 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ : 80/2022-23 ರಲ್ಲಿ ತೀರ್ಮಾನಿಸಲಾಗಿದೆ.

ಆದುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾಮಕರಣ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪತ್ರಿಕಾ ಪ್ರಕಟಣೆ ಹೊರಡಿಸಲಾದ ದಿನಾಂಕದಿಂದ 30 ದಿನಗಳ ಒಳಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು-560 002, ರವರಿಗೆ ಸಲ್ಲಿಸಲು ತಿಳಿಸಲಾಗಿದೆ.

ಸಹಿ/-
ಜಂಟಿ ಆಯುಕ್ತರು (ಕಂದಾಯ)

EDUCATION SUCCESS ಕ್ಲಾಸಿಫೈಡ್ಸ್

SVES ENGLISH HIGH SCHOOL
2nd Main, 4th Block, Rajajinagar, Bengaluru-10

B.Y. RAMAKRISHNA, CHAIRMAN — BEST WISHES & GOOD LUCK
B.R. UMAMAHESH, SECRETARY — BEST WISHES & GOOD LUCK

TOPPERS OF SSLC EXAMINATION 2021-22

ಚಾರುಲತ ಎ. 95.84%
ಆದೇಶ್ ಜೆ. 94.56%
ನಂದಿನಿ ಎಸ್. 93.28%
ಹರ್ಷಿತ್ ಎಂ. 92.80%
ದರ್ಶನ್ ಒ. 92.48%
ರಿತೇಶ್ ಪಾಂಡೆ 92.16%
ಯೋಗೇಶ್ ಪಿ. 88.48%
ಪವಿತ್ರ ಆರ್. 88.32%
ಸಹಿಲ್ ದೀಪಕ್ ಪಟೇಲ್ 86.72%
ವಿಷ್ಣು ಎಸ್. ಸಿಂಧಗಿ 86.24%
ಸಂದೀಪ್ ವಿ. 85.92%
ಧನುಶ್ರೀ ಎಸ್. 85.76%
ಕಿರಣ್ ರಾಜ್ ಜೋಷಿ ಎನ್. 85.44%
ವೈಷ್ಣವಿ ವಿ. 78.88%
ಸಿಂಧುಜ ಎಸ್. 77.28%
ದೀಕ್ಷಿತ ಆರ್.ವಿ. 77.12%



ನವ ಕರ್ನಾಟಕ ನಿರ್ಮಾಣಕ್ಕೆ ಕೇಂದ್ರದ ಕೊಡುಗೆ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ರಾಜ್ಯಕ್ಕೆ ಸಿಕ್ಕ ಅನುದಾನ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
₹24,139.52 ಕೋಟಿ

ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಪೂರೈಕೆ ಯೋಜನೆ
₹ 5,384.53 ಕೋಟಿ

ಸ್ವಚ್ಛ ಭಾರತ ಅಭಿಯಾನ
₹ 4,156.42 ಕೋಟಿ

ರಾಷ್ಟ್ರೀಯ ಆರೋಗ್ಯ ಅಭಿಯಾನ
₹ 9,031.11 ಕೋಟಿ

ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಗಳು
₹ 7,271.01 ಕೋಟಿ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತಿದ್ದಂತೆಯೇ ದೇಶವನ್ನು ಬಯಲು ಬಹಿರ್ದೆಸೆಯಿಂದ ಮುಕ್ತಗೊಳಿಸುವ ಮತ್ತು ಘನ ಹಾಗೂ ದ್ರವ ತ್ಯಾಜ್ಯಗಳ ವಿಲೇವಾರಿಗೆ ವ್ಯವಸ್ಥಿತ ಸ್ವರೂಪ ನೀಡುವುದಕ್ಕೆ ಹೆಜ್ಜೆ ಇಟ್ಟಿದ್ದರು. ಅದಕ್ಕಾಗಿಯೇ 'ಸ್ವಚ್ಛ ಭಾರತ ಅಭಿಯಾನ' ಎಂಬ ಅಭೂತಪೂರ್ವವಾದ ಯೋಜನೆಯೊಂದನ್ನು ರೂಪಿಸಿ, ಜಾರಿಗೆ ತಂದಿದ್ದರು. ಈ ಯೋಜನೆಯಡಿ ಕರ್ನಾಟಕಕ್ಕೆ ಭರಪೂರ ನೆರವು ನೀಡುತ್ತಿರುವ ಕೇಂದ್ರ ಸರ್ಕಾರ, ಕನ್ನಡ ನಾಡನ್ನು ಸ್ವಚ್ಛ ಮತ್ತು ಸುಂದರಗೊಳಿಸುವುದಕ್ಕೆ ಬೆನ್ನೆಲುಬಾಗಿ ನಿಂತಿದೆ.

ಸ್ವಚ್ಛ ಭಾರತ ಅಭಿಯಾನದ 2014ರಲ್ಲಿ ಆರಂಭವಾಗಿದ್ದು, ಯೋಜನೆಯಡಿಯಲ್ಲಿ ಇದುವರೆಗೂ ಕರ್ನಾಟಕಕ್ಕೆ ₹ 4,156.42 ಕೋಟಿ ಅನುದಾನ ಕೇಂದ್ರದಿಂದ ಲಭಿಸಿದೆ. ರಾಜ್ಯದ 49.54 ಲಕ್ಷ ಕುಟುಂಬಗಳು ಸ್ವಚ್ಛ ಭಾರತ ಅಭಿಯಾನದಡಿ ನೆರವು ಪಡೆದಿವೆ. ಕರ್ನಾಟಕದ ಬಹುತೇಕ ಗ್ರಾಮೀಣ, ನಗರ ಮತ್ತು ಪಟ್ಟಣ ಪ್ರದೇಶಗಳು ಈಗ ಬಯಲು ಬಹಿರ್ದೆಸೆಯಿಂದ ಮುಕ್ತಗೊಂಡಿರುವುದಕ್ಕೆ ಕೇಂದ್ರದ ಈ ಯೋಜನೆಯೇ ಕಾರಣ.

ಪ್ರಧಾನಿಯವರ ಆಶಯದಂತೆ ಕುಟುಂಬದಿಂದ ಆರಂಭವಾಗಿ ಸಮುದಾಯದವರೆಗೆ ಎಲ್ಲ ಹಂತಗಳಲ್ಲೂ ಸ್ವಚ್ಛತೆ ಕುರಿತು ಅರಿವು ಮೂಡಿಸುವ ಮತ್ತು ಶೌಚಾಲಯಗಳ ಸೌಲಭ್ಯವನ್ನು ಕಲ್ಪಿಸುವ ಮೂಲಕ ನಮ್ಮ ಪರಿಸರವನ್ನು ನಿರ್ಮಲವಾಗಿಸುವ ಕೆಲಸ 'ಸ್ವಚ್ಛ ಭಾರತ ಅಭಿಯಾನ'ದಿಂದ ನಡೆಯುತ್ತಿದೆ. ಇದಕ್ಕಾಗಿಯೇ ರಾಜ್ಯದಲ್ಲಿ 49.54 ಲಕ್ಷ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕೆ ಈ ಯೋಜನೆಯಡಿ ನೆರವು ನೀಡಲಾಗಿದೆ. ಸಮುದಾಯ ಶೌಚಾಲಯ ಮತ್ತು ಸ್ನಾನಗೃಹಗಳ ನಿರ್ಮಾಣವೂ ಆಗಿದೆ.

ತ್ಯಾಜ್ಯ ವಿಲೇವಾರಿಗೆ ಹೊಸ ಸ್ಪರ್ಶ: ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಘನ ತ್ಯಾಜ್ಯ ವಿಲೇವಾರಿ ಮತ್ತು ದ್ರವ ತ್ಯಾಜ್ಯದ ಸಂಸ್ಕರಣೆ ಹಾಗೂ ವಿಲೇವಾರಿಗೆ ಈಗ ಹೊಸ ಸ್ಪರ್ಶ ದೊರಕಿದೆ. ಇದಕ್ಕೆ ಮೋದಿಯವರ ಕನಸಿನ ಸ್ವಚ್ಛ ಭಾರತ ಅಭಿಯಾನವೇ ಕಾರಣ.

ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳ 6,682 ವಾರ್ಡ್‌ಗಳಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ವೈಜ್ಞಾನಿಕವಾಗಿ ನಿರ್ವಹಿಸಲಾಗುತ್ತಿದೆ. ಪ್ರತಿನಿತ್ಯ 6,158 ಟನ್ ಘನ ತ್ಯಾಜ್ಯ ವಿಲೇವಾರಿಯಾಗುತ್ತಿದೆ. ಹಸಿ ಮತ್ತು ಒಣ ತ್ಯಾಜ್ಯವನ್ನು ಪ್ರತ್ಯೇಕಿಸಿ ವಿಲೇವಾರಿ ಮಾಡುವ ಮೂಲಕ ಪರಿಸರದ ಮೇಲಿನ ಹಾನಿಯನ್ನು ತಡೆಯುವ ಪ್ರಯತ್ನ ಗಂಭೀರವಾಗಿ ನಡೆಯುತ್ತಿದೆ. ದ್ರವ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿಗೆ ಘಟಕಗಳ ನಿರ್ಮಾಣ ಭರದಿಂದ ಸಾಗಿದೆ.

ಮಹಿಳೆ, ಮಕ್ಕಳಿಗೆ 'ಪೋಷಣೆ'ಯ ಬಲ: ಸ್ವಚ್ಛ ಕರ್ನಾಟಕ ನಿರ್ಮಾಣದ ಜತೆಯಲ್ಲೇ ರಾಜ್ಯದಲ್ಲಿ ಅಪೌಷ್ಟಿಕತೆಯನ್ನು ನೀಗಿಸಿ ಮಹಿಳೆಯರು ಮತ್ತು ಮಕ್ಕಳಿಗೆ 'ಬಲ' ತುಂಬುವ ಕೆಲಸಕ್ಕೆ ಕೇಂದ್ರ ಸರ್ಕಾರ ಒತ್ತಾಸೆಯಾಗಿ ನಿಂತಿದೆ.

ಈ ಉದ್ದೇಶದಿಂದ ಜಾರಿಗೊಳಿಸಲಾಗಿರುವ ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಪೂರಕ ಪೋಷಕಾಂಶ ವಿತರಣಾ ಯೋಜನೆ, ಪೋಷಣಾ ಅಭಿಯಾನ ಮತ್ತು ಮಾತೃ ವಂದನಾ ಯೋಜನೆಗಳ ಅಡಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದ ಅವಧಿಯಲ್ಲಿ ರಾಜ್ಯಕ್ಕೆ ₹ 7,271 ಕೋಟಿಗಳಷ್ಟು ಬೃಹತ್ ಪ್ರಮಾಣದ ಅನುದಾನ ಲಭಿಸಿದೆ.

ದುಡಿಯುವ ಕೈಗೆ ಆಸರೆಯಾದ ಉದ್ಯೋಗ ಖಾತ್ರಿ

ಕೇಂದ್ರ ಸರ್ಕಾರದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಕೋವಿಡ್ ಸಂಕಷ್ಟದ ಅವಧಿಯೂ ಸೇರಿದಂತೆ ಕಳೆದ ಹಲವು ವರ್ಷಗಳಿಂದ ದುಡಿಯುವವರ ಪಾಲಿಗೆ ಆಸರೆಯಾಗಿ ನಿಂತಿದೆ. ಪ್ರಧಾನಿ ನರೇಂದ್ರ ಮೋದಿಯವರ ಆಡಳಿತದ ಅವಧಿಯಲ್ಲೇ ಈ ಯೋಜನೆಯಡಿ ₹ 24,139.52 ಕೋಟಿಯಷ್ಟು ಬೃಹತ್ ಪ್ರಮಾಣದ ಅನುದಾನ ಈ ಯೋಜನೆಯಡಿ ಕರ್ನಾಟಕಕ್ಕೆ ಲಭಿಸಿದೆ.

ಕೆರೆಗಳ ಪುನರುಜ್ಜೀವನ, ಅರಣ್ಯೀಕರಣದ ಮೂಲಕ ಕರ್ನಾಟಕಕ್ಕೆ ಹಸಿರಿನ ಹೊದಿಕೆಯನ್ನು ಹೊದಿಸುವ ಕೆಲಸ ಉದ್ಯೋಗ ಖಾತ್ರಿ ಯೋಜನೆಯಡಿ ಆಗುತ್ತಿದೆ. ಸಣ್ಣ, ಅತಿಸಣ್ಣ ರೈತರು ಕೃಷಿ, ತೋಟಗಾರಿಕೆ ಚಟುವಟಿಕೆಗೂ ಈ ಯೋಜನೆಯಡಿ ಹೆಚ್ಚಿನ ನೆರವು ಪಡೆಯುತ್ತಿದ್ದಾರೆ.

2021–22ನೇ ಆರ್ಥಿಕ ವರ್ಷದಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಗುರಿ ಮೀರಿದ ಸಾಧನೆಯಾಗಿದೆ. ರಾಜ್ಯ ಸರ್ಕಾರದ ಮನವಿಗೆ ಸ್ಪಂದಿಸಿದ ಕೇಂದ್ರ ಸರ್ಕಾರ ಎರಡು ಬಾರಿ ಹೆಚ್ಚುವರಿ ಮಾನವ ದಿನಗಳನ್ನು ಮಂಜೂರು ಮಾಡಿತ್ತು. ಒಂದೇ ವರ್ಷದಲ್ಲಿ 16 ಕೋಟಿ ಮಾನವ ದಿನಗಳಷ್ಟು ಕೆಲಸವನ್ನು ಈ ಯೋಜನೆಯಡಿ ನೀಡಲಾಗಿದೆ.

2014–15ರಿಂದ ಈವರೆಗೆ ರಾಜ್ಯದಲ್ಲಿ 3.44 ಕೋಟಿ ಜನರು ಉದ್ಯೋಗ ಖಾತ್ರಿ ಯೋಜನೆಯಡಿ ನೆರವು ಪಡೆದಿದ್ದಾರೆ.

ಕರ್ನಾಟಕದಲ್ಲಿ ಸ್ವಚ್ಛ ಭಾರತ ಅಭಿಯಾನದ ಪ್ರಗತಿ

ವೈಯಕ್ತಿಕ ಶೌಚಾಲಯಗಳ ನಿರ್ಮಾಣ
46.36 ಲಕ್ಷ

ಸಮುದಾಯ ಶೌಚಾಲಯಗಳ ನಿರ್ಮಾಣ
1,824

ಘನ ತ್ಯಾಜ್ಯ ವಿಲೇವಾರಿ ಘಟಕಗಳ ನಿರ್ಮಾಣ
4,407

ದ್ರವ ತ್ಯಾಜ್ಯ ಘಟಕಗಳ ನಿರ್ಮಾಣ
133

ಮೈಸೂರಿನಲ್ಲಿ ಮೋದಿ ಯೋಗಾಯೋಗ

ಜೂನ್ 21 ಅಂತರ ರಾಷ್ಟ್ರೀಯ ಯೋಗ ದಿನಾಚರಣೆ. ಅಂದು ಬೆಳಿಗ್ಗೆ 6 ಗಂಟೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮೈಸೂರಿನ ಅಂಬಾವಿಲಾಸ ಅರಮನೆ ಆವರಣದಲ್ಲಿ ನಡೆಯುವ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಸುಮಾರು 15 ಸಾವಿರ ಮಂದಿ ಯೋಗಪಟುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಅದೇ ದಿನ ಅವರು ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿಯ ದರ್ಶನವನ್ನು ಪಡೆಯಲಿದ್ದಾರೆ. ಅಲ್ಲದೆ, ₹ 500 ಕೋಟಿ ವೆಚ್ಚದ ರೈಲ್ವೆ ಯೋಜನೆಯೊಂದನ್ನು ಕೂಡ ಉದ್ಘಾಟಿಸಲಿದ್ದಾರೆ. ಸುತ್ತೂರು ಮಠಕ್ಕೂ ಭೇಟಿ ನೀಡಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆಯಲಿದ್ದಾರೆ. ಅಲ್ಲಿ ಸಂಸ್ಕೃತ ಪಾಠಶಾಲೆ ಉದ್ಘಾಟಿಸಲಿದ್ದಾರೆ. ವಸ್ತುಪ್ರದರ್ಶನ ವೀಕ್ಷಿಸಲಿದ್ದಾರೆ.

ಅಲ್ಲದೇ, ರಾಜ್ಯದ ಹಲವು ಐತಿಹಾಸಿಕ ಸ್ಥಳಗಳಲ್ಲೂ ಕೇಂದ್ರದ ಸಚಿವರು ಯೋಗ ದಿನಾಚರಣೆಯಲ್ಲಿ ಭಾಗವಹಿಸಲಿದ್ದಾರೆ. ಹಳೇಬೀಡಿನಲ್ಲಿ ಕೇಂದ್ರ ಕೃಷಿ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಹಂಪಿಯಲ್ಲಿ ಸಂಸದೀಯ ವ್ಯವಹಾರ ಸಚಿವ ಪ್ರಲ್ಹಾದ ಜೋಶಿ, ಪಟ್ಟದಕಲ್ಲಿನಲ್ಲಿ ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಮತ್ತು ವಿಜಯಪುರದ ಗೋಲ್ ಗುಂಬಜ್‌ನಲ್ಲಿ ರಾಸಾಯನಿಕ ಮತ್ತು ರಸಗೊಬ್ಬರ ರಾಜ್ಯ ಸಚಿವ ಭಗವಂತ ಖೂಬಾ ಅವರು ಪಾಲ್ಗೊಳ್ಳುವರು. ಒಟ್ಟು 75 ಸ್ಥಳಗಳಲ್ಲಿ ಯೋಗ ದಿನಾಚರಣೆ ನಡೆಯಲಿದೆ.

ಜೂನ್ 20 ರ ಸಂಜೆ 5ಕ್ಕೆ ಮೈಸೂರು ವಿಮಾನನಿಲ್ದಾಣಕ್ಕೆ ಪ್ರಧಾನಿ ಬರಲಿದ್ದಾರೆ. ಅಲ್ಲಿಂದ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ 'ಕೇಂದ್ರ ಪುರಸ್ಕೃತ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ' ಸಮಾರಂಭದಲ್ಲಿ ಭಾಗವಹಿಸಿ, ಭಾಷಣ ಮಾಡಲಿದ್ದಾರೆ. ಆಯುಷ್‌ನಲ್ಲಿ ಕೇಂದ್ರದ ಅನುದಾನ ₹ 150 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಉತ್ಕೃಷ್ಟ ಕೇಂದ್ರವನ್ನು ಅದೇ ವೇದಿಕೆಯಲ್ಲಿ ಉದ್ಘಾಟಿಸಲಿದ್ದಾರೆ. ರಾತ್ರಿ ಮೈಸೂರಿನಲ್ಲೇ ವಾಸ್ತವ್ಯ ಹೂಡಲಿದ್ದಾರೆ.

ಬೆಂಗಳೂರಿನ ಸಮಗ್ರ ಅಭಿವೃದ್ಧಿಗಾಗಿ ದಶಕಗಳ ಕನಸು ನನಸಾಗುವ ಗಳಿಗೆಗೆ ಕ್ಷಣಗಣನೆ

ಉಪನಗರ ರೈಲು ಯೋಜನೆಗೆ ಶಂಕುಸ್ಥಾಪನೆ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಬೆಂಗಳೂರು ಜಾಗತಿಕ ನಗರವಾಗಿ ದಾಪುಗಾಲಿಡುತ್ತಿದೆ. ಇದಕ್ಕೆ ಅಗತ್ಯವಿರುವ ಮತ್ತಷ್ಟು ಮಹತ್ವದ ಮೂಲಸೌಕರ್ಯಗಳನ್ನು ಕಲ್ಪಿಸುವ ಮಹತ್ವದ ಯೋಜನೆಗಳಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಇದೇ 20 ರಂದು ಚಾಲನೆ ನೀಡಲಿದ್ದಾರೆ. ಈ ಯೋಜನೆಗಳಿಂದಾಗಿ ಬೆಂಗಳೂರು ಹೊರವಲಯದ ಬೆಳವಣಿಗೆ ಆಗುವುದರ ಜತೆಗೆ ಆರ್ಥಿಕ ಚಟುವಟಿಕೆಗಳಿಗೂ ಹೆಚ್ಚಿನ ಆದ್ಯತೆ ಸಿಗಲಿದೆ.

• **ಉಪನಗರ ರೈಲು ಯೋಜನೆ:** ವಿಶೇಷವಾಗಿ, ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್‌ಆರ್‌ಪಿ) ಬೆಂಗಳೂರು ನಗರದ ಸುತ್ತಮುತ್ತಲಿನ ಉಪನಗರಗಳು ಮತ್ತು ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುವ ಮಹತ್ವಾಕಾಂಕ್ಷೆಯ ಯೋಜನೆ. ಈ ಯೋಜನೆ ಕಾರ್ಯಗತಗೊಳಿಸಬೇಕು ಎಂದು ಸಾರ್ವಜನಿಕರು ಹಲವು ವರ್ಷಗಳಿಂದಲೂ ಒತ್ತಾಯಿಸುತ್ತಲೇ ಬಂದಿದ್ದು. ಅದು ಸಾಕಾರಗೊಳ್ಳುವ ಹಂತವನ್ನು ತಲುಪಿದೆ. ಇದರ ಶಂಕುಸ್ಥಾಪನೆಯನ್ನು ಮೋದಿ ನೆರವೇರಿಸಲಿದ್ದಾರೆ.

ಕೇಂದ್ರ ಸರ್ಕಾರ 2020–21ರ ಬಜೆಟ್‌ನಲ್ಲಿ ಈ ಯೋಜನೆಯನ್ನು ಪ್ರಕಟಿಸಿತ್ತು. ಯೋಜನೆಯು ಒಟ್ಟು ನಾಲ್ಕು ಕಾರಿಡಾರ್‌ಗಳನ್ನು ಹೊಂದಿದ್ದು, 148.17 ಕಿ.ಮೀ ಉದ್ದನೆಯ ಮಾರ್ಗ ಇದಾಗಿದೆ. ಬೆಂಗಳೂರು–ದೇವನಹಳ್ಳಿ–ಅಂತರರಾಷ್ಟ್ರೀಯ ವಿಮಾನ ನಿಲ್ದಾಣ 41.40 ಕಿ.ಮೀ, ಬೈಯಪ್ಪನಹಳ್ಳಿ–ಚಿಕ್ಕಬಾಣಾವರ 25.01 ಕಿ.ಮೀ, ಕೆಂಗೇರಿ–ವೈಟ್‌ಫೀಲ್ಡ್ 35.52 ಕಿ.ಮೀ, ಹೀಲಲಿಗೆ–ರಾಜಾನುಕುಂಟೆ 46.24 ಕಿ.ಮೀ. ಆರು ವರ್ಷಗಳಲ್ಲಿ ಯೋಜನೆ ಪೂರ್ಣಗೊಳಿಸಲಾಗುವುದು. ಇದರ ವೆಚ್ಚ ₹15,767 ಕೋಟಿ ಆಗಲಿದೆ. 2026 ರ ವೇಳೆಗೆ ಪ್ರತಿನಿತ್ಯ 10 ಲಕ್ಷ ಜನರು ನಗರದೊಳಗೆ ಸಂಚಾರಕ್ಕೆ ಇದು ಪ್ರಮುಖ ಕೊಡುಗೆಯಾಗಲಿದೆ. ಆರು ವರ್ಷಗಳಲ್ಲಿ ಯೋಜನೆ ಪೂರ್ಣಗೊಳ್ಳಲಿದೆ.

ಅಲ್ಲದೆ, ನಗರದ ಸುತ್ತಲಿನ ಉಪನಗರಗಳಿಗೆ ಸಂಪರ್ಕ ಕಲ್ಪಿಸುವ ಮೆಮು ರೈಲುಗಳನ್ನು ಪುನರಾರಂಭಿಸಲಾಗುವುದು.

• **ಉಪನಗರ ವರ್ತುಲ ರಸ್ತೆ:** ದಾಬಸ್‌ಪೇಟೆಯಿಂದ ಹಳೆ ಮದ್ರಾಸ್ ರಸ್ತೆವರೆಗೆ ಉಪನಗರ ವರ್ತುಲ ರಸ್ತೆ ಕಾಮಗಾರಿಗೂ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಇದು ಬಹಳ ಕಾಲದಿಂದಲೂ ನನೆಗುದಿಯಲ್ಲಿದೆ. ಈ ಯೋಜನೆಯಿಂದ ನೆಲಮಂಗಲದಿಂದ ಹಳೆ ಮದ್ರಾಸ್ ರಸ್ತೆಯವರಿಗೆ ಸುತ್ತಲೂ ಇನ್ನಷ್ಟು ಉಪನಗರಗಳು ತಲೆ ಎತ್ತಲಿವೆ. ಈ ರಸ್ತೆಯಿಂದ ಬೆಂಗಳೂರಿನ ಮೇಲಿನ ಹೊರೆ ತಗ್ಗಲಿದೆ.

• **ಆರು ರೈಲ್ವೆ ಯೋಜನೆಗಳು:** ಅಲ್ಲದೆ, ಆರು ರೈಲ್ವೆ ಯೋಜನೆಗಳು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಐದು ಯೋಜನೆಗಳಿಗೂ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈ ಎಲ್ಲ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಕೊಮ್ಮಘಟ್ಟದಲ್ಲಿ ಆಯೋಜಿಸಿದ್ದು, ಶಂಕುಸ್ಥಾಪನೆಯ ಬಳಿಕ ಬೃಹತ್ ಸಮಾವೇಶವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ₹50 ಸಾವಿರ ಕೋಟಿಯಷ್ಟು ಬೃಹತ್ ಬಂಡವಾಳವನ್ನು ಕರ್ನಾಟಕದಲ್ಲಿ ಹೂಡಿಕೆ ಮಾಡಲಿರುವ ರಿನ್ಯೂಪವರ್ ಸಂಸ್ಥೆಯು ಕರ್ನಾಟಕ ಸರ್ಕಾರದ ಜತೆಗೆ ಇತ್ತೀಚೆಗೆ ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆಯ ಶೃಂಗಸಭೆಯಲ್ಲಿ ಒಡಂಬಡಿಕೆಗೆ ಸಹಿ ಹಾಕಿತು. ಒಪ್ಪಂದ ಪತ್ರ ವಿನಿಮಯದ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಿನ್ಯೂಪವರ್ ಸಂಸ್ಥೆಯ ಅಧ್ಯಕ್ಷ ಸುಮಂತ್ ಸಿನ್ಹಾ, ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ, ಹಿರಿಯ ಐಎಎಸ್ ಅಧಿಕಾರಿಗಳಾದ ಇ.ವಿ. ರಮಣರೆಡ್ಡಿ, ಎನ್. ಮಂಜುನಾಥ್ ಪ್ರಸಾದ್ ಉಪಸ್ಥಿತರಿದ್ದರು.

ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್

ಡಾ.ಬಿ.ಆರ್.ಅಂಬೇಡ್ಕರ್ ಅವರ 125 ಜನ್ಮ ಶತಮಾನೋತ್ಸವದ ಅಂಗವಾಗಿ 2017 ರಲ್ಲಿ 'ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್' ಸ್ಥಾಪಿಸಲಾಯಿತು. ಅಂಬೇಡ್ಕರ್ ಪ್ರತಿಮೆ ಅನಾವರಣ ಮತ್ತು ಕ್ಯಾಂಪಸ್ ಉದ್ಘಾಟನೆಯನ್ನು ಪ್ರಧಾನಿ ನರೇಂದ್ರ ಮೋದಿ ನೆರವೇರಿಸಲಿದ್ದಾರೆ. ಆರ್ಥಿಕ ವಿಷಯಗಳ ಮತ್ತು ಸಾಮಾಜಿಕ ವಿಜ್ಞಾನಗಳ ವಸತಿ ವಿಶ್ವವಿದ್ಯಾಲಯ ಇದಾಗಿದೆ.

ಸುಮಾರು 43.35 ಎಕರೆ ಪ್ರದೇಶದಲ್ಲಿ ₹201.25 ಕೋಟಿ ವೆಚ್ಚದಲ್ಲಿ ರಾಜ್ಯ ಸರ್ಕಾರವೇ ಈ ವಿಶ್ವವಿದ್ಯಾಲಯ ಸ್ಥಾಪಿಸಿದ್ದು, 13 ಬ್ಲಾಕ್‌ಗಳಿದ್ದು ಕರ್ನಾಟಕ ಗೃಹ ನಿರ್ಮಾಣ ಮಂಡಳಿಯೇ ಆಡಳಿತ, ಶೈಕ್ಷಣಿಕ, ಫ್ಯಾಕಲ್ಟಿ, ಗ್ರಂಥಾಲಯ, ವಿದ್ಯಾರ್ಥಿಗಳ ಕೇಂದ್ರ, ಹಾಸ್ಟೆಲ್ ಬ್ಲಾಕ್‌ಗಳ ಕಟ್ಟಡಗಳನ್ನು ನಿರ್ಮಿಸಿದೆ.

ಈ ವಿಶ್ವವಿದ್ಯಾಲಯಕ್ಕೆ ದೇಶ– ವಿದೇಶಗಳಿಂದ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದಾರೆ. ಮೊದಲ ಬ್ಯಾಚ್ ವಿದ್ಯಾರ್ಥಿಗಳಲ್ಲಿ ಶೇ 80 ರಷ್ಟು ವಿದ್ಯಾರ್ಥಿಗಳಿಗೆ ಉದ್ಯೋಗ ಲಭಿಸಿದೆ. ಜಾಗತಿಕವಾಗಿ ಅರ್ಥಶಾಸ್ತ್ರ ಮತ್ತು ಸಂಬಂಧಿಸಿದ ಕ್ಷೇತ್ರಗಳ ಶೈಕ್ಷಣಿಕವಾಗಿ ಉತ್ತಮ ಸ್ಥಾನವನ್ನು ಪಡೆಯುವ ಗುರಿ ಇಟ್ಟುಕೊಂಡು ಮುನ್ನಡೆಯುತ್ತಿದೆ. ಈಗ 250 ವಿದ್ಯಾರ್ಥಿಗಳಿದ್ದು, 2024–25 ರ ವೇಳೆಗೆ 1,100 ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಹೊಂದುವ ಗುರಿ ಇದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.

ಪ್ರಧಾನಿ ಮೋದಿ, ಅಂಬೇಡ್ಕರ್ ಸ್ಕೂಲ್ ಎಕನಾಮಿಕ್ಸ್‌ನ ವಿದ್ಯಾರ್ಥಿಗಳ ಜತೆ ಸಂವಾದ ನಡೆಸಲಿದ್ದಾರೆ.

• **ಬ್ರೈನ್ ರೀಸರ್ಚ್ ಸೆಂಟರ್ ಉದ್ಘಾಟನೆ:** ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ 'ಸೆಂಟರ್ ಫಾರ್ ಬ್ರೈನ್ ರೀಸರ್ಚ್ ಅಂಡ್ ಸೂಪರ್ ಕಂಪ್ಯೂಟಿಂಗ್' ಹಾಗೂ ಸಂವಹನ ಅಸ್ವಸ್ಥತೆ (ಕಮ್ಯುನಿಕೇಷನ್ ಡಿಸಾರ್ಡರ್) ಕ್ಷೇತ್ರದಲ್ಲಿ ಸಂಶೋಧನೆ ನಡೆಸುವ ಶ್ರೇಷ್ಠತಾ ಕೇಂದ್ರವಾಗಿ ರೂಪಿಸಲು ಕೇಂದ್ರ ₹137 ಕೋಟಿ ನೀಡಿದೆ. ಈ ಕೇಂದ್ರಗಳು ಲೋಕಾರ್ಪಣೆಗೊಳ್ಳಲಿವೆ.

150 ಐಟಿಐಗಳು ಮೇಲ್ದರ್ಜೆಗೆ: ರಾಜ್ಯದ 150 ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ)ಗಳನ್ನು ರಾಷ್ಟ್ರ ಮಟ್ಟದ ತಾಂತ್ರಿಕ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಪ್ರಧಾನಿ ಮೋದಿಯವರು ಈ ಕೇಂದ್ರಗಳ ಉದ್ಘಾಟನೆ ನೆರವೇರಿಸುವರು.

ಪ್ರಧಾನಿ ಮೋದಿ ಅವರು ಉದ್ಘಾಟಿಸಲಿರುವ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ಗೆ ಶನಿವಾರ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾರ್ಯಕ್ರಮದ ಸಿದ್ಧತೆ ಕುರಿತು ಪರಿಶೀಲಿಸಿದರು. ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಹಾಜರಿದ್ದರು.

ವರದಾನವಾದ ಜಲ ಜೀವನ ಮಿಷನ್

'ಮನೆ ಮನೆಗೂ ಗಂಗೆ' ಎಂಬ ಘೋಷವಾಕ್ಯದ ಅಡಿಯಲ್ಲಿ ದೇಶದ ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು ಒದಗಿಸುವುದಕ್ಕಾಗಿ ಕೇಂದ್ರ ಸರ್ಕಾರವು 'ಜಲ ಜೀವನ ಮಿಷನ್' ಯೋಜನೆ ಜಾರಿಗೊಳಿಸಿದೆ. ಕರ್ನಾಟಕದಲ್ಲಿ ಈ ಯೋಜನೆಯ ಅನುಷ್ಠಾನ ಇತರ ರಾಜ್ಯಗಳಿಗೆ ಹೋಲಿಸಿದರೆ ವೇಗವಾಗಿ ನಡೆಯುತ್ತಿದೆ.

2023ರ ಅಂತ್ಯದೊಳಗೆ ರಾಜ್ಯದ ಎಲ್ಲ 97.91 ಲಕ್ಷ ಮನೆಗಳಿಗೂ ನಲ್ಲಿ ನೀರಿನ ಸಂಪರ್ಕ ಕಲ್ಪಿಸುವ ಗುರಿ ಹೊಂದಲಾಗಿದೆ. ಈಗಾಗಲೇ 42.66 ಲಕ್ಷ ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ. ಪ್ರತಿ ಕುಟುಂಬದ ಸದಸ್ಯರಿಗೆ ಪ್ರತಿನಿತ್ಯ ತಲಾ 55 ಲೀಟರ್ ಶುದ್ಧ ನೀರು ಒದಗಿಸಲಾಗುತ್ತಿದೆ.

ಜಲ ಜೀವನ ಮಿಷನ್ ಯೋಜನೆಗೆ ಒಟ್ಟು ₹ 41,800 ಕೋಟಿ ವೆಚ್ಚ ಮಾಡಲಾಗುತ್ತಿದೆ. ಅದರಲ್ಲಿ ಪ್ರತಿ ಮನೆಗೂ ನಲ್ಲಿ ಮೂಲಕ ನೀರಿನ ಸಂಪರ್ಕ ಕಲ್ಪಿಸುವುದಕ್ಕೆ ₹ 11,010 ಕೋಟಿ ವೆಚ್ಚವಾಗುತ್ತಿದೆ. ಸುಸ್ಥಿರ ಜಲ ಮೂಲಗಳಿಂದ ನೀರು ತರುವುದಕ್ಕೆ ₹ 30,790 ಕೋಟಿ ಮೀಸಲಿಡಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ ಶೇಕಡ 50ರಷ್ಟು ವೆಚ್ಚ ಭರಿಸುತ್ತಿವೆ.

ದೇಶದ ಮೊದಲ ಹವಾನಿಯಂತ್ರಿತ ರೈಲ್ವೆ ಟರ್ಮಿನಲ್

ಬೆಂಗಳೂರು: ಯಾವ ವಿಮಾನ ನಿಲ್ದಾಣಕ್ಕೂ ಕಡಿಮೆ ಇಲ್ಲದಂತೆ, ಭಾರತದ ಮೊದಲ ಹವಾನಿಯಂತ್ರಿತ ರೈಲು ನಿಲ್ದಾಣ ಎಂಬ ಹೆಗ್ಗಳಿಕೆಯೊಂದಿಗೆ ರೈಲ್ವೆ ನಿಲ್ದಾಣವೊಂದು ಬೆಂಗಳೂರಿಲ್ಲಿ ತಲೆ ಎತ್ತಿ ನಿಂತಿದೆ.

ಬೈಯಪ್ಪನಹಳ್ಳಿ ಮತ್ತು ಬಾಣಸವಾಡಿ ರೈಲು ನಿಲ್ದಾಣಗಳ ನಡುವೆ ದೊಡ್ಡ ಚಿಟ್ಟೆಯಾಕಾರದಲ್ಲಿ ನಿರ್ಮಾಣವಾಗಿರುವ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್, ಬೆಂಗಳೂರಿನ ರೈಲ್ವೆ ಇತಿಹಾಸಕ್ಕೆ ಹೊಸ ಮೈಲಿಗಲ್ಲಾಗಿ ನಿಂತಿದೆ. ನೈರುತ್ಯ ರೈಲ್ವೆ ಇತಿಹಾಸದಲ್ಲಿ ಹಲವು ಪ್ರಥಮಗಳನ್ನು ದಾಖಲಿಸುತ್ತಿರುವ ಈ ಟರ್ಮಿನಲ್, ವಿಮಾನ ನಿಲ್ದಾಣವನ್ನು ಹೋಲುವಂತೆ ವಿನ್ಯಾಸಗೊಳಿಸಿದ ಮೊದಲ ರೈಲು ನಿಲ್ದಾಣ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

ನಿಲ್ದಾಣದ ಆವರಣ ಪ್ರವೇಶಿಸಿದ ಕೂಡಲೇ ವಿಶಾಲವಾದ ವಾಹನ ನಿಲುಗಡೆ ತಾಣ ಎದುರಾಗುತ್ತದೆ. 250 ಕಾರುಗಳು ಮತ್ತು ದ್ವಿಚಕ್ರ ವಾಹನಗಳ ನಿಲುಗಡೆಗೆ ಇಲ್ಲಿ ಅವಕಾಶ ಇದೆ. ಮುಂಭಾಗದಲ್ಲಿ ಸಣ್ಣ ಉದ್ಯಾನದ ಜೊತೆಗೆ ನೀರು ಚಿಮ್ಮುವ ಕಾರಂಜಿಯೊಂದು ನಿರ್ಮಾಣವಾಗಿದೆ. ಅದರ ಪಕ್ಕದಲ್ಲಿ 'ಐ ಲವ್ ಬೆಂಗಳೂರು' ಎಂಬ ಆಕರ್ಷಕವಾದ ಫಲಕ ಕೂಡ ಅಳವಡಿಸಲಾಗಿದೆ. ರೈಲು ಪ್ರಯಾಣಿಕರು ಮಾತ್ರವಲ್ಲ ಬೆಂಗಳೂರಿನ ಜನ ಪ್ರವಾಸಿ ತಾಣದಂತೆ ಈ ನಿಲ್ದಾಣಕ್ಕೆ ಭೇಟಿ ನೀಡುವಂತೆ ಮಾಡಿದೆ.

ಒಳಾಂಗಣ (ಕಾನ್‌ಕೋರ್ಸ್) ಪ್ರವೇಶಿಸಿದರೆ ಮೊದಲ ಮಹಡಿಯಲ್ಲಿ ವಿಶ್ರಾಂತಿ ಕೊಠಡಿಗಳಿವೆ. ಅಲ್ಲಿಗೆ ತೆರಳಲು ಲಿಫ್ಟ್ ಮತ್ತು ಎಸ್ಕಲೇಟರ್ ವ್ಯವಸ್ಥೆ ಇದೆ. ಅಲ್ಲಿಯೇ ಕಾಫಿ, ತಿಂಡಿ ಮತ್ತು ಆಹಾರದ ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ರೈಲು ಗಾಡಿ ಎಲ್ಲಿದೆ, ಎಷ್ಟು ಗಂಟೆಗೆ ಬರಲಿದೆ ಎಂಬ ನೈಜ ಸಮಯದ ಮಾಹಿತಿ ಒದಗಿಸಲು ಡಿಜಿಟಲ್ ಫಲಕಗಳನ್ನು ಅಳವಡಿಸಲಾಗಿದೆ. ಎರಡೂ ಮಹಡಿಗಳಿಗೂ ಸಂಪೂರ್ಣ ಹವಾ ನಿಯಂತ್ರಿತ ವ್ಯವಸ್ಥೆ ಇದೆ.

ಪ್ರಯಾಣಿಕ ರೈಲುಗಳಿಗೆ 7 ಪ್ಲಾಟ್‌ಫಾರಂಗಳನ್ನು ನಿರ್ಮಿಸಲಾಗಿದೆ. ಒಂದು ಪ್ಲಾಟ್‌ಫಾರಂನಿಂದ ಇನ್ನೊಂದು ಪ್ಲಾಟ್‌ಫಾರಂ ತಲುಪಲು ಸಬ್‌ವೇ ಮತ್ತು ಪಾದಚಾರಿ ಮೇಲ್ಸೇತುವೆ ನಿರ್ಮಿಸಲಾಗಿದೆ. ಮೆಟ್ರೊ ರೈಲು ನಿಲ್ದಾಣಗಳ ಮಾದರಿಯಲ್ಲಿ ಎಲ್ಲ ಪ್ಲಾಟ್‌ಫಾರಂಗಳಿಗೂ ಲಿಫ್ಟ್ ಮತ್ತು ಎಸ್ಕಲೇಟರ್ ಸೌಲಭ್ಯ ಕಲ್ಪಿಸಲಾಗಿದೆ.

ಕೆಎಸ್‌ಆರ್ ರೈಲು ನಿಲ್ದಾಣ, ಯಶವಂತಪುರ ರೈಲು ನಿಲ್ದಾಣದ ನಂತರ ಅತೀ ಹೆಚ್ಚು ರೈಲುಗಳು ಕಾರ್ಯಾಚರಣೆಗೊಳ್ಳುವ ನಗರದ ಮೂರನೇ ನಿಲ್ದಾಣ ಇದಾಗಲಿದೆ. ಈ ಎರಡೂ ರೈಲು ನಿಲ್ದಾಣಗಳಲ್ಲಿ ಸದ್ಯ ಒಂದೇ ಒಂದು ಹೆಚ್ಚುವರಿ ರೈಲು ಸಂಚಾರಕ್ಕೂ ಅವಕಾಶ ಇಲ್ಲ. ಎರಡೂ ನಿಲ್ದಾಣಗಳು ಅತ್ಯಂತ ಒತ್ತಡದಲ್ಲಿ ಕಾರ್ಯಾಚರಣೆ ನಡೆಸುತ್ತಿದೆ.

ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ದೆಹಲಿ, ಚೆನ್ನೈ, ಹೈದರಾಬಾದ್, ಮುಂಬೈ, ಹುಬ್ಬಳ್ಳಿ ಕಡೆಗೆ ನೇರವಾಗಿ ರೈಲುಗಳ ಕಾರ್ಯಾಚರಣೆಗೆ ಅನುಕೂಲ ಆಗಿದೆ. ಇದರಿಂದಾಗಿ ಎರಡೂ ನಿಲ್ದಾಣಗಳ ಮೇಲಿನ ಒತ್ತಡ ಕಡಿಮೆಯಾಗಲಿದೆ ಎಂಬ ಲೆಕ್ಕಾಚಾರ ನೈರುತ್ಯ ರೈಲ್ವೆಯದ್ದು. ಈ ನಿಲ್ದಾಣಕ್ಕೆ ಸಂಪರ್ಕ ರಸ್ತೆ ಕೂಡ ಈಗ ನಿರ್ಮಾಣವಾದೆ. ಜೂನ್ 20ರಂದು ನಗರಕ್ಕೆ ಭೇಟಿ ನೀಡಲಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಈ ನಿಲ್ದಾಣವನ್ನು ಲೋಕಾರ್ಪಣೆ ಮಾಡಲಿದ್ದಾರೆ.

ಪ್ರಧಾನಿ ಅವರಿಂದ ಜೂನ್ 20ಕ್ಕೆ ಲೋಕಾರ್ಪಣೆ

ಎಲ್ಲವೂ ಸ್ವಯಂಚಾಲಿತ

ಹೊಸ ನಿಲ್ದಾಣದಲ್ಲಿ ಅತ್ಯಾಧುನಿಕ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಎಲ್ಲವೂ ಸ್ವಯಂ ಚಾಲಿತವಾಗಿ ನಿರ್ವಹಣೆಯಾಗಲಿದೆ.

ಇಡೀ ರೈಲು ನಿಲ್ದಾಣದ ಕಾರ್ಯಾಚರಣೆಯನ್ನು ಕಂಪ್ಯೂಟರ್ ಮೌಸ್ ತುದಿಯಲ್ಲೇ ಸ್ಟೇಷನ್ ಮಾಸ್ಟರ್ ನಿರ್ವಹಿಸಬಹುದು. ಪ್ಲಾಟ್‌ಫಾರಂಗಾಗಿ ರೈಲುಗಾಡಿಗಳು ಕಾದು ನಿಲ್ಲಬೇಕಾದ ಸಮಯ ಇದರಿಂದ ಉಳಿಯಲಿದೆ. ನೈರುತ್ಯ ರೈಲ್ವೆ ವಿಭಾಗದಲ್ಲೇ ಈ ರೀತಿ ಸಮಗ್ರವಾಗಿ ಸ್ವಯಂ ಚಾಲಿತ ವ್ಯವಸ್ಥೆ ಹೊಂದಿರುವ ದೊಡ್ಡ ನಿಲ್ದಾಣ ಇದಾಗಿದೆ. ಈ ನಿಲ್ದಾಣದಲ್ಲಿ 70 ಪಾಯಿಂಟ್‌ಗಳು, 137 ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ.

ಹಲವು ಮೊದಲುಗಳನ್ನು ದಾಖಲಿಸಿರುವ ಈ ನಿಲ್ದಾಣದಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನೂ ಅಳವಡಿಸಿಕೊಳ್ಳಲಾಗಿದೆ. 4 ಲಕ್ಷ ಲೀಟರ್ ನೀರಿನ ಸಾಮರ್ಥ್ಯದ ಒಳಚರಂಡಿ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಸಹ ಇಲ್ಲಿದೆ.

ಮಳೆಯ ಅಬ್ಬರ ನಲುಗಿದ ನಗರ

ಪ್ರಜಾವಾಣಿ
ಭಾನುವಾರ
ಜೂನ್ 19, 2022

ಮನೆಗಳಿಗೆ ನುಗ್ಗಿದ ನೀರು

ಮಹದೇವಪುರ, ಕೆ.ಆರ್.ಪುರ ಜಲಾವೃತ

ಮಹದೇವಪುರ ವಲಯದ ಗಾಯತ್ರಿ ಬಡಾವಣೆಯ ರಾಜಕಾಲುವೆ ನೀರಿನಲ್ಲಿ ಕೊಚ್ಚಿ ಹೋದ ಎಂಜಿನಿಯರ್ ಮಿಥುನ್ ಅವರ ಮೃತದೇಹಕ್ಕಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಸಿಬ್ಬಂದಿ ಬೋಟ್ ಮೂಲಕ ಹುಡುಕಾಟ ನಡೆಸಿದರು

– ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾತ್ರಿಯಿಡೀ ಅಬ್ಬರಿಸಿ ಸುರಿದ ಮಳೆ. ತುಂಬಿ ಹರಿದ ರಾಜಕಾಲುವೆಗಳು. ಹೊಳೆಯಂತಾದ ರಸ್ತೆಗಳು. ಕೋಡಿ ಬಿದ್ದ ಕೆರೆಗಳು, 500ಕ್ಕೂ ಹೆಚ್ಚು ಮನೆಗಳಿಗೆ ನುಗ್ಗಿದ ನೀರು. ತೇಲಿಹೋದ ಗೃಹೋಪಯೋಗಿ ಹಾಗೂ ಅಗತ್ಯ ವಸ್ತುಗಳು. ನೀರು ಹೊರಹಾಕುವುದರಲ್ಲಿ ಹೈರಾಣಾದ ನಿವಾಸಿಗಳು...

ಶುಕ್ರವಾರ ತಡರಾತ್ರಿಯವರೆಗೆ ಸುರಿದ ಮಳೆಯಿಂದಾಗಿ ಮಹದೇವಪುರ, ಕೆ.ಆರ್. ಪುರ, ಹೊರಮಾವು ಹಾಗೂ ಯಲಹಂಕ ಸುತ್ತಮುತ್ತಲಿನ ಪ್ರದೇಶಗಳು ಜಲಾವೃತಗೊಂಡಿದ್ದವು. ಮನೆಗಳಿಗೆ ನೀರು ನುಗ್ಗಿದ್ದರಿಂದ, ನಿವಾಸಿಗಳು ಯಾತನೆ ಅನುಭವಿಸಿದರು.

ಮಳೆಗಾಲ ಆರಂಭವಾದ ದಿನದಿಂದ ಬಿಡುವು ಕೊಡುತ್ತಲೇ ಸುರಿಯುತ್ತಿದ್ದ ಮಳೆಯ ಅಬ್ಬರ ಶುಕ್ರವಾರ ರಾತ್ರಿ ಜೋರಾಗಿತ್ತು. ಸಂಜೆ ಅಲ್ಲಲ್ಲಿ ತುಂತುರು ರೀತಿಯಲ್ಲಿ ಆರಂಭವಾದ ಮಳೆ ಕ್ರಮೇಣ ಜೋರಾಯಿತು. ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿದು, ವಾಹನಗಳ ಸಂಚಾರ ಹಾಗೂ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟಾಯಿತು.

ನಲುಗಿದ ಮಹದೇವಪುರ: ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಮಳೆ ಜೋರಾಗಿತ್ತು. ಕಾಲುವೆಗಳು ತುಂಬಿ, ರಸ್ತೆಯಲ್ಲಿ ಹರಿದ ನೀರು ಮನೆಗಳಿಗೆ ನುಗ್ಗಿತ್ತು. ಏಕಾಏಕಿ ಮನೆಯೊಳಗೆ ನುಗ್ಗಿದ್ದ ನೀರು ಕಂಡು ಕಂಗಾಲಾದ ಜನ ಎತ್ತರದ ಸ್ಥಳಗಳಿಗೆ ಹೋಗಿ ನಿಂತುಕೊಂಡಿದ್ದರು. ಮಕ್ಕಳು, ವೃದ್ಧರನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯುವುದೇ ಸವಾಲಾಗಿತ್ತು.

ಗರುಡಾಚಾರ್ ಪಾಳ್ಯ, ಗಾಯಿತ್ರಿ ಬಡಾವಣೆ, ಸಾಯಿ ಲೇಔಟ್, ಹೊರಮಾವು, ಗುರು ಲೇಔಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಸುಮಾರು 400 ಮನೆಗಳಿಗೆ ನೀರು ನುಗ್ಗಿತ್ತು. ಪ್ರತಿ ಬಾರಿಯೂ ಮಳೆ ಬಂದರೆ ಈ ಭಾಗದಲ್ಲಿ 100ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗುವುದು ಸಾಮಾನ್ಯವಾಗಿಬಿಟ್ಟಿದೆ. ಶುಕ್ರವಾರ ರಾತ್ರಿ ಮಳೆ ಪ್ರಮಾಣ ಹೆಚ್ಚಿದ್ದರಿಂದ, 400 ಮನೆಗಳಿಗೆ ನೀರು ನುಗ್ಗಿ ನಿವಾಸಿಗಳನ್ನು ಹೈರಾಣು ಮಾಡಿತು.

ಅಗ್ನಿಶಾಮಕ ದಳ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಸಿಬ್ಬಂದಿ ಹಾಗೂ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸಿ ನೀರಿನಲ್ಲಿ ಸಿಲುಕಿದ್ದ ಜನರನ್ನು ರಕ್ಷಿಸಿದರು. ಜನವಸತಿ ಪ್ರದೇಶದಲ್ಲಿ ನಿಂತಿದ್ದ ನೀರು ಹರಿದು ಹೋಗಲು ಜಾಗ ಮಾಡಿದರು. ಶನಿವಾರ ಸಂಜೆ ವೇಳೆಗೆ ಬಹುತೇಕ ಕಡೆ ನೀರು ಹರಿದುಹೋಗಿತ್ತು.

‘ಊಟ ಮಾಡಿ ಮಲಗಲು ಸಿದ್ಧರಾಗಿದ್ದೆವು. ಜೋರು ಮಳೆ ಜೊತೆಯಲ್ಲೇ ಮನೆಯೊಳಗೆ ನೀರು ನುಗ್ಗಿದ್ದನ್ನು ನೋಡಿ ಗಾಬರಿಯಾಯಿತು. ಹೊರಗೆ ಹೋಗಲು ಸಹ ಆಗಲಿಲ್ಲ. ವೃದ್ಧರನ್ನು ಮೊದಲ ಮಹಡಿಗೆ ಕಳುಹಿಸಿ, ನಾವು ನೀರನ್ನು ಹೊರಹಾಕುವುದರಲ್ಲಿ ನಿರತರಾಗಿದ್ದೆವು’ ಎಂದು ಗಾಯಿತ್ರಿ ಬಡಾವಣೆ ನಿವಾಸಿ ಸೋಮಶೇಖರ್ ಹೇಳಿದರು.

‘ನೀರು ಧಾರಾಕಾರವಾಗಿ ಹರಿಯುತ್ತಿತ್ತು. ಮನೆಯ ಪೀಠೋಪಕರಣ ಹಾಗೂ ಎಲೆಕ್ಟ್ರಾನಿಕ್ ವಸ್ತುಗಳು ನೀರಿನಲ್ಲಿ ತೇಲುತ್ತಿದ್ದವು. ಕೆಲ ವಸ್ತುಗಳು ನೀರಿನೊಂದಿಗೆ ತೇಲಿಹೋದವು’ ಎಂದೂ ತಿಳಿಸಿದರು.

ಸಾಯಿ ಲೇಔಟ್ ನಿವಾಸಿ ಜಾನ್, ‘ಮಳೆ ಬಂದಾಗಲೆಲ್ಲ ನೀರು ಮನೆಗೆ ನುಗ್ಗುವುದು ಸಾಮಾನ್ಯವಾಗಿದೆ. ಮನೆಯಲ್ಲಿನ ಎಲ್ಲ ವಸ್ತುಗಳು ನೀರು ಪಾಲಾಗಿವೆ. ರಾತ್ರಿ ನಿದ್ರೆಯಿಲ್ಲದೆ ನೀರು ಹೊರಹಾಕಲು ಪರದಾಡಿದೆವು’ ಎಂದರು.

‘ಮೇ ತಿಂಗಳಲ್ಲಿ ಮಳೆ ಸುರಿದಾಗಲೂ ಇಡೀ ಬಡಾವಣೆ ಜಲಾವೃತ ಗೊಂಡಿತ್ತು. ರಾಜಕಾಲುವೆಗೆ ಅಡ್ಡವಾಗಿರುವ ರೈಲ್ವೆ ಸೇತುವೆ ಕಿರಿದಾಗಿರುವುದರಿಂದ ಈ ಸಮಸ್ಯೆಯಾಗುತ್ತಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹ ಕಳೆದ ತಿಂಗಳು ಸ್ಥಳಕ್ಕೆ ಬಂದು ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದರು’ ಎಂದು ಹೇಳಿದರು.

ಯಲಹಂಕದಲ್ಲೂ 30 ಮನೆ ಜಲಾವೃತ: ಯಲಹಂಕ ವಲಯದ ಮದರ್ ಹುಡ್ ರಸ್ತೆ, ಸಹಕಾರ ನಗರ ಮುಖ್ಯ ರಸ್ತೆ, ಜಕ್ಕೂರು ರಸ್ತೆ, ನೇತಾಜಿ ನಗರ, ದೊಡ್ಡಬೊಮ್ಮಸಂದ್ರದ ಬಸವ ಸಮಿತಿ ರಸ್ತೆ, ವಿದ್ಯಾರಣ್ಯಪುರ ಹಾಗೂ ಫಾತಿಮಾ ಲೇಔಟ್‌ನಲ್ಲಿ ಸುಮಾರು 30 ಮನೆಗಳಿಗೆ ನೀರು ನುಗ್ಗಿತ್ತು.

ಕಾಲುವೆಗಳು ತುಂಬಿ ಹರಿದ ನೀರು ರಸ್ತೆ ಮೂಲಕ ಮನೆಗಳಿಗೆ ನುಗ್ಗಿತ್ತು. ನೇತಾಜಿ ನಗರ ಹಾಗೂ ವಿದ್ಯಾರಣ್ಯಪುರ ಬಳಿಯ ಮನೆಗಳಲ್ಲಿ ನೀರು ಹೆಚ್ಚು ನಿಂತಿದ್ದು ಕಂಡುಬಂತು.

ರಾಮಮೂರ್ತಿನಗರದ ಚರ್ಚ್ ರಸ್ತೆಯ ಅಂಬೇಡ್ಕರ್ ನಗರದಲ್ಲಿ ರಾಜಕಾಲುವೆ ತುಂಬಿ ಹರಿದು 10 ಮನೆಗಳಿಗೆ ನೀರು ನುಗ್ಗಿತ್ತು.

ನೆಲಕ್ಕುರುಳಿದ್ದ ಮರದ ಕೊಂಬೆಗಳು

ಮಳೆಗೂ ಮುನ್ನ ಜೋರಾದ ಗಾಳಿ ಬೀಸಿದ್ದರಿಂದ ನಗರದ ಹಲವೆಡೆ ಮರದ ಕೊಂಬೆಗಳು ನೆಲಕ್ಕುರುಳಿದ್ದವು.

‘ಮೆಜೆಸ್ಟಿಕ್, ಕಾಟನ್‌ಪೇಟೆ, ವಿದ್ಯಾರಣ್ಯಪುರ, ಯಲಹಂಕ, ಮಹದೇವಪುರ, ಕೆ.ಆರ್. ಪುರ, ರಾಜಾಜಿನಗರ, ವಿಜಯನಗರ, ನಾಯಂಡಹಳ್ಳಿ ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ ಕೊಂಬೆಗಳು ಬಿದ್ದಿದ್ದವು. ಕೆಲವೆಡೆ ರಸ್ತೆ ಸಂಚಾರ ಬಂದ್ ಆಗಿತ್ತು. ಪರ್ಯಾಯ ರಸ್ತೆಯಲ್ಲಿ ವಾಹನಗಳು ಸಂಚರಿಸಿದವು’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಹೆಬ್ಬಾಳ ಕೆಳ ಸೇತುವೆ ಬಳಿ ನೀರು ನಿಂತುಕೊಂಡು ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಿತ್ತು. ಕರ್ತವ್ಯದಲ್ಲಿದ್ದ ಸಂಚಾರ ಪೊಲೀಸ್ ಸಿಬ್ಬಂದಿ ಜಗದೀಶ ರೆಡ್ಡಿ, ಮಳೆಯಲ್ಲಿ ನೆನೆದು ನೀರು ಸರಾಗವಾಗಿ ಹರಿಯಲು ಕಾಲುವೆಯಲ್ಲಿ ಜಾಗ ಮಾಡಿದರು. ನಂತರವೇ ನೀರು ಕಡಿಮೆಯಾಯಿತು.

ತಡರಾತ್ರಿಯಿಂದ ಕಾರ್ಯಾಚರಣೆ

ಮಹಾಮಳೆಯಿಂದ ಹೆಚ್ಚು ಹಾನಿಯಾದ ಮಹದೇವಪುರ ಹಾಗೂ ಕೆ.ಆರ್.ಪುರ ಪ್ರದೇಶಗಳಲ್ಲಿ ಶುಕ್ರವಾರ ತಡರಾತ್ರಿಯಿಂದಲೇ ಅಗ್ನಿಶಾಮಕ, ಎಸ್‌ಡಿಆರ್‌ಎಫ್, ಬಿಬಿಎಂಪಿ ಹಾಗೂ ಪೊಲೀಸ್ ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಿದ್ದರು.

ಗಾಯತ್ರಿ ಬಡಾವಣೆಯಲ್ಲಿ ರಾಜಕಾಲುವೆಯಲ್ಲಿ ಕೊಚ್ಚಿಹೋದ ಮಿಥುನ್ ಅವರ ಪತ್ತೆಗಾಗಿ ರಕ್ಷಣಾ ಪಡೆ ಸಿಬ್ಬಂದಿಯು ದೋಣಿ ಸಹಾಯ ಪಡೆದರು. ರಾಜಕಾಲುವೆಯಲ್ಲಿ ದೋಣಿಯಲ್ಲಿ ಸಾಗಿ, ಮಿಥುನ್ ಅವರಿಗಾಗಿ ಹುಡುಕಾಟ ನಡೆಸಿದರು. ಸಂಜೆಯಾದರೂ ಅವರ ಸುಳಿವು ಸಿಗಲಿಲ್ಲ.

ಶನಿವಾರ ಮಧ್ಯಾಹ್ನವೂ ರಾಜಕಾಲುವೆಯಲ್ಲಿ ನೀರಿನ ಹರಿವು ಹೆಚ್ಚಿತ್ತು. ನೀರಿನಲ್ಲಿ ಕೊಚ್ಚಿಕೊಂಡು ಬಂದಿದ್ದ ಬೈಕ್‌ಗಳು, ಪೀಠೋಪಕರಣ, ಎಲೆಕ್ಟ್ರಾನಿಕ್ ವಸ್ತುಗಳು ಹಾಗೂ ಇತರೆ ವಸ್ತುಗಳನ್ನು ರಕ್ಷಣಾ ಸಿಬ್ಬಂದಿ ಹೊರಗೆ ತೆಗೆದರು.

ಮಹಿಳೆ ಸಾವು, ಎಂಜಿನಿಯರ್ ಕಣ್ಮರೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ರಾತ್ರಿ ಸುರಿದ ಭಾರಿ ಮಳೆಯ ಅನಾಹುತದಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದು, ರಾಜಕಾಲುವೆಯಲ್ಲಿ ಎಂಜಿನಿಯರ್ ಒಬ್ಬರು ಕೊಚ್ಚಿ ಹೋಗಿದ್ದಾರೆ.

ಕೆ.ಆರ್. ಪುರದ ಕಾವೇರಿ ನಗರದಲ್ಲಿ ಗೋದ್ರೇಜ್ ಅಪಾರ್ಟ್‌ಮೆಂಟ್ ಸಮುಚ್ಚಯದ ಬೃಹತ್ ಗೋಡೆಯೊಂದು ಮನೆ ಮೇಲೆ ಬಿದ್ದಿದ್ದು, ಅದರ ರಭಸಕ್ಕೆ ಮನೆ ಕುಸಿದು ಅವಶೇಷಗಳಡಿ ಸಿಲುಕಿ ಮುನಿಯಮ್ಮ (62) ಅಸುನೀಗಿದ್ದಾರೆ.

ಮುನಿಯಮ್ಮ

‘ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಮುನಿಯಮ್ಮ, ಮಕ್ಕಳ ಜೊತೆ ಚಿಕ್ಕದೊಂದು ಮನೆಯಲ್ಲಿ ವಾಸವಿದ್ದರು. ಮನೆಗೆ ಹೊಂದಿಕೊಂಡು ಗೋಡೆ ಇತ್ತು. ಘಟನೆಯಲ್ಲಿ ಮೂವರು ಗಾಯಗೊಂಡಿದ್ದಾರೆ’ ಎಂದು ನಿವಾಸಿಗಳು ಹೇಳಿದರು.

ನೀರಿನಲ್ಲಿ ಕೊಚ್ಚಿಹೋದ ಎಂಜಿನಿಯರ್: ಬಸವನಪುರ ವಾರ್ಡ್‌ನ ಗಾಯಿತ್ರಿ ಲೇಔಟ್‌ನಲ್ಲಿ ರಾಜಕಾಲುವೆಯ ನೀರಿನಲ್ಲಿ ಮಿಥುನ್ (27) ಎಂಬುವರು ಕೊಚ್ಚಿಹೋಗಿದ್ದು, ಅವರ ಪತ್ತೆಗಾಗಿ ಶೋಧ ಕಾರ್ಯ ನಡೆದಿದೆ.

ಮಿಥುನ್

‘ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಅದರಂತೆ ಗ್ರಾಮದ ಮಿಥುನ್, ನಗರದ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಸ್ನೇಹಿತರ ಜೊತೆ ವಾಸವಿದ್ದರು. ರಾಜಕಾಲುವೆ ಪಕ್ಕ ತಮ್ಮ ಬೈಕ್ ನಿಲ್ಲಿಸಿದ್ದರು. ಶುಕ್ರವಾರ ಮಳೆ ವೇಳೆ ಕಾಲುವೆ ಗೋಡೆ ಕುಸಿದು ಬೈಕ್ ತೇಲಿ ಹೋಗುತ್ತಿತ್ತು. ಬೈಕ್ ಹಿಡಿದು ಎಳೆದುಕೊಳ್ಳಲು ಮುಂದಾಗಿದ್ದ ಮಿಥುನ್, ಕಾಲುವೆಗೆ ಬಿದ್ದು ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ’ ಎಂದೂ ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದರು.

ಮಿಥುನ್ ಕುಟುಂಬಕ್ಕೆ ₹5 ಲಕ್ಷ ಪರಿಹಾರ

ಬೆಂಗಳೂರು: ಮಹದೇವಪುರದ ಗಾಯತ್ರಿ ಬಡಾವಣೆಯಲ್ಲಿ ರಾಜಕಾಲುವೆ ನೀರಿನಲ್ಲಿ ಕೊಚ್ಚಿಹೋದ ಮಿಥುನ್ ಕುಟುಂಬಕ್ಕೆ ₹5 ಲಕ್ಷ ಪರಿಹಾರ ನೀಡಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಮಿಥುನ್ ಅವರು ರಾಜಕಾಲುವೆಯಲ್ಲಿ ಕೊಚ್ಚಿ ಹೋಗಿರುವುದು ನೋವಿನ ವಿಷಯ. ಮೃತ ದೇಹಕ್ಕೆ ಹುಡುಕಾಟ ನಡೆಯುತ್ತಿದ್ದು, 10 ತಂಡಗಳು ಈ ಕಾರ್ಯಾಚರಣೆಯಲ್ಲಿ ತೊಡಗಿವೆ ಎಂದರು.

‘ಕೆ.ಆರ್. ಪುರ ಬಳಿ ಕಾವೇರಿ ನಗರದಲ್ಲಿ ಗೋದ್ರೇಜ್ ಅಪಾರ್ಟ್‌ಮೆಂಟ್ ಸಮುಚ್ಚಯದ ಗೋಡೆ ಕುಸಿದು ಮೃತಪಟ್ಟ ಮುನಿಯಮ್ಮ ಕುಟುಂಬಕ್ಕೆ ಬಿಬಿಎಂಪಿಯಿಂದ ಪರಿಹಾರ ನೀಡುವುದಿಲ್ಲ. ಆದರೆ, ಅಪಾರ್ಟ್‌ಮೆಂಟ್ ಕಡೆಯಿಂದಲೇ ಪರಿಹಾರ ಕೊಡಿಸಲು ಪ್ರಯತ್ನಿಸಲಾಗುವುದು’ ಎಂದು ಹೇಳಿದರು.

‘ಸಾಯಿ ಬಡಾವಣೆಯಲ್ಲಿ ಮನೆಗಳಿಗೆ ನೀರು ನುಗ್ಗಿದೆ. ರೈಲ್ವೆ ಸೇತುವೆ ಅಡಿಯಲ್ಲಿ ರಾಜಕಾಲುವೆ ಕಿರಿದಾಗಿರುವುದರಿಂದ ಆಗಾಗ ಸಮಸ್ಯೆಯಾಗುತ್ತಿದೆ. ಎಲ್ಲಾ ರಾಜಕಾಲುವೆಗಳ ಹೂಳೆತ್ತಲಾಗಿದ್ದು, ಹೂಳಿನಿಂದ ಎಲ್ಲಿಯೂ ಸಮಸ್ಯೆಯಾಗಿಲ್ಲ. ರೈಲ್ವೆ ಸೇತುವೆ ಕಾಮಗಾರಿ ತಕ್ಷಣಕ್ಕೆ ಆಗುವಂತಹದ್ದಲ್ಲ, ಪ್ರಕ್ರಿಯೆಗಳು ನಡೆಯುತ್ತಿವೆ’ ಎಂದು ಸ್ಪಷ್ಟಪಡಿಸಿದರು.

ವಿದ್ಯಾರಣ್ಯಪುರ ಬಳಿಯ ಸಿಂಗಾಪುರದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ನೆಲಮಹಡಿಯಲ್ಲಿ ನಿಂತಿದ್ದ ನೀರಿನಲ್ಲೇ ಶಾಲಾ ಬಾಲಕಿಯೊಬ್ಬರು ನಡೆದುಕೊಂಡು ಹೋದರು

ಮನೆಗಳಿಗೆ ನುಗ್ಗಿದ ಕೆರೆ ನೀರು

ವಿದ್ಯಾರಣ್ಯಪುರ ಬಳಿಯ ಸಿಂಗಾಪುರ ಕೆರೆ ನೀರು ಅಕ್ಕ–ಪಕ್ಕದ ಪ್ರದೇಶಕ್ಕೆ ನುಗ್ಗಿತ್ತು.

ಸಿಂಗಾಪುರದ ಮನೆಗಳಲ್ಲಿ ಮೂರು ಅಡಿಗಳಷ್ಟು ನೀರು ಹರಿಯಿತು. ಮಳೆ ಶುರುವಾದಾಗಿನಿಂದಲೂ ಆತಂಕದಲ್ಲಿದ್ದ ನಿವಾಸಿಗಳು, ಮನೆಗೆ ನೀರು ನುಗ್ಗುತ್ತಿದ್ದಂತೆ ಆತಂಕಗೊಂಡರು. ರಾತ್ರಿಯಿಡೀ ನೀರು ಹೊರಹಾಕಲು ಹರಸಾಹಸಪಟ್ಟರು. ಮನೆಗಳು, ಅಪಾರ್ಟ್‌ಮೆಂಟ್ ಸಮುಚ್ಚಯದ ನೆಲ ಮಹಡಿ ಹಾಗೂ ಇತರೆಡೆ ನೀರು ನಿಂತಿತ್ತು. ನೀರಿನ ಜೊತೆಯಲ್ಲಿ ತ್ಯಾಜ್ಯ ಹಾಗೂ ಹಾವು–ಚೇಳುಗಳೂ ಮನೆಯೊಳಗೆ ಬಂದಿದ್ದು ಕಂಡುಬಂತು.

‘ಸಿಂಗಾಪುರ ಕೆರೆಗೆ ಹೊಂದಿಕೊಂಡಿರುವ ರಾಜಕಾಲುವೆ ಒತ್ತುವರಿ ಮಾಡಿಕೊಂಡು, ರಸ್ತೆ ನಿರ್ಮಿಸಲಾಗಿದೆ. ಮಳೆ ಬಂದಾಗಲೆಲ್ಲ ರಸ್ತೆಯಲ್ಲಿ ನೀರು ಹರಿದು ಮನೆಗಳಿಗೆ ನುಗ್ಗುತ್ತಿದೆ. ಈ ಬಗ್ಗೆ ಹಲವು ಬಾರಿ ಮನವಿ ನೀಡಿದರೂ ಸಮಸ್ಯೆ ಬಗೆಹರಿದಿಲ್ಲ’ ಎಂದು ನಿವಾಸಿಗಳು ದೂರಿದರು.

ವಿದ್ಯಾರಣ್ಯಪುರ ಬಳಿಯ ಸಿಂಗಾಪುರದಲ್ಲಿ ರಸ್ತೆಯಲ್ಲಿ ನೀರು ಹರಿದು ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಗೋಡೆ ಕುಸಿದು ಬಿದ್ದಿತ್ತು

ಗೋಡೆ ಕುಸಿದು ಬೈಕ್‌ಗಳು ಜಖಂ

ಮಹದೇವಪುರ ವಲಯದ ಗಾಯತ್ರಿ ಬಡಾವಣೆಯ ರಾಜಕಾಲುವೆಯಲ್ಲಿ ಶುಕ್ರವಾರ ರಾತ್ರಿ ಕೊಚ್ಚಿಹೋಗಿದ್ದ ಬೈಕ್‌ಗಳನ್ನು ರಕ್ಷಣಾ ಪಡೆಯ ಸಿಬ್ಬಂದಿ ಹೊರಗೆ ತೆಗೆದರು

ಕೆ.ಆರ್.ಪುರ ಬಳಿ ಶ್ರೀಕೃಷ್ಣ ಚಿತ್ರಮಂದಿರದ ಗೋಡೆ ಕುಸಿದು, ಅದರ ಅವಶೇಷಗಳಡಿ ಸಿಲುಕಿ 10ಕ್ಕೂ ಹೆಚ್ಚು ಬೈಕ್‌ಗಳು ಜಖಂಗೊಂಡಿವೆ.

‘ಚಾರ್ಲಿ’ ಸಿನಿಮಾ ವೀಕ್ಷಣೆಗೆಂದು ಬಂದಿದ್ದ ಜನ, ಗೋಡೆ ಪಕ್ಕದಲ್ಲಿ ಬೈಕ್‌ಗಳನ್ನು ನಿಲ್ಲಿಸಿ ಚಿತ್ರಮಂದಿರ ಒಳಗೆ ಹೋಗಿದ್ದರು. ರಾತ್ರಿ ಧಾರಾಕಾರವಾಗಿ ಮಳೆ ಸುರಿದಿದ್ದರಿಂದ ಗೋಡೆ ಕುಸಿದು ಬಿದ್ದಿತ್ತು’ ಎಂದು ಸ್ಥಳೀಯರು ಹೇಳಿದರು.

ಜನ ಸಾಯುತ್ತಿದ್ದರೂ ಸಿ.ಎಂ.ಗೆ ಕಣ್ಣೀರು ಬರುತ್ತಿಲ್ಲ: ಎಚ್‌ಡಿಕೆ

ಬೆಂಗಳೂರು: ‘ಸಿನಿಮಾ ದೃಶ್ಯದಲ್ಲಿ ನಾಯಿ ಸತ್ತಿದ್ದಕ್ಕೆ ಮುಖ್ಯಮಂತ್ರಿ ಕಣ್ಣೀರಿಟ್ಟಿದ್ದರು. ಮಳೆಯಿಂದ ಜನ ಸಾಯುತ್ತಿದ್ದರೂ ಅವರಿಗೆ ಕಣ್ಣೀರು ಬರುತ್ತಿಲ್ಲ ಏಕೆ’ ಎಂದು ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಮಳೆ ಹಾನಿ ಕುರಿತು ಟ್ವೀಟ್ ಮಾಡಿರುವ ಅವರು, ‘ಮಳೆಯಿಂದ ಆಗುತ್ತಿರುವ ಪ್ರತಿ ಸಾವಿಗೂ ಸರ್ಕಾರವೇ ನೇರ ಹೊಣೆ. ಮೊಸಳೆ ಕಣ್ಣೀರಿನ ಈ ಸೋಗಿನ ಸರ್ಕಾರ ಸಾವಿನ ವ್ಯಾಪಾರ ಮಾಡುತ್ತಿದೆ’ ಎಂದು ದೂರಿದರು. ಕೆ.ಆರ್. ಪುರ ವಿಧಾನಸಭಾ ಕ್ಷೇತ್ರವು ನಿರಂತರವಾಗಿ ಮಳೆಯ ಅವಾಂತರಕ್ಕೆ ತುತ್ತಾಗುತ್ತಿದ್ದು, ರಾಜಕಾಲುವೆಗಳ ಒತ್ತುವರಿಯ ದೂರು ಕೇಳಿಬರುತ್ತಿದೆ. ಕಳೆದ 9 ವರ್ಷಗಳಿಂದ ಭಾರಿ ಪ್ರಮಾಣದಲ್ಲಿ ಕ್ಷೇತ್ರಕ್ಕೆ ಅನುದಾನ ಮಂಜೂರಾಗಿದ್ದರೂ ಅಭಿವೃದ್ಧಿ ಕೆಲಸಗಳು ಆಗಿಲ್ಲ. ಆ ಹಣವೆಲ್ಲ ಯಾವ ರಾಜಕಾಲುವೆಯ ಮೂಲಕ ಯಾರ ಜೇಬು ಸೇರಿತು? ಕಾಗದದ ಮೇಲಷ್ಟೇ ಕಾಮಗಾರಿಗಳ ಕರಡಿ ಕುಣಿತ ಕಾಣುತ್ತಿದೆ. ಆ ಹಣದ ಲೆಕ್ಕ ಎಲ್ಲಿ?

ಒಂದು ತಿಂಗಳ ಹಿಂದೆ ಸುರಿದ ಮಳೆಯಿಂದ ಕೆ.ಆರ್.ಪುರ ವಿಧಾನಸಭೆ ಕ್ಷೇತ್ರ ಈಜುಕೊಳವಾಗಿತ್ತು. ಸಾಯಿ ಲೇಔಟ್ ನೀರಿನಲ್ಲಿ ತೇಲಿ ಬೆಂಗಳೂರಿನ ಹೆಗ್ಗಳಿಕೆಯನ್ನೇ ಅಣಕಿಸಿತ್ತು ಎಂದಿದ್ದಾರೆ. ರಾಜಕಾಲುವೆಯಲ್ಲಿ ನತದೃಷ್ಟ ಯುವಕನೊಬ್ಬ ಕೊಚ್ಚಿ ಹೋಗಿದ್ದಾನೆ. ಗೋಡೆ ಕುಸಿದು ಮಹಿಳೆಯೊಬ್ಬರು ಅಸುನೀಗಿದ್ದಾರೆ. ಕಳೆದ ತಿಂಗಳು ಸುರಿದ ಮಳೆಯಿಂದ ತತ್ತರಿಸಿದ ಕೆ.ಆರ್.ಪುರದಲ್ಲಿ ಭಾರಿ ಹಾನಿ ಆಗಿದ್ದರೂ ನಗರಾಭಿವೃದ್ಧಿ ಸಚಿವರು ಬಿಬಿಎಂಪಿ ಎಚ್ಚೆತ್ತುಕೊಂಡಿಲ್ಲ ಯಾಕೆ ಎಂದು ಪ್ರಶ್ನಿಸಿದ್ದಾರೆ.

ಶಿಕ್ಷಣಾಧಿಕಾರಿ ಕಚೇರಿಗೂ ನೀರು

ಕೆ.ಆರ್.ಪುರ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೂ ನೀರು ನುಗ್ಗಿತ್ತು. ಪಿಠೋಪಕರಣ, ಹಲವು ದಾಖಲೆಗಳು ಹಾಗೂ ಕಂಪ್ಯೂಟರ್‌ಗಳು ಇದ್ದ ಕೊಠಡಿಯಲ್ಲಿ ನೀರು ನಿಂತುಕೊಂಡಿತ್ತು. ನೀರು ಹೊರಹಾಕುವುದಲ್ಲಿ ಸಿಬ್ಬಂದಿ ಹಾಗೂ ರಕ್ಷಣಾ ಪಡೆಗಳು ನಿರತರಾಗಿದ್ದವು.

ಬೆಂಗಳೂರು ದಕ್ಷಿಣ ಶೇ 76.24, ಉತ್ತರ ಶೇ 72.01 ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಯು ಫಲಿತಾಂಶ ಪ್ರಕಟವಾಗಿದ್ದು, ಶೈಕ್ಷಣಿಕ ಜಿಲ್ಲೆಗಳ ಪೈಕಿ ಬೆಂಗಳೂರು ದಕ್ಷಿಣವು ಈ ವರ್ಷ ಶೇ 76.24ರಷ್ಟು (ಕಳೆದ ವರ್ಷ ಶೇ 77.56) ಫಲಿತಾಂಶ ಪಡೆದಿದ್ದು, ನಾಲ್ಕನೇ ಸ್ಥಾನದಲ್ಲಿದೆ.

ಬೆಂಗಳೂರು ಉತ್ತರವು ಶೇ 72.01ರಷ್ಟು (ಕಳೆದ ವರ್ಷ ಶೇ 75.54) ಫಲಿತಾಂಶ ಪಡೆದಿದ್ದು 7ನೇ ಸ್ಥಾನದಲ್ಲಿದೆ.

ಹಾಗೆಯೇ, ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಶೇ 67.86ರಷ್ಟು (ಕಳೆದ ವರ್ಷ 69.02) ಫಲಿತಾಂಶ ಪಡೆದಿದೆ.

ವಿಜ್ಞಾನ ವಿಭಾಗದಲ್ಲಿ ನಗರದ ಹೊಸೂರು ರಸ್ತೆಯ ಕ್ರೈಸ್ಟ್ ಪಿಯು ಕಾಲೇಜಿನ ಬಿ.ಸಾಯಿಚಿರಾಗ್ 597 ಅಂಕ ಗಳಿಸಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಬಿ.ಸೈಚಿರಾಗ್

ವಿಘ್ನೇಶ್ ಕುಮಾರ್

ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಮೊದಲ ರ‍್ಯಾಂಕ್ ಪಡೆದ ವಿದ್ಯಾರ್ಥಿನಿ ಸಿಮ್ರನ್ ಶೇಷ ರಾವ್ ತಂದೆ ತಾಯಿ ಜೊತೆ ಸಂಭ್ರಮಿಸುತ್ತಿರುವ ಕ್ಷಣ.(ಎಡಚಿತ್ರ). ನಗರದ ಜಾಲಹಳ್ಳಿಯಲ್ಲಿರುವ ಸೆಂಟ್ ಕ್ಲಾರೆಟ್ ಪಿಯು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿ ಆಕಾಶ್ ದಾಸ್ ಪಿಯುಸಿ ವಾಣಿಜ್ಯ ವಿಭಾಗದಲ್ಲಿ ಹೆಚ್ಚು ಅಂಕ ಪಡೆದಿದ್ದಕ್ಕೆ ತಂದೆ ಸಿಹಿ ತಿನಿಸಿ ಸಂಭ್ರಮಿಸಿದರು

–ಪ್ರಜಾವಾಣಿ ಚಿತ್ರಗಳು

ಬಿಜಿಎಸ್ ಕಾಲೇಜ್: ನೀಲು ಸಿಂಗ್‌ಗೆ 596 ಅಂಕ

ಪ್ರಜಾವಾಣಿ ವಾರ್ತೆ

ನೆಲಮಂಗಲ: ದ್ವಿತೀಯ ಪಿಯು ಫಲಿತಾಂಶದಲ್ಲಿ ಸಮೀಪದ ನಗರೂರಿನ ಬಿಜಿಎಸ್ ಪಿಯು ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿ ನೀಲು ಸಿಂಗ್ 596 ಅಂಕ ಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದ್ದಾರೆ.

ಅಭಿಷೇಕ್ ಶ್ರೀರಾಮ್, ಸಿಂಚನ 590 ಅಂಕ, ಬಿ.ಆರ್.ಹರ್ಷ 587 ಅಂಕ ಗಳಿಸಿದ್ದಾರೆ. ವಿಜ್ಞಾನ ವಿಭಾಗದಲ್ಲಿ ನಮ್ರತಾ ಹಾಗೂ ಉಮೇಶ್‌ಕುಮಾರ್ 588 ಅಂಕ ಗಳಿಸಿದ್ದಾರೆ.

ವಿಜ್ಞಾನ ವಿಭಾಗದ ಬಿ.ಬಿ.ಮದನ್ 586, ಎಂ.ಎಸ್.ಮಂಜುಶ್ರೀ 586, ಬಿ.ವಿ.ದರ್ಶನ್ 583, ಎಂ.ಎನ್.ಮದನ್ 580, ವಾಣಿಜ್ಯ ವಿಭಾಗದ ಸಿ.ದಿವ್ಯಾಶ್ರೀ 584, ಆರ್.ಅಕ್ಷಯ್ 582, ಎಸ್.ಆದಿತ್ಯ 580 ಹೆಚ್ಚು ಅಂಕ ಗಳಿಸಿದ್ದಾರೆ.

ಹೊಯ್ಸಳ ಕಾಲೇಜು: ಜಕ್ಕಸಂದ್ರದ ಹೊಯ್ಸಳ ಪಿಯು ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿ ಶಬನಮ್ 589 ಅಂಕ ಮತ್ತು ವಾಣಿಜ್ಯ ವಿಭಾಗದಲ್ಲಿ ಸಪ್ನಾ ಸಿರ್ವಿ 590 ಅಂಕ ಗಳಿಸಿ ಗಳಿಸಿದ್ದಾರೆ ಎಂದು ಪ್ರಾಂಶುಪಾಲ ಗೌರಿಶಂಕರ್ ಹರ್ಷ ವ್ಯಕ್ತಪಡಿಸಿದರು. ವಿಜ್ಞಾನ ವಿಭಾಗದ ಪ್ರದೀಪ್ 583, ಧನುಷ್ 581, ವಾಣಿಜ್ಯ ವಿಭಾಗದ ಸಿ.ಎಚ್.ಅನುಷಾ 586 ಹೆಚ್ಚು ಅಂಕ ಗಳಿಸಿದ್ದಾರೆ.

ಒಟ್ಟು 474 ವಿದ್ಯಾರ್ಥಿಗಳಲ್ಲಿ 467 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಒಟ್ಟು 25 ವಿದ್ಯಾರ್ಥಿಗಳು ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ ಎಂದು ಉಪ ಪ್ರಾಂಶುಪಾಲ ಗೋಪಾಲ್ ತಿಳಿಸಿದರು.

ಹೊಯ್ಸಳ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ 11ನೇ ರ‍್ಯಾಂಕ್ ಪಡೆದಿರುವ ವಿದ್ಯಾರ್ಥಿ ಶಬನಮ್ ಅವರಿಗೆ ಉಪಪ್ರಾಂಶುಪಾಲ ಗೋಪಾಲ್ ಸಿಹಿ ತಿನ್ನಿಸಿದರು. ಪ್ರಾಂಶುಪಾಲ ಗೌರಿಶಂಕರ್ ವಿದ್ಯಾರ್ಥಿಗಳು ಇದ್ದಾರೆ

ಬಿಬಿಎಂಪಿ ಕಾಲೇಜಿಗೆ ಶೇ 64ರಷ್ಟು ಫಲಿತಾಂಶ

ಬೆಂಗಳೂರು: ಬಿಬಿಎಂಪಿ ನಡೆಸುತ್ತಿರುವ 15 ಪದವಿ ಪೂರ್ವ ಕಾಲೇಜುಗಳಲ್ಲಿ ಓದುತ್ತಿದ್ದ 2,167 ವಿದ್ಯಾರ್ಥಿಗಳ ಪೈಕಿ 1,396 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಒಟ್ಟಾರೆ ಶೇ 64.42ರಷ್ಟು ಫಲಿತಾಂಶ ಬಂದಿದ್ದು, 143 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಪಾದರಾಯನಪುರ ಪದವಿ ಪೂರ್ವ ಕಾಲೇಜಿಗೆ ಶೇ 90ರಷ್ಟು ಫಲಿತಾಂಶ ಬಂದಿದೆ. ಭೈರವೇಶ್ವರನಗರ ಕಾಲೇಜಿಗೆ ಶೇ 83.92ರಷ್ಟು, ಜೋಗುಪಾಳ್ಯ ಕಾಲೇಜಿಗೆ ಶೇ 76ರಷ್ಟು ಫಲಿತಾಂಶ ಬಂದಿದೆ ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ಸಹಾಯಕ ಆಯುಕ್ತರು ತಿಳಿಸಿದ್ದಾರೆ.

ಶೇಷಾದ್ರಿಪುರಂ ಕಾಲೇಜು ವಿದ್ಯಾರ್ಥಿಗಳಿಗೆ ಉತ್ತಮ ಅಂಕ

ವಾಣಿಜ್ಯ ವಿಭಾಗ: ಡಿ.ಜಾಹ್ನವಿ ಸಾಧನೆ

ಬೆಂಗಳೂರು: ಕೆಂಗೇರಿ ಸ್ಯಾಟಲೈಟ್ ಟೌನ್ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಪಿಯು ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಜಾಹ್ನವಿ

ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಾದ ಡಿ.ಜಾಹ್ನವಿ 591 (ಶೇ 98.50), ಕೆ.ಧನಲಕ್ಷ್ಮಿ 586 (ಶೇ 97.67), ಫಾತಿಮಾ 585 (ಶೇ 97.50), ಟಿ.ವಿ.ಲಿಖಿತಾ 583 (ಶೇ 97.16), ಸಿ. ಪವಿತ್ರಾ 582 (ಶೇ 97), ವಿಜ್ಞಾನ ವಿಭಾಗದ ಜಿ.ಹರಿಪ್ರಿಯಾ ಸಕೆ 581 (ಶೇ 96.83), ಜೀವಿತಾ ದಿವಾಕರ್ 581 (ಶೇ 96.83) ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಾದ ಅಂಜಲಿ ಅರವಿಂದ್ 578 (ಶೇ 96.33), ಎ.ಪೂರ್ಣಿಮಾ 578 (ಶೇ 96.33) ಅಂಕ ಪಡೆದಿದ್ದಾರೆ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಧನಲಕ್ಷ್ಮಿ

ಫಾತಿಮಾ

ಲಿಖಿತಾ

ಸಿ.ಪವಿತ್ರಾ

ಹರಿಪ್ರಿಯಾ

ಜೀವಿತಾ

ಅಂಜಲಿ

ಪೂರ್ಣಿಮಾ

ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಕೆ

ಪೀಣ್ಯ–ದಾಸರಹಳ್ಳಿ: ಸಮೀಪದ ಹಾವನೂರು ಬಡಾವಣೆಯ ಸೌಂದರ್ಯ ಪಿಯು ಕಾಲೇಜಿನ ಧನುಷ್ ಎಚ್. ದ್ವಿತೀಯ ಪಿಯುನಲ್ಲಿ 600ಕ್ಕೆ 594 ಅಂಕ ಪಡೆದು ರಾಜ್ಯಕ್ಕೆ 5ನೇ ಸ್ಥಾನ, ಸೌಮ್ಯ ಸಿ.ಪಿ. ಅವರು 600ಕ್ಕೆ 593 ಅಂಕ ಪಡೆದು ರಾಜ್ಯಕ್ಕೆ ಆರನೇ ಸ್ಥಾನ, ನಿತ್ಯಾಶ್ರೀ ಎಚ್.ಎಲ್ ಅವರು 590 ಅಂಕ ಪಡೆದು ರಾಜ್ಯಕ್ಕೆ 7ನೇ ಸ್ಥಾನ ಪಡೆದಿದ್ದಾರೆ.

ಎಚ್.ನಿತ್ಯಶ್ರೀ (590)

ಎಚ್.ಧನುಷ್ (594)

ಸಿ.ಪಿ.ಸೌಮ್ಯಾ (593)

ದೀಕ್ಷಾ ಇನ್‌ಸ್ಟಿಟ್ಯೂಟ್ ವಿದ್ಯಾರ್ಥಿಗಳ ಸಾಧನೆ

ಬೆಂಗಳೂರು: ಪಿಯು ಪರೀಕ್ಷೆಯಲ್ಲಿ ನಗರದ ದೀಕ್ಷಾ ಇನ್‌ಸ್ಟಿಟ್ಯೂಟ್‌ನ ಮೂವರು ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಇಂದಿರಾ ನಗರದ ದೀಕ್ಷಾದ ಎ.ಕಿಶೋರ್, ಜ್ಯುಡಿಷಿಯಲ್ ಲೇಔಟ್‌ನ ವಿಜೇತಾ ನಾಗರಾಜ್ ಭಟ್ ಹಾಗೂ ಮಹಾಲಕ್ಷ್ಮಿಪುರ ದೀಕ್ಷಾದ ಸಹಾನ ಭಟ್ ಅವರು ವಿಜ್ಞಾನ ವಿಭಾಗದಲ್ಲಿ 596 ಅಂಕ ಗಳಿಸಿದ್ದಾರೆ.

ಮೂವರು ಕಂಪ್ಯೂಟರ್ ಸೈನ್ಸ್ ಪದವಿ ಪಡೆಯಲು ಉತ್ಸುಕರಾಗಿದ್ದು, ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆದಿದ್ದಾರೆ ಎಂದು ದೀಕ್ಷಾದ ಪ್ರಕಟಣೆ ತಿಳಿಸಿದೆ.

ವಿಜೇತಾ

ಕಿಶೋರ್

ಸಹನಾ ಭಟ್

ರಾಷ್ಟ್ರೀಯ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಕರೆ

‘ಒಬಿಸಿ ಸಮುದಾಯದ ಎಲ್ಲರನ್ನೂ ಒಳಗೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗ ದೊಡ್ಡ ಸಮುದಾಯವಾಗಿದೆ. ಈ ಸಮುದಾಯಗಳ ಯಾರೊಬ್ಬರೂ ಬಿಜೆಪಿಯಿಂದ ದೂರ ಉಳಿಯದಂತೆ ನೋಡಿಕೊಳ್ಳಬೇಕು ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹೇಳಿದರು.

ಯಲಹಂಕ ಬಳಿಯ ಸಿಂಗನಾಯಕನಹಳ್ಳಿಯ ರೆಸಾರ್ಟ್‌ನಲ್ಲಿ ಆಯೋಜಿಸಿದ್ದ ಒಬಿಸಿ ಮೋರ್ಚಾದ ರಾಷ್ಟ್ರೀಯ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭದಲ್ಲಿ ಶನಿವಾರ ಮಾತನಾಡಿದ ಅವರು, ಹಿಂದುಳಿದ ಜಾತಿಗಳ ಪ್ರಭಾವಿ ಯಾರು? ನಾಯಕ ಯಾರು ಎಂಬುದನ್ನು ತಿಳಿಯಬೇಕು. ಎಲ್ಲ ಜಾತಿಗಳಲ್ಲಿರುವ ಪ್ರಭಾವಿ ನಾಯಕರು ಬಿಜೆಪಿ ಎನ್ನುವ ಜಾತಿಯೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವಂತಾಗಬೇಕು. ನಮ್ಮ ಜಾತಿಯ ವ್ಯಕ್ತಿ ಬಿಜೆಪಿಯಲ್ಲಿದ್ದಾನೆ ಎಂಬ ಹೆಮ್ಮೆ ಎಲ್ಲ ಸಮುದಾಯಗಳಲ್ಲಿ ಮೂಡಬೇಕು ಎಂದರು.

ಎಲ್ಲ ಜಾತಿಗಳ ನಾಯಕರ ಬಗ್ಗೆ ಪಟ್ಟಿ ಮಾಡಿ ನಮ್ಮ ಪಕ್ಷದಲ್ಲಿ ಈ ಸಮುದಾಯದವರ ಪ್ರಾತಿನಿಧ್ಯವನ್ನು ದ್ವಿಗುಣಗೊಳಿಸಲು ದುಡಿಯಬೇಕು. ಬೇರೆ ಪಕ್ಷಗಳ ರಾಜಕೀಯ ಸಂಘಟನೆ ಬಿಜೆಪಿಯಂತಿಲ್ಲ. ಅನ್ಯ ಪಕ್ಷಗಳಲ್ಲಿ ಒಬ್ಬರನ್ನೊಬ್ಬರು ಕಾಲೆಳೆಯುವುದರಲ್ಲಿಯೇ ತಲ್ಲೀನರಾಗಿದ್ದಾರೆ. ಈ ಹೊತ್ತಿನಲ್ಲಿ ನಮ್ಮ ಕಾರ್ಯಕರ್ತರು ಮಾದರಿಯಾಗಿ ನಿಲ್ಲಬೇಕು ಎಂದರು.

ಹಿಂದುಳಿದ ವರ್ಗಗಳ ಮೀಸಲಾತಿ ಇಲ್ಲದೇ ಚುನಾವಣೆ ಗೆಲ್ಲಲು ಸಾಧ್ಯವಿಲ್ಲ ಎಂದು ಹೇಳುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಬ್ಬ ಜಾಗೃತ ನಾಯಕರು. ಈ ವರ್ಗಗಳ ಬಗ್ಗೆ ಅವರು ಆಲೋಚಿಸುತ್ತಿದ್ದಾರೆ ಎಂಬುದನ್ನು ತೋರಿಸುವುದೇ ಜಾಗೃತಾವಸ್ಥೆ. ಬೊಮ್ಮಾಯಿ ಸರ್ಕಾರ ಸಾಮಾಜಿಕ ನ್ಯಾಯದ ಜತೆಗೆ ಸಾಮಾಜಿಕ ಅವಕಾಶವನ್ನೂ ನೀಡಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಬೊಮ್ಮಾಯಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಒಬಿಸಿ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ಲಕ್ಷ್ಮಣ್ ಇದ್ದರು.

ಒಬಿಸಿ ಮೋರ್ಚಾದ ರಾಷ್ಟ್ರೀಯ ಪ್ರಶಿಕ್ಷಣ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಬೆಳ್ಳಿಗದೆ ನೀಡಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು. ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ವಿ. ಲಕ್ಷ್ಮಣ್, ಶಾಸಕರಾದ ಸಿ.ಟಿ. ರವಿ ಹಾಗೂ ಎಸ್‌.ಆರ್‌. ವಿಶ್ವನಾಥ್ ಇದ್ದರು —ಪ್ರಜಾವಾಣಿ ಚಿತ್ರ

‘ಸುಳ್ಳು ಇತಿಹಾಸ ತುರುಕಿದ ಕಾಂಗ್ರೆಸ್–ಕಮ್ಯುನಿಸ್ಟರು’

ಬೆಂಗಳೂರು: ‘ ಕಾಂಗ್ರೆಸ್ ಮತ್ತು ಕಮ್ಯುನಿಸ್ಟರ ಕೆಟ್ಟ ಒಡಂಬಡಿಕೆಯ ಪರಿಣಾಮದಿಂದಾಗಿ ಕಳೆದ ಏಳು ದಶಕಗಳಿಂದ ಶಿಕ್ಷಣದಲ್ಲಿ ಸುಳ್ಳು ಇತಿಹಾಸವನ್ನು ತುರುಕುತ್ತಾ ಬರಲಾಗಿದೆ’ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರರೂ ಆದ ಪಟ್ನಾ ವಿಶ್ವವಿದ್ಯಾಲಯದ ಕಾನೂನು ಪ್ರಾಧ್ಯಾಪಕ ಗುರುಪ್ರಕಾಶ್ ಪಾಸ್ವಾನ್ ಆಪಾದಿಸಿದರು.

ಬೆಂಗಳೂರಿನ ‘ಸಿಟಿಜನ್ಸ್ ಫಾರ್ ಡೆಮಾಕ್ರಸಿ’ ಶನಿವಾರ ಇಲ್ಲಿ ಆಯೋಜಿಸಿದ್ದ, ‘ಪಠ್ಯಪುಸ್ತಕ ಪರಿಷ್ಕರಣೆ, ಸತ್ಯ-ಮಿಥ್ಯೆ’ ವಿಚಾರಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಪರಿಷ್ಕರಣೆ ಮಾಡಿರುವುದನ್ನು ಸ್ವಾಗತಿಸುತ್ತೇನೆ’ ಎಂದರು.

‘ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯ ಹೋರಾಟವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಂಡಿದೆ. ನೆಹರೂ ಕುಟುಂಬದ ಯಜಮಾನಿಕೆಯನ್ನೇ ಗುರಿಯಾಗಿಸಿಕೊಂಡು ಒಂದಂಶದ ಅಜೆಂಡಾದೊಂದಿಗೆ 1947ರ ನಂತರ ಈ ದೇಶದಲ್ಲಿ ಸುಳ್ಳು ಇತಿಹಾಸವನ್ನು ಸೃಜಿಸಲಾಗಿದೆ. ದಲಿತರು, ಕ್ರಾಂತಿಕಾರಿಗಳು ಈ ದೇಶಕ್ಕೆ ಕೊಟ್ಟ ಕೊಡುಗೆ, ತ್ಯಾಗ, ಬಲಿದಾನಗಳನ್ನು ಮರೆಮಾಚಲಾಗಿದೆ’ ಎಂದು ಆರೋಪಿಸಿದರು.

‘ಶಿಕ್ಷಣದಲ್ಲಿ ರಾಜಕಾರಣ ಸೇರಿಸಿದ ಪರಿಣಾಮವೇ ಇವತ್ತು ಸಿಎಎ, 370ನೇ ವಿಧಿ ವಿರೋಧಿಸುವವರು, ಬುರ್ಕಾ, ಹಿಜಾಬ್‌ಗಳ ಪರ ಮಾತನಾಡುವವರು ಹೆಚ್ಚಾಗಿದ್ದಾರೆ. ಆದ್ದರಿಂದ, ಜನರನ್ನು ಜಾಗೃತಗೊಳಿಸಬೇಕಿದೆ. ಇತಿಹಾಸದ ಲೋಪಗಳನ್ನು ಸರಿಪಡಿಸಲು ರಾಜ್ಯ ಸರ್ಕಾರ ಸಂಶೋಧನೆ, ಅನ್ವೇಷಣೆಗೆ ಒತ್ತು ನೀಡಬೇಕಿದೆ’ ಎಂದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಮಾತನಾಡಿ, ‘ಪಠ್ಯಪುಸ್ತಕ ಪರಿಷ್ಕರಣೆಗೆ ಅಪಸ್ವರ ಎತ್ತಿರುವವರಿಗೆ ಏನಾದರೂ ಒಂದಷ್ಟು ನೈತಿಕತೆ ಇದ್ದರೆ, ಮೊದಲು ಬರಗೂರು ರಾಮಚಂದ್ರಪ್ಪ ವಿರುದ್ಧ ಹೋರಾಟ ಮಾಡಬೇಕು. ಯಾಕೆಂದರೆ, ಕುವೆಂಪು ಪಾಠಗಳಿಗೆ ಕತ್ತರಿ ಹಾಕಿದ್ದೇ ಬರಗೂರು’ ಎಂದು ಆರೋಪಿಸಿದರು.

‘ಬಸವಣ್ಣ ಹೊಸಧರ್ಮ ಸ್ಥಾಪನೆ ಮಾಡಲಿಲ್ಲ ಬದಲಿಗೆ ಸನಾತನ ಧರ್ಮದ ನಿಜತತ್ವಗಳನ್ನು ಎತ್ತಿಹಿಡಿದರು. ವೇದ ಉಪನಿಷತ್ತುಗಳಲ್ಲಿದ್ದ ಧರ್ಮದ ಸಮಾನತೆಯ ತತ್ವವನ್ನು ವಚನಗಳ ಮೂಲಕ ತೆರೆದಿಟ್ಟರು. ಜಾತ್ಯತೀತರು ಎಂದು ಹೇಳಿಕೊಳ್ಳುವ ಕಾಂಗ್ರೆಸ್ಸಿಗರು–ಕಮ್ಯುನಿಸ್ಟರು ಇವತ್ತು ಜನಿವಾರ, ಉಡುದಾರ, ಶಿವದಾರಗಳ ಮೂಲಕ ಜಾತಿಗಳನ್ನು ಎತ್ತಿಕಟ್ಟಿ ಸಂಘರ್ಷ ಸೃಷ್ಟಿಸುವ ಪ್ರಯತ್ನ ಮಾಡುತ್ತಿದ್ದಾರೆ. ಭಾರತೀಯತೆ ಪುಟಿದೇಳುತ್ತಿರುವುದನ್ನು ಸಹಿಸಲಾಗದೆ ವಿಲವಿಲ ಒದ್ದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸಜ್ಜನರು ಮೌನ ಮುರಿದು ಘರ್ಜಿಸಬೇಕಿದೆ’ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಎಂ.ಮದನಗೋಪಾಲ್ ಹಾಗೂ ಆಂಧ್ರಪ್ರದೇಶದ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿ ತೇಜಸ್ವಿ ಕಟ್ಟಿಮನಿ ವೇದಿಕೆಯಲ್ಲಿದ್ದರು.

‘ಡ್ರಗ್ಸ್ ಪಾರ್ಟಿಯಲ್ಲಿ ರೂಪದರ್ಶಿಗಳು’

ಬೆಂಗಳೂರು: ಟ್ರಿನಿಟಿ ವೃತ್ತ ಬಳಿಯ ‘ದಿ ಪಾರ್ಕ್’ ಪಂಚತಾರಾ ಹೋಟೆಲ್‌ನಲ್ಲಿ ಇತ್ತೀಚೆಗೆ ನಡೆದಿದ್ದ ಡ್ರಗ್ಸ್ ಪಾರ್ಟಿಯಲ್ಲಿ ಅಂತರ ರಾಷ್ಟ್ರೀಯ ರೂಪದರ್ಶಿಗಳು ಪಾಲ್ಗೊಂಡಿದ್ದ ಸಂಗತಿ ಹಲಸೂರು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಪಾರ್ಟಿಯಲ್ಲಿ ಡ್ರಗ್ಸ್ ಸೇವಿಸಿದ್ದ ಆರೋಪದಡಿ ಬಾಲಿವುಡ್ ನಟ ಶಕ್ತಿಕಪೂರ್ ಅವರ ಮಗ ಸಿದ್ಧಾಂತ್, ಮೈಂಡ್ ಫೈರ್ ಸಲ್ಯೂಷನ್ಸ್ ಕಂಪನಿಯ ವ್ಯವಹಾರ ವ್ಯವಸ್ಥಾಪಕ ಅಖಿಲ್ ಸೋನಿ (28), ನವೋದ್ಯಮವೊಂದರ ಕಾರ್ಯಾಚರಣೆ ಮುಖ್ಯಸ್ಥ ಸಾಫ್ಟ್‌ವೇರ್ ಎಂಜಿನಿಯರ್ ಹರ್ಜೋತ್ ಸಿಂಗ್ (28), ಡಿಜಿಟಲ್ ಮಾರ್ಕೆಟಿಂಗ್ ಪ್ರತಿನಿಧಿ ಹನಿ (25) ಹಾಗೂ ಛಾಯಾಗ್ರಾಹಕ ಅಖಿಲ್ (23) ಅವರನ್ನು ಪೊಲೀಸರು ಬಂಧಿಸಿದ್ದರು.

ಬಂಧಿತರ ವಿಚಾರಣೆ ನಡೆಸಿದ್ದ ಪೊಲೀಸರು, ಪಾರ್ಟಿಯಲ್ಲಿ ಪಾಲ್ಗೊಂಡಿದ್ದವರ ಬಗ್ಗೆ ಮಾಹಿತಿ ಸಂಗ್ರಹಿಸಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದ ಕೆಲ ರೂಪದರ್ಶಿಗಳು, ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು. ದಾಳಿ ಆಗುತ್ತಿದ್ದಂತೆ ಅವರೆಲ್ಲ ಪರಾರಿಯಾಗಿರುವುದಾಗಿ ಆರೋಪಿಗಳು ಬಾಯ್ಬಿಟ್ಟಿದ್ದಾರೆ.

ಹಲವೆಡೆ ದಾಳಿ: ಬಂಧಿತರು ನೀಡಿದ್ದ ಮಾಹಿತಿ ಆಧರಿಸಿ ಪೂರ್ವ ವಿಭಾಗದ ಪೊಲೀಸರು ನಗರದ ಹಲವೆಡೆ ಶನಿವಾರ ಬೆಳಿಗ್ಗೆ ದಾಳಿ ಮಾಡಿದರು.

‘ಮನೆ ಹಾಗೂ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟ್‌ಗಳ ಮೇಲೆ ದಾಳಿ ಮಾಡಲಾಯಿತು. ವಿದೇಶದ 29 ಪ್ರಜೆಗಳನ್ನು ವಶಕ್ಕೆ ಪಡೆದು ವಿಚಾರಿಸಲಾಯಿತು. ಮೂವರು ಪ್ರಜೆಗಳ ವೀಸಾ ಅವಧಿ ಮುಗಿದಿದ್ದು, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ’ ಎಂದು ಡಿಸಿಪಿ ಭೀಮಾಶಂಕರ್ ಗುಳೇದ ಹೇಳಿದರು.

‘ಡ್ರಗ್ಸ್ ಪಾರ್ಟಿಯಲ್ಲಿ ಅಂತರ ರಾಷ್ಟ್ರೀಯ ರೂಪದರ್ಶಿಗಳು ಪಾಲ್ಗೊಂಡಿದ್ದ ಮಾಹಿತಿ ಆಧರಿಸಿ ಈ ದಾಳಿ ಮಾಡಲಾಯಿತು. ಕೆಲ ಪುರಾವೆಗಳನ್ನು ಸಂಗ್ರಹಿಸಿ ತನಿಖೆ ಮುಂದುವರಿಸಲಾಗಿದೆ’ ಎಂದೂ ಅವರು ತಿಳಿಸಿದರು.

ಕೆಯುಡಬ್ಲ್ಯುಜೆ: ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು (ಕೆಯುಡಬ್ಲ್ಯುಜೆ) ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಸಲು ನಿರ್ಧರಿಸಿದೆ.

ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ 80ಕ್ಕಿಂತ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ತಾಲ್ಲೂಕು ಮತ್ತು ಜಿಲ್ಲಾಮಟ್ಟದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.

ರಾಜ್ಯ ಮಟ್ಟದಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಪಡೆದ ಪತ್ರಕರ್ತರ ಸಂಘದ ಸದಸ್ಯರ ಮಕ್ಕಳನ್ನು ಪುರಸ್ಕರಿಸಲಾಗುತ್ತದೆ. ಈ ಸಂಬಂಧ ಅಂಕಪಟ್ಟಿಯ ಪ್ರತಿಯನ್ನು ಜೂನ್ ಅಂತ್ಯದೊಳಗೆ ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, 3ನೇ ಮಹಡಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-09 ಈ ವಿಳಾಸಕ್ಕೆ ಕಳುಹಿಸಬೇಕು.

'ಕಾನೂನು ಸೇವೆಗಳ ಚಟುವಟಿಕೆ’ ವಲಯಮಟ್ಟದ ಕಾರ್ಯಾಗಾರ

ಸಂತ್ರಸ್ತರಿಗೆ ಕಾನೂನು ನೆರವು ನೀಡಲು ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅತ್ಯಾಚಾರ, ಗಲಾಟೆ, ಗಲಭೆಗಳಲ್ಲಿ ನೊಂದ ಸಂತ್ರಸ್ತರಿಗೆ ಹಾಗೂ ಬಡವರಿಗೆ ಉಚಿತ ಕಾನೂನು ಅರಿವಿನ ನೆರವು ನೀಡಲು ಕಾನೂನು ಕಾಲೇಜುಗಳು ಮುಂದೆ ಬರಬೇಕು’ ಎಂದು ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರೂ ಆದ ಹೈಕೋರ್ಟ್ ನ್ಯಾಯಮೂರ್ತಿ ಬಿ.ವೀರಪ್ಪ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ, ವಿಶ್ವವಿದ್ಯಾಲಯ ಕಾನೂನು ಕಾಲೇಜು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ ಬೆಂಗಳೂರು ವಿಶ್ವವಿದ್ಯಾಲಯದ ಎಚ್ಚೆನ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಒಂದು ದಿನದ 'ಕಾನೂನು ಸೇವೆಗಳ ಚಟುವಟಿಕೆ’ಯ ವಲಯ ಮಟ್ಟದ ಕಾರ್ಯಾಗಾರವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಉಚಿತ ಕಾನೂನು ಅರಿವು-ನೆರವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ನ್ಯಾಯಾಧೀಶರು, ವಕೀಲರು, ಕಾನೂನು ಕಾಲೇಜುಗಳ ಪ್ರಾಧ್ಯಾಪಕರು ಹಾಗೂ ಕಾನೂನು ವಿದ್ಯಾರ್ಥಿಗಳ ಪಾತ್ರ ಬಹಳ ಪ್ರಮುಖವಾದದ್ದು’ ಎಂದರು.

‘ಇತ್ತೀಚೆಗೆ ಯುವತಿಯೊಬ್ಬರ ಮೇಲೆ ಆ್ಯಸಿಡ್ ಎರಚಿದ ಘಟನೆಯಲ್ಲಿ ಸಂತ್ರಸ್ತೆಗೆ ₹ 4 ಲಕ್ಷ ಪರಿಹಾರವನ್ನು ತಾತ್ಕಾಲಿಕ ಹಣವಾಗಿ ಬಿಡುಗಡೆ ಮಾಡುವಲ್ಲಿ ಕಾನೂನು ಸೇವಾ ಪ್ರಾಧಿಕಾರದ ಪ್ರಮುಖ ಪಾತ್ರ ವಹಿಸಿದೆ. ಮಹಿಳೆಯರು ಯಾವುದೇ ಸಂಕೋಚವಿಲ್ಲದೆ ಆಯಾ ತಾಲ್ಲೂಕು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳಿಗೆ ಭೇಟಿ ನೀಡಿ ಉಚಿತ ಕಾನೂನು ನೆರವು ಪಡೆದುಕೊಳ್ಳಬೇಕು. ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಎನ್‌ಸಿಸಿಗಳನ್ನು ಬಳಸಿಕೊಂಡು ಕಾನೂನು ಅರಿವು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು’ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ಎಚ್. ಶಶಿಧರ್ ಶೆಟ್ಟಿ, ವಿಜ್ಞೇಶ್ ಕುಮಾರ್ ಹಾಗೂ ಕಾನೂನು ಸೇವಾ ಪ್ರಾಧಿಕಾರದ ಸದಸ್ಯರು, ಹೈಕೋರ್ಟ್ ವಕೀಲರಾದ ಶ್ರೀಧರ್ ಪ್ರಭು ಅವರು; ಕಾನೂನು ಸೇವಾ ಪ್ರಾಧಿಕಾರ ಕಾಯ್ದೆ ಹಾಗೂ ಅದರ ಗುರಿ–ಉದ್ದೇಶಗಳು, ಕಾನೂನು ಕಾಲೇಜುಗಳಲ್ಲಿ ಕಾನೂನು ಸೇವಾ ಕೇಂದ್ರಗಳ ಸ್ಥಾಪನೆ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ಕಾನೂನು ಶಿಬಿರಗಳ ಆಯೋಜನೆ ಕುರಿತಂತೆ ಉಪನ್ಯಾಸ ನೀಡಿದರು. ಸುರೇಶ್ ವಿ. ನಾಡಗೌಡರ ಅಧ್ಯಕ್ಷತೆ ವಹಿಸಿದ್ದರು. ವಿವಿಧ ಕಾನೂನು ಕಾಲೇಜುಗಳ ಮುನ್ನೂರಕ್ಕೂ ಹೆಚ್ಚು ಉಪನ್ಯಾಸಕರು, ಕಾನೂನು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

'ಕಾನೂನು ಸೇವೆಗಳ ಚಟುವಟಿಕೆ’ಯ ವಲಯ ಮಟ್ಟದ ಕಾರ್ಯಾಗಾರದಲ್ಲಿ ನ್ಯಾಯಮೂರ್ತಿ ಬಿ.ವೀರಪ್ಪ (ಎಡದಿಂದ ನಾಲ್ಕನೆಯವರು), ಕಾನೂನು ವಿದ್ಯಾರ್ಥಿಗಳು ನಡೆಸಿದ್ದ ಕೊಳೆಗೇರಿ ವಾಸಿಗಳ ಸಮೀಕ್ಷಾ ವರದಿ ಬಿಡುಗಡೆ ಮಾಡಿದರು. ಪ್ರಾಧ್ಯಾಪಕ ಎನ್‌. ಸತೀಶ್ ಗೌಡ (ಎಡದಿಂದ), ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರಗಳ ಸದಸ್ಯ ಕಾರ್ಯದರ್ಶಿ ಎಚ್‌. ಶಶಿಧರ ಶೆಟ್ಟಿ, ಬೆಂಗಳೂರು ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಸಿಂಥಿಯಾ ಮಿನೇಸ್‌, ಡೀನ್ ಸುರೇಶ್ ವಿ. ನಾಡಗೌಡ ಮತ್ತು ನಿವೃತ್ತ ಪ್ರಾಂಶುಪಾಲ ವಿ. ಸುದೇಶ್ ಇದ್ದರು.

‘ನೀವು ಮೌನಿ ಬಾಬಾ ಆಗಿದ್ದು ಏಕೆ’

ಪ್ರಧಾನಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರದ ಭ್ರಷ್ಟಾಚಾರಗಳ ಬಗ್ಗೆ ನೀವು ಮೌನಿ ಬಾಬಾ ಆಗಿದ್ದು ಯಾಕೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಉದ್ದೇಶಿಸಿ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಪ್ರಶ್ನಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ಮಾಜಿ ಮೇಯರ್‌ಗಳ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಬಿಎಂಪಿ ಚುನಾವಣೆ ಹಾಗೂ ವಿಧಾನ ಸಭೆ ಚುನಾವಣೆ ಸಮೀಪಿಸುತ್ತಿರುವ ಹೊತ್ತಲ್ಲಿ ಎರಡು ದಿನಗಳ ರಾಜ್ಯ ಪ್ರವಾಸ ಹಮ್ಮಿಕೊಂಡಿರುವ ಪ್ರಧಾನಿಯನ್ನು ಉದ್ದೇಶಿಸಿ ಹಲವು ಪ್ರಶ್ನೆಗಳನ್ನು ಕೇಳಿದರು.



ರಾಮಲಿಂಗಾ ರೆಡ್ಡಿ

‘ಪಿಎಸ್‌ಐ, ಸಹಾಯಕ ಪ್ರಾಧ್ಯಾಪಕರು, ಅರೋಗ್ಯ ಇಲಾಖೆ ಸೇರಿದಂತೆ ಎಲ್ಲ ಇಲಾಖೆಗಳ ನೇಮಕಾತಿಯಲ್ಲಿ ಅಕ್ರಮ ತಾಂಡವವಾಡುತ್ತಿದೆ. ಆದರೂ ಸಿಬಿಐ, ಇ.ಡಿ, ಆದಾಯ ತೆರಿಗೆ ಇಲಾಖೆಗಳಿಂದ ತನಿಖೆ ಯಾಕಿಲ್ಲ' ಎಂದೂ ಆಕ್ರೋಶ ವ್ಯಕ್ತಪಡಿಸಿದರು.

‘ರೈತರ ಆದಾಯ ಇಮ್ಮಡಿ ಆಗುವ ಬದಲು ರಸಗೊಬ್ಬರ, ಯಂತ್ರೋಪಕರಣಗಳ ಬಳಕೆ ವೆಚ್ಚ ಇಮ್ಮಡಿ ಆಗಿರುವ ಬಗ್ಗೆ ಏನು ಹೇಳುತ್ತೀರಿ? ರಾಜ್ಯದಲ್ಲಿ ಹಿಜಾಬ್, ಆಜಾನ್, ಹಲಾಲ್, ಆರ್ಥಿಕ ಜಿಹಾದ್ ಹೆಸರಿನಲ್ಲಿ ಅಲ್ಪಸಂಖ್ಯಾತರ ಮೇಲೆ ಸಂಘ ಪರಿವಾರದವರೇ ಕೋಮು ದೌರ್ಜನ್ಯ ನಡೆಸುತ್ತಿದ್ದು, ಈ ವಿಚಾರದಲ್ಲಿ ನಿಮ್ಮ ನಿಲುವೇನು’ ಎಂದು ಪ್ರಶ್ನಿಸಿದರು.

‘ಆಮ್ಲಜನಕ ಕೊರತೆಯಿಂದ ಯಾರೂ ಸತ್ತೇ ಇಲ್ಲ ಎಂದು ಸುಳ್ಳು ವರದಿ ಕೊಟ್ಟ ಸರ್ಕಾರದ ವಿರುದ್ಧ ಕ್ರಮ ಇಲ್ಲ ಯಾಕೆ? ರಾಜ್ಯದಲ್ಲಿ 4 ಲಕ್ಷಕ್ಕೂ ಹೆಚ್ಚು ಮಂದಿ ಕೋವಿಡ್‌ಗೆ ಬಲಿಯಾಗಿದ್ದರೂ 40 ಸಾವಿರ ಎಂದು ಲೆಕ್ಕ ತೋರಿಸಿದ್ದು ಯಾಕೆ? ಕಾಂಗ್ರೆಸ್ ಪ್ರತಿಭಟನೆಯಿಂದ ಕೋವಿಡ್ ಸೋಂಕು ಹರಡುತ್ತದೆ ಎಂದು ಸಚಿವ ಸುಧಾಕರ್ ಹೇಳುತ್ತಿದ್ದಾರೆ. ಕೊಮ್ಮಘಟ್ಟದಲ್ಲಿ 50 ಸಾವಿರ ಜನರನ್ನು ಸೇರಿಸಿ ಸಾರ್ವಜನಿಕ ಸಭೆ ಮಾಡುತ್ತಿದ್ದೀರಿ, 12 ಸಾವಿರಕ್ಕೂ ಹೆಚ್ಚು ಜನರ ಜತೆ ಮೈಸೂರಿನಲ್ಲಿ ಯೋಗ ಮಾಡಲಿದ್ದೀರಿ. ನಿಮ್ಮ ಈ ಕಾರ್ಯಕ್ರಮಗಳಿಂದ ಕೋವಿಡ್ ಹರಡುವುದಿಲ್ಲವೇ’ ಎಂದು ಕೇಳಿದರು.

‘ಮೇಕೆದಾಟು ಹಾಗೂ ಮಹದಾಯಿ ಯೋಜನೆಗೆ ಯಾವಾಗ ಅನುಮತಿ ಕೊಡಿಸುವಿರಿ? ಪರಿಷ್ಕೃತ ಪಠ್ಯದ ವಿಚಾರದಲ್ಲಿ ನಿಮ್ಮ ನಿಲುವು ಏನು? ರಾಜ್ಯಕ್ಕೆ ಜಿಎಸ್‌ಟಿ ಪಾಲು ನೀಡದೆ ಸಾಲ ನೀಡಿ, ಕನ್ನಡಿಗರನ್ನು ಸಾಲಗಾರರನ್ನಾಗಿ ಮಾಡುತ್ತಿರುವುದೇಕೆ? ಬೆಂಗಳೂರು ಅಭಿವೃದ್ಧಿ ಎಂದರೆ ಕೇವಲ ಬಿಜೆಪಿ ಶಾಸಕರಿರುವ ಕ್ಷೇತ್ರಗಳ ಅಭಿವೃದ್ಧಿಯೇ? ಈ ರಾಜಕೀಯ ತಾರತಮ್ಯ ಎಷ್ಟು ಸರಿ’ ಎಂದು ಕಿಡಿಕಾರಿದರು.

ಬರವಣಿಗೆ ಮೂಲಕ ಜೀವನದ ಸಾರ್ಥಕತೆ: ಬಾಬು ಕೃಷ್ಣಮೂರ್ತಿ

ಪ್ರಜಾವಾಣಿ ವಾರ್ತೆ

ಮನೆಯಂಗಳದಲ್ಲಿ ಮಾತುಕತೆ

ಬೆಂಗಳೂರು: ಇಲ್ಲಿನ ಕನ್ನಡ ಭವನದ ನಯನ ಸಭಾಂಗಣದಲ್ಲಿ ಶನಿವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮ – 223 ನಡೆಯಿತು.

ತಿಂಗಳ ಅತಿಥಿಯಾಗಿ ಪಾಲ್ಗೊಂಡಿದ್ದ ಸಾಹಿತಿ ಬಾಬು ಕೃಷ್ಣಮೂರ್ತಿ ಅವರು, ‘ಕಾದಂಬರಿಗಳನ್ನು ದಾಖಲೆ ಸಹಿತ ಬರೆದಾಗ ಮಾತ್ರ ಹೆಚ್ಚಿನ ಓದುಗರನ್ನು ತಲುಪಲು ಸಾಧ್ಯವಿದೆ’ ಎಂದರು.

‘ಸ್ವಾತಂತ್ರ್ಯ ಹೋರಾಟ, ಹೋರಾಟಗಾರರ ಕೊಡುಗೆಯ ಬಗ್ಗೆ ಬರೆಯಲು ನನ್ನ ಲೇಖನಿಯನ್ನು ಮೀಸಲಿಟ್ಟಿರುವೆ’ ಎಂದರು.

‘ಸ್ವಾತಂತ್ರ್ಯವೀರ ಚಂದ್ರಶೇಖರ್ ಆಜಾದ್ ಅವರ ಕುರಿತು ಸತತ ಹಲವು ವರ್ಷಗಳ ಸಂಶೋಧನೆ ನಡೆಸಿ ರಚಿಸಿದ ಕೃತಿಯೇ 'ಅಜೇಯ'. ಇದರ ಮುಕ್ತಾಯ ಬರೆಯುವ ವೇಳೆ ಸಾಕಷ್ಟು ಸಂಕಟಕ್ಕೆ ಒಳಗಾಗಿದ್ದೆ’ ಎಂದು ನುಡಿದರು.



‘ಮನೆಯಂಗಳದಲ್ಲಿ ಮಾತುಕತೆ’ ಕಾರ್ಯಕ್ರಮದಲ್ಲಿ ಸಾಹಿತಿ ಡಾ.ಬಾಬು ಕೃಷ್ಣಮೂರ್ತಿ ಮಾತನಾಡಿದರು

‘ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದ ಅಜ್ಞಾತ ವೀರರ ಜೀವನ, ಬಲಿದಾನಗಳ ವಿವರವಾದ ಚಿತ್ರಣ ಕಟ್ಟಿಕೊಡುವ ಪ್ರಯತ್ನ ಮಾಡಿರುವೆ’ ಎಂದು ಹೇಳಿದರು.

‘ರಕ್ತಪಾತದ ಕಾದಂಬರಿಗಳು ಮನಸ್ಸಿಗೆ ತುಂಬ ಕಸಿವಿಸಿ ಉಂಟು ಮಾಡಲಿವೆ. ಅದೇ ವಿಶೇಷವಾದ ಕಾದಂಬರಿಗಳು ಅನುಭೂತಿ ನೀಡಲಿವೆ. ಬರವಣಿಗೆ ಮೂಲಕ ಜೀವನದ ಸಾರ್ಥಕತೆ ಕಂಡುಕೊಂಡಿದ್ದೇನೆ’ ಎಂದರು.

‘ಜೈಮಿನಿ ಭಾರತ, ರಾಮಾಯಣದಂತಹ ಶಾಸ್ತ್ರೀಯ ಕೃತಿಗಳನ್ನು ಓದಲು ನನಗೆ ಸಾಧ್ಯವಾಗಲಿಲ್ಲ. ಆದರೆ, ಅಧ್ಯಾಪನ ಮಾಡಿದವರಿಂದ ತಿಳಿದಿದ್ದೇನೆ. ನಮ್ಮ ತಂದೆಯವರೂ ಸಾಕಷ್ಟು ಅಧ್ಯಯನ ಮಾಡಿದ್ದರು. ಹೀಗಾಗಿ, ನನ್ನಲ್ಲಿ ಪ್ರಾಚೀನ ಸಾಹಿತ್ಯ, ಸಂಸ್ಕೃತಿ, ನಮ್ಮ ಧರ್ಮದ ಬಗ್ಗೆ ಶ್ರದ್ಧೆ, ಆಸಕ್ತಿ ಮೂಡಿಸುವಲ್ಲಿ ನಮ್ಮ ತಂದೆ ಅವರ ಕೊಡುಗೆ ಸಾಕಷ್ಟಿದೆ’ ಎಂದರು.

ವಿಮರ್ಶಕ ಡಾ. ಜಿ.ಬಿ. ಹರೀಶ ಸಂವಾದ ನಡೆಸಿಕೊಟ್ಟರು.

ಎಸ್‌ಬಿಐ ಗೃಹಸಾಲ ಮೇಳಕ್ಕೆ ಚಾಲನೆ

ಬೆಂಗಳೂರು: ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ನಗರದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಗೃಹ ಸಾಲ ಮೇಳಕ್ಕೆ ಶನಿವಾರ ಚಾಲನೆ ದೊರೆತಿದೆ.

ನಗರದ ಸೆಂಟ್ ಮಾರ್ಕ್ಸ್ ರಸ್ತೆಯಲ್ಲಿ ಇರುವ ಬ್ಯಾಂಕ್‌ನ ಸ್ಥಳೀಯ ಪ್ರಧಾನ ಕಚೇರಿಯ ಆವರಣದಲ್ಲಿ ಈ ಮೇಳ ಆರಂಭವಾಗಿದ್ದು, 35ಕ್ಕೂ ಹೆಚ್ಚಿನ ಕಟ್ಟಡ ನಿರ್ಮಾಣ ಸಂಸ್ಥೆಗಳು ಈ ಮೇಳದಲ್ಲಿ ಭಾಗವಹಿಸಿವೆ. ಮೇಳದಲ್ಲಿ ಗೃಹಸಾಲ ಪಡೆಯುವವರಿಗೆ ಶೇ 0.10ರಷ್ಟು ಕಡಿಮೆ ಬಡ್ಡಿದರದಲ್ಲಿ ಗೃಹ ಸಾಲ ಸಿಗಲಿದ್ದು, ಪ್ರೊಸೆಸಿಂಗ್ ಶುಲ್ಕವೂ ಇರುವುದಿಲ್ಲ ಎಂದು ಬ್ಯಾಂಕ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ಗ್ರಾಹಕರು ತಮಗೆ ಇಷ್ಟವಾಗುವ ವಸತಿ ನಿವೇಶನ, ಮನೆ ಆಯ್ಕೆ ಮಾಡಿಕೊಳ್ಳಲು ಇದು ಉತ್ತಮ ಅವಕಾಶ. ಆದಾಯಕ್ಕೆ ಅನುಗುಣವಾಗಿ ಸಾಲ ಪಡೆಯಲು ಇಲ್ಲಿ ಮಾರ್ಗದರ್ಶನ ಪಡೆಯಬಹುದು ಎಂದು ಹೇಳಿದ್ದಾರೆ.

‘ಗಾಂಧಿ ತತ್ವ ಯುವಪೀಳಿಗೆಗೆ ತಲುಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಾಪ ಪ್ರಜ್ಞೆ ಮನುಷ್ಯನ ತಪ್ಪು ತಿದ್ದಿಕೊಳ್ಳಲು ಎಷ್ಟು ಮುಖ್ಯವಾಗುತ್ತದೆ ಎಂಬುದನ್ನು ನಾವು ಗಾಂಧೀಜಿ ಅವರ ಬದುಕಿನಿಂದ ಕಲಿಯಬಹುದು. ಅದನ್ನು ‘ಗುಡಿಗಂಟೆ-ಇತರ ಕತೆಗಳು’ ಪುಸ್ತಕದಲ್ಲಿ ಜಾನಕಿರಾಮನ್ ಅವರು ಸಮರ್ಪಕವಾಗಿ ಕಟ್ಟಿಕೊಟ್ಟಿದ್ದಾರೆ’ ಎಂದು ಸಾಹಿತಿ ಪಾವಣ್ಣನ್ ಹೇಳಿದರು.

ತಮಿಳುನಾಡು ಪಠ್ಯಪುಸ್ತಕ ಮತ್ತು ಶೈಕ್ಷಣಿಕ ಸೇವಾ ನಿಗಮ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಆಯೋಜಿಸಿದ್ದ ಕೆ.ನಲ್ಲತಂಬಿ ಅವರು ತಮಿಳಿನಿಂದ ಕನ್ನಡಕ್ಕೆ ಅನುವಾದಿಸಿರುವ ‘ಮತ್ತೊಂದು ರಾತ್ರಿ’, ‘ಬಾಪು ಹೆಜ್ಜೆಗಳಲ್ಲಿ’, ‘ಗುಡಿಗಂಟೆ–ಇತರೆ ಕತೆಗಳು’ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಪಾಪಪ್ರಜ್ಞೆ ಎಂಬುದು ಮನುಷ್ಯನನ್ನು ಕೊನೆ ತನಕ ಕಾಡುತ್ತದೆ. ಆ ಪ್ರಜ್ಞೆ ಗಾಂಧೀಜಿ ಅವರಲ್ಲಿ ಮನೆ ಮಾಡಿದ್ದರಿಂದ ಜೀವಮಾನವಿಡೀ ಅದನ್ನು ತಿದ್ದಿಕೊಂಡೇ ಮುನ್ನಡೆದರು’ ಎಂದರು.

ಸಾಹಿತಿ ಜಿ. ರಾಮಕೃಷ್ಣ ಮಾತನಾಡಿ, ‘ಸ್ವಾತಂತ್ರ್ಯಪೂರ್ವ ಆಲೋಚನೆಗಳಿಂದ ಹೊರಬಂದು ಸಂವಿಧಾನಬದ್ಧವಾಗಿ ನಡೆದುಕೊಳ್ಳಬೇಕಾದ ತುರ್ತು ಇಂದು ಅಗತ್ಯವಿದೆ’ ಎಂದು ಅಭಿಪ್ರಾಯಪಟ್ಟರು.

‘ಅನ್ಯಾಯಗಳು ಕಣ್ಮುಂದೆ ನಡೆಯುತ್ತಿದ್ದರೂ ಅದರ ವಿರುದ್ಧ ಗಟ್ಟಿ ಧ್ವನಿ ಎತ್ತಲು ಸಾಧ್ಯವಾಗದ ಸ್ಥಿತಿ ಉದ್ಭವವಾಗಿದೆ. ಇಂತಹ ಸಂದರ್ಭದಲ್ಲಿ ಗಾಂಧೀಜಿ ಅವರು ಪ್ರಸ್ತುತರಾಗುತ್ತಾರೆ. ಗಾಂಧೀಜಿ ಬದುಕನ್ನು ಯುವ ಪೀಳಿಗೆಗೆ ತಲುಪಿಸುವ ಅಗತ್ಯವೂ ಇದೆ’ ಎಂದರು.

ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರು ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಸಾಹಿತಿಗಳಾದ ಪಾವಣ್ಣನ್, ಜಿ.ರಾಮಕೃಷ್ಣ, ಕೆ.ನಲ್ಲತಂಬಿ, ಕೆ.ಪಿ.ಸುರೇಶ್ ಇದ್ದರು —ಪ್ರಜಾವಾಣಿ ಚಿತ್ರ

ಪುಸ್ತಕಗಳ ವಿವರ

- **ಪುಸ್ತಕ:** ಮತ್ತೊಂದು ರಾತ್ರಿ...
  ಮೂಲ: ವಿವಿಧ ಲೇಖಕರು
  ಅನುವಾದ: ಕೆ. ನಲ್ಲತಂಬಿ
  ಪ್ರಕಾಶಕರು: ಅಭಿರುಚಿ ಪ್ರಕಾಶನ
  ಪುಟಗಳು: 200
  ದರ: ₹140
- **ಪುಸ್ತಕ:** ಬಾಪೂ ಹೆಜ್ಜೆಗಳಲ್ಲಿ
  ಲೇಖಕ: ಪಾವಣ್ಣನ್
  ಅನುವಾದ: ಕೆ. ನಲ್ಲತಂಬಿ
  ಪ್ರಕಾಶಕರು: ಪಲ್ಲವ ಪ್ರಕಾಶನ
  ಪುಟಗಳು: 180
  ದರ: ₹180
- **ಪುಸ್ತಕ:** ಗುಡಿಗಂಟೆ–ಇತರೆ ಕತೆಗಳು
  ಲೇಖಕ: ಜಾನಕಿರಾಮನ್
  ಅನುವಾದ: ಕೆ. ನಲ್ಲತಂಬಿ
  ಪ್ರಕಾಶಕರು: ಲಡಾಯಿ ಪ್ರಕಾಶನ
  ಪುಟಗಳು: 250
  ದರ: ₹180

ಸಂಕ್ಷಿಪ್ತ ಸುದ್ದಿ

ಆಯ್ದ ಮಾರ್ಗಗಳ ಕಾಲೇಜುಗಳಿಗೆ ನಾಳೆ ರಜೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಇದೇ 20ರಂದು ನಗರಕ್ಕೆ ಬರುತ್ತಿದ್ದು, ಬಿಗಿ ಭದ್ರತೆ ದೃಷ್ಟಿಯಿಂದ ಅವರು ಸಂಚರಿಸಲಿರುವ ಮಾರ್ಗದ ವ್ಯಾಪ್ತಿಯಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

‘ಪ್ರಧಾನಿ ಹಾದು ಹೋಗಲಿರುವ ಐಐಎಸ್‌ಸಿ, ಗೊರಗುಂಟೆ ಪಾಳ್ಯ, ಸಿಎಂಟಿಐ, ವರ್ತುಲ ರಸ್ತೆ, ಡಾ.ರಾಜಕುಮಾರ್ ಸ್ಮಾರಕ ಮೇಲ್ಸೇತುವೆ, ಲಗ್ಗೆರೆ ಸೇತುವೆ, ನಾಯಂಡಹಳ್ಳಿ, ಮೈಸೂರು ರಸ್ತೆ ಆರ್‌.ವಿ. ಕಾಲೇಜು, ನಾಗರಬಾವಿ, ಸುಮನಹಳ್ಳಿ ಮೇಲ್ಸೇತುವೆ, ಎಂಇಐ ಜಂಕ್ಷನ್, ಗೋವರ್ಧನ್ ಚಿತ್ರಮಂದಿರ, ಯಶವಂತಪುರ ಮತ್ತು ಜಕ್ಕೂರು ವಿಮಾನ ನಿಲ್ದಾಣ ಮಾರ್ಗಗಳ ಸುತ್ತಮುತ್ತಲಿನ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಈ ರಜೆ ಅನ್ವಯವಾಗಲಿದೆ’ ಎಂದು ಅವರು ತಿಳಿಸಿದ್ದಾರೆ.

‘777 ಚಾರ್ಲಿ’ಗೆ ಎಸ್‌ಜಿಎಸ್‌ಟಿ ವಿನಾಯಿತಿ

ಬೆಂಗಳೂರು: ರಕ್ಷಿತ್ ಶೆಟ್ಟಿ ಅಭಿನಯದ ಕನ್ನಡ ಸಿನಿಮಾ ‘777 ಚಾರ್ಲಿ’ಗೆ ರಾಜ್ಯ ಸರಕು ಮತ್ತು ಸೇವಾ ತೆರಿಗೆಯಿಂದ (ಎಸ್‌ಜಿಎಸ್‌ಟಿ) ವಿನಾಯಿತಿ ನೀಡಿ ರಾಜ್ಯ ಸರ್ಕಾರ ಶನಿವಾರ ಆದೇಶ ಹೊರಡಿಸಿದೆ.

ಜೂನ್ 19ರಿಂದ ಆರು ತಿಂಗಳವರೆಗೆ ‘777 ಚಾರ್ಲಿ’ಗೆ ಕೆಲ ಷರತ್ತುಗಳೊಂದಿಗೆ ಎಸ್‌ಜಿಎಸ್‌ಟಿ ವಿನಾಯಿತಿ ನೀಡಲಾಗುವುದು ಎಂದು ಆರ್ಥಿಕ ಇಲಾಖೆಯ ಆದೇಶದಲ್ಲಿ ತಿಳಿಸಲಾಗಿದೆ.

ಪ್ರದರ್ಶಕರು ಚಾರ್ಲಿ ಸಿನಿಮಾ ಟಿಕೆಟ್‌ಗೆ ರಾಜ್ಯ ಸರಕು ಮತ್ತು ಸೇವಾ ತೆರಿಗೆ ವಿಧಿಸಬಾರದು. ಜೂನ್ 19 ರಿಂದ ಎಸ್‌ಜಿಎಸ್‌ಟಿ ಒಳಗೊಳ್ಳದ ಹೊಸ ದರ ಮುದ್ರಿಸಿರುವ ಟಿಕೆಟ್ ಮಾರಾಟ ಮಾಡಬೇಕು ಎಂದು ಸೂಚಿಸಲಾಗಿದೆ.

ಸಿನಿಮಾದ ನಿರ್ಮಾಪಕರೂ ಆಗಿರುವ ರಕ್ಷಿತ್ ಶೆಟ್ಟಿ, ಚಿತ್ರ ಪ್ರದರ್ಶನಕ್ಕೆ ಶೇ 100ರ ತೆರಿಗೆ ವಿನಾಯಿತಿ ಕೋರಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಮನವಿ ಸಲ್ಲಿಸಿದ್ದರು. ‘ಇನ್‌ಬ್ರೀಡಿಂಗ್‌ನಿಂದಾಗಿ ಶ್ವಾನಗಳ ಸ್ವಾಸ್ಥ್ಯದ ಮೇಲಾಗುವ ಪರಿಣಾಮದ ಬಗ್ಗೆ ಸಿನಿಮಾದಲ್ಲಿ ಜಾಗೃತಿ ಮೂಡಿಸಲಾಗಿದ್ದು, ಬೀದಿ ನಾಯಿಗಳನ್ನು ದತ್ತು ಪಡೆಯುವ ಸಂದೇಶ ಸಾರಲಾಗಿದೆ. ಪ್ರಾಣಿ ಹಿಂಸೆಯ ಸೂಕ್ಷ್ಮವನ್ನೂ ಎತ್ತಿಹಿಡಿಯಲಾಗಿದೆ’ ಎಂದು ಮನವಿಯಲ್ಲಿ ಅವರು ಉಲ್ಲೇಖಿಸಿದ್ದರು.

‘ಈ ಸಿನಿಮಾಕ್ಕೆ ತೆರಿಗೆ ವಿನಾಯಿತಿ ನೀಡಿದರೆ ಇನ್ನಷ್ಟು ಜನರಿಗೆ ಸಂದೇಶ ತಲುಪಿಸಲು ಸಹಕಾರಿಯಾಗಲಿದೆ’ ಎಂದು ಅಭಿಪ್ರಾಯಪಟ್ಟಿರುವ ಮುಖ್ಯಮಂತ್ರಿ, ಎಸ್‌ಜಿಎಸ್‌ಟಿ ನೀಡಿ ಆದೇಶ ಹೊರಡಿಸುವಂತೆ ಆರ್ಥಿಕ ಇಲಾಖೆಗೆ ಸೂಚಿಸಿದ್ದರು.

ಇತ್ತೀಚೆಗಷ್ಟೇ ಸಂಪುಟ ಸಹೋದ್ಯೋಗಿಗಳ ಜತೆ ‘777 ಚಾರ್ಲಿ’ ಸಿನಿಮಾವನ್ನು ಮುಖ್ಯಮಂತ್ರಿ ವೀಕ್ಷಿಸಿದ್ದರು.

ಕೆಂಪೇಗೌಡ ಪ್ರಶಸ್ತಿ: ಸಾಧಕರ ಆಯ್ಕೆಗೆ ತಜ್ಞರ ಸಮಿತಿ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಹಲವು ರಂಗಗಳ ಸಾಧಕರಿಗೆ ಅಂತರರಾಷ್ಟ್ರೀಯ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದ್ದು, ಅರ್ಹರನ್ನು ಆಯ್ಕೆ ಮಾಡಲು ಸರ್ಕಾರದ ನವೋದ್ಯಮ ವಿಷನ್ ಗ್ರೂಪ್ ಮುಖ್ಯಸ್ಥ ಪ್ರಶಾಂತ್ ಪ್ರಕಾಶ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಉದ್ಯಮಿ ಟಿ.ವಿ.ಮೋಹನದಾಸ್ ಪೈ, ವಿದ್ವಾಂಸ ಡಾ.ರಾಮಸ್ವಾಮಿ ಬಾಲಸುಬ್ರಹ್ಮಣ್ಯಂ, ನಿವೃತ್ತ ಐಎಎಸ್ ಅಧಿಕಾರಿ ಎಂ.ಕೆ. ಶಂಕರಲಿಂಗೇಗೌಡ ಅವರು ಈ ಆಯ್ಕೆ ಸಮಿತಿಯ ಸದಸ್ಯರಾಗಿದ್ದು, ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣಗಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ವಿನಯ ಅವರು ಸದಸ್ಯ ಕಾರ್ಯದರ್ಶಿ. ಕೆಂಪೇಗೌಡರ ಜಯಂತಿ ಇದೇ 27ರಂದು ನಡೆಯಲಿದ್ದು, ಅಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅವರು ಹೇಳಿದ್ದಾರೆ.

ನಗರದಲ್ಲಿ ಇಂದು

ಭರತನಾಟ್ಯ ರಂಗ ಪ್ರವೇಶ: ಅನನ್ಯಾ, ಗೌರವ ಅತಿಥಿಗಳು: ಎನ್.ಎಸ್. ಸುಶೀಲಾ, ಆನಂದ ಶಂಕರ್ ಜಯಂತ್, ರಾಧಾ ಶ್ರೀಧರ್, ನಿರ್ಮಲಾ ಎಲಿಗಾರ್, ಸಂಧ್ಯಾ ಶರ್ಮಾ, ಆಯೋಜನೆ: ನಿದಮ್, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಬೆಳಿಗ್ಗೆ 9

‘ಹಬ್ಬ ಮಾಡೂಣ ಬರ್ರಿ’ ಕಾರ್ಯಕ್ರಮ: ಉದ್ಘಾಟನೆ: ಶ್ರೀಕಾಂತ ವಾಲ್ಗದ, ಮುಖ್ಯ ಅತಿಥಿಗಳು: ಶಂಭು ಬಳಿಗಾರ, ಚಂದ್ರಗೌಡ ಕುಲಕರ್ಣಿ, ಆರ್. ಪಿ. ಮೋಹನ್, ಅಧ್ಯಕ್ಷತೆ: ರಾಜೇಂದ್ರ ಐಹೊಳೆ, ಸನ್ಮಾನ: ಮಂಜಮ್ಮ ಜೋಗತಿ, ಆಯೋಜನೆ: ಉತ್ತರ ಕರ್ನಾಟಕ ಬಳಗ ಬಿಇಎಲ್, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಜಾಲಹಳ್ಳಿ, ಬೆಳಿಗ್ಗೆ 9

ಮಂಜಮ್ಮ ಜೋಗತಿ

ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ನ್ಯಾ.ಎಸ್. ಅಬ್ದುಲ್ ನಜೀರ್, ಗೌರವ ಅತಿಥಿ: ನ್ಯಾ. ನಾಗೇಶ್ವರ ರಾವ್, ಅಧ್ಯಕ್ಷತೆ: ಎಸ್.ಸಿ. ಮೆಟ್ಗುಡ್, ಆಯೋಜನೆ ಹಾಗೂ ಸ್ಥಳ: ಕೆ.ಎಲ್.ಇ ಕಾನೂನು ಕಾಲೇಜು, ನಾಗರಬಾವಿ, ಬೆಳಿಗ್ಗೆ 9.30

ಡಿಎಸ್ ಮ್ಯಾಕ್ಸ್ ವಾರ್ಷಿಕೋತ್ಸವ: ‘ಡಿಎಸ್‌ಮ್ಯಾಕ್ಸ್ ಕರುನಾಡು ರತ್ನಶ್ರೀ ಪ್ರಶಸ್ತಿ’: ಎ.ಎಸ್.ಕಿರಣ್ ಕುಮಾರ್, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಭಾರತಿ ವಿಷ್ಣುವರ್ಧನ್, ಸಾಲುಮರದ ತಿಮ್ಮಕ್ಕ, ತುಳಸಿಗೌಡ, ಮಂಜಮ್ಮ ಜೋಗತಿ, ದೊಡ್ಡರಂಗೇಗೌಡ, ಮಾಲತಿ ಕೃಷ್ಣಮೂರ್ತಿ ಹೊಳ್ಳ, ಸಬಿತಾ ಮೋನಿಸ್, ‘ಡಿಎಸ್‌ಮ್ಯಾಕ್ಸ್ ಕಲಾಶ್ರೀ ಪ್ರಶಸ್ತಿ’: ನಾಗತಿಹಳ್ಳಿ ಚಂದ್ರಶೇಖರ್, ತಣಿಕಲ್ಲ ಭರಣಿ, ಮುಖ್ಯ ಅತಿಥಿಗಳು: ವಿ.ಸೋಮಣ್ಣ, ಡಿ.ಕೆ. ಶಿವಕುಮಾರ್, ಎಚ್.ಆರ್. ರಂಗನಾಥ್, ರಾಜು ಗೌಡ, ಉಪಸ್ಥಿತಿ: ಎಸ್.ಪಿ.ದಯಾನಂದ್, ಆಯೋಜನೆ: ಡಿಎಸ್‌ಮ್ಯಾಕ್ಸ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್, ಸ್ಥಳ: ಬೆಂಗಳೂರು ಅರಮನೆ, ಮಧ್ಯಾಹ್ನ 2.30

‘ವಹ್ನಿ ಪುರಾಣ’ ಗ್ರಂಥ ಬಿಡುಗಡೆ: ಸಾನ್ನಿಧ್ಯ: ಸದ್ಗುರು ಬಾಲಯೋಗಿ ಸಾಯಿ ಮಂಜುನಾಥ್ ಮಹಾರಾಜ್, ಅಧ್ಯಕ್ಷತೆ: ಎಚ್. ಸುಬ್ಬಣ್ಣ, ಲೇಖಕ: ವೆಂಕಟೇಶ್ ಕೆ. ಹೊಸಕೋಟೆ, ಪುಸ್ತಕದ ಬಗ್ಗೆ: ಕೆ. ಮಲರ್ವಿಳಿ, ಆಯೋಜನೆ: ಕರ್ನಾಟಕ ರಾಜ್ಯ ತಿಗಳ ಕ್ಷತ್ರಿಯ ಮಹಾಸಭಾ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ನವೀನ್ ಸೂರಿಂಜೆ ಅವರ ‘ನೇತ್ರಾವತಿಯಲ್ಲಿ ನೆತ್ತರು’ ಪುಸ್ತಕ ಬಿಡುಗಡೆ: ಮಹಮ್ಮದ್ ಶಹೀದ್, ವಿಚಾರಗೋಷ್ಠಿ, ವಿಷಯ: ‘ಕೋಮು ಹಿಂಸೆಯ ಹಿಂದಿನ ರಾಜಕಾರಣ’, ಭಾಷಣಕಾರರು: ದಿನೇಶ ಅಮೀನ್ ಮಟ್ಟು, ‘ಮತೀಯವಾದ ಮತ್ತು ಪ್ರಭುತ್ವ’, ಭಾಷಣಕಾರರು: ಬಿ.ಕೆ. ಶಿವರಾಮ್, ಪ್ರತಿಕ್ರಿಯೆ: ಕೆ. ಷರೀಫಾ, ಮಾವಳ್ಳಿ ಶಂಕರ್, ನವೀನ್ ಸೂರಿಂಜೆ, ಅಧ್ಯಕ್ಷತೆ: ಕೆ. ಮರುಳಸಿದ್ದಪ್ಪ, ಆಯೋಜನೆ: ಕ್ರಿಯಾ ಮಾಧ್ಯಮ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಎಚ್. ಯೋಗನರಸಿಂಹಂ ಅವರ 125ನೇ ಜನ್ಮವರ್ಷಾಚರಣೆ: ವಿಷಯ: ‘ಭಲ್ಲಟಶತಕ’ ಒಂದು ಅವಲೋಕನ, ಉಪನ್ಯಾಸಕರು: ಶತಾವಧಾನಿ ಆರ್. ಗಣೇಶ್, ಆಯೋಜನೆ: ದೇವಗೀತಮ್, ಅಭಿಜ್ಞಾನ, ಸ್ಥಳ: ಅಕ್ಷರಮ್ ಸಭಾಂಗಣ, ಸಂಸ್ಕೃತ ಭಾರತಿ, ಗಿರಿನಗರ 2ನೇ ಹಂತ, ಬೆಳಿಗ್ಗೆ 10.30

ಶತಾವಧಾನಿ ಆರ್. ಗಣೇಶ್

ಗಾಯನ ಕಾರ್ಯಕ್ರಮ: ಉದ್ಘಾಟನೆ: ವೆಂಕಟರಾಮ್ ಭಾರತಿ, ಅಧ್ಯಕ್ಷತೆ: ವಿ. ರಾಣಿ ಗೋವಿಂದರಾಜು, ಮುಖ್ಯ ಅತಿಥಿಗಳು: ಕೆ.ವಿ. ಲಕ್ಷ್ಮಣಮೂರ್ತಿ, ಸ್ನೇಹಲತಾ, ಆಯೋಜನೆ: ವಿದ್ಯಾಗಣಪತಿ ಗಮಕ ಶಿಕ್ಷಣಾಲಯ, ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಪ್ರತಿಭಾ ಹೊಂಗಿರಣ, ವಿನೋದ ಸಾಂಸ್ಕೃತಿಕ ವೇದಿಕೆ, ಶಾರದಾ ಕಲಾ ಸಂಘ, ವಸಂತಗೀತ ಕ್ರಿಯೇಷನ್ಸ್, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಮಧ್ಯಾಹ್ನ 3

ಸಂಗೀತ ಕಛೇರಿ: ಗಾಯನ: ಎಂ.ಎಸ್. ಶೀಲಾ, ಪಿಟೀಲು: ಎಚ್. ಎಂ. ಸ್ಮಿತಾ, ಮೃದಂಗ: ತುಮಕೂರು ಬಿ. ರವಿಶಂಕರ್, ಮೋರ್ಸಿಂಗ್: ಬಿ. ರಾಜಶೇಖರ್, ಆಯೋಜನೆ: ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 5

‘ಗೌರಿಸುಂದರ್ ವಾರ್ಷಿಕ ಪ್ರಶಸ್ತಿ’ ಪ್ರದಾನ: ಎಚ್.ಎಸ್. ವೆಂಕಟೇಶಮೂರ್ತಿ, ಪ್ರಶಸ್ತಿ ಪುರಸ್ಕೃತರು: ಉಪಾಸನಾ ಮೋಹನ್, ‘ಭಾವಲೋಕದ ನಕ್ಷತ್ರಗಳು’ ಪುಸ್ತಕ ಬಿಡುಗಡೆ: ರಾಘವೇಂದ್ರ ಪಾಟೀಲ, ಮುಖ್ಯ ಅತಿಥಿಗಳು: ಕಸ್ತೂರಿ ಶಂಕರ್, ಬಿ.ಆರ್. ಲಕ್ಷ್ಮಣ ರಾವ್, ಆಯೋಜನೆ: ಸುಂದರ ಪ್ರಕಾಶನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ಉಪಾಸನಾ ಮೋಹನ್

ಮಣ್ಣು ಉಳಿಸಿ ಅಭಿಯಾನದ ಭಾಗವಾಗಿ ‘ಕಾನ್ಷಿಯಸ್ ಪ್ಲಾಂಟ್’ ಕಾರ್ಯಕ್ರಮ: ಬಸವರಾಜ ಬೊಮ್ಮಾಯಿ, ಜಗ್ಗಿ ವಾಸುದೇವ್ (ಸದ್ಗುರು), ಸ್ಥಳ: ತ್ರಿಪುರ ವಾಸಿನಿ ಹಾಲ್ 2, ಅರಮನೆ ಮೈದಾನ, ಬೆಳಿಗ್ಗೆ 11

ಸದ್ಗುರು

‘ವಂಡರ್ಸ್ ಆಫ್ ಲೈಫ್: ಸೈಜ್ ಮ್ಯಾಟರ್ಸ್’ ಚಲನಚಿತ್ರ ಪ್ರದರ್ಶನ: ಆಯೋಜನೆ ಹಾಗೂ ಸ್ಥಳ: ಜವಾಹರ್ ಲಾಲ್ ನೆಹರೂ ತಾರಾಲಯ, ಟಿ. ಚೌಡಯ್ಯ ರಸ್ತೆ, ಸಂಜೆ 5.30

‘ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್’ ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್, ಆಯೋಜನೆ: ದೃಶ್ಯ ಬೆಂಗಳೂರು, ಸ್ಥಳ: ಸಮುಚ್ಚಯ ಭವನ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಭಾನುವಾರ • ಜೂನ್ 19, 2022 ಪ್ರಜಾವಾಣಿ

ಕಾಯ್ದೆಯ ಬಲ ಕುಗ್ಗಿಸುತ್ತಿದೆ ನೇಮಕಾತಿಯ ಪಕ್ಷಪಾತ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಕೆಯಾದ ಅರ್ಜಿಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು 'ನ್ಯಾಯ'ಯುತವಾಗಿ ಇತ್ಯರ್ಥಪಡಿಸಬೇಕಾದವರು ಮಾಹಿತಿ ಆಯೋಗದ ಮುಖ್ಯ ಆಯುಕ್ತರು ಮತ್ತು ಮಾಹಿತಿ ಆಯುಕ್ತರು. ಆದರೆ ಇವರ ನೇಮಕಾತಿಯಲ್ಲೇ 'ಪಕ್ಷಪಾತ' ನಡೆಯುತ್ತಿರುವ ಆರೋಪ ದೀರ್ಘ ಕಾಲದಿಂದಲೂ ಇದೆ. ನೇಮಕಾತಿಯಲ್ಲಿನ ಲೋಪಗಳೇ ಮಾಹಿತಿ ಹಕ್ಕು ಕಾಯ್ದೆಯ ಆಶಯದಂತೆ ಆಡಳಿತದಲ್ಲಿ ಸಂಪೂರ್ಣ ಪಾರದರ್ಶಕತೆ ತರುವ ಪ್ರಯತ್ನಕ್ಕೆ ಅಡ್ಡಗಾಲು ಹಾಕುತ್ತಿವೆ.

ಈ ಕಾಯ್ದೆಯ ಸೆಕ್ಷನ್ 15ರ ಪ್ರಕಾರ, ಮುಖ್ಯಮಂತ್ರಿ ಅಧ್ಯಕ್ಷತೆಯ ಸಮಿತಿಯು ಮುಖ್ಯ ಮಾಹಿತಿ ಆಯುಕ್ತ ಮತ್ತು ಮಾಹಿತಿ ಆಯುಕ್ತರನ್ನು ನೇಮಕ ಮಾಡಬೇಕು. ವಿಧಾನಸಭೆಯ ವಿರೋಧ ಪಕ್ಷದ ನಾಯಕರು ಮತ್ತು ಮುಖ್ಯಮಂತ್ರಿಯವರಿಂದ ನಾಮನಿರ್ದೇಶಿತರಾದ ಒಬ್ಬ ಸಚಿವ (ಬಹುತೇಕ ಸಂದರ್ಭದಲ್ಲಿ ಕಾನೂನು ಸಚಿವರೇ ಆಗಿರುತ್ತಾರೆ) ಈ ಸಮಿತಿಯಲ್ಲಿರುತ್ತಾರೆ.

'ಕಾನೂನು, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಸೇವೆ, ವ್ಯವಸ್ಥಾಪನೆ, ಪತ್ರಿಕೋದ್ಯಮ, ಸಮೂಹ ಮಾಧ್ಯಮ ಅಥವಾ ನಿರ್ವಹಣೆ ಮತ್ತು ಆಡಳಿತದಲ್ಲಿ ಆಳವಾದ ಜ್ಞಾನ ಮತ್ತು ಅನುಭವ ಹೊಂದಿರುವುದರೊಂದಿಗೆ ಸಾರ್ವಜನಿಕ ಜೀವನದಲ್ಲಿ ಉನ್ನತ ಸ್ಥಾನ ಗಳಿಸಿರುವಂಥ ವ್ಯಕ್ತಿಗಳನ್ನು ಮುಖ್ಯ ಮಾಹಿತಿ ಆಯುಕ್ತ ಹಾಗೂ ಮಾಹಿತಿ ಆಯುಕ್ತರ ಹುದ್ದೆಗೆ ನೇಮಿಸಬಹುದು' ಎನ್ನುತ್ತದೆ ಕಾಯ್ದೆ.

ಆದರೆ, ಈ ಯಾವ ಅರ್ಹತೆಯನ್ನೂ ಹೊಂದಿಲ್ಲದ ವ್ಯಕ್ತಿಗಳು ಮಾಹಿತಿ ಆಯುಕ್ತರಾಗಿ ನೇಮಕಗೊಂಡ ಉದಾಹರಣೆಗಳು ರಾಜ್ಯದಲ್ಲಿವೆ. ಪ್ರಭಾವಿ ರಾಜಕಾರಣಿಗಳ ಆಪ್ತರು, ರಾಜಕೀಯ ಪಕ್ಷಗಳ ಸದಸ್ಯರೂ ಮಾಹಿತಿ ಆಯುಕ್ತರಾಗಿ ನೇಮಕಗೊಂಡಿದ್ದರು. 'ಸಮಾಜ ಸೇವೆ'ಯ ಹೆಸರಿನಲ್ಲಿ ಇಂಥ ವ್ಯಕ್ತಿಗಳನ್ನು ಆಯೋಗಕ್ಕೆ ನೇಮಿಸಿ ಆಡಳಿತಾರೂಢ ಪಕ್ಷ ಹಾಗೂ ಸರ್ಕಾರದ 'ಮರ್ಯಾದೆ' ರಕ್ಷಿಸಿಕೊಳ್ಳುವ ಕಸರತ್ತನ್ನು ಅಧಿಕಾರದಲ್ಲಿದ್ದವರು ಆಗಾಗ ಮಾಡುತ್ತಲೇ ಇರುತ್ತಾರೆ.

2006ರಲ್ಲಿ ಆಗಿನ ಮುಖ್ಯ ಕಾರ್ಯದರ್ಶಿಯಾಗಿದ್ದ ಕೆ.ಕೆ. ಮಿಶ್ರಾ ಅವರನ್ನು ಮುಖ್ಯ ಮಾಹಿತಿ ಆಯುಕ್ತರನ್ನಾಗಿ ನೇಮಿಸಲಾಗಿತ್ತು. ಆಗಲೂ ನಿಯಮಗಳನ್ನು ಮೀರಿ, ಪಕ್ಷಪಾತ ಎಸಗಿ ನೇಮಕ ಮಾಡಿದ್ದ ಆರೋಪ ಕೇಳಿಬಂದಿತ್ತು. 2016ರಲ್ಲಿ ಆಗಿನ ಕಾನೂನು ಸಚಿವರಾಗಿದ್ದ ಟಿ.ಬಿ. ಜಯಚಂದ್ರ ಅವರು ತಮ್ಮ ಸಮೀಪದ ಸಂಬಂಧಿಯೊಬ್ಬರನ್ನು ಮಾಹಿತಿ ಆಯುಕ್ತರನ್ನಾಗಿ ನೇಮಿಸಿದ್ದ ಆರೋಪವೂ ಇತ್ತು. 2022ರಲ್ಲಿ ಅರ್ಹ ಅಭ್ಯರ್ಥಿಗಳಿದ್ದರೂ ಭ್ರಷ್ಟಾಚಾರದ ಆರೋಪದಡಿ ಕ್ರಿಮಿನಲ್ ಪ್ರಕರಣ ಎದುರಿಸುತ್ತಿರುವ ನಿವೃತ್ತ ಅಧಿಕಾರಿಯೊಬ್ಬರನ್ನು ನೇಮಿಸಿರುವುದು ತೀವ್ರ ಚರ್ಚೆಗೆ ಎಡೆಮಾಡಿದೆ.

ಕೇಂದ್ರ ಮತ್ತು ರಾಜ್ಯ ಮಾಹಿತಿ ಆಯೋಗಗಳಿಗೆ ಮುಖ್ಯ ಮಾಹಿತಿ ಆಯುಕ್ತರು, ಮಾಹಿತಿ ಆಯುಕ್ತರ ನೇಮಕಾತಿ ಪ್ರಕ್ರಿಯೆಯ ಸಂಪೂರ್ಣ ವಿವರಗಳನ್ನೂ ವೆಬ್‌ಸೈಟ್‌ನಲ್ಲಿ ಬಹಿರಂಗಪಡಿಸಬೇಕು ಎಂದು ಸುಪ್ರೀಂ ಕೋರ್ಟ್ 2019ರಲ್ಲಿ ಆದೇಶಿಸಿತ್ತು. ಆದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ನಿರ್ದೇಶನವನ್ನು ಪಾಲಿಸಿದ್ದು ತೀರಾ ಕಡಿಮೆ. ನೇಮಕಾತಿಯಲ್ಲಿನ 'ರಹಸ್ಯ' ನಡೆಗಳಿಗೆ ಕಡಿವಾಣ ಬಿದ್ದೇ ಇಲ್ಲ.

ಮಾಹಿತಿ ಬಚ್ಚಿಡಲು ನೂರೆಂಟು ಅಡ್ಡದಾರಿ

ಬೆಂಗಳೂರು: ಮಾಹಿತಿ ಹಕ್ಕು ಕಾಯ್ದೆಯ ವ್ಯಾಪ್ತಿಯೊಳಗೆ ಬರುವ ಯಾವುದೇ ಕಚೇರಿಯು ತನ್ನ ಆಡಳಿತ, ವ್ಯವಹಾರಕ್ಕೆ ಸಂಬಂಧಿಸಿದ ಬಹುತೇಕ ಮಾಹಿತಿಯನ್ನು ಸಾರ್ವಜನಿಕರಿಗೆ ಬಹಿರಂಗಪಡಿಸಲೇಬೇಕು. ಆದರೆ, ಗೋಪ್ಯತೆ, ಹಣಕಾಸು ವಹಿವಾಟು, ತನಿಖೆಯಂತಹ ನೂರೆಂಟು ಕಾರಣಗಳನ್ನು ಮುಂದೊಡ್ಡಿ ಮಾಹಿತಿ ನಿರಾಕರಿಸುವುದನ್ನು ಅಧಿಕಾರಿಗಳ ವರ್ಗ ರೂಢಿ ಮಾಡಿಕೊಂಡಿದೆ.

ಲೋಕೋಪಯೋಗಿ, ಜಲ ಸಂಪನ್ಮೂಲ, ಸಣ್ಣ ನೀರಾವರಿ, ವಾಣಿಜ್ಯ ಮತ್ತು ಕೈಗಾರಿಕೆ, ನಗರಾಭಿವೃದ್ಧಿಯಂತಹ ಹೆಚ್ಚಿನ ಅನುದಾನ ವೆಚ್ಚ ಮಾಡುವ ಇಲಾಖೆಗಳಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದರೆ ಸರಿಯಾದ ಉತ್ತರವೇ ದೊರಕುವುದಿಲ್ಲ. ಹೆಚ್ಚಿನ ಅಧಿಕಾರಿಗಳು ಇಂಥಹ ಅರ್ಜಿಗಳನ್ನು ಹತ್ತಾರು ಕಚೇರಿಗಳಿಗೆ ವರ್ಗಾಯಿಸಿ ಅರ್ಜಿದಾರರನ್ನು ಅಲೆದಾಡಿಸುತ್ತಾರೆ.

ಕೆಲವು ಅಧಿಕಾರಿಗಳು, ಅರ್ಜಿಯಲ್ಲಿ ಕೋರಲಾದ ಮಾಹಿತಿಯನ್ನು ಬಹಿರಂಗಪಡಿಸಲು ಅವಕಾಶವಿಲ್ಲ ಎಂಬ ಸಿದ್ಧ ಉತ್ತರವೊಂದನ್ನು ಒದಗಿಸುತ್ತಾರೆ. ತಮ್ಮ ವಾದಕ್ಕೆ ಪೂರಕವಾಗಿ, ಸಂಬಂಧವೇ ಇಲ್ಲದ ನ್ಯಾಯಾಲಯಗಳ ತೀರ್ಪುಗಳನ್ನು ಉಲ್ಲೇಖಿಸಿ ಅರ್ಜಿದಾರನ್ನು ದಿಕ್ಕು ತಪ್ಪಿಸಲು ಯತ್ನಿಸುತ್ತಾರೆ. ಇದಕ್ಕಾಗಿಯೇ 'ಕಾನೂನು ಸಲಹೆಗಾರರ' ನೆರವನ್ನೂ ಪಡೆಯುತ್ತಾರೆ ಎಂಬ ಆರೋಪವೂ ಇದೆ.

ಒಂದು ಕಚೇರಿಯ ಸಾರ್ವಜನಿಕ ಮಾಹಿತಿ ಅಧಿಕಾರಿ ಅರ್ಜಿ ತಿರಸ್ಕರಿಸಿದರೆ ಪ್ರಥಮ ಮತ್ತು ದ್ವಿತೀಯ ಹಂತದ ಮೇಲ್ಮನವಿ ಪ್ರಾಧಿಕಾರಗಳಿಗೆ ಮೇಲ್ಮನವಿ ಸಲ್ಲಿಸಲು ಅವಕಾಶಗಳಿವೆ. ಆದರೆ, ಅಲ್ಲಿಯೂ ವಿಚಾರಣೆ ನಡೆಸಿ, ತೀರ್ಮಾನ ಕೊಡುವವರು ಅದೇ ಇಲಾಖೆಯ ಹಿರಿಯ ಅಧಿಕಾರಿಗಳು. ಹೆಚ್ಚಿನ ಮೇಲ್ಮನವಿ ಪ್ರಾಧಿಕಾರಗಳು ಮೇಲ್ಮನವಿ ಸಲ್ಲಿಸುವ ಅರ್ಜಿದಾರರನ್ನು ಅಲೆದಾಡಿಸಿ ಸುಸ್ತು ಹೊಡೆಸುತ್ತವೆ.

ಕೆಲವು ಅಧಿಕಾರಿಗಳು ತಮ್ಮ ಪ್ರಭಾವವನ್ನೇ ಬಳಸಿಕೊಂಡು, ಮಾಹಿತಿ ಕೋರಿದವರ ವಿರುದ್ಧ ಸುಳ್ಳು ದೂರು ನೀಡಿ ಪೊಲೀಸರ ಮೂಲಕ ಬಂಧನ ಮಾಡಿಸಿದ ಉದಾಹರಣೆಗಳೂ ಇವೆ. ಇಂತಹ ಅನೇಕ ಮಾರ್ಗಗಳನ್ನು ಅಧಿಕಾರಿಗಳು ಕರಗತ ಮಾಡಿಕೊಂಡಿದ್ದಾರೆ ಎನ್ನುತ್ತಾರೆ ಮಾಹಿತಿ ಹಕ್ಕು ಹೋರಾಟಗಾರರು.

ಲೋಕಾಯುಕ್ತಕ್ಕೆ ದೂರು ನೀಡಿದ್ದಕ್ಕೆ ಜೀವ ತೆಗೆದರು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಮಾಹಿತಿ ಹಕ್ಕು ಕಾರ್ಯಕರ್ತರ ಬದುಕು, ಕತ್ತಿ ಮೇಲಿನ ನಡಿಗೆಯಂತೆ. ಭ್ರಷ್ಟರ ಮುಖವಾಡವನ್ನು ದಾಖಲೆ ಸಮೇತ ಬಯಲು ಮಾಡುವ ಕಾರ್ಯಕರ್ತರಿಗೆ ಮಿತ್ರರಿಗಿಂತ ಶತ್ರುಗಳೇ ಹೆಚ್ಚು. ಇದಕ್ಕೆ ನಿದರ್ಶನ, ಬೆಂಗಳೂರಿನಲ್ಲಿ 2012ರ ನವೆಂಬರ್ 20ರಂದು ನಡೆದಿದ್ದ ಮಾಹಿತಿ ಹಕ್ಕು ಕಾರ್ಯಕರ್ತ ಲಿಂಗರಾಜ್ ಕೊಲೆ ಪ್ರಕರಣ.

ಲಿಂಗರಾಜ್

ಚಾಮರಾಜಪೇಟೆಯ ಆಜಾದ್ ನಗರ ವಾರ್ಡ್ ಕಾರ್ಪೊರೇಟರ್ ಆಗಿದ್ದ ಗೌರಮ್ಮ ಹಾಗೂ ಪತಿ ಗೋವಿಂದರಾಜು ಗಳಿಸಿದ್ದ ₹ 500 ಕೋಟಿ ಅಕ್ರಮ ಆಸ್ತಿಯ ದಾಖಲೆಗಳ ಸಮೇತ ಲೋಕಾಯುಕ್ತಕ್ಕೆ ದೂರು ಕೊಟ್ಟ ಕಾರಣ 'ಮಹಾ ಪ್ರಚಂಡ' ಮಾಸಪತ್ರಿಕೆ ಸಂಪಾದಕರೂ ಆಗಿದ್ದ ಲಿಂಗರಾಜ್ ಹತ್ಯೆಯಾದ ಪ್ರಕರಣ ಅಚ್ಚಳಿಯದೇ ನೆನಪಿನಲ್ಲಿ ಉಳಿದಿದೆ.

2012ರ ನವೆಂಬರ್ 9ರಂದು ತಮ್ಮ ಮನೆ ಮೇಲೆ ಲೋಕಾಯುಕ್ತ ದಾಳಿ ಆಗುತ್ತಿದ್ದಂತೆ ಲಿಂಗರಾಜ್ ವಿರುದ್ಧ ಹರಿಹಾಯ್ದಿದ್ದ ಗೋವಿಂದರಾಜು, ಅವರ ಹತ್ಯೆಗಾಗಿ ರೌಡಿ ಗೋರಿಪಾಳ್ಯದ ಚಂದ್ರು ಎಂಬಾತನಿಗೆ ₹ 7.50 ಲಕ್ಷ ಸುಪಾರಿ ಕೊಟ್ಟಿದ್ದ. ಸಹಚರರ ಗುಂಪು ಕಟ್ಟಿಕೊಂಡು ಚಾಮರಾಜಪೇಟೆಯ ಬಿ.ಎಂ.ಕೆ ಬಡಾವಣೆಯ ವಿಠ್ಠಲ್ ನಗರದಲ್ಲಿರುವ ಲಿಂಗರಾಜ್ ಮನೆಗೆ ನುಗ್ಗಿದ್ದ ರೌಡಿ, ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆ ಮಾಡಿದ್ದ. ಈ ಘಟನೆ ರಾಜ್ಯದ ಕಾನೂನು ವ್ಯವಸ್ಥೆಯನ್ನೇ ಪ್ರಶ್ನಿಸಿತ್ತು. ಸರ್ಕಾರ ಇಕ್ಕಟ್ಟಿಗೆ ಸಿಲುಕಿತ್ತು. ಹತ್ಯೆ ಭೇದಿಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗಿತ್ತು.

₹ 15,000 ಸಂಬಳದಿಂದ ₹ 500 ಕೋಟಿ: 'ಲೋಕೋಪಯೋಗಿ ಇಲಾಖೆಯಲ್ಲಿ ಡಿ–ಗ್ರೂಪ್ ನೌಕರನಾಗಿದ್ದ ಗೋವಿಂದರಾಜು, ₹ 15,000 ಸಂಬಳ ಪಡೆಯುತ್ತಿದ್ದ. ಹೆಚ್ಚು ಹಣ ಸಂಪಾದನೆಗಾಗಿ ರಿಯಲ್ ಎಸ್ಟೇಟ್ ಶುರು ಮಾಡಿದ್ದ. ಶ್ರೀಮಂತನಾಗುತ್ತಿದ್ದಂತೆ ಕೆಲಸ ಬಿಟ್ಟು ಚಾಮರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನಾಗಿದ್ದ. ಆಜಾದ್ ನಗರ ವಾರ್ಡ್‌ನಿಂದ ಪತ್ನಿಯನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿದ್ದ. ಪತ್ನಿ ಅಧಿಕಾರವನ್ನು ತಾನೇ ಚಲಾಯಿಸುತ್ತಿದ್ದ' ಎಂಬ ಸಂಗತಿಯನ್ನು ಎಸ್‌ಐಟಿ ಅಧಿಕಾರಿಗಳು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದರು.

'ಗೌರಮ್ಮ ಹಾಗೂ ಗೋವಿಂದರಾಜು ಅಕ್ರಮಗಳ ಬಗ್ಗೆ ತಿಳಿದಿದ್ದ ಲಿಂಗರಾಜ್, ಮಾಹಿತಿ ಹಕ್ಕು ಕಾಯ್ದೆಯಡಿ ದಾಖಲೆ ಪಡೆದಿದ್ದರು. ಇದು ಗೊತ್ತಾಗುತ್ತಿದ್ದಂತೆ ಲಿಂಗರಾಜ್ ಅವರನ್ನು ಸಂಪರ್ಕಿಸಿದ್ದ ಗೋವಿಂದರಾಜ್, ₹ 5 ಲಕ್ಷ ನೀಡುವುದಾಗಿ ಹೇಳಿದ್ದರು. ಅದಕ್ಕೆ ಸೊಪ್ಪು ಹಾಕದ ಲಿಂಗರಾಜ್, ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಅದಾದ ನಂತರ ಲೋಕಾಯುಕ್ತ ದಾಳಿ ಆಗಿ, ಗೋವಿಂದರಾಜು ಮಾನ ಹರಾಜಾಗಿತ್ತು. ಅದೇ ಕೋಪದಲ್ಲಿ ಆತ, ಲಿಂಗರಾಜ್ ಕೊಲೆ ಮಾಡಿಸಿದ್ದ' ಎಂಬ ಮಾಹಿತಿಯೂ ಪಟ್ಟಿಯಲ್ಲಿತ್ತು.

ಜೀವಾವಧಿ ಶಿಕ್ಷೆ: ಲಿಂಗರಾಜ್ ಕೊಲೆ ಪ್ರಕರಣದ ವಿಚಾರಣೆ ನಡೆಸಿದ್ದ ಸಿಸಿಎಚ್ 59ನೇ ನ್ಯಾಯಾಲಯ, ಗೌರಮ್ಮ, ಗೋವಿಂದರಾಜು, ರೌಡಿ ಚಂದ್ರು ಸೇರಿದಂತೆ 12 ಅಪರಾಧಿಗಳಿಗೆ 2020ರಲ್ಲೇ ಜೀವಾವಧಿ ಶಿಕ್ಷೆ ವಿಧಿಸಿದೆ.

ನ್ಯಾಯಕ್ಕಾಗಿ ಹೋರಾಡುತ್ತಿದೆ ಬಾಳಿಗ ಕುಟುಂಬ

• ಉದಯ ಯು

ಮಂಗಳೂರು: ಮಾಹಿತಿ ಹಕ್ಕು ಕಾರ್ಯಕರ್ತ ವಿನಾಯಕ ಬಾಳಿಗ ಅವರ ಹತ್ಯೆಯಾಗಿ ಆರು ವರ್ಷಗಳು ಕಳೆದಿವೆ. ಪ್ರಕರಣದ ತನಿಖೆಯು ಅತ್ಯಂತ ನಿಧಾನಗತಿಯಲ್ಲಿ ನಡೆಯುತ್ತಿದೆ, 'ಅಪರಾಧಿಗಳನ್ನು ರಕ್ಷಿಸಲಾಗುತ್ತಿದೆ' ಎಂದು ಆರೋಪಿಸಿ ನಗರದಲ್ಲಿ ಈಚೆಗೆ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆಗಳು ನಡೆದಿದ್ದವು.

ನಗರದ ರಥಬೀದಿಯ ವೆಂಕಟರಮಣ ದೇವಾಲಯದಲ್ಲಿ ಅವ್ಯವಹಾರ ನಡೆಯುತ್ತಿದೆ ಎಂದು ಆರೋಪಿಸಿದ್ದ ಬಾಳಿಗ ಅವರು ಮಾಹಿತಿ ಹಕ್ಕು ಕಾಯ್ದೆಯಡಿ ದಾಖಲೆಗಳನ್ನು ಪಡೆದು ಹೋರಾಟಕ್ಕೆ ಮುಂದಾಗಿದ್ದರು. ಅವರನ್ನು ಮಂಗಳೂರಿನ ಕೊಡಿಯಾಲ್ ಬೈಲ್ ಬಳಿ 2016ರ ಮಾರ್ಚ್ 21ರಂದು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿತ್ತು. ಈ ಸಂಬಂಧ ಜೂನ್ 26ರಂದು ನರೇಶ್ ಶೆಣೈ ಎಂಬುವರನ್ನು ಬಂಧಿಸಲಾಗಿತ್ತು. 2016ರ ಸೆ. 15ರಂದು ಶೆಣೈಗೆ ಹೈಕೋರ್ಟ್ ಜಾಮೀನು ನೀಡಿತ್ತು.

ಪ್ರಕರಣದ ಪ್ರಮುಖ ಸಾಕ್ಷಿಯಾಗಿದ್ದ ವಿಘ್ನೇಶ್ ನಾಯಕ್ ಅವರು ಘಟನೆ ನಡೆದು ಕೆಲವು ತಿಂಗಳ ಬಳಿಕ ಆತ್ಮಹತ್ಯೆ ಮಾಡಿಕೊಂಡಿದ್ದರು. ಅವರ ಆತ್ಮಹತ್ಯೆಯ ಬಗ್ಗೆಯೂ ಪ್ರಶ್ನೆಗಳು ಎದ್ದಿದ್ದವು. ತಮಗೆ ದುಬೈ ಹಾಗೂ ಇತರ ದೇಶಗಳಿಂದ ಬೆದರಿಕೆ ಕರೆಗಳು ಬರುತ್ತಿವೆ ಎಂದು ಬಾಳಿಗ ಅವರ ಸಹೋದರಿಯರು ಆರೋಪಿಸಿದ್ದರು. ಬಾಳಿಗ ಅವರ ಹತ್ಯೆಯ ವಿಚಾರಣೆಯನ್ನು ಚುರುಕೊಗೊಳಿಸಬೇಕು, ಅಪರಾಧಿಗೆ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿ ಈವರೆಗೆ ಅನೇಕ ಹೋರಾಟಗಳು ನಡೆದಿವೆ. ಸಾಮಾಜಿಕ ಮಾಧ್ಯಮದಲ್ಲಿ 'ಜಸ್ಟೀಸ್ ಫಾರ್ ವಿನಾಯಕ ಬಾಳಿಗ' ಎಂಬ ಅಭಿಯಾನವೂ ಜೋರಾಗಿ ನಡೆದಿತ್ತು.

ಹತ್ಯೆ ನಡೆದು ಆರು ವರ್ಷಗಳು ಕಳೆದರೂ ಬಾಳಿಗ ಅವರ ಕುಟುಂಬ ದವರಿಗೆ ನ್ಯಾಯ ಸಿಕ್ಕಿಲ್ಲ. ಅವರ ತಂದೆ- ತಾಯಿ ಇದೇ ಕೊರಗಿನಲ್ಲಿ ನಿಧನರಾಗಿದ್ದಾರೆ. ಆರೋಪಿ ನರೇಶ್ ಅವರ ಜಾಮೀನು ರದ್ದುಪಡಿಸಬೇಕು, ತನಿಖೆಯ ಜವಾಬ್ದಾರಿಯನ್ನು ಸಿಬಿಐಗೆ ವಹಿಸಬೇಕು ಎಂದು ಬಾಳಿಗ ಅವರ ಸಹೋದರಿಯರು ಮಾಡಿದ್ದ ಮನವಿಯನ್ನೂ ಹೈಕೋರ್ಟ್ ಪುರಸ್ಕರಿಸಲಿಲ್ಲ.

ಮಾಹಿತಿ ನೀಡಿದ್ದಕ್ಕೆ ಜೀವ ತೆತ್ತ ಯಲ್ಲಾಲಿಂಗ

• ಪ್ರಮೋದ

ಕೊಪ್ಪಳ: ಸರ್ಕಾರದ ಕಾಮಗಾರಿಗಳ ಭ್ರಷ್ಟಾಚಾರದ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಿದ ಎಂಬ ಕಾರಣಕ್ಕೆ ಯಲ್ಲಾಲಿಂಗ ಎಂಬ ವಿದ್ಯಾರ್ಥಿ ಜೀವವನ್ನೇ ಕಳೆದುಕೊಳ್ಳಬೇಕಾಯಿತು.

ಕನಕಗಿರಿ ತಾಲ್ಲೂಕಿನ ಕನಕಾಪುರ ಗ್ರಾಮದ ಯಲ್ಲಾಲಿಂಗ 2015ರಲ್ಲಿ ಊರಿನಲ್ಲಿ ಚರಂಡಿ, ರಸ್ತೆ ಹಾಗೂ ಜನತಾ ಮನೆಗಳ ಅವ್ಯವಸ್ಥೆ ಕುರಿತು ಸ್ಥಳೀಯ ಟಿವಿ ವಾಹಿನಿಗೆ ಬೈಟ್ ನೀಡಿದ್ದ. ಅದು ಎರಡು ದಿನ ಪ್ರಸಾರಗೊಂಡಿತ್ತು. ಇನ್ನಷ್ಟು ಕಾಮಗಾರಿಗಳ ಬಗ್ಗೆಯೂ ಮಾಹಿತಿ ಹಕ್ಕು ಕಾಯ್ದೆಯಡಿ ವಿವರ ಪಡೆದಿದ್ದ. ಇದು ಕೆಲ ರಾಜಕೀಯ ವ್ಯಕ್ತಿಗಳ ಮತ್ತು ಅವರ ಹಿಂಬಾಲಕರ ಸಿಟ್ಟಿಗೆ ಕಾರಣವಾಗಿತ್ತು. ಗಂಗಾವತಿಯಿಂದ ಗಿಣಿಗೇರಾವರೆಗೆ ಪ್ರಯಾಣಿಸಿದ್ದ ಯಲ್ಲಾಲಿಂಗ ಅವರನ್ನು ಬೈಕ್ ಮೇಲೆ ಹಿಂಬಾಲಿಸಿ ಕೊಪ್ಪಳ ರೈಲು ನಿಲ್ದಾಣದಲ್ಲಿ ಹಿಡಿದಿದ್ದರು. ಹಳಿಗಳ ಮೇಲೆ ಹೊಡೆದ ಕಾರಣ ಯಲ್ಲಾಲಿಂಗ ಅಲ್ಲಿಯೇ ಕುಸಿದು ಬಿದ್ದ. ಹಳಿಗಳ ಮೇಲೆ ಮಲಗಿಸಿದ್ದರಿಂದ ರೈಲು ಹರಿದು ದೇಹ ಎರಡು ತುಂಡಾಗಿತ್ತು. ಇದರ ಬಗ್ಗೆ ಸಿಐಡಿ ಕೂಡ ವರದಿಯಲ್ಲಿ ತಿಳಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದ 9 ಮಂದಿ ಆರೋಪಿಗಳು 2018 ರಲ್ಲಿ ಜಾಮೀನು ಪಡೆದರು. ಈ ಘಟನೆ ರಾಜಕೀಯ ಮತ್ತು ಜಾತಿಗಳ ನಡುವಿನ ವಾಕ್ಸಮರಕ್ಕೂ ಕಾರಣವಾಯಿತು.

ಆದರೆ, ಯಲ್ಲಾಲಿಂಗನ ತಾಯಿ ಕೆಂಚಮ್ಮ ಈಗಲೂ ಕಣ್ಣೀರು ಹಾಕುತ್ತಿದ್ದಾರೆ. ಅವರ ಮನೆ ಮತ್ತು ಕನಕಾಪುರದ ಸ್ಥಿತಿ ಮಾತ್ರ ಹಾಗೆಯೇ ಇದೆ.

ಮಾಹಿತಿ ತಡೆಗೆ ಅಕ್ರಮ ದಾರಿ

ಒಂದನೇ ಪುಟದಿಂದ

ಮಾಹಿತಿ ನೀಡಿದರೆ ಮುಂದೊಂದು ದಿನ ತಮಗೆ ಕಂಟಕವಾಗಲಿದೆ ಎಂಬ ಆತಂಕ ಕಾಡಿದರೆ 'ಆಡಳಿತದ ಗೌಪ್ಯತೆ, ವೈಯಕ್ತಿಕ ವಿಷಯ, ಮೂರನೇ ವ್ಯಕ್ತಿಗೆ ಸಂಬಂಧಿಸಿದ್ದು' ಎಂಬ ಮೂರು ಕಾರಣಗಳನ್ನು ಬರೆದು ಹಿಂಬರಹ ನೀಡುವ ಚಾಳಿಯನ್ನು ಅಧಿಕಾರಿಗಳು ರೂಢಿಸಿಕೊಂಡಿದ್ದಾರೆ. ಅರ್ಜಿದಾರರು ಮೇಲ್ಮನವಿಗಳ ಮೇಲೆ ಮೇಲ್ಮನವಿಗಳನ್ನು ಸಲ್ಲಿಸಿ ಸುತ್ತಾಡಿ ಬರಲು ವರ್ಷಗಳೇ ಕಳೆಯುತ್ತದೆ. ವಿಳಂಬ ಅಸ್ತ್ರ ಬಳಸುವಲ್ಲಿ ಪರಿಣತಿ ಪಡೆದಿರುವ ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ಇದೇ ಸಿದ್ಧ ಉತ್ತರಗಳನ್ನು ನೀಡುತ್ತಾರೆ. ಇಲ್ಲವೇ ಸೆಕ್ಷನ್ 6(ಎ) ಅಡಿಯಲ್ಲಿ ಇರುವ ಅವಕಾಶ ಬಳಸಿಕೊಂಡು ಬೇರೆ ಇಲಾಖೆಗೆ ವರ್ಗಾಯಿಸಿ ಕೈತೊಳೆದುಕೊಳ್ಳುತ್ತಿದ್ದಾರೆ.

'ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಕ್ಕೆ ನೀಡಬಹುದಾದ ಮಾಹಿತಿಯಾಗಿದ್ದರೆ ಅದನ್ನು ಯಾವುದೇ ವ್ಯಕ್ತಿಗೆ ನೀಡಬಹುದು' ಎಂದು ನಿಯಮ ಹೇಳುತ್ತದೆ. ಆದರೆ, ಈ ಕಾಯ್ದೆಯಡಿ ಅರ್ಜಿ ಹಾಕಿದ ಕೂಡಲೇ ಮಾಹಿತಿ ಸಿಗುತ್ತದೆ ಎಂಬ ಸ್ಥಿತಿ ಈಗ ಉಳಿದಿಲ್ಲ. ಸಾಮಾನ್ಯ ಜನರಂತೂ ಸರ್ಕಾರಿ ಕಚೇರಿ ಮತ್ತು ಮಾಹಿತಿ ಆಯೋಗಕ್ಕೆ ಓಡಾಡಿದ್ದರಿಂದ ಮೆಟ್ಟಿಲು ಸವೆದಿದ್ದು ಬಿಟ್ಟರೆ ಮಾಹಿತಿಯಂತೂ ಸಿಕ್ಕಿಲ್ಲ. ಇದು ಆಡಳಿತಾಂಗದಲ್ಲಿ ಭ್ರಷ್ಟಾಚಾರ ಹೆಚ್ಚಲು ಪರೋಕ್ಷವಾಗಿ ನೆರವಾಗುತ್ತಿದೆ.

ಇನ್ನು ಮಾಹಿತಿ ಕೋರಿ ಬರುವ ಮೇಲ್ಮನವಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ ನ್ಯಾಯ ಕೊಡಿಸಬೇಕಾದ ರಾಜ್ಯ ಮಾಹಿತಿ ಆಯೋಗದಲ್ಲೂ ಅರ್ಜಿಗಳು ವರ್ಷಗಟ್ಟಲೆ ಕೊಳೆಯುವಂತಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಮಾಹಿತಿ ನೀಡಲು ನಿರಾಕರಿಸುತ್ತಿರುವುದು ಆಯೋಗಕ್ಕೆ ಹೆಚ್ಚಿನ ಮೇಲ್ಮನವಿಗಳು ಬರುವಂತಾಗಿದೆ. ದಿನಕ್ಕೆ 200ಕ್ಕೂ ಹೆಚ್ಚು ಮೇಲ್ಮನವಿಗಳನ್ನು ಆಯೋಗ ಸ್ವೀಕರಿಸುತ್ತಿದ್ದು, ಅದನ್ನು ನಿಭಾಯಿಸುವಷ್ಟು ಸಾಮರ್ಥ್ಯ ಆಯೋಗಕ್ಕೆ ಇಲ್ಲ.

'ಶೇ 85ರಷ್ಟು ಮಂದಿಗೆ ಕೋರಿರುವ ಮಾಹಿತಿ ಸಿಗುತ್ತಿಲ್ಲ. ಅದನ್ನು ಪ್ರಶ್ನಿಸಿ ಸಲ್ಲಿಸುವ ಮೇಲ್ಮನವಿಗಳೂ ಮೇಲಾಧಿಕಾರಿಗಳ ಬಳಿ ಧೂಳು ಹಿಡಿಯುತ್ತವೆ. ಎರಡನೇ ಮೇಲ್ಮನವಿ ಪ್ರಾಧಿಕಾರವಾದ ಮಾಹಿತಿ ಆಯೋಗದ ಮೊರೆ ಹೋದರೆ ಅರ್ಜಿಗಳ ವಿಚಾರಣೆಗೆ ಬರಲು ವರ್ಷಗಟ್ಟಲೆ ಕಾಲ ಹಿಡಿಯುತ್ತದೆ' ಎಂದು ಮಾಹಿತಿ ಹಕ್ಕು ಕಾರ್ಯಕರ್ತ ಭಾಸ್ಕರನ್ ಹೇಳುತ್ತಾರೆ.

ಕಾಯ್ದೆಯ ಸೆಕ್ಷನ್ 4(ಎ) ಪ್ರಕಾರ ಮಾಹಿತಿ ಹಕ್ಕಿಗೆ ಅನುಕೂಲ ಆಗುವಂತೆ ದಾಖಲೆಗಳನ್ನು 120 ದಿನಗಳಲ್ಲಿ ವೆಬ್‌ಸೈಟ್‌ಗಳಲ್ಲಿ ಅಪ್‌ಲೋಡ್ ಮಾಡಬೇಕು. ಇಲ್ಲೇ ಮಾಹಿತಿಗಳು ಸಿಕ್ಕರೆ ಈ ಕಾಯ್ದೆಯಡಿ ಅರ್ಜಿ ಸಲ್ಲಿಸುವ ಸಂಖ್ಯೆ ಕಡಿಮೆಯಾಗುತ್ತವೆ. ಆದರೆ, ಯಾವುದೇ ಇಲಾಖೆಯೂ ಈ ನಿಯಮ ಪಾಲಿಸುವುದಿಲ್ಲ. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವೆಬ್‌ಸೈಟ್ ತೆರೆದು ಮಾಹಿತಿ ಪರಿಶೀಲನೆಗೆ ಮುಂದಾದರೆ, ಮಾಹಿತಿ ಹಕ್ಕು ವಿಭಾಗ 'ಕಮಿಂಗ್ ಸೂನ್' ಎಂಬ ಫಲಕ ತೂಗಾಡುವುದು ಕಾಣಿಸುತ್ತದೆ.

ಸೇವಾ ನಿಯಮವೇ ಇಲ್ಲ

ರಾಜ್ಯ ಮಾಹಿತಿ ಆಯೋಗದಲ್ಲಿ ಒಬ್ಬನೇ ಒಬ್ಬ ಕಾಯಂ ನೌಕರ ಇಲ್ಲ. ಕಾಯ್ದೆ ಜಾರಿಗೆ ಬಂದು 17 ವರ್ಷಗಳು ಕಳೆದರೂ ನೌಕರರ ನೇಮಕಕ್ಕೆ ಸೇವಾ ನಿಯಮವೇ ರೂಪುಗೊಂಡಿಲ್ಲ.

ಮುಖ್ಯ ಆಯುಕ್ತರು ಸೇರಿ 11 ಆಯುಕ್ತರ ಹುದ್ದೆಗಳಿದ್ದು, ಅದರಲ್ಲಿ ಬೆಳಗಾವಿ ಪೀಠದ ಆಯುಕ್ತರ ಹುದ್ದೆ ಖಾಲಿ ಇದೆ. ಬೆಂಗಳೂರಿನಲ್ಲಿ ಖಾಲಿ ಇದ್ದ ಮೂರು ಹುದ್ದೆಗಳನ್ನು ಇತ್ತೀಚೆಗಷ್ಟೇ ಭರ್ತಿ ಮಾಡಲಾಗಿದೆ.

ಆಯೋಗಕ್ಕೆ ಮಂಜೂರಾದ 142 ಹುದ್ದೆಗಳಿದ್ದು, ಇವುಗಳಲ್ಲಿ 116 ಹುದ್ದೆಗಳಲ್ಲಿ ಸಿಬ್ಬಂದಿ ಈಗ ಕಾರ್ಯ ನಿರ್ವಹಿಸುತ್ತಿದ್ದಾರೆ. ಕೇವಲ ಎಂಟು ಮಂದಿಯನ್ನು ಬಿಟ್ಟರೆ ಉಳಿದವರು ಹೊರಗುತ್ತಿಗೆ ಸಿಬ್ಬಂದಿ. ಅವರೂ ಬೇರೆ ಇಲಾಖೆಗಳಿಂದ ನಿಯೋಜನೆಗೊಂಡವರು.

ಪ್ರಮುಖವಾಗಿ ಪರಿಣತ ತೀರ್ಪು ಬರಹಗಾರರು, ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರು ಬೇಕು. ಕೌಶಲ ಇರುವವರ ಲಭ್ಯತೆ ಇಲ್ಲದಿರುವುದು ಅರ್ಜಿಗಳ ಶೀಘ್ರ ವಿಲೇವಾರಿಗೆ ತೊಡಕಾಗಿದೆ ಎನ್ನುತ್ತಾರೆ ಆಯೋಗದ ಅಧಿಕಾರಿಗಳು.

'ಸೇವಾ ನಿಯಮ ರೂಪಿಸಲು ಸರ್ಕಾರಕ್ಕೆ ಹತ್ತಾರು ಬಾರಿ ಪ್ರಸ್ತಾವನೆ ಸಲ್ಲಿಸಿ ಆಯೋಗದ ಅಧಿಕಾರಿಗಳು ರೋಸಿ ಹೋಗಿದ್ದಾರೆ. ಸರ್ಕಾರಕ್ಕೆ ಮಾಹಿತಿ ಆಯೋಗದ ಮತ್ತು ಮಾಹಿತಿ ಹಕ್ಕು ಕಾಯ್ದೆ ಬಗ್ಗೆ ಇರುವ ಜಾಣಗುರುಡಿಗೆ ಇದು ಉದಾಹರಣೆ' ಎನ್ನುತ್ತಾರೆ ಮಾಹಿತಿ ಹಕ್ಕು ಕಾರ್ಯಕರ್ತರು.

ಕಾಯ್ದೆ ತಿದ್ದುಪಡಿ ಅಗತ್ಯ



ಮಾಹಿತಿ ಹಕ್ಕು ಕಾಯ್ದೆ ಹಲವರಿಗೆ ನ್ಯಾಯ ಕೊಡಿಸುವಲ್ಲಿ ಯಶಸ್ವಿಯಾಗಿದೆ. ಆದರೆ, ಕಾಯ್ದೆಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸುವ ಮೂಲಕ ಈ ಕಾಯ್ದೆಗೆ ಮತ್ತಷ್ಟು ಬಲ ನೀಡುವ ಅಗತ್ಯವಿದೆ ಎಂದು ರಾಜ್ಯ ಮುಖ್ಯ ಮಾಹಿತಿ ಆಯುಕ್ತ ಎನ್.ಸಿ.ಶ್ರೀನಿವಾಸ್ ಹೇಳಿದರು.

ಸಾರ್ವಜನಿಕ ಮಾಹಿತಿ ಅಧಿಕಾರಿ ಸಕಾರಣವಿಲ್ಲದೆ ಮಾಹಿತಿ ನಿರಾಕರಿಸಿದರೆ ಗರಿಷ್ಠ ₹25 ಸಾವಿರ ತನಕ ದಂಡ ವಿಧಿಸಲು ಅವಕಾಶ ಇದೆ. ಆದರೆ, ಅದನ್ನು ವಸೂಲಿ ಮಾಡುವ ವಿಧಾನ ಇಲ್ಲ. ಮೊದಲನೇ ಮೇಲ್ಮನವಿ ಪ್ರಾಧಿಕಾರ ಆಗಿರುವ ಮೇಲಾಧಿಕಾರಿ ವಿರುದ್ಧ ಯಾವುದೇ ಶಿಸ್ತು ಕ್ರಮವೂ ಇಲ್ಲ, ದಂಡವೂ ಇಲ್ಲ. ಈ ಎರಡು ದೋಷಗಳನ್ನು ಸರಿಪಡಿಸಿಬೇಕು. ದಂಡ ವಸೂಲಿಗೆ ವಿಧಾನ ನಿಗದಿಪಡಿಸಬೇಕು ಮತ್ತು ಮೇಲ್ಮನವಿ ಅಧಿಕಾರಿಗೆ ಹೊಣೆಗಾರಿಕೆ ನಿಗದಿ ಮಾಡಬೇಕು. ಈ ಸಂಬಂಧ ಕಾಯ್ದೆ ತಿದ್ದುಪಡಿ ಮಾಡಬೇಕು ಎಂದರು.

ಮಾಹಿತಿ ಮುಚ್ಚಿಡಲು ಹೈಕೋರ್ಟ್‌ಗೆ

ಮಾಹಿತಿ ಆಯೋಗ ನೀಡುವ ಆದೇಶಗಳನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವ ಮೂಲಕ ಜನರಿಗೆ ಮಾಹಿತಿ ಸಿಗದಂತೆ ಮಾಡುವುದನ್ನೂ ಅಧಿಕಾರಿ ವರ್ಗ ರೂಢಿಸಿಕೊಂಡಿದೆ.

ಉತ್ತರ ಪತ್ರಿಕೆಗಳ ನಕಲು ಪ್ರತಿಯನ್ನು ಪರೀಕ್ಷೆ ಬರೆದಿದ್ದ ಅಭ್ಯರ್ಥಿಗೆ ನೀಡುವಂತೆ ಮಾಹಿತಿ ಆಯೋಗ ಆದೇಶ ಹೊರಡಿಸಿತ್ತು. ಅದನ್ನು ಪ್ರಶ್ನಿಸಿ ಕೆಪಿಎಸ್‌ಸಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿ ತಡೆಯಾಜ್ಞೆ ಪಡೆದುಕೊಂಡಿದೆ. ಮಾಹಿತಿ ಕೋರಿದ್ದವರು ಹೈಕೋರ್ಟ್ ಸುತ್ತಾಡಿ ತಡೆಯಾಜ್ಞೆ ತೆರವುಗೊಳಿಸುವಷ್ಟು ಶಕ್ತಿ ಬಹುತೇಕರಲ್ಲಿ ಇರುವುದಿಲ್ಲ.

ಕೆಪಿಎಸ್‌ಸಿ ಮಾತ್ರವಲ್ಲ, ಸಾರಿಗೆ ಇಲಾಖೆ, ವಿಶ್ವವಿದ್ಯಾಲದಯ ಅನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳು ಮಾಹಿತಿ ಒದಗಿಸದೆ ಕೋರ್ಟ್‌ನಲ್ಲಿ ತಡೆಯಾಜ್ಞೆ ತರುವ ಪರಿಪಾಟ ಬೆಳೆಸಿಕೊಂಡಿವೆ. ತಡೆಯಾಜ್ಞೆ ಪಡೆಯಲು ಈ ಸಂಸ್ಥೆಗಳು ಖಾಸಗಿ ವಕೀಲರನ್ನು ನೇಮಿಸಿಕೊಂಡು ಹಣ ಪಾವತಿಸುತ್ತಿವೆ. ಸರ್ಕಾರಿ ವಕೀಲರಿದ್ದರೂ, ಖಾಸಗಿ ವಕೀರಲರನ್ನು ಇಟ್ಟು ಲಕ್ಷಗಟ್ಟಲೆ ಸರ್ಕಾರದ ಹಣವನ್ನೇ ಕೊಟ್ಟು ವಾದ ಮಾಡಿಸುತ್ತಿವೆ. ಜನ ಸಾಮಾನ್ಯರಿಗೆ ಮಾಹಿತಿ ನಿರಾಕರಿಸಿಲು ಸರ್ಕಾರದ ಹಣವನ್ನೇ ವಕೀಲರಿಗೆ ಖರ್ಚು ಮಾಡುತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದ ಮಾಹಿತಿ ಹಕ್ಕು ಕಾಯ್ದೆ ಇದ್ದರೂ ಇಲ್ಲದ ಸ್ಥಿತಿಗೆ ತಲುಪಿದೆ ಎನ್ನುತ್ತಾರೆ ನಿವೃತ್ತ ಮಾಹಿತಿ ಆಯುಕ್ತರು.

ದುರ್ಬಳಕೆ: ಕೆಲವರಿಗೆ ಇದೇ ಉದ್ಯೋಗ

ಆಡಳಿತದಲ್ಲಿ ಪಾರದರ್ಶಕತೆ ತರಲು ಜಾರಿಗೆ ತಂದ ಮಾಹಿತಿ ಹಕ್ಕು ಕಾಯ್ದೆಯನ್ನು ದುರ್ಬಳಕೆ ಮಾಡಿಕೊಂಡವರ ಸಂಖ್ಯೆಯೂ ಕಡಿಮೆಯೇನಿಲ್ಲ.

ಕಾಯ್ದೆಯ ಹೆಸರಿನಲ್ಲಿ ಅಧಿಕಾರಿಗಳನ್ನು ಬೆದರಿಸಿ 'ವಸೂಲಿ' ಮಾಡಿಕೊಳ್ಳುವ ತಂಡಗಳು ಎಲ್ಲಾ ಊರಿನಲ್ಲೂ ತಲೆ ಎತ್ತಿಕೊಂಡವು. ಮಾಹಿತಿ ಸಲ್ಲಿಸಿದ ಕೂಡಲೇ ಅಧಿಕಾರಿ ಒಪ್ಪಂದಕ್ಕೆ ಬಂದರೆ ಅಲ್ಲಿಗೇ ಮುಕ್ತಾಯವಾಗುತ್ತವೆ. ಇಲ್ಲದಿದ್ದರೆ ಮಾಹಿತಿ ಆಯೋಗದ ಮುಂದೆ ಬಂದು ಮಾಹಿತಿ ಪಡೆದುಕೊಂಡು ಬಳಿಕವೂ ಕಾನೂನು ಹೋರಾಟಕ್ಕೆ ಇಳಿಯದೆ ವ್ಯವಹಾರ ಕುದುರಿಸಿಕೊಳ್ಳುವುದೂ ಹೆಚ್ಚುತ್ತಿದೆ. 'ಅರ್ಜಿ ಸಲ್ಲಿಸಿ ಮಾಹಿತಿ ಕೋರುವುದು ಕೆಲವರಿಗೆ ಪರಿಪಾಟವೇ ಆಗಿ ಹೋಗಿದೆ. ಬಿಪಿಎಲ್ ಕಾರ್ಡುದಾರರಿಗೆ ಹೊರತುಪಡಿಸಿ ಉಳಿದವರು ಮಾಹಿತಿ ಕೋರಲು ಕನಿಷ್ಠ ₹500 ನಿಗದಿ ಮಾಡಿದರೆ ಇದೇ ಕೆಲಸಕ್ಕೆ ಇಳಿದಿರುವ ಕೆಲವರಿಗೆ ಕಡಿವಾಣ ಹಾಕಿದಂತೆ ಆಗಲಿದೆ. ಈಗ ಶುಲ್ಕವೇ ಇಲ್ಲದಿರುವುದು ಅರ್ಜಿ ಸಲ್ಲಿಸುವವರಿಗೆ ಸಲೀಸಾಗಿದೆ. ಆದ್ದರಿಂದಲೇ ಒಬ್ಬರೇ ಸಾವಿರಕ್ಕೆ ಹೆಚ್ಚು ಮೇಲ್ಮನವಿಗಳನ್ನು ಆಯೋಗಕ್ಕೆ ಸಲ್ಲಿಸಿರುವ ಉದಾಹರಣೆಗಳಿವೆ' ಎನ್ನುತ್ತಾರೆ ಅಧಿಕಾರಿಗಳು.

'ತಮಗೆ ಆಗಿರುವ ಅನ್ಯಾಯ ಸರಿಪಡಿಸಿಕೊಳ್ಳಲು ಮಾಹಿತಿ ಕೇಳುವ ಅರ್ಜಿಗಳಿಂತ ಇದನ್ನೇ ಉದ್ಯೋಗ ಮಾಡಿಕೊಂಡಿರುವ ಜನರೇ ಹೆಚ್ಚಿನ ಅರ್ಜಿಗಳನ್ನು ಸಲ್ಲಿಸುತ್ತಿದ್ದಾರೆ. ಆಗ ನಿಜವಾಗಿ ತೊಂದರಿಗೆ ಸಿಲುಕಿರುವ ವ್ಯಕ್ತಿಯ ಅರ್ಜಿ ವಿಚಾರಣೆಗೆ ಬರುವುದು ವಿಳಂಬವಾಗುತ್ತದೆ' ಎಂದು ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿ ಎರಡು ವರ್ಷಗಳಿಂದ ಕಾಯುತ್ತಿರುವ ವ್ಯಕ್ತಿಯೊಬ್ಬರು ನೋವು ತೋಡಿಕೊಂಡರು.

ಸ್ಪಷ್ಟನೆ

ಶನಿವಾರದ ಸಂಚಿಕೆಯಲ್ಲಿ ಪ್ರಕಟವಾದ ಮೇ. ಜ. (ನಿವೃತ್ತ) ಎಸ್.ಜಿ. ಒಂಬತ್ಕೆರೆ ಅವರ ಲೇಖನದಲ್ಲಿ ಇದ್ದ ಈ ಸಾಲುಗಳು (ಅಗ್ನಿಪಥ ಯೋಜನೆಯು ಕೆಲವು ಸಾವಿರ ಜನರಿಗೆ ಉದ್ಯೋಗ ನೀಡಬಹುದು. ಸರ್ಕಾರವೇ ಹೇಳಿರುವಂತೆ, ಜನರಲ್ಲಿ ಶಿಸ್ತು, ದೇಶಪ್ರೇಮ, ರಾಷ್ಟ್ರೀಯತೆ ಬೆಳೆಸಬಹುದು. ಆದರೆ, ಆಡಳಿತ ಪಕ್ಷದ ಚುನಾವಣಾ ಗೆಲುವಿನ ಸಾಧ್ಯತೆಯನ್ನು ಹೆಚ್ಚಿಸುವುದು ನೇಪಥ್ಯದಲ್ಲಿ ಇರುವ ಉದ್ದೇಶ.) ಕಣ್ತಪ್ಪಿನಿಂದ ಪ್ರಕಟವಾಗಿವೆ. ಇದು ಲೇಖಕರ ಅಭಿಪ್ರಾಯ ಅಲ್ಲ.

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 19-6-1997

• **ಕಾವೇರಿ: ಕೇಂದ್ರದ ಕರಡು ಯೋಜನೆಗೆ ರಾಜ್ಯ ವಿರೋಧ**

ನವದೆಹಲಿ, ಜೂನ್ 18 – ಕಾವೇರಿ ನೀರು ಹಂಚಿಕೆ ಕುರಿತು ನ್ಯಾಯಮಂಡಳಿ ನೀಡಿರುವ ಮಧ್ಯಂತರ ಆದೇಶದ ಜಾರಿಗೆ ಕೇಂದ್ರ ಸರ್ಕಾರ ಪ್ರಸ್ತಾವನೆ ಮಾಡಿರುವ ಕರಡು ಯೋಜನೆಯನ್ನು ಕರ್ನಾಟಕ ಸರ್ಕಾರ ತೀವ್ರವಾಗಿ ವಿರೋಧಿಸಿದೆ.

ಕರಡು ಯೋಜನೆಯಲ್ಲಿ ಮಧ್ಯಂತರ ತೀರ್ಪಿನಂತೆ ತಮಿಳುನಾಡಿಗೆ ನೀಡಬೇಕಾದ 205 ಟಿಎಂಸಿ ನೀರಿನ ಪ್ರಮಾಣವನ್ನು 180 ಟಿಎಂಸಿಗೆ ಇಳಿಸಲಾಗಿಲ್ಲ. ಬಿಡಬೇಕಾದ ಒಟ್ಟು ನೀರಿನ ಪ್ರಮಾಣವನ್ನು ಕಾಲದ ಅಂತ್ಯದ ವೇಳೆಗೆ ಲೆಕ್ಕ ಹಾಕಬೇಕು, ವಾರ ಅಥವಾ ತಿಂಗಳಿನ ಅಂತ್ಯದ ವೇಳೆಗಲ್ಲ ಎಂದು ಕರ್ನಾಟಕ ನೀರಾವರಿ ಸಚಿವ ಕೆ.ಎನ್. ನಾಗೇಗೌಡ ಕರಡನ್ನು ಟೀಕಿಸಿದ್ದಾರೆ.

50 ವರ್ಷಗಳ ಹಿಂದೆ — ಸೋಮವಾರ, 19-6-1972

• **ಕಬ್ಬಿಗೆ ಕನಿಷ್ಠ ಬೆಲೆ ಹೆಚ್ಚಿಸಲು ಕೃಷಿ ಆಯೋಗದ ಶಿಫಾರಸು**

ನವದೆಹಲಿ, ಜೂನ್ 18 – ಒಂದು ಕ್ವಿಂಟಲ್ ಕಬ್ಬಿಗೆ ಕನಿಷ್ಠ 8 ರೂ.ಗಳ ಕನಿಷ್ಠ ಬೆಲೆಯನ್ನು 1972–73ರಲ್ಲಿ ನಿಗದಿ ಮಾಡಬೇಕೆಂದು ಕೃಷಿ ಬೆಲೆ ಆಯೋಗ ಶಿಫಾರಸು ಮಾಡಿದೆ.

ಈ ಕನಿಷ್ಠ ಬೆಲೆಯು ಶೇಕಡಾ 9ರಷ್ಟು ಇಳುವರಿ ಬರುವ ಕಬ್ಬಿಗೆ ಮಾತ್ರ ಅನ್ವಯಿಸಲಿದ್ದು, ಅದಾದ ನಂತರ ಪ್ರತಿ ಶೇಕಡಾ 0.1ರಷ್ಟು ಹೆಚ್ಚು ಇಳುವರಿಗೆ 75 ಪೈಸೆಯಷ್ಟು ಹೆಚ್ಚು ಬೆಲೆ ಕೊಡಬೇಕೆಂದು ಶಿಫಾರಸು ತಿಳಿಸಿದೆ. ಈಗ ಕನಿಷ್ಠ ಬೆಲೆಯು ಶೇಕಡಾ 9.4ರಷ್ಟು ಇಳುವರಿಯ ಕಬ್ಬಿಗೆ ಕ್ವಿಂಟಲಿಗೆ 7 ರೂ. 37 ಪೈಸೆ ಇದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜೂನ್ 19, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಷಷ್ಠಿ ಗಂ. 22-19 ನಕ್ಷತ್ರ: ಧನಿಷ್ಠಾ ಗಂ. 05-56, ಶತಭಿಷ ಗಂ. 28-53 ಯೋಗ: ವಿಷ್ಕಂಭ ಗಂ. 10-52, ಕರಣ: ಗರಜೆ ಗಂ. 11-14, ಮಿಥುನ ಮಾಸದ 04 ನೇ ದಿನ.
ರಾಹುಕಾಲ : ಸಾಯಂಕಾಲ 04:30 – 06:00
ಸೂರ್ಯೋದಯ : 06-08 ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 19 ಜುಲ್ಖಾಯಿದ್
ಅದೃಷ್ಟ ಸಂಖ್ಯೆ : 3, 12

ಮೇಷ: ಅನಿವಾರ್ಯ ಕಾರಣಗಳಿಂದಾಗಿ ಸಂಸಾರದಲ್ಲಿ ನಿಮ್ಮ ಜವಾಬ್ದಾರಿ ಜಾಸ್ತಿಯಾಗುವುದು. ಜಾಣ್ಮೆ ಮತ್ತು ಅವಿರತ ದುಡಿಮೆಯಿಂದ ನೀವು ಮಾಡುತ್ತಿರುವ ವ್ಯವಹಾರದಲ್ಲಿ ದುಪ್ಪಟ್ಟು ಲಾಭವಾಗಿರುವುದು ಗಮನಕ್ಕೆ ಬರಲಿದೆ.

ವೃಷಭ: ಲಾರಿ ಹಾಗೂ ಟ್ಯಾಂಕರ್‌ನಂತಹ ವಾಹನದ ಮಾಲೀಕರಿಗೆ ಇಂದು ಒಳ್ಳೆಯ ದಿನ. ನಿಮ್ಮ ವಾಹನಗಳು ಮತ್ತು ಅದರ ಚಾಲಕರಿಗೆ ಬಿಡುವಿಲ್ಲದ ಕೆಲಸ. ಇದರಿಂದ ಬಂದ ಲಾಭ ಹಿಂದಿನ ನಷ್ಟಗಳನ್ನು ಮುಚ್ಚಿ ಹಾಕಲಿದೆ.

ಮಿಥುನ: ಫ್ಯಾಷನ್ ಡಿಸೈನರ್‌ಗಳು ಹೆಚ್ಚಿನ ಅವಕಾಶಗಳನ್ನು ಹಾಗೂ ಉತ್ತಮ ಧನಲಾಭವನ್ನೂ ಪಡೆಯುವರು. ನಂಬಿಕಸ್ಥರಿಂದ ಮೋಸ ಹೋಗುವ ಸಾಧ್ಯತೆ, ಜಾಗ್ರತೆವಹಿಸಿ. ಪಾಲಕರಾಗುವ ಸುದ್ದಿ ತಿಳಿದು ಅತೀವ ಸಂತಸವಾಗುವುದು.

ಕರ್ಕಾಟಕ: ನಿಮ್ಮ ಅಭಿಪ್ರಾಯಗಳು ಬೇರೆಯವರ ಆಲೋಚನೆಗೆ ಹೊಂದಿಕೊಳ್ಳುವುದು ಕಷ್ಟಕರ. ತಂದೆಯವರು ನಿಮ್ಮ ನೆರವಿಗೆ ನಿಲ್ಲಲಿದ್ದಾರೆ. ಮುದ್ರಣ ವೃತ್ತಿಯವರು ತಪ್ಪಿಲ್ಲದ ಕಾರ್ಯ ನಿರ್ವಹಿಸುವುದರಿಂದ ಉತ್ತಮ ಲಾಭ.

ಸಿಂಹ: ಆದರ್ಶವಾದಿ ಗುಂಪಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ನಿಮ್ಮ ವ್ಯಕ್ತಿತ್ವದಲ್ಲಿ ಒಳ್ಳೆಯ ಬದಲಾವಣೆಗಳಾಗುವುದು. ಸಜ್ಜನರ ಸಹವಾಸ. ಸ್ನೇಹಿತರೊಂದಿಗೆ ಸಂತೋಷ ಕೂಟದಲ್ಲಿ ಭಾಗಿಯಾಗುವ ಅವಕಾಶ ಸಿಗಲಿದೆ.

ಕನ್ಯಾ: ವ್ಯಾಪಾರದಲ್ಲಿ ಹಿಂದೆ ನೀವು ತೆಗೆದುಕೊಂಡಿದ್ದ ನಿರ್ಧಾರ ಸರಿಯಾದುದೆಂದು ನಿಮಗೆ ಮನವರಿಕೆಯಾಗುವುದು. ತಂದೆ ತಾಯಿಯವರ ಜೊತೆಗೆ ಕಿರು ತಿರುಗಾಟವನ್ನು ಕೈಗೊಳ್ಳುವಿರಿ. ಮಾನಸಿಕ ಕ್ಷೋಭೆ ದೂರ.

ತುಲಾ: ಮನೆಯಲ್ಲಿ ದೈವಕಾರ್ಯವನ್ನು ನಡೆಸುವ ಬಗ್ಗೆ ಹಿರಿಯರೊಂದಿಗೆ ಚರ್ಚೆ ಮಾಡಿ ತೀರ್ಮಾನಿಸಿ. ಹೊಸ ಜನರ ಸಂಪರ್ಕವು ಉತ್ತಮ ಧನ ಲಾಭವನ್ನು ತರಲಿದೆ. ಚರ್ಮದ ವಸ್ತುಗಳ ಮಾರಾಟದಿಂದ ಲಾಭವಾಗುತ್ತದೆ.

ವೃಶ್ಚಿಕ: ಷೇರು ಮಾರುಕಟ್ಟೆಯಲ್ಲಿನ ಬದಲಾವಣೆ ಗಮನಿಸಿಕೊಂಡು ನೀವು ತೆಗೆದುಕೊಂಡಂತಹ ತೀರ್ಮಾನ ಸರಿಯಾದದ್ದಾಗಲಿದೆ. ಆಹಾರ ಪದಾರ್ಥಗಳ ಬಳಕೆಯ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿಕೊಳ್ಳುವ ಪ್ರಯತ್ನ ಮಾಡಿ.

ಧನು: ಕ್ರೀಡೆ ಮತ್ತು ಚಿತ್ರಕಲೆಯಲ್ಲಿ ಆಸಕ್ತಿ ಹೆಚ್ಚಲಿದೆ. ಪತ್ರಿಕಾ ವರದಿಗಾರರಿಂದ ತಪ್ಪುಗಳು ಸಂಭವಿಸುವ ಲಕ್ಷಣಗಳಿವೆ. ವಿಷಯವನ್ನು ಪರಾಮರ್ಶಿಸಿ ಸ್ಪಷ್ಟಪಡಿಸಿಕೊಂಡು ಪ್ರಕಟಿಸುವಲ್ಲಿ ಹೆಚ್ಚಿನ ಗಮನವಹಿಸುವುದು ಒಳ್ಳೆಯದು.

ಮಕರ: ಸಮಸ್ಯೆ ಮತ್ತು ದುಃಖವು ಎಲ್ಲರ ಜೀವನದಲ್ಲೂ ಇರುವುದು. ಅದಕ್ಕಾಗಿ ಹೆದರಿಕೆ ಬೇಡ. ಬಹುಮುಖದ ಖರ್ಚು-ವೆಚ್ಚಗಳನ್ನು ನಿರ್ವಹಿಸಬೇಕಾಗಬಹುದು. ಸಮಾಜ ಸೇವೆಯಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳುವಿರಿ.

ಕುಂಭ: ವಿದ್ಯಾರ್ಥಿಗಳಿಗೆ ಹೊಸ ವಿಚಾರದ ಮಾಹಿತಿ ಸಿಗಲಿದೆ. ಕಾರ್ಖಾನೆಯ ವಿದ್ಯುತ್ ಲೋಪಗಳನ್ನು ಸರಿಪಡಿಸಲು ಅಧಿಕ ವೆಚ್ಚವಾಗುವುದು. ಹಿರಿಯ ಅಧಿಕಾರಿಯೊಬ್ಬರ ಭೇಟಿಗಾಗಿ ಬಹಳ ಸಮಯ ಕಾಯುವಂತಾಗಲಿದೆ.

ಮೀನ: ಕಲಹ ಉಂಟುಮಾಡುವ ವಿಚಾರಗಳನ್ನು ನಿಯಂತ್ರಿಸುವ ಜಾಣ್ಮೆ ಇರಲಿ. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತತೆ ತೋರುವುದು. ವಾಹನ ಅಥವಾ ವಿದ್ಯುತ್ ಉಪಕರಣಗಳ ಮೆಕ್ಯಾನಿಕ್‌ಗಳ ಆದಾಯ ಹೆಚ್ಚಳ.

ಪದಬಂಧ 4993 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಆಡಿಗೂ ಆನೆಗೂ ಇರುವಂಥ ವ್ಯತ್ಯಾಸ (6)
4. ಶ್ರೀ ವೆಂಕಟೇಶ್ವರನ ನೆಲೆ ನಾಡು (4)
5. ಇದು ಸುಲಭ ಸಾಧ್ಯವಲ್ಲದುದು (3)
7. ಲೆಕ್ಕ ಶಾಸ್ತ್ರವಿದು (3)
10. ಗಡಿ ಹತ್ತಿರ ತಲೆದೋರಿದ ಶೀತ (3)
12. ದುರಸ್ತಿಯನ್ನು ಹೀಗೆನ್ನಿ (3)
13. ಈಕೆ ವಿದ್ಯಾಧಿದೇವತೆ (4)
15. ಯಾತ್ರಿಕರು ಇಳಿದು ಕೊಳ್ಳಲು ಮಾಡಿರುವ ವಸತಿ (6)

ಮೇಲಿಂದ ಕೆಳಕ್ಕೆ
1. ಆ ಜಗಲಿಯ ಹತ್ತಿರವಿರುವ ಹೆಬ್ಬಾವು! (4)
2. ಮನ್ಮಥನ ಪತ್ನಿ (2)
3. ಅಳತೆಗೆ ಮೀರಿದ ಸ್ಥಿತಿ (3)
6. ಹಜಾರವನ್ನು ಹೀಗೂ ಹೇಳುವರು (4)
7. ವ್ಯಾಯಾಮ ಶಾಲೆಯಿದು (3)
8. ತರತರದ ಕಾಯಿ ಪಲ್ಲೆ (4)
9. ತಡವಾಗಿ ಕಾಣಿಸಿದ ಜಲಪಾತ (4)
11. ಓಡುತ್ತಾ ಹೋಗಿ ಸುದ್ದಿ ಮುಟ್ಟಿಸುವವನು (4)
14. ಪ್ರಗತಿಯಲ್ಲಿರುವ ವಿರೋಧ ತಲೆ ಕೆಳಗಾಗಿದೆಯಲ್ಲಾ! (2)



4992ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. ಗಡವ 4. ರಸಪೂರ್ಣ 6. ಕಮಂಡಲು 9. ನವೀನ 11. ಕಸೂತಿ 13. ಹಸುಗೂಸು 16. ಮದಗಜ 17. ಲಿಲಾವು

ಮೇಲಿಂದ ಕೆಳಕ್ಕೆ: 2. ವರಮಾನ 3. ಗರುಡ 5. ರ್ಣಕ 7. ಲುವಾಹಲಿ 8. ಕಡುದಾಹ 10. ನಡುಕ 12. ತಿಲಾಂಜಲಿ 14. ಸುವರ್ಣ 15. ಸುಮ

ಸುಡೊಕು 5379

	5		7		2		8	
						3		4
4	7		3		9		1	
1		4	8				2	3
				3				
8		7			1		5	9
2		3	9		6	5		8
		6						
	8		5		4		3	2

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5378 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪರಿಷ್ಕೃತ ಪಠ್ಯಪುಸ್ತಕಗಳ ವಿರುದ್ಧ 'ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ' ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಶನಿವಾರ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಹೋರಾಟ ಸಮಿತಿ ಅಧ್ಯಕ್ಷ ಜಿ.ಬಿ. ಪಾಟೀಲ, ಸಾಹಿತಿ ಬರಗೂರು ರಾಮಚಂದ್ರಪ್ಪ, ವಕೀಲ ಎ.ಪಿ ರಂಗನಾಥ್, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ತುಮಕೂರಿನ ಪಟ್ಟನಾಯಕನಹಳ್ಳಿಯ ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ, ಚಿತ್ರದುರ್ಗದ ಬಂಜಾರ ಗುರುಪೀಠದ ಪೀಠಾಧ್ಯಕ್ಷ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಛಲವಾದಿ ಮಹಾಸಂಸ್ಥಾನದ ಬಸವ ನಾಗಿದೇವ ಸ್ವಾಮೀಜಿ ಮತ್ತು ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಕುಮಾರಚಂದ್ರಶೇಖರನಾಥ ಸ್ವಾಮೀಜಿ ಸಂವಿಧಾನದ ಪೀಠಿಕೆ ಪ್ರದರ್ಶಿಸಿದರು (ಎಡ ಚಿತ್ರ), ಸಂಗೊಳ್ಳಿ ರಾಯಣ್ಣ ವೃತ್ತದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ನಡೆಸಿದ ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ —ಪ್ರಜಾವಾಣಿ ಚಿತ್ರ

ಸಂಗೊಳ್ಳಿ ರಾಯಣ್ಣ ವೃತ್ತದಿಂದ ಸ್ವಾತಂತ್ರ್ಯ ಉದ್ಯಾನಕ್ಕೆ ಮೆರವಣಿಗೆ • ಪ್ರತಿಭಟನೆಯಲ್ಲಿ ಸಾವಿರಾರು ಮಂದಿ ಭಾಗಿ

ಪಠ್ಯಪುಸ್ತಕ ವಾಪಸ್‌ಗೆ 10 ದಿನ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ನೇತೃತ್ವದಲ್ಲಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಿದ ರಾಜ್ಯದ ವಿವಿಧ ಸಮುದಾಯಗಳ ಮಠಾಧೀಶರು, ಸಾಹಿತಿಗಳು, ಹೋರಾಟಗಾರರು ಮತ್ತು ರಾಜಕೀಯ ಮುಖಂಡರು, ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ರೂಪಿಸಿರುವ ಪರಿಷ್ಕೃತ ಪಠ್ಯಪುಸ್ತಕಗಳನ್ನು 10 ದಿನಗಳೊಳಗೆ ವಾಪಸ್ ಪಡೆಯುವಂತೆ ರಾಜ್ಯ ಸರ್ಕಾರಕ್ಕೆ ಗಡುವು ನೀಡಿದರು.

ಪರಿಷ್ಕೃತ ಪಠ್ಯಪುಸ್ತಕಗಳನ್ನು ವಿರೋಧಿಸಿ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು. ನಂತರ ನಡೆದ ಬಹಿರಂಗ ಸಮಾವೇಶದಲ್ಲಿ ನಾಲ್ಕು ಬೇಡಿಕೆಗಳುಳ್ಳ ಹಕ್ಕೊತ್ತಾಯವನ್ನು ಅಂಗೀಕರಿಸಲಾಯಿತು. ವಿವಿಧ ಕನ್ನಡಪರ ಸಂಘಟನೆಗಳು, ದಲಿತ ಸಂಘಟನೆಗಳು, ರೈತ ಸಂಘಟನೆಗಳು ಮತ್ತು ಪ್ರಗತಿಪರ ಸಂಘಟನೆಗಳು ಸಾವಿರಾರು ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಪರಿಷ್ಕೃತ ಪಠ್ಯಪುಸ್ತಕಗಳನ್ನು ತಕ್ಷಣ ವಾಪಸ್ ಪಡೆಯಬೇಕು. ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ ರೂಪಿಸಿದ್ದ ಹಳೆಯ ಪಠ್ಯಪುಸ್ತಕಗಳನ್ನೇ ಮುಂದುವರಿಸಬೇಕು. ನಾಡಗೀತೆ, ಕನ್ನಡ ಬಾವುಟ ಮತ್ತು ರಾಷ್ಟ್ರಕವಿ ಕುವೆಂಪು ಅವರನ್ನು ಅವಮಾನಿಸಿರುವ ರೋಹಿತ್ ಚಕ್ರತೀರ್ಥ ವಿರುದ್ಧ ರಾಷ್ಟ್ರದ್ರೋಹ, ನಾಡದ್ರೋಹದ ಆರೋಪದಡಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಬಂಧಿಸಬೇಕು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಂದ ತಕ್ಷಣ ರಾಜೀನಾಮೆ ಪಡೆಯಬೇಕು' ಎಂದು ಆಗ್ರಹಿಸುವ ನಿರ್ಣಯವನ್ನು ಸಭೆಯಲ್ಲಿ ಅಂಗೀಕರಿಸಲಾಯಿತು.

> **ಪಠ್ಯಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಲಾಗಿದೆ. ಪ್ರತಿಭಟನೆ ಮಾಡುವವರಿಗೆ ಸ್ವಾತಂತ್ರ್ಯ ಇದೆ**
>
> **ಬಿ.ಸಿ. ನಾಗೇಶ್**, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

ತುಮಕೂರಿನ ಪಟ್ಟನಾಯಕನಹಳ್ಳಿಯ ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ, ಮೈಸೂರಿನ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಚಿತ್ರದುರ್ಗದ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಛಲವಾದಿ ಗುರುಪೀಠದ ಬಸವ ನಾಗಿದೇವ ಸ್ವಾಮೀಜಿ, ಅರೆಶಂಕರ ಮಠದ ಸಿದ್ದರಾಮ ಚೈತನ್ಯ ಸ್ವಾಮೀಜಿ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನ್ ದಾಸ್, ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್, ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಎಸ್.ಜಿ. ಸಿದ್ದರಾಮಯ್ಯ, ಸಂಗೀತ ನಿರ್ದೇಶಕ ಹಂಸಲೇಖ ಸೇರಿದಂತೆ 500ಕ್ಕೂ ಹೆಚ್ಚು ಮಂದಿ ನಿರ್ಣಯಕ್ಕೆ ಸಹಿ ಮಾಡಿದರು.

ಸಭೆಯಲ್ಲಿ ನಿರ್ಣಯ ಮಂಡಿಸಿ ಮಾತನಾಡಿದ ಹೋರಾಟ ಸಮಿತಿ ಅಧ್ಯಕ್ಷ ಜಿ.ಬಿ. ಪಾಟೀಲ, 'ನಮ್ಮ ಬೇಡಿಕೆಗಳನ್ನು ಸರ್ಕಾರ ಹತ್ತು ದಿನಗಳೊಳಗೆ ಈಡೇರಿಸಬೇಕು. ತಪ್ಪಿದಲ್ಲಿ ಮುಂದಿನ ಹಂತದ ಹೋರಾಟ ಕೈಗೆತ್ತಿಕೊಳ್ಳಲಾಗುವುದು' ಎಂದು ಪ್ರಕಟಿಸಿದರು.

ಸ್ಥಳಕ್ಕೆ ಬರಲು ಸಿಎಂ ನಕಾರ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಬೇಕು ಎಂಬುದು ಹೋರಾಟ ಸಮಿತಿಯ ಆಗ್ರಹವಾಗಿತ್ತು. ಶುಕ್ರವಾರವೇ ಪೊಲೀಸ್ ಅಧಿಕಾರಿಗಳ ಮೂಲಕ ಮುಖ್ಯಮಂತ್ರಿಯವರಿಗೆ ಈ ಕುರಿತು ಮಾಹಿತಿ ರವಾನಿಸಲಾಗಿತ್ತು. ಶನಿವಾರ ವೇದಿಕೆಯಲ್ಲಿ ಪುನರುಚ್ಚರಿಸಲಾಯಿತು.

ಕೆಲವು ಸಮಯದ ಬಳಿಕ ಸ್ಥಳಕ್ಕೆ ಬಂದ ಪೊಲೀಸ್ ಅಧಿಕಾರಿಯೊಬ್ಬರು, 'ಪರಿಷ್ಕೃತ ಪಠ್ಯಪುಸ್ತಕಗಳನ್ನು ವಾಪಸ್ ಪಡೆಯಬೇಕು' ಎಂಬ ಅಂಶ ಬೇಡಿಕೆ ಪಟ್ಟಿಯಲ್ಲಿರುವ ಕಾರಣ ಮುಖ್ಯಮಂತ್ರಿ ಸ್ಥಳಕ್ಕೆ ಬರಲು ನಿರಾಕರಿಸಿದ್ದಾರೆ ಎಂಬ ಮಾಹಿತಿಯನ್ನು ನಂಜಾವಧೂತ ಸ್ವಾಮೀಜಿಗೆ ತಿಳಿಸಿದರು. ಈ ವಿಷಯವನ್ನು ಸ್ವಾಮೀಜಿ ಪ್ರಕಟಿಸಿದರು.

ನಂತರ ಎಚ್.ಡಿ. ದೇವೇಗೌಡ ಅವರ ಮೂಲಕ ಸರ್ಕಾರಕ್ಕೆ ಹಕ್ಕೊತ್ತಾಯದ ಮನವಿಪತ್ರ ರವಾನಿಸುವ ತೀರ್ಮಾನ ಕೈಗೊಳ್ಳಲಾಯಿತು. ವೇದಿಕೆಯಲ್ಲಿದ್ದ ಮಠಾಧೀಶರು, ರಾಜಕೀಯ ಮುಖಂಡರು, ಸಾಹಿತಿಗಳು ಮತ್ತು ಹೋರಾಟಗಾರರು ಒಟ್ಟಾಗಿ ದೇವೇಗೌಡರಿಗೆ ಮನವಿಪತ್ರವನ್ನು ಹಸ್ತಾಂತರಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಮಿತಿಯ ಗೌರವಾಧ್ಯಕ್ಷ ಸಿ.ಎಚ್. ಹನುಮಂತರಾಯ, 'ಶೈಕ್ಷಣಿಕ ಕ್ಷೇತ್ರದಲ್ಲಿ ಆಗಿರುವ ಈ ಅನ್ಯಾಯವನ್ನು ಸಹಿಸಿಕೊಂಡರೆ ನಮಗೆ ನಾವೇ ಶಿಕ್ಷಿಸಿಕೊಂಡಂತೆ. ಮುಖ್ಯಮಂತ್ರಿಯವರು ತಕ್ಷಣವೇ ಸರಿಯಾದ ತೀರ್ಮಾನ ಕೈಗೊಳ್ಳಬೇಕು. ಈ ವಿಚಾರದಲ್ಲಿ ಸರ್ಕಾರ ಮೊಂಡುತನ ಪ್ರದರ್ಶಿಸಿದರೆ ಅವಘಡಗಳಿಗೆ ಕಾರಣವಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ಹೋರಾಟ ಸಮಿತಿಯ ಗೌರವಾಧ್ಯಕ್ಷ ಎಲ್.ಎನ್. ಮುಕುಂದರಾಜ್, ಕಾರ್ಯಾಧ್ಯಕ್ಷರಾದ ಮಾವಳ್ಳಿ ಶಂಕರ್, ಹ.ರಾ. ಮಹೇಶ್, ಪ್ರಧಾನ ಕಾರ್ಯದರ್ಶಿಗಳಾದ ಆಡಿಟರ್ ನಾಗರಾಜ್, ಕೆ.ಎಚ್. ಕುಮಾರ್, ಖಜಾಂಚಿ ಎಚ್.ಸಿ. ಉಮೇಶ್, ಸಂಯೋಜಕ ಮಂಜುನಾಥ ಅದ್ದೆ ಸೇರಿದಂತೆ ಹಲವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

'ಬ್ರಾಹ್ಮಣ್ಯ ಸರಿ ಇದ್ದಿದ್ದರೆ ಬಸವಣ್ಣನವರು ಲಿಂಗ ದೀಕ್ಷೆ ನೀಡುತ್ತಿದ್ದರೆ?'

ಬ್ರಾಹ್ಮಣ್ಯದಲ್ಲಿ ಸಮಾನತೆ, ಕರುಣೆ, ಪ್ರೀತಿ ಉಕ್ಕಿ ಹರಿದು ಎಲ್ಲವೂ ಸರಿ ಇದ್ದರೆ ಬಸವಣ್ಣನವರು ಏಕೆ ಬ್ರಾಹ್ಮಣ್ಯವನ್ನು ಧಿಕ್ಕರಿಸಿ ಎಲ್ಲರಿಗೂ ಲಿಂಗದೀಕ್ಷೆ ನೀಡುತ್ತಿದ್ದರು ಎಂದು ಪಟ್ಟನಾಯಕನಹಳ್ಳಿ ಗುರುಗುಂಡ ಬ್ರಹ್ಮೇಶ್ವರ ಪೀಠದ ನಂಜಾವಧೂತ ಸ್ವಾಮೀಜಿ ಪ್ರಶ್ನಿಸಿದರು.

'ಪಠ್ಯಪುಸ್ತಕಗಳಲ್ಲಿನ ತಪ್ಪು ಸರಿಪಡಿಸಲು ಶಿಕ್ಷಣ ಸಚಿವರಿಗೆ ನಿರ್ದೇಶನ ನೀಡಿರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳುತ್ತಾರೆ. ಆದರೆ ಸಚಿವ ನಾಗೇಶ್ ಪರಿಷ್ಕೃತ ಪಠ್ಯಪುಸ್ತಕಗಳ ವಿತರಣೆಗೆ ಆದೇಶ ಹೊರಡಿಸಿದ್ದಾರೆ. ಇಂತಹ ನಡೆಯನ್ನು ಒಪ್ಪಿಕೊಂಡರೆ ಮುಂದೆ ಒಂದು ದಿನ ಇವರು ಹೇಳಿದ್ದನ್ನೇ ಸಂವಿಧಾನ ಎಂದು ಒಪ್ಪಬೇಕಾಗಬಹುದು' ಎಂದರು.

'ಗೋಕಾಕ್ ಹೋರಾಟದ ಮಾದರಿ ಅಗತ್ಯ'

'ಪರಿಷ್ಕೃತ ಪಠ್ಯಪುಸ್ತಕಗಳ ವಿರುದ್ಧದ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಗೋಕಾಕ್ ಚಳವಳಿಯ ಮಾದರಿ ಅನುಸರಿಸುವುದು ಸೂಕ್ತ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹೇಳಿದರು.

'ಶಾಲೆಗಳು ಆರ್‌ಎಸ್‌ಎಸ್ ಪಡಸಾಲೆಯಲ್ಲ'

'ಒಂದು ಸಿದ್ಧಾಂತವನ್ನು ಹೇರುವ ಪಠ್ಯಪುಸ್ತಕಗಳನ್ನು ರೂಪಿಸುವ ಮೂಲಕ ಸರ್ಕಾರಿ ಶಾಲೆಗಳನ್ನು ಆರ್‌ಎಸ್‌ಎಸ್ ಪಡಸಾಲೆಗಳನ್ನಾಗಿ ಮಾಡುವ ಪ್ರಯತ್ನ ನಡೆಯುತ್ತಿದೆ. ಶೇ 3ರಷ್ಟು ಜನರು ಹೇಳಿದಂತೆ ಶೇ 97ರಷ್ಟು ಜನರು ಬದುಕಲು ಸಾಧ್ಯವಿಲ್ಲ' ಎಂದು ಮೈಸೂರಿನ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದರು.

ಪರಿಷ್ಕೃತ ಪಠ್ಯಪುಸ್ತಕ ಹರಿದೆಸೆದ ಡಿಕೆಶಿ

ಪರಿಷ್ಕೃತ ಪಠ್ಯ ಪುಸ್ತಕದ ಪ್ರತಿಯನ್ನು ವೇದಿಕೆಯಲ್ಲೆ ಹರಿದು ಎಸೆದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಹಳೆಯ ಪಠ್ಯಪುಸ್ತಕಗಳನ್ನೇ ಮುಂದುವರಿಸುವಂತೆ ಆಗ್ರಹಿಸಿದರು.

ಸಾಧಕ ವಿದ್ಯಾರ್ಥಿಗಳ ಅಭಿಪ್ರಾಯಗಳು

ಪ್ರಯತ್ನಕ್ಕೆ ಫಲ

ಶೇ 100ಕ್ಕೆ ಪ್ರಯತ್ನ ಹಾಕಿದ್ದು, ಅದಕ್ಕೆ ಯಶಸ್ಸು ಲಭಿಸಿದೆ. ಪ್ರಥಮ ಸ್ಥಾನವನ್ನು ನಿರೀಕ್ಷಿಸಿರಲಿಲ್ಲ. ಉಪನ್ಯಾಸಕರಿಂದಲೂ ಪ್ರೋತ್ಸಾಹ ಸಿಕ್ಕಿತ್ತು. ಟ್ಯೂಷನ್‌ಗೆ ಹೋಗದೆ ತರಗತಿಯ ಪಾಠವನ್ನೇ ಅಭ್ಯಾಸ ಮಾಡಿದೆ. ನಿತ್ಯ ಮೂರು ತಾಸು ಓದುತ್ತಿದ್ದೆ. ಕಾಲೇಜಿನಲ್ಲಿ ಹೆಚ್ಚುವರಿ ತರಗತಿಗಳನ್ನು ನಡೆಸಿದ್ದು ನೆರವಾಯಿತು. ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ಪದವಿ ಪಡೆಯುವ ಆಸೆಯಿದೆ.

ಸಿಮ್ರನ್, ಆರ್.ವಿ ಕಾಲೇಜು, ಜಯನಗರ, ಬೆಂಗಳೂರು (ವಿಜ್ಞಾನ ವಿಭಾಗ, ಪ್ರಥಮ ರ್‍ಯಾಂಕ್ 598 ಅಂಕ)

ಹೆಚ್ಚಿನ ಅಂಕ ತಂದ ಖುಷಿ

ಹೆಚ್ಚಿನ ಅಂಕಗಳು ಬಂದಿರುವುದು ಖುಷಿ ತಂದಿದೆ. ಅಂದಿನ ಪಾಠವನ್ನು ಅಂದೇ ಅಭ್ಯಾಸ ನಡೆಸುತ್ತಿದ್ದೆ. ಅದಕ್ಕೆ ಪ್ರತಿಫಲವಾಗಿ ಅಂಕಗಳು ಬಂದಿವೆ. ಮುಂದಿನ ಶಿಕ್ಷಣದ ಬಗ್ಗೆ ಇನ್ನೂ ನಿರ್ಧರಿಸಿಲ್ಲ.

ನೀಲು ಸಿಂಗ್, ಬಿ.ಜಿ.ಎಸ್ ಪಿಯು ಕಾಲೇಜು, ನಗರೂರು, ದಾಸನಪುರ, ಬೆಂಗಳೂರು (ವಾಣಿಜ್ಯ ವಿಭಾಗ, ಪ್ರಥಮ ರ್‍ಯಾಂಕ್ 596 ಅಂಕ)

ಕಠಿಣ ಪರಿಶ್ರಮಕ್ಕೆ ಫಲ

ಶಿಕ್ಷಕರು ಹಾಗೂ ಪೋಷಕರು ಪ್ರೋತ್ಸಾಹ ನೀಡಿದ್ದರಿಂದ ನನಗೆ ಈ ಸಾಧನೆ ಮಾಡಲು ಸಾಧ್ಯವಾಯಿತು. ಕಠಿಣ ಪರಿಶ್ರಮಕ್ಕೆ ಪ್ರತಿಫಲ ಸಿಕ್ಕಿದೆ. ಸರಿಯಾದ ಮಾರ್ಗದಲ್ಲಿ ಅಧ್ಯಯನ ನಡೆಸಿದರೆ ಉತ್ತಮ ಗಳಿಕೆ ಸಾಧ್ಯವಾಗಲಿದೆ.

ಆಕಾಶ್ ದಾಸ್, ಸೇಂಟ್ ಕ್ಲಾರೆಟ್ ಸಂಯುಕ್ತ ಪಪೂ ಕಾಲೇಜು, ಎಂಇಎಸ್ ರಸ್ತೆ, ಜಾಲಹಳ್ಳಿ, ಬೆಂಗಳೂರು (ವಾಣಿಜ್ಯ ವಿಭಾಗ, ಪ್ರಥಮ ರ್‍ಯಾಂಕ್ 596 ಅಂಕಗಳು)

ಮನೆಯಲ್ಲೇ ಅಧ್ಯಯನ

ಟ್ಯೂಷನ್‌ಗೆ ಹೋಗದೆ ಮನೆಯಲ್ಲಿ ನಿತ್ಯ ಅಭ್ಯಾಸ ನಡೆಸಿದ್ದೆ. ಉಪನ್ಯಾಸಕರು ತರಗತಿಯಲ್ಲಿ ಬೋಧಿಸುತ್ತಿದ್ದ ಪಾಠವನ್ನು ಅಲ್ಲಿಯೇ ಟಿಪ್ಪಣಿ ಮಾಡಿಕೊಂಡು ಮನೆಗೆ ಬಂದ ಬಳಿಕ ನನ್ನದೇ ನೋಟ್ಸ್ ಮಾಡಿಕೊಂಡು ಪರೀಕ್ಷೆಗೆ ಸಿದ್ಧತೆ ನಡೆಸಿದ್ದೆ. ಇದರಿಂದ ಹೆಚ್ಚಿನ ಅಂಕ ಗಳಿಸಲು ಸಾಧ್ಯವಾಯಿತು.

ಮಾನವ್ ವಿನಯ್ ಕೇಜ್ರಿವಾಲ್, ಜೈನ್ ಪಿಯು ಕಾಲೇಜು, ಜಯನಗರ 9ನೇ ಬ್ಲಾಕ್, ಬೆಂಗಳೂರು (ವಾಣಿಜ್ಯ ವಿಭಾಗ, ಪ್ರಥಮ ರ್‍ಯಾಂಕ್ 596 ಅಂಕ)

ನಿರೀಕ್ಷೆಗಿಂತ ಹೆಚ್ಚು ಅಂಕ

ರಾಜ್ಯಕ್ಕೆ ಟಾಪರ್ ಆಗಿದ್ದೇನೆ. ಖುಷಿ ಆಗುತ್ತಿದೆ. 595 ಅಂಕ ಬರುತ್ತವೆ ಎಂದು ನಿರೀಕ್ಷಿಸಿದ್ದೆ. ಈಗ ನಿರೀಕ್ಷೆಗಿಂತ ಒಂದು ಅಂಕ ಹೆಚ್ಚು ಬಂದಿದೆ. ಅಪ್ಪ, ಅಮ್ಮ ಮತ್ತು ಉಪನ್ಯಾಸಕರ ಪ್ರೋತ್ಸಾಹವೇ ನನ್ನ ಈ ಸಾಧನೆಗೆ ಕಾರಣ.

ಬಿ.ಆರ್.ನೇಹಾ, ಬಿಜಿಎಸ್ ಪಿ.ಯು ಕಾಲೇಜು, ಅಗಲಗುರ್ಕಿ, ಚಿಕ್ಕಬಳ್ಳಾಪುರ (ವಾಣಿಜ್ಯ ವಿಭಾಗ, ಪ್ರಥಮ ರ್‍ಯಾಂಕ್ 596 ಅಂಕ)

ಯುಪಿಎಸ್‌ಸಿ ನನ್ನ ಕನಸು

ಕಾಲೇಜಿನಲ್ಲಿ ಪ್ರತಿ ತರಗತಿ ನಂತರ ಟೆಸ್ಟ್ ಮಾಡಿಸುತ್ತಿದ್ದರು. ಹದಿನೈದು ಸಲ ಪೂರ್ವಸಿದ್ಧತಾ ಪರೀಕ್ಷೆ ನಡೆಸಿದ್ದರು. ಬರೆದು, ಬರೆದು ಪ್ರ್ಯಾಕ್ಟಿಸ್ ಮಾಡಿಸಿದರು. ಎಲ್ಲ ಶಿಕ್ಷಕರು ಉತ್ತಮವಾಗಿ ಪಾಠ ಮಾಡಿದರು. ಬೆಳಗಿನ ಜಾವ ಎದ್ದು ಹೆಚ್ಚು ಓದುತ್ತಿದ್ದೆ. ಅಂದಿನ ಪಾಠ ಅಂದೇ ಓದಿದ್ದರಿಂದ ಉತ್ತಮ ಫಲಿತಾಂಶ ಬಂದಿದೆ. ಪದವಿಯೊಂದಿಗೆ ಯುಪಿಎಸ್‌ಸಿಗೆ ಸಿದ್ಧತೆ ನಡೆಸಿ, ಉನ್ನತ ಸ್ಥಾನಕ್ಕೇರುವ ಆಸೆ ಇದೆ' ಎಂದು ಶ್ವೇತಾ ತಿಳಿಸಿದರು.

ಶ್ವೇತಾ ಭೀಮಾಶಂಕರ, ಇಂದು ಪಿಯು ಕಾಲೇಜು, ಕೊಟ್ಟೂರು, (ಕಲಾ ವಿಭಾಗ, ಪ್ರಥಮ ರ್‍ಯಾಂಕ್ 594)

ಉನ್ನತ ಹುದ್ದೆಯ ಗುರಿ

ನಮ್ಮ ತಂದೆ ಒಬ್ಬ ಫೋಟೋಗ್ರಾಫರ್. ಬಡ ಕುಟುಂಬ ನಮ್ಮದು. ಕಡಿಮೆ ಶುಲ್ಕದಲ್ಲಿ ಉತ್ತಮ ಶಿಕ್ಷಣ ಸಿಗುತ್ತದೆ ಎನ್ನುವ ಕಾರಣಕ್ಕಾಗಿ 'ಇಂದು' ಕಾಲೇಜಿಗೆ ಸೇರಿದೆ. ಉತ್ತಮ ಪಾಠ, ಅಭ್ಯಾಸ ಹಾಗೂ ಶ್ರದ್ಧೆಯಿಂದ ಓದಿದ್ದರಿಂದ ರ್‍ಯಾಂಕ್ ಬಂದಿದೆ. ಕೆಎಎಸ್, ಐಎಎಸ್ ಪರೀಕ್ಷೆ ಬರೆದು, ಉನ್ನತ ಹುದ್ದೆಗೇರಿ, ಮನೆಯ ಕಷ್ಟ ದೂರ ಮಾಡಬೇಕೆಂಬ ಉದ್ದೇಶ ನನ್ನದು

ಸಹನಾ ಮಡಿವಾಳರ, ಇಂದು ಪಿಯು ಕಾಲೇಜು, ಕೊಟ್ಟೂರು (ಕಲಾ ವಿಭಾಗ, ಪ್ರಥಮ ರ್‍ಯಾಂಕ್ 594)

ಭೂಮಿಯಂತಹ ಅಪ್ಪಂದಿರಿಗೆ...

• ಸಮುದ್ಯತಾ ಕಂಜರ್ಪಣೆ

'ನನ್ನ ಮಗಳಿಗಂತೂ ತಲೆ ಬಾಚೋದ್ರಿಂದ ಶಾಲೆಗೆ ಬಿಡೋವರೆಗೂ ಅವರಪ್ಪನೇ ಮಾಡಬೇಕು. ಅಪ್ಪನ ಮಗಳೇ ಆಗಿಬಿಟ್ಟಿದಾಳೆ' ಸುಮಾ ಗೊಣಗುತ್ತಾಳೆ. 'ನನ್ನ ಮಗನಿಗೂ ಅಷ್ಟೇ, ಎಲ್ಲದಕ್ಕೂ ಅಪ್ಪ ಅಪ್ಪ ಅಂತಾನೆ. ಅಪ್ಪ ಬರೋವರೆಗೂ ಮಲಗೋದೇ ಇಲ್ಲ' ಇದು ಸುಷ್ಮಾಳ ಅನಿಸಿಕೆ.

ಇತ್ತೀಚೆಗಷ್ಟೇ, ಒಂದು ವಿಡಿಯೋ ವೈರಲ್ ಆಗಿತ್ತು. ಬೊಂಬೆ ಕೊಡಿಸೋದ್ಯಾರು, ಊಟ ಮಾಡಿಸೋದ್ಯಾರು, ನಿದ್ದೆ ಮಾಡಿಸೋದ್ಯಾರು ಮುಂತಾದ ಎಲ್ಲ ಪ್ರಶ್ನೆಗಳಿಗೆ ಅಮ್ಮ ಎಂದು ಉತ್ತರಿಸುವ ಮಗು, 'ನಿನಗ್ಯಾರ ಕಂಡರಿಷ್ಟ' ಎಂದಾಗ ಅಪ್ಪ ಎಂದು ನಗುತ್ತದೆ. ಹೌದು, ಅಮ್ಮ ಜೀವನದಲ್ಲಿ ಬೆರೆತುಹೋದರೆ, ಅಪ್ಪ ಒಂಥರ ಫೇವರಿಟ್, ಇಷ್ಟ. ಅಮ್ಮ ಅಕ್ಕರೆಯಾದರೆ, ಅಪ್ಪ ಶಕ್ತಿ. ಅಪ್ಪ ತನ್ನ ಮಕ್ಕಳಿಗೆ ಹೀರೋ ಆಗುತ್ತಾನೆ. ಅಪ್ಪನ ಮುದ್ದು, ಕೋಪ, ಶಕ್ತಿ ಮಕ್ಕಳನ್ನು ಬೆಕ್ಕಸಬೆರಗಾಗುವಂತೆ ಮಾಡುತ್ತದೆ.

ಸಣ್ಣ ವಿಷಯವಾದರೂ, 'ನಮ್ಮಪ್ಪಂಗೆ ಹೇಳ್ತೀನಿ ಇರು' ಅನ್ನೋದು ಮಕ್ಕಳಿಗೆ ಯುದ್ಧ ಗೆದ್ದಷ್ಟು ನೆಮ್ಮದಿ ತರೋದು. ಪುಟ್ಟ ಸಿಂಬಾನ ಹಿಂದೆ ಮುಫಾಸಾ ನಿಂತ ಧೈರ್ಯ ಅಪ್ಪ-ಮಗುವಿನ ಬಂಧಕ್ಕೆ ಒಂದು ಮುದ್ದಾದ ಉದಾಹರಣೆ. ಮೊದಲ ದಿನಗಳಲ್ಲಿ ಅಮ್ಮನೇ ಎಲ್ಲದಕ್ಕೂ ಬೇಕಾದರೂ ನಂತರದ ಹೆಜ್ಜೆಯೂರುವ ದಿನಗಳಲ್ಲಿ ಅಪ್ಪನ ಅಗತ್ಯ ಬಹಳಷ್ಟು. ಬೀಳದಂತೆ ಹಿಡಿಯುವುದು ಅಮ್ಮ, ಆದರೆ, ಬಿದ್ದರೂ ಎದ್ದು ನಿಲ್ಲಲು ಕಲಿಸುವುದು ಅಪ್ಪ. ಅಪ್ಪನ ಹೆಗಲಿನ ಮಹತ್ವ ತಿಳಿಯುವುದು ಬೆಳೆಯುವ ವಯಸ್ಸಿನಲ್ಲೇ. ಬೆಳೆದು ದೊಡ್ಡವರಾಗಿ ಕೆಲಸ ಹಿಡಿದು ಸಂಸಾರ ನಿಭಾಯಿಸುವ ಹೊತ್ತಿನಲ್ಲಿ ಅಪ್ಪನ ಮಾತು, ಮೌನ, ಕಿರಿಕಿರಿ, ಸಿಡುಕು, ಹತಾಶೆ ಎಲ್ಲ ಅರ್ಥವಾಗುತ್ತ ಹೋಗುತ್ತದೆ.

ಮಕ್ಕಳನ್ನು ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ಮಾಡುವುದರಲ್ಲಿ ಅಪ್ಪನ ಪಾತ್ರ ಅಸೀಮ. ಇತ್ತೀಚಿನ ದಿನಗಳಲ್ಲಿ ಮಗನಿಗಿಂತ ಒಂದು ಹಿಡಿ ಹೆಚ್ಚೇ ಮಗಳನ್ನು ಮುದ್ದು ಮಾಡುವ ಅಪ್ಪ, ಅವಳನ್ನು ಸ್ವಾವಲಂಬಿ ಮಾಡುವಲ್ಲಿ ಹೆಚ್ಚಿನ ಆಸ್ಥೆ ತೋರುವುದನ್ನೂ ಕಾಣಬಹುದು.

ಬೆಳೆಯುತ್ತಾ ಅಮ್ಮ ಗೊಣಗುವುದನ್ನು ಕಾಣುವ ಮಗಳಿಗೆ ಅಪ್ಪ ಹಾರುವುದನ್ನು ಕಲಿಸತೊಡಗುತ್ತಾನೆ. ಈಜು ಕಲಿಸುವುದು, ಸೈಕಲ್ ಕಲಿಸುವುದು, ಸ್ಕೂಟರ್–ಕಾರು ಕಲಿಸುವುದು, ಮಗಳಿಗಿಷ್ಟವಾದ ಶಿಕ್ಷಣ ಕೊಡಿಸಿ ಆಕೆಯನ್ನು ಸಬಲಳಾಗಿ ಮಾಡುವ ಅಪ್ಪ. ಮಗಳು ಮೊದಲ ಸಂಬಳದಲ್ಲಿ ಒಂದು ಶರ್ಟ್ ತೆಗೆದುಕೊಟ್ಟರೂ ಅದರಲ್ಲಿ ಸಾರ್ಥಕತೆ ಕಾಣುತ್ತಾನೆ. ತನ್ನ ಮಗಳೂ ಎಲ್ಲಿ ಹೋದರೂ ರಾಜಕುಮಾರಿಯಾಗಿಯೇ ಇರಬೇಕೆನ್ನುವ ಅಪ್ಪ ಮದುವೆಯ ನಂತರವೂ ಸಾಮಾನ್ಯವಾಗಿ ಅಮ್ಮಂದಿರು ಬಳಸುವ 'ಹೊಂದಿಕೊಂಡು ಹೋಗು' ಎನ್ನುವ ಪದ ಬಳಸದೇ, 'ನಾನಿದೀನಿ ಬಾಮ್ಮ ನೀನು' ಅನ್ನುತ್ತಾನೆ.

ಒಂದು ವಾಷಿಂಗ್ ಪೌಡರ್‌ನ ಜಾಹೀರಾತಿನಲ್ಲಿ ಅಪ್ಪ ತನ್ನ ಮಗಳು ಕೆಲಸ-ಮನೆ ಎರಡನ್ನೂ ನಿಭಾಯಿಸಿಕೊಂಡು ಹೋಗುತ್ತಿರುವುದನ್ನೂ ನೋಡಿ ಎಲ್ಲ ಭಾರವನ್ನೂ ಮಗಳು = ಅಳಿಯ ಸಮನಾಗಿ ಹಂಚಿಕೊಂಡಿದ್ದಾರೆ ಎಂದು ಯೋಚಿಸುತ್ತಾ, ತನ್ನ ಪತ್ನಿಗೂ ತಾನು ಸಹಾಯ ಮಾಡುತ್ತೇನೆ ಎಂದು ಪತ್ರ ಬರೆಯುತ್ತಾನೆ. ಹಲವಾರು ಹೃದಯಗಳಲ್ಲಿ ಮೆಲ್ಲಗೆ ಅಲೆಗಳನ್ನೆಬ್ಬಿಸಿದ ಜಾಹೀರಾತು ಇದು. ಮಗಳು ಸದಾ ರಾಣಿಯಂತೆ ಖುಷಿಯಾಗಿರಲಿ ಎಂದು ಬಯಸುವ ತಂದೆ, ಮಗನಿಗೆ ಕಷ್ಟಕ್ಕೆ ಸಹಿಸಿಕೊಂಡು ಗಟ್ಟಿಯಾಗಿ ನಿಲ್ಲುವುದನ್ನು, ಮುನ್ನುಗ್ಗುವುದನ್ನು ಹೇಳಿಕೊಡುತ್ತಾನೆ.

ಅಪ್ಪನ ಎಲ್ಲ ಭಾವನೆಗಳೂ ಮೌನದಲ್ಲೇ ಅಡಗಿರೋದು. ನೀ ಯೋಚಿಸಬೇಡಮ್ಮ, ನಾನಿದೀನಿ ಅನ್ನುವ ಎರಡು ಪದದಲ್ಲಿ ಅಪ್ಪನ ಕಷ್ಟ, ಶ್ರಮ, ನೋವು, ಹತಾಶೆ, ಅಸಹಾಯಕತೆ ಎಲ್ಲ ಅಡಗಿ ಕಲ್ಲಾಗಿಬಿಡುತ್ತದೆ. ಭೂಮಿಯಂತಹ, ಆಕಾಶದಂತಹ, ಅಮ್ಮನಂಥ, ಅಪ್ಪನಂಥ ಅಪ್ಪಂದಿರಿರುವಾಗಷ್ಟೇ ಮಕ್ಕಳು ಬದುಕನ್ನು ನಿರಾಳವಾಗಿ ಜೀವಿಸಲು ಸಾಧ್ಯವಾಗೋದು.

ನನ್ನಪ್ಪ ಆಕಾಶವಲ್ಲ ಭೂಮಿ. ಫಲವತ್ತಾದ ನೂರಾರು ಮೌಲ್ಯಗಳ ಬಿತ್ತಿಬೆಳೆಸಿದ ಭೂಮಿ ತನ್ನ ಮೌಲ್ಯಗಳು ನಮಗೆ ಅರ್ಥವಾಗದೇನೋ ಎಂಬ ಆತಂಕಕ್ಕೆ ಆಗಾಗ ತೇವಗೊಂಡು ಮೆತ್ತಗಾಗಲಾರದೇ, ಕಲ್ಲಾಗಲಾರದೇ ಗೊಂದಲಗೊಂಡ ಜವುಗು ಭೂಮಿ. ತನ್ನ ಬೆಳೆ ಆಲದ ಮರವಾಗದೇ ಕಳ್ಳಿಗಿಡವಾಗುವ ಭಯದಲ್ಲಿ ನಡುಗಿದ ಬಿರುಕು ಭೂಮಿ. ನೆಟ್ಟ ಗಿಡ ಫಲವತ್ತಾಗಿ ಹಸಿರಾಗಿ ನೆರಳು ನೀಡುವ ಭರವಸೆ ಮೂಡಿಸಿಕೊಂಡ ಆರ್ದ್ರ ಭೂಮಿ ನನ್ನಪ್ಪ ಆಕಾಶವಲ್ಲ; ಸಸಿ ಬೆಳೆಸಿ, ಹಸಿರಾಗಿಸಿ, ನೆರಳಲ್ಲಿ ಬಿಸಿಲಲ್ಲಿ ನಿರಾಳವಾಗಿರುವ ಭೂಮಿ.

ಕೆಲಸ ಮಾಡುತ್ತಿದ್ದ ಸ್ಥಳದಲ್ಲೇ ಸ್ನೇಹಿತರಿಂದ ಸಂಭ್ರಮಾಚರಣೆ

ಕಲಾ ವಿಭಾಗ: ಕೂಲಿ ಕೆಲಸ ಮಾಡುವ ಶಿವರಾಜಗೆ 2ನೇ ರ್‍ಯಾಂಕ್

ಪ್ರಜಾವಾಣಿ ವಾರ್ತೆ

ನರೇಗಲ್ (ಗದಗ): ಇಲ್ಲಿನ ಅನ್ನದಾನೇಶ್ವರ ಪಿಯು ಕಾಲೇಜಿನ ವಿದ್ಯಾರ್ಥಿ ಶಿವರಾಜ ದುರ್ಗಪ್ಪ ಈ ಬಾರಿಯ ದ್ವಿತೀಯ ಪಿಯುಸಿಯಲ್ಲಿ 600ಕ್ಕೆ 593 (ಶೇ 98.83) ಅಂಕ ಪಡೆದು ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಎರಡನೇ ಸ್ಥಾನ ಪಡೆದಿದ್ದಾರೆ.

ಜೂನ್ 18ರಂದು ಫಲಿತಾಂಶ ಪ್ರಕಟವಾದಾಗ ಶಿವರಾಜ, ತುಮಕೂರು ಜಿಲ್ಲೆಯ ಆದರ್ಶನಗರದಲ್ಲಿರುವ ಅಮಾನಿಕೆರೆಯ ಹತ್ತಿರ ನಡೆದಿರುವ ಸೇತುವೆ ನಿರ್ಮಾಣ ಕಾಮಗಾರಿಯಲ್ಲಿ ಬಾರ್‌ಬೆಂಡಿಂಗ್ ಕೆಲಸ ಮಾಡುತ್ತಿದ್ದರು. ಕಾಲೇಜಿನ ಪ್ರಾಚಾರ್ಯ ವೈ.ಸಿ.ಪಾಟೀಲ ಫೋನ್ ಕರೆ ಮಾಡಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿರುವ ಮಾಹಿತಿ ನೀಡಿದ್ದಾರೆ. ಶಿವರಾಜ ಅವರು ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಯಲಗಟ್ಟಾ ಗ್ರಾಮದವರು.

ಕಲಾವಿಭಾಗದಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದ ಗದಗ ಜಿಲ್ಲೆ ನರೇಗಲ್ ಪಟ್ಟಣದ ಅನ್ನದಾನೇಶ್ವರ ಪಿಯು ಕಾಲೇಜಿನ ವಿದ್ಯಾರ್ಥಿ ಶಿವರಾಜ ಅವರಿಗೆ ಕಾಮಗಾರಿ ನಡೆಯುತ್ತಿದ್ದ ಸ್ಥಳದಲ್ಲೇ ಸಿಹಿ ಹಂಚಿ ಸಂಭ್ರಮಿಸಿದ ಕಾರ್ಮಿಕ ಸ್ನೇಹಿತರು

'ತಂದೆ–ತಾಯಿ ಕೂಲಿ ಕೆಲಸ ಮಾಡುತ್ತಾರೆ. ಆಗಾಗ ಗುಳೆ ಹೋಗುತ್ತಾರೆ. ಕಾಲೇಜಿಗೆ ರಜೆ ಇದ್ದಾಗ ಗಾರೆ, ಬಾರ್‌ಬೆಂಡಿಂಗ್ ಕೆಲಸ ಮಾಡುತ್ತೇನೆ. ತುಮಕೂರಿನಲ್ಲಿ ದಿನಕ್ಕೆ ₹400 ಕೂಲಿ ಕೊಡುವ ಕಾರಣಕ್ಕೆ ಇಲ್ಲಿಗೆ ಬಂದಿದ್ದೇನೆ' ಎಂದು ಶಿವರಾಜ 'ಪ್ರಜಾವಾಣಿ'ಗೆ ತಿಳಿಸಿದರು. 'ಶಿವರಾಜನ ವಿದ್ಯಾಭ್ಯಾಸ ಹಾಗೂ ಐಎಎಸ್ ವರೆಗಿನ ಕಲಿಕಾ ವೆಚ್ಚನ್ನು ಸಂಪೂರ್ಣವಾಗಿ ಮಠದಿಂದ ಭರಿಸಲಿದ್ದೇವೆ' ಎಂದು ಅನ್ನದಾನೇಶ್ವರ ಸಂಸ್ಥಾನಮಠ ಹಾಲಕೆರೆ ಪೀಠಾಧಿಪತಿ ಮುಪ್ಪಿನ ಬಸವಲಿಂಗ ಸ್ವಾಮೀಜಿ ತಿಳಿಸಿದ್ದಾರೆ.

ಜನತಾ ಪರಿವಾರದ ನಾಯಕ ಎಂ.ರಘುಪತಿ ನಿಧನ

ಬೆಂಗಳೂರು: ಜನತಾ ಪರಿವಾರದ ನಾಯಕರಲ್ಲಿ ಒಬ್ಬರಾಗಿದ್ದ, ಮಾಜಿ ಶಿಕ್ಷಣ ಸಚಿವ ಎಂ.ರಘುಪತಿ (81) ಅವರು ಮಲ್ಲೇಶ್ವರಂ ನಿವಾಸದಲ್ಲಿ ಶನಿವಾರ ಬೆಳಿಗ್ಗೆ ನಿಧನರಾದರು. ಎಂಟು ದಿನಗಳಿಂದ ಅನಾರೋಗ್ಯಕ್ಕೆ ತುತ್ತಾಗಿದ್ದರು.

ರಾಮಕೃಷ್ಣ ಹೆಗಡೆ ನೇತೃತ್ವದ ಜನತಾ ಪಕ್ಷದ ಸರ್ಕಾರದಲ್ಲಿ ಉನ್ನತ ಶಿಕ್ಷಣ ಸಚಿವರಾಗಿ ಕೆಲಸ ಮಾಡಿದ್ದರು. ಶಿವಾಜಿನಗರ, ಮಲ್ಲೇಶ್ವರ ವಿಧಾನಸಭಾ ಕ್ಷೇತ್ರಗಳಿಂದ ಆಯ್ಕೆಯಾಗಿದ್ದ ಅವರು, ಒಂದು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು.

ಎಂ.ರಘುಪತಿ

ಮೀನುಗಾರಿಕೆ, ಕಾರ್ಮಿಕ ಇಲಾಖೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ವಾರ್ತಾ ಇಲಾಖೆಗಳ ಜವಾಬ್ದಾರಿಯನ್ನೂ ನಿರ್ವಹಿಸಿದ್ದರು. ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ ಎನ್.ಟಿ. ರಾಮರಾವ್ ಅವರ ಆತ್ಮೀಯರಾಗಿದ್ದರು. ಇತ್ತೀಚಿನ ವರ್ಷಗಳಲ್ಲಿ ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದರು. ಸಂಚಾರಿ ಗ್ರಂಥಾಲಯ, ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡುವ ಯೋಜನೆಗಳನ್ನು ಅವರು ಪ್ರಾರಂಭಿಸಿದ್ದರು.

ರಘುಪತಿ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕೆ, ಮಲ್ಲೇಶ್ವರದಲ್ಲಿರುವ ಅವರ ನಿವಾಸದಲ್ಲಿ ಇರಿಸಲಾಗಿದೆ. ಭಾನುವಾರ ಬೆಳಿಗ್ಗೆ ಅಂತ್ಯಕ್ರಿಯೆ ನಡೆಯಲಿದೆ.

ಪಿಯುಸಿ: ವಿದ್ಯಾರ್ಥಿನಿಯರದ್ದೇ ಹೆಗ್ಗಳಿಕೆ

ಒಂದನೇ ಪುಟದಿಂದ

'4 ಸರ್ಕಾರಿ, 2 ಅನುದಾನಿತ, 50 ಅನುದಾನರಹಿತ ಸೇರಿ ಒಟ್ಟು 56 ಪದವಿ ಪೂರ್ವ ಕಾಲೇಜುಗಳಲ್ಲಿ ಶೇ 100ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಯಾವುದೇ ಕಾಲೇಜಿನಲ್ಲಿ ಶೂನ್ಯ ಫಲಿತಾಂಶ ದಾಖಲಾಗಿಲ್ಲ' ಎಂದರು.

'ಹಿಂದಿನ ವರ್ಷಗಳಂತೆ ಕರಾವಳಿ ಜಿಲ್ಲೆಗಳಲ್ಲಿ ಈ ಬಾರಿಯೂ ಉತ್ತೀರ್ಣ ಪ್ರಮಾಣ ಉತ್ತಮವಾಗಿದೆ. ರಾಯಚೂರು, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳು ಕ್ರಮವಾಗಿ ಕೊನೆಯ ಮೂರು ಸ್ಥಾನದಲ್ಲಿವೆ. ಉತ್ತೀರ್ಣ ಪ್ರಮಾಣ ಕಡಿಮೆ ಇರುವ ಜಿಲ್ಲೆಗಳ ಫಲಿತಾಂಶ ಸುಧಾರಣೆ ಕುರಿತು ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು' ಎಂದು ಹೇಳಿದರು.

> **ಅನುತ್ತೀರ್ಣರಾದವರು ನಿರಾಶರಾಗಬಾರದು. ಪೂರಕ ಪರೀಕ್ಷೆ ಬರೆಯುವ ಮೂಲಕ ಯಶಸ್ಸು ಸಾಧಿಸಿ, ಶೈಕ್ಷಣಿಕ ಜೀವನ ಮುಂದುವರೆಸಬೇಕು**
>
> **ಬಿ.ಸಿ. ನಾಗೇಶ್,** ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

'ಉತ್ತರ ಪತ್ರಿಕೆ ಸ್ಕ್ಯಾನಿಂಗ್ ಪ್ರತಿಯನ್ನು ಪಡೆಯಲು ಶನಿವಾರದಿಂದಲೇ ಅವಕಾಶ ಕಲ್ಪಿಸಲಾಗಿದೆ. ಈ ತಿಂಗಳ ಅಂತ್ಯದಲ್ಲಿ ಪೂರಕ ಪರೀಕ್ಷೆ ದಿನಾಂಕವನ್ನು ಪ್ರಕಟಿಸಲಾಗುವುದು. ವಿದ್ಯಾರ್ಥಿಗಳು ಮರುಮೌಲ್ಯಮಾಪನ ಫಲಿತಾಂಶಕ್ಕೆ ಕಾಯದೇ, ಪೂರಕ ಪರೀಕ್ಷೆ ಬರೆಯಲು ಅರ್ಜಿ ಸಲ್ಲಿಸುವುದು ಉತ್ತಮ. ಆಗಸ್ಟ್ ತಿಂಗಳಲ್ಲಿ ಪರೀಕ್ಷೆಗಳು ನಡೆಯಲಿವೆ' ಎಂದರು.

ಫಲಿತಾಂಶ ತಿಳಿಯಲು ಈ ಲಿಂಕ್ ಕ್ಲಿಕ್ಕಿಸಿ: www.karresults.nic.in

ಉದ್ಯಾನ ಬಿಟ್ಟು ಕಚೇರಿಯಲ್ಲೇ ಠಿಕಾಣಿ ಹೂಡಿದ್ದ ಶಿವಲಿಂಗಯ್ಯ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡಿಎ ಬಡಾವಣೆಗಳಲ್ಲಿನ ಉದ್ಯಾನಗಳಲ್ಲಿ ಗಿಡ ನೆಟ್ಟು, ಪೋಷಿಸುವ ಕೆಲಸ ಬಿಟ್ಟು ಹಲವು ವರ್ಷಗಳಿಂದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಯಲ್ಲೇ ಠಿಕಾಣಿ ಹೂಡಿದ್ದ ಶಿವಲಿಂಗಯ್ಯ, ₹ 5 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಗಳನ್ನು 'ಸಂಪಾದಿಸಿ'ರುವುದನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಪತ್ತೆಮಾಡಿದೆ.

ಶಿವಲಿಂಗಯ್ಯ ಬಿಡಿಎ ಉದ್ಯಾನ ವಿಭಾಗದ ಸಿಬ್ಬಂದಿ. ಆದರೆ, ಪ್ರಾಧಿಕಾರದ ಬೆಂಗಳೂರು ದಕ್ಷಿಣ ವಲಯದ ಬನಶಂಕರಿ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಕಚೇರಿಯಲ್ಲಿ ದೀರ್ಘ ಕಾಲದಿಂದ ಕೆಲಸ ಮಾಡುತ್ತಿದ್ದಾರೆ. ಎಇಇ ಸಹಾಯಕನಾಗಿರುವ ಇವರು, ನಿವೇಶನಗಳ ಖಚಿತ ಅಳತೆ ಪ್ರಮಾಣಪತ್ರ ನೀಡುವುದು, ಬದಲಿ ನಿವೇಶನ ಹಂಚಿಕೆಯಲ್ಲಿ ಹೆಚ್ಚು 'ಅನುಭವ' ಹೊಂದಿದ್ದಾರೆ ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

'ಬೆಂಗಳೂರು ದಕ್ಷಿಣ ವಿಭಾಗದಲ್ಲಿ ಬಿಡಿಎ ನಿರ್ಮಿಸಿರುವ ಬಡಾವಣೆಗಳ ಸಮಗ್ರ ಮಾಹಿತಿ ಇವರಿಗೆ ಗೊತ್ತಿದೆ. ಬದಲಿ ನಿವೇಶನ ಕೋರಿದ ಅರ್ಜಿದಾರರಿಗೆ 'ಮಾರ್ಗದರ್ಶಕ'ನಾಗಿ ಕೆಲಸ ಮಾಡುತ್ತಿದ್ದರು. ನಿಯೋಜನೆ ಮೇಲೆ ಹೋದವರು ಮರಳಿ ಉದ್ಯಾನ ನಿರ್ವಹಣೆ ಕೆಲಸಕ್ಕೆ ಬಂದೇ ಇಲ್ಲ' ಎಂದು ಮೂಲಗಳು ಹೇಳಿವೆ.

ಶಿವಲಿಂಗಯ್ಯ

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ಶಿವಲಿಂಗಯ್ಯ ವಿರುದ್ಧ ಪ್ರಕರಣ ದಾಖಲಿಸಿರುವ ಎಸಿಬಿ, ಬೆಂಗಳೂರಿನ ಮೂರು ಸ್ಥಳಗಳಲ್ಲಿ ಶನಿವಾರ ಶೋಧ ನಡೆಸಿತ್ತು. ಇವರ ಅಧಿಕೃತದ ಆದಾಯಕ್ಕೆ ಹೋಲಿಸಿದರೆ ಮೂರು ಪಟ್ಟು ಅಕ್ರಮ ಆಸ್ತಿ ಪತ್ತೆಯಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಬಾಗಿಲು ತೆರೆಯದೇ ಸತಾಯಿಸಿದ್ದರು: ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆದಿದ್ದ ಎಸಿಬಿ ಅಧಿಕಾರಿಗಳು, ಶುಕ್ರವಾರ ನಸುಕಿನಲ್ಲೇ ಶಿವಲಿಂಗಯ್ಯ ಅವರ ಮನೆಯ ಬಾಗಿಲು ಬಡಿದಿದ್ದರು. ಆದರೆ, ಅರ್ಧ ಗಂಟೆ ಕಾಲ ಬಾಗಿಲು ತೆಗೆಯದೇ ಸತಾಯಿಸಿದ್ದರು. ಕಠಿಣ ಕ್ರಮ ಕೈಗೊಳ್ಳುವುದಾಗಿ ಎಸಿಬಿ ಅಧಿಕಾರಿಗಳು ಎಚ್ಚರಿಕೆ ನೀಡಿದ ಬಳಿಕ ಬಾಗಿಲು ತೆರೆದು, ಶೋಧಕಾರ್ಯಕ್ಕೆ ಸಹಕರಿಸಿದರು ಎಂದು ಗೊತ್ತಾಗಿದೆ.

ಎಸಿಬಿ ದಾಳಿ: ಮಂಜುನಾಥ್ ಬಳಿ ಶೇ 635ರಷ್ಟು ಅಕ್ರಮ ಆಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ ಇಲಾಖೆಯ ನಿವೃತ್ತ ಸೂಪರಿಂಟೆಂಡಿಂಗ್ ಎಂಜಿನಿಯರ್ ಮಂಜುನಾಥ ಜಿ. ಬಳಿ ಅವರ ಅಧಿಕೃತ ಆದಾಯಕ್ಕೆ ಹೋಲಿಸಿದರೆ ಶೇ 635ರಷ್ಟು ಅಕ್ರಮ ಆಸ್ತಿ ಪತ್ತೆಯಾಗಿದೆ ಎಂದು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ತಿಳಿಸಿದೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ಇಬ್ಬರು ನಿವೃತ್ತರೂ ಸೇರಿದಂತೆ 21 ಸರ್ಕಾರಿ ಅಧಿಕಾರಿಗಳ ಮೇಲೆ ಶುಕ್ರವಾರ ದಾಳಿ ಮಾಡಿದ್ದ ಎಸಿಬಿ, 80 ಸ್ಥಳಗಳಲ್ಲಿ ಶೋಧ ನಡೆಸಿತ್ತು. ಆರೋಪಿಗಳ ಬಳಿ ಪತ್ತೆಯಾಗಿರುವ ಆಸ್ತಿ ಮತ್ತು ಅಧಿಕೃತ ಆದಾಯದ ಮಾಹಿತಿಯನ್ನು ತನಿಖಾ ಸಂಸ್ಥೆ ತಾಳೆಹಾಕಿದೆ.

ಆರೋಪಿತರು ಹೊಂದಿರುವ ಶೇಕಡಾವಾರು ಅಕ್ರಮ ಆಸ್ತಿಯ ವಿವರನ್ನು ಶನಿವಾರ ಪ್ರಕಟಿಸಿದೆ.

ಬಾಗಲಕೋಟೆಯ ಪ್ರಾದೇಶಿಕ ಸಾರಿಗೆ ಅಧಿಕಾರಿ ಯಲ್ಲಪ್ಪ ಪಡಸಾಲಿ ಬಳಿ ಶೇ 343.60, ಬೀದರ್ ಪಶುವಿಜ್ಞಾನಗಳ ವಿಶ್ವವಿದ್ಯಾಲಯದ ಸಹಾಯಕ ನಿಯಂತ್ರಕ ಮೃತ್ಯುಂಜಯ ಸಿ. ತಿರಾಣಿ ಬಳಿ ಶೇ 306.90 ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉದ್ಯಾನ ಸಿಬ್ಬಂದಿ ಶಿವಲಿಂಗಯ್ಯ ಬಳಿ ಶೇ 294ರಷ್ಟು ಅಕ್ರಮ ಆಸ್ತಿ ಪತ್ತೆಯಾಗಿದೆ ಎಂದು ಎಸಿಬಿ ತಿಳಿಸಿದೆ.

ಇತರ ಅಧಿಕಾರಿಗಳ ಅಕ್ರಮ ಆಸ್ತಿ ಪ್ರಮಾಣ:

- ಪರಮೇಶ್ವರಪ್ಪ, ಸಣ್ಣ ನೀರಾವರಿ ಇಲಾಖೆಯ ಹೂವಿನಹಡಗಲಿ ಉಪ ವಿಭಾಗದ ಸಹಾಯಕ ಎಂಜಿನಿಯರ್– ಶೇ 245.56
- ಮಧುಸೂದನ್, ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಸಹಾಯಕ ಮಹಾನಿರೀಕ್ಷಕ – ಶೇ 230
- ಎಚ್.ಈ. ರಾಮಕೃಷ್ಣ, ಸಣ್ಣ ನೀರಾವರಿ ಇಲಾಖೆಯ ಹಾಸನ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ – ಶೇ 205
- ಶ್ರೀಧರ್ ಬಿ.ಎಸ್, ಉತ್ತರ ಕನ್ನಡ ಜಿಲ್ಲಾ ನೋಂದಣಾಧಿಕಾರಿ – ಶೇ 202.89
- ಶಂಕರಲಿಂಗ ನಾಗಪ್ಪ ಗೋಗಿ, ಬಾಗಲಕೋಟೆ ಜಿಲ್ಲಾ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ –ಶೇ 202.04
- ತಿಪ್ಪಣ್ಣ ಪಿ. ಸಿರಸಗಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದ ಬೀದರ್ ಜಿಲ್ಲಾ ಯೋಜನಾಧಿಕಾರಿ – ಶೇ 182.15
- ಪ್ರದೀಪ ಶಿವಪ್ಪ ಆಲೂರ, ಗದಗ ತಾಲ್ಲೂಕು ಅಸುಂಡಿ ಗ್ರಾಮ ಪಂಚಾಯಿತಿ ಗ್ರೇಡ್–2 ಕಾರ್ಯದರ್ಶಿ– ಶೇ 181.04
- ಡಿ. ಸಿದ್ದಪ್ಪ, ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಶಿವಮೊಗ್ಗದ ಉಪ ಮುಖ್ಯ ವಿದ್ಯುತ್ ಇನ್‌ಸ್ಪೆಕ್ಟರ್ –ಶೇ 162.50
- ಉದಯ ರವಿ, ಕೊಪ್ಪಳದ ಪೊಲೀಸ್ ಇನ್‌ಸ್ಪೆಕ್ಟರ್ –ಶೇ 150
- ಹರೀಶ್, ಸಣ್ಣ ನೀರಾವರಿ ಇಲಾಖೆಯ ಉಡುಪಿ ವಿಭಾಗದ ಸಹಾಯಕ ಎಂಜಿನಿಯರ್ – ಶೇ 142.39
- ಎ. ಮೋಹನ್ ಕುಮಾರ್, ಸಣ್ಣ ನೀರಾವರಿ ಇಲಾಖೆಯ ಚಿಕ್ಕಬಳ್ಳಾಪುರ ಉಪ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್– ಶೇ 129.65
- ಚಂದ್ರಪ್ಪ ಸಿ. ಓಲೇಕರ್, ತುಂಗಾ ಮೇಲ್ದಂಡೆ ಯೋಜನೆಯ ರಾಣೆಬೆನ್ನೂರು ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್– ಶೇ 125
- ಓಬಯ್ಯ, ಕೊಡಗು ಜಿಲ್ಲಾ ಪಂಚಾಯಿತಿಯ ವಿರಾಜಪೇಟೆ ಉಪ ವಿಭಾಗದ ಸಹಾಯಕ ಎಂಜಿನಿಯರ್– ಶೇ 125
- ಭೀಮರಾವ್ ಯಶವಂತ ಪವಾರ, ಲೋಕೋಪಯೋಗಿ ಇಲಾಖೆಯ ಬೆಳಗಾವಿ ವೃತ್ತದ ಸೂಪರಿಂಟೆಂಡಿಂಗ್ ಎಂಜಿನಿಯರ್ – ಶೇ 111.10
- ಬಿ.ಜಿ. ತಿಮ್ಮಯ್ಯ, ಅಜ್ಜಂಪುರ ಪಟ್ಟಣ ಪಂಚಾಯಿತಿಯ ದ್ವಿತೀಯ ದರ್ಜೆ ಸಹಾಯಕ–ಶೇ 90.90
- ಡಾ.ಕೆ. ಜನಾರ್ದನ್, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದ ನಿವೃತ್ತ ಕುಲಸಚಿವ – ಶೇ 76
- ರಾಜೀವ್ ಪಿ. ನಾಯಕ್, ಉತ್ತರ ಕನ್ನಡ ಜಿಲ್ಲೆಯ ಕಾರವಾರ ಉಪ ವಿಭಾಗದ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ – ಶೇ 42.41

ಗುರುದ್ವಾರದ ಮೇಲೆ ಉಗ್ರರ ದಾಳಿ: ಇಬ್ಬರ ಸಾವು

ಕಾಬೂಲ್/ನವದೆಹಲಿ (ಪಿಟಿಐ): ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿನ ಕಾರ್ತೆ ಪರ್ವಾನ್ ನಲ್ಲಿರುವ ಸಿಖ್ ಗುರುದ್ವಾರದ ಮೇಲೆ ಶನಿವಾರ ಭಯೋತ್ಪಾದಕರ ದಾಳಿ ನಡೆದಿದ್ದು, ಸ್ಫೋಟ ಮತ್ತು ಗುಂಡಿನ ದಾಳಿಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಅಲ್ಲದೆ ಏಳು ಜನರು ಗಾಯಗೊಂಡಿದ್ದಾರೆ ಎಂದು ಅಫ್ಗಾನಿಸ್ತಾನದ ಒಳಾಡಳಿತ ಸಚಿವಾಲಯ ತಿಳಿಸಿದೆ. ಈ ಘಟನೆ ವೇಳೆ ಗುರುದ್ವಾರದಲ್ಲಿ ಸುಮಾರು 30 ಮಂದಿ ಇದ್ದರೆಂದು ಮೂಲಗಳು ತಿಳಿಸಿವೆ.

'ಭಯೋತ್ಪಾದಕರ ದಾಳಿಯಲ್ಲಿ ತಾಲಿಬಾನ್ ಪಡೆಯ ಒಬ್ಬ ಸದಸ್ಯ ಮತ್ತು ಅಫ್ಗಾನಿಸ್ತಾನದ ಒಬ್ಬ ಹಿಂದೂ ಪ್ರಜೆ ಮೃತಪಟ್ಟಿದ್ದಾರೆ. ಬಳಿಕ ಭಯೋತ್ಪಾದಕರು ಮತ್ತು ತಾಲಿಬಾನ್ ಪಡೆ ನಡುವೆ ಗುಂಡಿನ ಚಕಮಕಿ ನಡೆದಿದೆ. ದಾಳಿಕೋರರನ್ನು ಕೊಲ್ಲಲಾಗಿದೆ' ಎಂದು ಅಫ್ಗಾನಿಸ್ತಾನ ಸಚಿವಾಲಯದ ವಕ್ತಾರ ಅಬ್ದುಲ್ ನಫಿ ಠಾಕೂರ್ ಹೇಳಿದ್ದಾರೆ. ದಾಳಿಯ ಜವಾಬ್ದಾರಿಯನ್ನು ಇದುವರೆಗೂ ಯಾವ ಸಂಘಟನೆಗಳು ಹೊತ್ತುಕೊಂಡಿಲ್ಲ.

ದಾಳಿ ಖಂಡಿಸಿದ ಭಾರತ: ಕಾಬೂಲ್‌ನ ಗುರುದ್ವಾರದ ಮೇಲೆ ನಡೆದ ಭಯೋತ್ಪಾದಕ ದಾಳಿಯನ್ನು ಭಾರತ ಬಲವಾಗಿ ಖಂಡಿಸಿದ್ದು, ಘಟನೆಯ ಬಗ್ಗೆ ತೀವ್ರವಾಗಿ ನಿಗಾವಹಿಸಲಾಗುವುದು ಎಂದು ಹೇಳಿದೆ.

'ಕಾರ್ತೆ ಪರ್ವಾನ್‌ನಲ್ಲಿರುವ ಗುರುದ್ವಾರದ ಮೇಲಿನ ಹೇಡಿತನದ ದಾಳಿಯನ್ನು ಎಲ್ಲರೂ ತೀವ್ರವಾಗಿ ಖಂಡಿಸಬೇಕು. ದಾಳಿಯ ನಂತರದ ಬೆಳವಣಿಗೆಗಳನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಟ್ವೀಟ್ ಮಾಡಿದ್ದಾರೆ.

ಕರ್ನಾಟಕ ಸರ್ಕಾರ

ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

ನಿರ್ದೇಶಕರ ಕಚೇರಿ, ವಿದ್ಯಾನಗರ, ಹುಬ್ಬಳ್ಳಿ-580 021

ಸಂ: ಕಿಮ್ಸ್/ಎಸ್.ಯು.ಪಿ(5)/EQP/Tender/Radia-Oncol-16/2022-23 ದಿನಾಂಕ: 18-06-2022

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ ಇಲ್ಲಿಗೆ ಇವರ ಅರ್ಹ ಟೆಂಡರ್‌ದಾರರಿಂದ ಕಿಮ್ಸ್ ಆಸ್ಪತ್ರೆಯ **Radiation Oncology** ವಿಭಾಗಕ್ಕೆ ವೈದ್ಯಕೀಯ ಉಪಕರಣಗಳನ್ನು ಪೂರೈಸುವುದಕ್ಕಾಗಿ ಟೆಂಡರ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

1	Tenders may be uploaded from	21-06-2022
3	Last date for uploading the tenders	22-07-2022 before 5:00 PM

ಈ ದಾಖಲೆಗಳನ್ನು ಟೆಂಡರ್ ಪ್ರೊಸೆಸ್ಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **https://eproc.karnataka.gov.in** ಮೂಲಕ ಮಾಹಿತಿ ಪಡೆಯಬಹುದು.

ಸಹಿ/- ನಿರ್ದೇಶಕರು
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

ಕರ್ನಾಟಕ ಸರ್ಕಾರ

ಉಪ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ

ಸುದರ್ಶನ ವೃತ್ತದ ಬಳಿ, ಎಸ್.ಜೆ.ಎಸ್.ವೈ. ಕಟ್ಟಡ, ಕೊಡಗು ಜಿಲ್ಲೆ, ಮಡಿಕೇರಿ.
ದೂ: 08272-225531 ಇಮೇಲ್: ddswdkodagu@gmail.com

ಸಂ/ಉನಿಸಕಇ/SW-1/ಸಿಆರ್-05/2022-03 ದಿನಾಂಕ: 17-06-2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೊಡಗು ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ, ಭಾಗಮಂಡಲ, ಮಡಿಕೇರಿ ತಾಲ್ಲೂಕು ಇಲ್ಲಿಗೆ ಅತಿ ಅವಶ್ಯವಿರುವ ವಿವಿಧ ಮೂಲಭೂತ ಸಾಮಗ್ರಿಗಳ ಪೂರೈಕೆಗಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ, 1999 ಹಾಗೂ ನಿಯಮಗಳು, 2000ರ ಪ್ರಕಾರ ದ್ವಿ-ಲಕೋಟೆ ಪದ್ಧತಿಯಲ್ಲಿ ನಿಗದಿತ ಇ.ಎಂ.ಡಿ ಯೊಂದಿಗೆ ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ನಿಗದಿತ ಟೆಂಡರ್ ಫಾರಂನ್ನು https://eproc.karnataka.gov.in ನಿಂದ ದಿನಾಂಕ: 17-06-2022 ರಿಂದ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02-07-2022 ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಸುದರ್ಶನ ವೃತ್ತದ ಬಳಿ, ಎಸ್.ಜೆ.ಎಸ್.ವೈ. ಕಟ್ಟಡ, ಮಡಿಕೇರಿ ಇವರನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ.

ಕಾರ್ಯನಿರ್ವಾಹಕ ಇಂಜಿನೀಯರರು, ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ವಿಭಾಗ ನಂ.02, ಬಾಗಲಕೋಟೆ

ನಂ.ಕಾನಿಇಂ/ಬಾ.ಪ.ಅ.ಪ್ರಾ/ವಿ-2/ಟೆಂಡರ ನಂ.2/2022-23/903 ದಿನಾಂಕ:18.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ.
(ಇ-ಪ್ರೋಕ್ಯೂರಮೆಂಟ್ ಮುಖಾಂತರ)

ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿನ ಕಾಮಗಾರಿಗಳಿಗೆ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತವು ರೂ. **7.19** ರಿಂದ **447.47** ಲಕ್ಷಗಳು ಇರುತ್ತದೆ.

ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಗಳ ವಿವರಗಳಿಗಾಗಿ ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ **www.eproc.karnataka.gov.in** ಮೂಲಕ ವೀಕ್ಷಿಸಬಹುದು. ದಿನಾಂಕ: **05.07.2022** ಸಂಜೆ **5.00** ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ದಿನಾಂಕ: **07.07.2022** ರಂದು ಬೆಳಿಗ್ಗೆ **11.00** ಘಂಟೆ (ಸಾಧ್ಯವಾದಲ್ಲಿ) ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್ (ರೂ **50.00** ಲಕ್ಷವರೆಗೆ)ಗಳನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: **08354-297054** ಸಂಪರ್ಕಿಸಬಹುದಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಬಾ.ಪ.ಅ.ಪ್ರಾ., ವಿಭಾಗ ನಂ.2,ಬಾಗಲಕೋಟೆ

ವಾ.ಸಾ.ಇ/ಬಾಗಲಕೋಟ/160/2022-23/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)

ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.5, ಚಿತ್ರದುರ್ಗ.
ಫೋ. ನಂ.:08194-230102, ಫ್ಯಾಕ್ಸ್:08194-230102, ಇ-ಮೇಲ್ :eeubp.d5cta@gmail.com

ಕ್ರ.ಸಂ:ಕಾಇಂ/ವಿಜನಿನಿ/ಭಮೇಯೋ/ವಿ-5/ಚಿ/ಟೆಂಡರ್/2022-23/357,358,359 & 360 ದಿನಾಂಕ:-16.06.2022

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆ 4701 ಲೆಕ್ಕಶೀರ್ಷಿಕೆ ಅಡಿಯಲ್ಲಿ ಬರುವ ಕಾಮಗಾರಿಗಳ ಟೆಂಡರ್ ಕರೆಯಲಾಗಿದ್ದು. ಕಾಮಗಾರಿಗಳಿಗೆ ದ್ವಿ-ಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡವಾರು ದರಗಳ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. 1)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:20.06.2022 ಸಂಜೆ 5.30 ಗಂಟೆಯವರೆಗೆ 2) ಪ್ರಿ-ಬಿಡ್ ಸಭೆಯನ್ನು ಮುಖ್ಯ ಇಂಜಿನಿಯರ್, ವಿಜನಿನಿ, ಭಮೇಯೋ ವಲಯ ಚಿತ್ರದುರ್ಗ ಕಛೇರಿ ಸಭಾಂಗಣದಲ್ಲಿ ದಿನಾಂಕ:22.06.2022ರಂದು ಬೆಳಗ್ಗೆ 11.00 ಗಂಟೆಗೆ ನಿಗಧಿಪಡಿಸಲಾಗಿದೆ 3) ಟೆಂಡರ್‌ನ್ನು ದಿನಾಂಕ:24.06.2022ರಂದು ಸಂಜೆ 4.00 ಗಂಟೆ ವರೆಗೆ ಸಲ್ಲಿಸಬಹುದಾಗಿದೆ 4)ತಾಂತ್ರಿಕ ಬಿಡ್ಡುಗಳನ್ನು ದಿನಾಂಕ:27.06.2022 ರಂದು ಬೆಳಿಗ್ಗೆ 11.30 ಗಂಟೆ ನಂತರ ತೆರೆಯಲಾಗುವುದು. 5) ಆರ್ಥಿಕ ಬಿಡ್ಡನ್ನು"ತಾಂತ್ರಿಕ ಬಿಡ್ ಅನುಮೊದನೆಯಾದ ನಂತರ ತೆರೆಯಲಾಗುವುದು. ಟೆಂಡರ್‌ನಲ್ಲಿನ ಮುಂದಿನ ಇತರೆ ಬದಲಾವಣೆ, ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು **https://eproc.karnataka.gov.in/** ವೆಬ್‌ಸೈಟ್‌ನಿಂದ ಪಡೆಯಲು ತಿಳಿಸಲಾಗಿದೆ.

ಕಾಮಗಾರಿಗಳ ವಿವರ:- (1) Construction of CC Road from AaneBagilu to Hucchangiyellamma Temple in Chitradurga Constituency. (VJNL/2022-23/RD/WORK_INDENT 2145) **AMOUNT PUT TO TENDER:-RS.88.25 LAKHS** (2) Construction of CC Road from Private Antic Musium to Historical Fort in Chitradurga Constituency.(VJNL/2022-23/RD/WORK_INDENT 2146) **AMOUNT PUT TO TENDER:-RS.204.23 LAKHS.** (3) Construction of CC Road from AppajiParisara building to BuddanagarCircle in Chitradurga Constituency (Balance Portion of OnakeObavva Stadium Road) (VJNL/2022-23/RD/WORK_INDENT 2147)**AMOUNT PUT TO TENDER:-RS.165.10 LAKHS.** (4) Construction of CC Road from Gayatri Circle to Tippajji circle and Vishvesvarayyajala Nigam Office to Onakeobavvacircle in Chitradurga Constituency(VJNL/2022-23/RD/WORK_INDENT 2148) **AMOUNT PUT TO TENDER:-RS.187.61 LAKHS**

DIPR/CTA/MCA/259/2022-23 ಸಹಿ/- ಕಾರ್ಯಪಾಲಕ ಇಂಜಿನಿಯರ್

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ ಎತ್ತಿನಹೊಳೆ ಯೋಜನಾ ವಿಭಾಗ, ನಂ:4 ಮಧುಗಿರಿ, ತುಮಕೂರು ಜಿಲ್ಲೆ.-572132,
ದೂ ಸಂಖ್ಯೆ: 08137-282112 Email:eeyetmadhugiri4@gmail.com

ಕ್ರ.ಸಂ:ಕಾಇಂ:ವಿಜನಿನಿ/ಎಹೊಯೋ/ಮ/ವಿ.04/ಟೆ.ಅ-4/2022-23
ದಿನಾಂಕ: 17.06.2022

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿ ಚಿಂತಾಮಣಿ ವಿಧಾನಸಭಾ ಕ್ಷೇತ್ರದಲ್ಲಿ ಚಿಂತಾಮಣಿ ವಿಧಾನಸಭಾ ಕ್ಷೇತ್ರದಲ್ಲಿ ಬರುವ ವೇಗಲಹಳ್ಳಿ, ವಡ್ಡಹಳ್ಳಿ, ಬನಹಳ್ಳಿ, ನಾಯಿಂದ್ರಹಳ್ಳಿ, ಬೊಡಂಪಲ್ಲಿ, ಯನಮಲಪಾಡಿ, ಚೆನ್ನರಾಯನಹಳ್ಳಿ, ಕೊತ್ತಹುಡ್ಯ ಹಾಗೂ ಮಾವುಕೆರೆ ಗ್ರಾಮಗಳ ಎಸ್.ಸಿ ಕಾಲೋನಿಗಳಲ್ಲಿ ಸಿ.ಸಿ ರಸ್ತೆ ಅಭಿವೃದ್ಧಿ ಕಾಮಗಾರಿ. (ಇ.ನಂ. 2045/2 ನೇ ಕರೆ)", ಟೆಂಡರ್ಗೆ ಇಟ್ಟ ಮೊತ್ತ **ರೂ: 66.95** ಲಕ್ಷ ಮತ್ತು ಚಿಂತಾಮಣಿ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಗುಡ್ಡಂಪಲ್ಲಿ, ಭತ್ತಲಹಳ್ಳಿ, ಮಲ್ಲಾಪುರ, ಸೀಕಲ್, ಮುಷ್ಠೂರು ಪಟ್ಟಣ, ಸೀತಂಪಲ್ಲಿ, ದೊನಮನಗಡ್ಡ ಮಜರಾ ಬೋಡನಮರಿ ಹಾಗೂ ಸಿದ್ದೇಪಲ್ಲಿ ಗ್ರಾಮಗಳ ಎಸ್.ಟಿ ಕಾಲೋನಿಗಳಲ್ಲಿ ಸಿ.ಸಿ ರಸ್ತೆ ಅಭಿವೃದ್ದಿ ಕಾಮಗಾರಿ **(ಇ.ನಂ. 2046/2 ನೇ ಕರೆ)**", ಟೆಂಡರ್ಗೆ ಇಟ್ಟ ಮೊತ್ತ **ರೂ: 66.94** ಲಕ್ಷ.ಕ್ಕೆ ಕೈಗೆತ್ತಿಕೊಂಡಿರುವ ಕಾಮಗಾರಿಯನ್ನು ದ್ವಿ ಲಕೋಟೆ ಪದ್ದತಿಯ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನ http://www.eproc.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ: **22.06.2022** ರಿಂದ ದಿನಾಂಕ: **29.06.2022ರ** ಸಂಜೆ 05.30 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ನಿಗದಿಪಡಿಸಿದ ಇ.ಎಂ.ಡಿ ಮೊತ್ತ/ ಗುತ್ತಿಗೆದಾರರ ದರ್ಜೆ/ಟೆಂಡರ್ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು http://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ: **27.06.2022** ರ ಸಂಜೆ 3:00 ಗಂಟೆಯವರೆಗೆ ಸಂಪರ್ಕಿಸಬಹುದು ಹಾಗೂ ಸ್ವೀಕೃತ ಟೆಂಡರ್‌ಗಳನ್ನು ಇ-ಪೋರ್ಟಲ್‌ನಲ್ಲಿ ದಿನಾಂಕ: **01.07.2022** ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ. 04 ಮಧುಗಿರಿ ರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.4, ಮಧುಗಿರಿ

ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಕೋಲಾರ

ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ

ಒಕ್ಕೂಟದ ಮುಖ್ಯ ಡೇರಿ ಯು.ಹೆಚ್.ಟಿ ವಿಭಾಗದ ಯಂತ್ರಗಳ ನಿರ್ವಹಣೆ ಮತ್ತು ಚಾಲನೆ ಕೆಲಸ ಕಾರ್ಯಗಳಿಗೆ ಇ-ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು. ಹೆಚ್ಚಿನ ವಿವರಗಳನ್ನು **www.eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು
ಕೋಲಾರ- ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,

ಜಿಲ್ಲಾ ಪಂಚಾಯತ್ ತುಮಕೂರು,

ಕಾರ್ಯಪಾಲಕ ಅಭಿಯಂತರವರ ಕಚೇರಿ,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ದೂ:0816-2252937

ಸಂಖ್ಯೆ:13/ಕಾಪಾಅ/ಗ್ರಾಕು.ನೀ.ನೈ ವಿ/ತುಮ/ಟೆಂಡರ್/2022-23/725 ದಿನಾಂಕ 18.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 13/2022-23
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2022-23 ನೇ ಸಾಲಿಗೆ ಏಕ-ಲಕೋಟೆ ಮತ್ತು ದ್ವಿ-ಲಕೋಟೆ ಪದ್ದತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ. ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ಚಿಕ್ಕನಾಯಕನಹಳ್ಳಿ, ಕುಣಿಗಲ್ ಮತ್ತು ತಿಪಟೂರು ತಾಲ್ಲೂಕಿನ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://www.eproc.karnataka.gov.in) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕನಿಷ್ಠ ಕಾಮಗಾರಿ ಮೊತ್ತ ರೂ.4.45 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.11125/- ಗಳು ಹಾಗೂ ಆ) ಗರಿಷ್ಟ ಮೊತ್ತ ರೂ.85.34 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.1,70,680/- ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ : **27.06.2022** ಸಂಜೆ 5:00 ಘಂಟೆ ವರೆಗೆ (2) ಪೂರ್ವಭಾವಿ ಸಭೆ (KW-3 ಕಾಮಗಾರಿಗಳಿಗೆ) ದಿನಾಂಕ: **22.06.2022** ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ&ನೈರ್ಮಲ್ಯ ವಿಭಾಗ ತುಮಕೂರು (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **28.06.2022** ಸಂಜೆ 05.30 ಘಂಟೆಯ ನಂತರ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **02.07.2022** ಬೆಳಿಗ್ಗೆ 11.00 ಘಂಟೆಯ ನಂತರ.

ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ತುಮಕೂರು ವಿಭಾಗ, ತುಮಕೂರು

DIPR/TMK/217/MCA/2022-23

ಕರ್ನಾಟಕ ಸರಕಾರ

ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301

DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301

Telephone & Fax: 08382 221170 Email: itstaffdudckarwar@gmail.com

No: UK/DUDC/AmrutNagarothanaPhase-4/CR-07:2022-23 **Dated: 17-06-2022**

TENDER NOTIFICATION

The Executive Engineer, District Urban Development Cell, Uttar Kannada District, Karwar invites e-tenders from Class-1 PWD Registered contractors for Amruth Nagarothan-4 Project work as per KTPP Act 1999 Rule 2000 as detailed below .

Uploading Tender Documents: **18-06-2022** at 16.30 hrs, Pre bid Meeting date: **05-07-2022** at 11.00 hrs, Last date for submission of tender: **19-07-2022** at 16.30 hrs, Opening of Technical Bid : 20-07-2022 at 17.00 hrs & Opening of Financial Bid: **27-07-2022** at 13.00 hrs.

Sl. No	Description of work	Amount put to tender (Rs. In Lakhs)	EMD Amount (Rs in Lakhs)	Tender Period
1	IImprovements to Roads and Drains under Amrut Nagarothana Phase – 4 in TMC Bhatkal limit. **Indent No. DMA/2022-23/RD/ WORD_INDENT 132817**	427.75	6.42	9 Months including Monsoon Season
2	Improvements to Roads and Drains under (SCP&TSP) Amrut Nagarothana Phase – 4 in TMC Bhatkal limit. **Indent No. DMA/2022-23 /RD/ WORD_INDENT 132974**	84.47	1.69	6 Months including Monsoon Season
3	Improvements to Roads and Drains under Amrut Nagarothana Phase – 4 in TMC Haliyal limit. **Indent No. DMA/2022-23 /RD/ WORD_INDENT 132725**	320.62	4.80	9 Months including Monsoon Season

All other required tender information may be availed from the website https://eproc.karnataka.gov.in. or Project Director, DUDC, UK Office .

Sd/-, Executive Engineer, District Urban Development Cell
DC Office, U.K. District, Karwar

DIPR/ADK/MCA/94/22-23 dt. 018.06.2022

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ ಬಳ್ಳಾರಿ

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್-4/1294/2022-23 ದಿನಾಂಕ : 16-06-2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತೇದಾರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ದ್ವಿ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತೇದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತೇದಾರರು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ http://eproc. karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತೇದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತೇದಾರರು -ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಕ್ರ ಸಂ	ಕಾಮಗಾರಿಗಳ ವಿವರ	ಟೆಂಡರ್‌ಗೆ ಸೂಚಿಸಿದ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
	5054-(ಯೋಜನೆ)-ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ	
1)	KPWD/2022-23/RD/WORK_INDENT152006	176.82
2)	KPWD/2022-23/RD/WORK_INDENT152005	397.91
3)	KPWD/2022-23/RD/WORK_INDENT152003	353.88
4)	KPWD/2022-23/RD/WORK_INDENT151655	442.42
5)	KPWD/2022-23/RD/WORK_INDENT151654	265.78
6)	KPWD/2022-23/RD/WORK_INDENT151653	309.67

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **24-06-2022 ರಂದು 12.00 ಗಂಟೆಯ ವರೆಗೆ.** ಆ) ಇ-ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **02-07-2022 ರಂದು 16.00 ಗಂಟೆಯ ವರೆಗೆ.** ಇ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **04-07-2022ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/156/ಎಂಸಿಎ/2022-23

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸ.ನೀ. ಮತ್ತು ಅಂ.ಅ ವಿಭಾಗ, ಮಂಡ್ಯ

ಮರು ಟೆಂಡರ್ ಪ್ರಕಟಣೆ : 01 / 2021-22 ದಿನಾಂಕ : 16-06-2022
ಉಲ್ಲೇಖ: 1. ಈ ಕಛೇರಿಯ ಅಧಿಸೂಚನೆ ಸಂಖ್ಯೆ: 01/ 2021-22 ದಿ: 16-06-2021

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ-571401 ಇವರು ಕೆಳಕಂಡ ಕಾಮಗಾರಿಗಳಿಗೆ ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು-4 ರ ಪ್ರಕಾರ "ಇ" – ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕ್ರಿಯೆಯ ದಿನಾಂಕಗಳನ್ನು ಈ ಕೆಳಕಂಡಂತೆ ನಮೂದಿಸಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಕಛೇರಿ ವೇಳೆಯಲ್ಲಿ ದಿನಾಂಕ : **24.06.2022** ರವರಗೆ ಪಡೆಯಬಹುದಾಗಿದೆ. **ದಿನಾಂಕ:27.06.2022ರ 17-30 ಗಂಟೆವರೆಗೆ** ಟೆಂಡರ್‌ನ ನಿಗದಿತ ನಮೂನೆಗಳನ್ನು **"www.eproc.karnataka.gov.in"** ನಲ್ಲಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ.ಯೊಂದಿಗೆ ಕೆಳಕಂಡ ಕಾಲಂಗಳನ್ವಯ ಬಿಡ್‌ನ್ನು ಅಪ್ ಲೋಡ್ ಮಾಡಬಹುದಾಗಿದೆ. ಈ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು **ದಿನಾಂಕ : 29.06.2022 ರಂದು ಬೆಳಿಗ್ಗೆ : 11-00 ಗಂಟೆಗೆ** ತೆರೆಯಲಾಗುವುದು. ಈ ಟೆಂಡರ್‌ನ ಆರ್ಥಿಕ ಬಿಡ್‌ನ್ನು **ದಿನಾಂಕ : 01.07.2022 ರಂದು ಬೆಳಿಗ್ಗೆ : 11-00 ಗಂಟೆಗೆ** ತೆರೆಯಲಾಗುವುದು. ಸದರಿ ಟೆಂಡರ್‌ನ ಕಾಮಗಾರಿಯನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ ಇವರಿಗೆ ಕಾಯ್ದಿರಿಸಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು "ಇ" – ಪ್ರಕಟಣೆಯಲ್ಲಿಯೇ ನಮೂದಿಸಲಾಗಿದೆ.

ಲೆಕ್ಕ ಶೀರ್ಷಿಕೆ : 4702-ಕೆರೆಗಳ ಆಧುನೀಕರಣ – ಪ್ರಧಾನ ಕಾಮಗಾರಿಗಳು

ಕ್ರಮ ಸಂಖ್ಯೆ : **01**. ಕಾಮಗಾರಿಯ ಹೆಸರು : **ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕು ಕಸಬಾ ಹೋಬಳಿ ಸಾದಗೋನಹಳ್ಳಿ ಕೆರೆ ಅಭಿವೃದ್ಧಿ**. ಟೆಂಡರ್‌ಗೆ ಇಟ್ಟಿರುವ ಮೊತ್ತ (ರೂ.ಲಕ್ಷಗಳಲ್ಲಿ) : **100.00**. ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : **ಇ-ಪ್ರೋಕ್ಯೂರ್‌ಮೆಂಟ್ ರಿತ್ಯಾ**. ಕಾಲಾವಧಿ ತಿಂಗಳುಗಳಲ್ಲಿ (ಮಳೆಗಾಲ ಸೇರಿ) : **06 ತಿಂಗಳು.** ಬಿಡ್‌ನ ವರ್ಗ : **ಕೆ.ಡಬ್ಲ್ಯು-4.** ಬಿಡ್‌ನ ಸ್ವರೂಪ : ತಾಂತ್ರಿಕ & ಆರ್ಥಿಕ ಬಿಡ್ ಪ್ರತ್ಯೇಕವಾಗಿ.

ವಿ.ಸೂ : ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಸ.ನೀ.ಮತ್ತು ಅಂ.ಅ.ವಿಭಾಗ, ಮಂಡ್ಯ

ವಾಸಾಸಂಇ/ಸನಿ-ಮಂಡ್ಯ/ಎಂಸಿ&ಎ/112/2022-23

ಕರ್ನಾಟಕ ಸರ್ಕಾರ
(ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ)

ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ

ದೂರವಾಣಿ ಸಂ:08352-277816, ಫ್ಯಾಕ್ಸ್:08352-277817
ಇ-ಮೇಲ್:zpebjp9@yahoo.co.in

ಸಂಖ್ಯೆ:ಕಾಇಂ/ಪಂ.ರಾ.ಇ.ವಿ/ವಿಜ/ಇಪ್ರಾ/ಟೆಂಡರ್/2022-23/640 ದಿನಾಂಕ:18.06.2022

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ದ್ವಿ ಲಕೋಟಿ ಪದ್ದತಿ)

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2020-21ನೇ ಸಾಲಿನ 5054 ವಿಶೇಷ ಅನುದಾನ ಲೆಕ್ಕ ಶೀರ್ಷಿಕೆ ಯೋಜನೆಯಡಿಯಲ್ಲಿ (1) ತಾಳಿಕೊಟಿ ತಾಲೂಕಿನ ಹರನಾಳ ದಿಂದ ನಾಗೂರ ರಸ್ತೆ ಸುಧಾರಣೆ ರೂ. 200.00 ಲಕ್ಷಗಳು (KW-4) (2) ಮುದ್ದೇಬಿಹಾಳ ತಾಲೂಕಿನ ಲಿಂಗಸೂರ-ಶೀರಾಡೋನ ರಾಜ್ಯ ಹೆದ್ದಾರಿ ದಿಂದ ಬಿದರಕುಂದಿ-ಕುಂಟೋಜಿ ಕೂಡು ರಸ್ತೆ ಸುಧಾರಣೆ ರೂ. 200.00 ಲಕ್ಷಗಳು (KW-4) (3) ಮುದ್ದೇಬಿಹಾಳ ತಾಲೂಕಿನ ನಡಹಳ್ಳಿ ದಿಂದ ಮಡಿಕೇಶ್ವರ ರಸ್ತೆ (ಮುದ್ದೇಬಿಹಾಳ-ತಾಳಿಕೋಟಿ ರಾಜ್ಯ ಹೆದ್ದಾರಿ) ಸುಧಾರಣೆ ರೂ. 200.00 ಲಕ್ಷಗಳು (KW-4)ಕಾಮಗಾರಿಗಳನ್ನು ಇ-ಟೆಂಡರ್‌ನ್ನು ದ್ವಿ ಲಕೋಟಿ ಪದ್ದತಿಯಲ್ಲಿ ಅಹ್ವಾನಿಸಿದ್ದು. ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.eproc.karnataka.gov.in_ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾ.ಇಂ. ವಿಭಾಗ, ವಿಜಯಪುರ.

ವಾಸಾಸಂಇ/ವಿಜಯಪುರ/149/ಎಂಸಿಎ/2022-23

"ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ"

(ಕರ್ನಾಟಕ ಸರಕಾರದ ಒಂದು ಉದ್ದಿಮೆ)
ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ ಕೃಭಾಜನಿನಿ,
ಆಬದಂಕಾ ವಿಭಾಗ, ಹುನಗುಂದ ದೂರವಾಣಿ: 08351 261110.

ಸಂ: ಕೃ.ಭಾಜನಿನಿ/ಎಆರ್‌ಬಿಸಿ-ವಿ/ಟಿಎನ್‌ಡಿ/2022-23/464 ದಿನಾಂಕ:07/06/2022

ಸಂಕ್ಷಿಪ್ತ ಟೆಂಡರ್ ಪ್ರಕಟಣೆ ಕರೆ
(ಇ-ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ ನಿ., ಬೆಂಗಳೂರು/ಆಲಮಟ್ಟಿ ಇವರ ಪರವಾಗಿ, ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ,ಆಬದಂಕಾ ವಿಭಾಗ, ಹುನಗುಂದ, ಈ ವಿಭಾದಡಿಯ ಅನುಮೋದಿತ ಕಾರ್ಯಕ್ರಮದಡಿಯಲ್ಲಿ ಬರುವ SCP/TSP ನ ಕನಿಷ್ಠ ಮೊತ್ತ ರೂ. 62.31, ಗರಿಷ್ಠ ಮೊತ್ತ ರೂ.65.01 ಲಕ್ಷಗಳ 3 ಕಾಮಗಾರಿಗಳಾದ 1)I.No-21570-call-5, 2) I.No-21572-call-5 ಮತ್ತು 3)I.No-21575-call-4 ಕಾಮಗಾರಿಗಳಿಗೆ ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ನೊಂದಾಯಿತ ಕೆ.ಪಿ.ಡಬ್ಲ್ಯೂ.ಡಿ/ಕೆಟಗರಿ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದು, ಅರ್ಹ ಗುತ್ತಿಗೆದಾರರು EMD ಯನ್ನು ಇ-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದಿನಾಂಕ: 17.06.2022 ರಿಂದ 28.06.2022 ರ ಸಂಜೆ 5.00 ಗಂಟೆವರೆಗೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:30.06.2022 ಬೆಳಿಗ್ಗೆ 11.45 ಘಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ:05.07.2022 ಬೆಳಿಗ್ಗೆ 11.45 ಘಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ www.eprocurement.kar.nic.in website ಮೂಲಕ ಅಥವಾ ಈ ಕೆಳಗಿನ ವಿಭಾಗ ಕಚೇರಿಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-ಕಾರ್ಯಪಾಲಕ ಅಭಿಯಂತರರು
ಕೃಭಾಜನಿನಿ. ಆಬದಂಕಾ ವಿಭಾಗ, ಹುನಗುಂದ.

DIPR/BGK/RO-NO-155/MCA/2022-23

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿಯಮಿತ (ಬೆಂಗಳೂರು ಡೇರಿ)

ಬಮೂಲ್
ಡಿ.ಆರ್.ಕಾಲೇಜು ಅಂಚೆ, ಡಾ: ಎಂ.ಹೆಚ್.ಮರೀಗೌಡರಸ್ತೆ, ಬೆಂಗಳೂರು-560029
ಇ-ಮೇಲ್: bamulpurchase@gmail.com
ವೆಬ್‌ಸೈಟ್ : www.bamulnandini.coop. ದೂರವಾಣಿ : 080-26096248

ಐಎಫ್‌ಟಿ ಸಂಖ್ಯೆ:ಬಮೂಲ್/ಪಿಯುಆರ್/ಟೆಂಡರ್ ಇ-ಟೆಂಡರ್-278/2022-23 ದಿ:17.06.2022

ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ.(ಬಮೂಲ್), ಬೆಂಗಳೂರು ರವರು ಆಸಕ್ತಿಯುಳ್ಳ ಅರ್ಹ ತಯಾರಕರು/ಸರಬರಾಜುದಾರರಿಂದ ಈ ಕೆಳಕಂಡ ಸಾಮಗ್ರಿಗಳ ಸರಬರಾಜಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಕರೆಯಲಾಗಿದೆ.

ಕ್ರ.ಸ	ಸಾಮಗ್ರಿಯ ವಿವರ	ಪರಿಮಾಣ	ಅಂದಾಜು (ಲಕ್ಷಗಳಲ್ಲಿ)	ಟೆಂಡರ್ ಸಂಖ್ಯೆ
01	Design, Supply, Erection, Testing & Commissioning of LMP Expansion Plant along with Utility Expansion on Turnkey Basis at Kanakapura Dairy	01 Lot	3,900.00	**278**

1	ಇ-ಟೆಂಡರ್ ದಾಖಲೆಗಳು ಲಭಿಸುವ ದಿನಾಂಕ ಮತ್ತು ಸಮಯ	17.06.2022 ರಿಂದ 05.07.2022 ಅಪರಾಹ್ನ 02.00 ಗಂಟೆವರೆಗೆ
2	ಪ್ರೀ-ಬಿಡ್ ಮೀಟಿಂಗ್ ಮತ್ತುಟೆಂಡರ್ ಬಗ್ಗೆ ಸ್ಪಷ್ಟನೆ ದಿನಾಂಕ ಮತ್ತು ಸಮಯ	27.06.2022 ಬೆಳಿಗ್ಗೆ 11.00 ಗಂಟೆಗೆ ವರೆಗೆ
3	ಟೆಂಡರ್ ಸಲ್ಲಿಸುವ/ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	05.07.2022 ಅಪರಾಹ್ನ 02.00 ಗಂಟೆವರೆಗೆ
4	ತಾಂತ್ರಿಕಟೆಂಡರ್‌ತೆರೆಯುವ ದಿನಾಂಕ ಮತ್ತು ಸಮಯ	06.07.2022 ಅಪರಾಹ್ನ 02.35 ಗಂಟೆಗೆ
5	ವಾಣಿಜ್ಯಟೆಂಡರ್‌ತೆರೆಯುವ ದಿನಾಂಕ ಮತ್ತು ಸಮಯ	07.07.2022 ಬೆಳಿಗ್ಗೆ 11.30 ಗಂಟೆಗೆ
6	ತಾಂತ್ರಿಕ ಮತ್ತು ವಾಣಿಜ್ಯಟೆಂಡರ್‌ತೆರೆಯುವ ಸ್ಥಳ	ಬೆಂಗಳೂರು ಸಹಕಾರ ಹಾಲು ಒಕ್ಕೂಟ (ನಿ.) (ಬೆಂಗಳೂರು ಡೇರಿ) ಮಂಡಲಿ ಸಭಾಂಗಣ

ಟೆಂಡರ್‌ದಾರರು ಮೇಲೆ ತಿಳಿಸಿರುವ ಸೇವೆಗಳಿಗೆ ಪ್ರತ್ಯೇಕಟೆಂಡರ್ ಸಲ್ಲಿಸಬೇಕು. ಗುತ್ತಿಗೆ ನೀಡಿಕೆಗೆ ಅರ್ಹರಾಗಲು ಹೊಂದಿರಬೇಕಾದ ಅರ್ಹತಾ ಅಗತ್ಯತೆಯನ್ನು ವಿಭಾಗ VII ರಲ್ಲಿ ತಿಳಿಸಲಾಗಿದೆ.

ಇ.ಎಂ.ಡಿ. ಬಾಬ್ತಿನ ಹಣವು ಟೆಂಡರ್ ಅವಧಿಯ 45 ದಿನಗಳ ವಾಯ್ದೆ ಮೀರಿದ್ದು, ಅಂದರೆ ಒಟ್ಟು 135 ದಿನಗಳ ಸಿಂಧುತ್ವದ ಅವಧಿಗೆ ಅನ್ವಯವಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕ ಇ-ಪಾವತಿಯ ವಿಧಾನಗಳು ಮತ್ತು ಟೆಂಡರ್ ದಾಖಲೆಗಳ ವಿವರವನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ವಿಕ್ಷಿಸಬಹುದು **Tender No: KMF/BAMUL/PUR/2022-23/278**

ಸಹಿ/- ವ್ಯವಸ್ಥಾಪಕ ನಿರ್ದೇಶಕರು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ (ಬಮೂಲ್)

Government of Karnataka
BELAGAVI INSTITUTE OF MEDICAL SCIENCES,
(Autonomous Medical Institution)
Dr. B R Ambedkar Road, Belagavi- 590 001 E.Mail: belgaum.bims@gmail.com

No. BIMS/EST(1)/243/2022-23 **Date: 17-06-2022**

NOTIFICATION

Applications are invited from eligible candidates for the following posts on consolidated salary for the period of 6 months. (extendable on performance basis or by filling of permanent posts). Interested eligible candidates are informed to submit their applications in the prescribed form along with photo copies of relevant documents before 05.00 pm on 24-06-2022. Short listed candidates will be intimated for interview.

Application can be collected from BIMS office during working hours from 10.00 am to 05.30 pm by producing copy of relevant documents to Asst. Administrative Officer, BIMS, Belagavi.

Sl. No.	Post	Qualification	Experience	Age Limit	Salary
1	Asst. Professors General Medicine – 1 Psychiatry – 1 Radiology - 1	MD/MS in respective subject.	Should have required experience as per NMC guidelines with minimum 2 publications	As per rules of Govt. of Karnataka	Consolidated Rs. 70,000/- per Month
2	Associate Professors. Radiology - 1	MD Radiology	Should have required experience and publications as per NMC guidelines	As per rules of Govt. of Karnataka	Consolidated Rs. 80,000/- per Month
3	System Engineer - 1	BE in CSE with CISCO certificate in networking and Microsoft certificate in Windows server	Minimun 2 years of experience in IT & networking	As per rules of Govt. of Karnataka	Consolidated Rs. 35,000/- per Month
4	Tutors for Paramedical Courses **A.Physics Tutor** Teaching Hours:Twice per week between 03.00 pm to 05.00 pm	M.Sc. Physics from recognized college	Retired PU or Degree College Lecturer preferred	Not exceeding 62 years	Lumpsum Rs. 1,500/- per month
	B.Chemistry Tutor Teaching Hours: Twice per week between 03.00 pm to 05.00 pm	M.Sc. Chemistry from recognized college	Retired PU or Degree College Lecturer preferred	Not exceeding 62 years	Lumpsum Rs. 1,500/- per month
	C.Biology Tutor Teaching Hours: Twice per week between 03.00 pm to 05.00 pm	M.Sc. Biology / Bio-Technology from recognized college	Retired PU or Degree College Lecturer preferred	Not exceeding 62 years	Lumpsum Rs. 1,500/- per month
	D.Computer Science Tutor Teaching Days & Hours: Saturday 02.00 pm to 03.00 pm	BE Computer Science/MCA from recognized College	–	30 years	Lumpsum Rs. 1,500/- per month
	E.(I) Part-time External Lecturers for Nursing College Teaching Days & Hours:Monday, Wednes day, Friday 02.00 pm to 03.00 pm	MA English from recognized college	Retired PU or Degree College Lecturer preferred	Not exceeding 62 years	Lumpsum Rs. 6,000/- per month
	(ii) Computer Education Lecturer Teaching Days & Hours: Tuesday 02.00 pm to 03.00 pm	BE Computer Science/MCA from recognized College	Retired PU or Degree College Lecturer preferred	45 years	Lumpsum Rs. 2,000/- per month
	F.Audiologist-1	B.Sc Audiology / M.Sc. Audiology preferred	2 years in BERA Test	As per Govt. of Karnataka	Lumpsum Rs. 20,000/- per month

Sd/-Dean & Director,
Belagavi Institute of Medical Sciences,Belagavi.

DIPR/BGM/RO-NO-358/MCA/2022-23

ರಕ್ಷಣಾ ಸಚಿವಾಲಯ, ಗೃಹ ಸಚಿವಾಲಯ ಭರವಸೆ • ಪ್ರತಿಭಟನಕಾರರ ಆಕ್ರೋಶ ತಣಿಸಲು ಯತ್ನ

ಅಗ್ನಿವೀರರಿಗೆ ಶೇ 10ರಷ್ಟು ಮೀಸಲಾತಿ

ನವದೆಹಲಿ (ಪಿಟಿಐ): 'ಅಗ್ನಿಪಥ' ನೇಮಕಾತಿ ಯೋಜನೆಗೆ ಪ್ರತಿಭಟನಕಾರರಿಂದ ವ್ಯಕ್ತವಾಗಿರುವ ಆಕ್ರೋಶವನ್ನು ತಣಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಈ ಯೋಜನೆಯಡಿ ನೇಮಕಗೊಂಡ ಅಗ್ನಿವೀರರು 4 ವರ್ಷಗಳ ಅವಧಿ ಪೂರೈಸಿದ ಬಳಿಕ, ವಿವಿಧ ನೇಮಕಾತಿಗಳಲ್ಲಿ ಶೇ 10 ರಷ್ಟು ಮೀಸಲಾತಿ ನೀಡುವುದಾಗಿ ಘೋಷಿಸಿದೆ. ಜತೆಗೆ, ಸಾರ್ವಜನಿಕ ಉದ್ದಿಮೆಗಳಲ್ಲೂ (ಪಿಎಸ್‌ಯು) ಅಗ್ನಿವೀರರನ್ನು ನೇಮಕಾತಿ ಮಾಡಿಕೊಳ್ಳಲು ಮುಂದಾಗಿದೆ.

ವಿವಿಧ ಅರೆಸೇನಾಪಡೆಗಳು ಹಾಗೂ ಅಸ್ಸಾಂ ರೈಫಲ್ಸ್‌ನ ನೇಮಕಾತಿಯಲ್ಲಿ ಶೇ 10ರಷ್ಟು ಮೀಸಲಾತಿ ನೀಡುವುದಾಗಿ ಕೇಂದ್ರ ಗೃಹ ಸಚಿವಾಲಯ ಶನಿವಾರ ತಿಳಿಸಿದೆ.

ಸಿಆರ್‌ಪಿಎಫ್ ಹಾಗೂ ಅಸ್ಸಾಂ ರೈಫಲ್ಸ್ ನೇಮಕಾತಿಯಲ್ಲಿ ಅಗ್ನಿವೀರರ ನೇಮಕದ ಗರಿಷ್ಠ ವಯೋಮಿತಿಯನ್ನು 3 ವರ್ಷ ಸಡಿಲಿಸಲು ನಿರ್ಧರಿಸಲಾಗಿದೆ. 18-23 ವಯಸ್ಸಿನವರನ್ನು ಈ ನೇಮಕಾತಿಗಳಲ್ಲಿ ಈಗ ಪರಿಗಣಿಸಲಾಗುತ್ತಿದ್ದು, ಅಗ್ನಿವೀರರಿಗೆ ಮೂರು ವರ್ಷದ ಸಡಿಲಿಕೆ ಇರಲಿದೆ. ಅಗ್ನಿವೀರರ ಮೊದಲ ತಂಡಕ್ಕೆ ಐದು ವರ್ಷ ವಿನಾಯಿತಿ ದೊರೆಯಲಿದೆ.

ಈ ಮಧ್ಯೆ, ರಕ್ಷಣಾ ಸಚಿವಾಲಯದ ನೇಮಕಾತಿಯಲ್ಲಿ ಅಗ್ನಿವೀರರನ್ನು ಪರಿಗಣಿಸುವ ಪ್ರಸ್ತಾವಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶನಿವಾರ ಒಪ್ಪಿಗೆ ಸೂಚಿಸಿದ್ದಾರೆ. ರಕ್ಷಣಾ ಸಚಿವಾಲಯದಲ್ಲಿರುವ ನಾಗರಿಕ ಹುದ್ದೆಗಳು ಹಾಗೂ ಕರಾವಳಿ ಕಾವಲುಪಡೆಯ ನೇಮಕಾತಿಯಲ್ಲಿ ಶೇ 10ರಷ್ಟು ಮೀಸಲಾತಿ ನೀಡಲಾಗುವುದು ಎಂದು ರಾಜನಾಥ್ ಸಿಂಗ್ ಅವರ ಕಚೇರಿ ತಿಳಿಸಿದೆ. ಪ್ರಸ್ತುತ ಇರುವ ನಿವೃತ್ತ ಸೈನಿಕರ ಕೋಟಾಕ್ಕೆ ಹೆಚ್ಚುವರಿಯಾಗಿ ಈ ಮೀಸಲಾತಿ ಸೇರ್ಪಡೆಯಾಗಲಿದೆ.

ಮೀಸಲಾತಿ ಅವಕಾಶವನ್ನು ನೀಡಲು ನೇಮಕಾತಿ ನಿಯಮಗಳಿಗೆ ಅಗತ್ಯ ತಿದ್ದುಪಡಿಗಳನ್ನು ಮಾಡಲಾಗುವುದು ಎಂದು ಸಚಿವಾಲಯ ಟ್ವೀಟ್‌ನಲ್ಲಿ ತಿಳಿಸಿದೆ. ರಕ್ಷಣೆಗೆ ಸಂಬಂಧಿಸಿದ ಎಲ್ಲ ಸಾರ್ವಜನಿಕ ವಲಯದ ಉದ್ದಿಮೆಗಳು (ಪಿಎಸ್‌ಯು) ತಮ್ಮ ನೇಮಕಾತಿಯಲ್ಲಿ ಅಗ್ನಿವೀರರಿಗೆ ಅವಕಾಶ ನೀಡುವ ಕುರಿತಂತೆ ಸೂಕ್ತ ನಿಯಮಾವಳಿಗಳನ್ನು ರೂಪಿಸಬೇಕು ಎಂದೂ ಸಚಿವಾಲಯ ಸೂಚಿಸಿದೆ.

ವಾಣಿಜ್ಯ ಪೆಟ್ರೋಲಿಯಂ ಹಾಗೂ ವಸತಿ ಸಚಿವಾಲಯದ ಅಡಿ ಬರುವ ಸಾರ್ವಜನಿಕ ಉದ್ದಿಮೆಗಳಲ್ಲೂ ಅಗ್ನಿವೀರರನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಕೇಂದ್ರ ಸಚಿವ ಹರದೀಪ್ ಸಿಂಗ್ ಪುರಿ ತಿಳಿಸಿದ್ದಾರೆ. ಯೋಜನೆ ಬಗ್ಗೆ ತಪ್ಪು ಮಾಹಿತಿಯನ್ನು ಹರಡುತ್ತಿರುವುದಕ್ಕೆ ಬೇಸರ ವ್ಯಕ್ತಪಡಿಸಿರುವ ಸಚಿವರು, ಯೋಜನೆಯ ಬಗ್ಗೆ ಯುವಜನರಲ್ಲಿ ಜಾಗೃತಿ ಮೂಡಿಸಲಾಗುವುದು ಎಂದು ಹೇಳಿದರು.

ವಾಣಿಜ್ಯ ನೌಕೆಗಳ ವಿವಿಧ ಹುದ್ದೆಗಳಿಗೆ ಆಯ್ಕೆಯಾಗುವಂತೆ ಅಗ್ನಿವೀರರನ್ನು ಸನ್ನದ್ಧಗೊಳಿಸಲು ಹಡಗು ಹಾಗೂ ಜಲಸಾರಿಗೆ ಸಚಿವಾಲಯ ನಿರ್ಧರಿಸಿದೆ. ಶನಿವಾರ ಪ್ರಕಟಣೆ ಹೊರಡಿಸಿರುವ ಸಚಿವಾಲಯವು, ಅಗ್ನಿವೀರರಿಗೆ ನೌಕಾ ತರಬೇತಿ ಹಾಗೂ ಪ್ರಮಾಣಪತ್ರ ನೀಡಲಾಗುವುದು ಎಂದು ತಿಳಿಸಿದೆ.

ಅಗ್ನಿಪಥ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಎರಡು ವರ್ಷ ಹೆಚ್ಚಿಸುವ ನಿರ್ಧಾರವನ್ನು ಗುರುವಾರ ರಾತ್ರಿ ಪ್ರಕಟಿಸಿದ್ದ ಸರ್ಕಾರ, ಪ್ರತಿಭಟನಕಾರರ ಮನವೊಲಿಸಲು ಮುಂದಾಗಿತ್ತು. ಇದೀಗ ವಿವಿಧ ನೇಮಕಾತಿಗಳಲ್ಲಿ ಮೀಸಲಾತಿ ನೀಡುವುದಾಗಿ ಭರವಸೆ ನೀಡಿದೆ. ಬಿಜೆಪಿ ಆಡಳಿತದ ಕೆಲವು ರಾಜ್ಯಗಳು ವಿವಿಧ ಇಲಾಖೆಗಳಲ್ಲಿ ಅಗ್ನಿವೀರರಿಗೆ ಅವಕಾಶ ನೀಡುವ ಭರವಸೆ ನೀಡಿವೆ.

ಸುಪ್ರೀಂಗೆ ಅರ್ಜಿ: ಅಗ್ನಿಪಥ ಯೋಜನೆ ವಿರೋಧಿಸಿ ನಡೆದಿರುವ ಹಿಂಸಾಚಾರ ಹಾಗೂ ಸಾರ್ವಜನಿಕ ಸೊತ್ತುಗಳಿಗೆ ಮಾಡಲಾಗಿರುವ ಹಾನಿಯ ಬಗ್ಗೆ ತನಿಖೆ ನಡೆಸಲು ವಿಶೇಷ ತನಿಖಾ ತಂಡವನ್ನು ರಚಿಸಲು ನಿರ್ದೇಶನ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ. ವಕೀಲ ವಿಶಾಲ್ ತಿವಾರಿ ಎಂಬುವರು ಅರ್ಜಿ ಸಲ್ಲಿಸಿದ್ದು, ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ಕೇಂದ್ರ ಸರ್ಕಾರ ಹಾಗೂ ಉತ್ತರಪ್ರದೇಶ, ತೆಲಂಗಾಣ, ಬಿಹಾರ, ಹರಿಯಾಣ ಹಾಗೂ ರಾಜಸ್ಥಾನ ಸರ್ಕಾರಗಳಿಗೆ ನಿರ್ದೇಶನ ನೀಡುವಂತೆಯೂ ಅವರು ಮನವಿ ಮಾಡಿದ್ದಾರೆ.

ಶನಿವಾರದ ಪ್ರಮುಖ ವಿದ್ಯಮಾನಗಳು

- ವಾಯುಪಡೆಗೆ ಅಗ್ನಿಪಥ ಯೋಜನೆ ಅಡಿ ನೇಮಕಾತಿ ಪ್ರಕ್ರಿಯೆಯು ಇದೇ 24ರಂದು ಆರಂಭವಾಗಲಿದೆ ಎಂದು ವಾಯುಪಡೆಯ ಮುಖ್ಯಸ್ಥ ವಿ.ಆರ್.ಚೌಧರಿ ತಿಳಿಸಿದ್ದಾರೆ
- ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ ಘಟಕ ಎನ್‌ಎಸ್‌ಯುಐ ಸದಸ್ಯರು ಡೆಹ್ರಾಡೂನ್‌ನಲ್ಲಿ ಪ್ರತಿಭಟನೆ ನಡೆಸಿದ್ದಾರೆ
- ಅಗ್ನಿಪಥ ಯೋಜನೆ ವಿರುದ್ಧ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಬೇಕು ಎಂದು ಪಂಜಾಬ್ ವಿಧಾನಸಭೆ ವಿರೋಧ ಪಕ್ಷದ ನಾಯಕ ಪ್ರತಾಪ್ ಸಿಂಗ್ ಬಾಜ್ವಾ ಒತ್ತಾಯಿಸಿದ್ದಾರೆ
- ಒಡಿಶಾದ ನಬರಂಗ್‌ಪುರದ ವ್ಯಕ್ತಿಯೊಬ್ಬರು 60 ಕಿ.ಮೀ. ಓಡಿ ತಮ್ಮ ಪ್ರತಿರೋಧ ವ್ಯಕ್ತಪಡಿಸಿದ್ದಾರೆ. ಅಲ್ಲಿನ ಬರ್ಹಾಂಪುರದಲ್ಲಿಯೂ ಪ್ರತಿಭಟನೆ ನಡೆದಿದೆ
- ಅಗ್ನಿಪಥದ ವಿರುದ್ಧ ರಾಜಸ್ಥಾನದಾದ್ಯಂತ ಪ್ರತಿಭಟನೆ ನಡೆಸುವುದಾಗಿ ಬಿಜೆಪಿಯ ಮಿತ್ರಪಕ್ಷವಾಗಿದ್ದ ರಾಷ್ಟ್ರೀಯ ಲೋಕ ತಾಂತ್ರಿಕ ದಳ ಹೇಳಿದೆ
- ಶನಿವಾರ 369 ರೈಲುಗಳ ಸಂಚಾರ ರದ್ದುಪಡಿಸಲಾಗಿದೆ; ದಕ್ಷಿಣ ಮಧ್ಯ ರೈಲ್ವೆ ಮತ್ತು ಪೂರ್ವ ರೈಲ್ವೆಯ ಹಲವು ರೈಲುಗಳು ಬದಲಿ ಮಾರ್ಗಗಳಲ್ಲಿ ಸಂಚರಿಸಿವೆ
- ಉತ್ತರ ಪ್ರದೇಶದ ಜೌನ್‌ಪುರದಲ್ಲಿ ಪೊಲೀಸ್ ಜೀಪ್ ಮತ್ತು ಸರ್ಕಾರಿ ಬಸ್‌ಗೆ ಬೆಂಕಿ ಹಚ್ಚಲಾಗಿದೆ
- ತೆಲಂಗಾಣದ ಸಿಕಂದರಾಬಾದ್ ರೈಲು ನಿಲ್ದಾಣದಲ್ಲಿ ಶುಕ್ರವಾರ ನಡೆದ ಹಿಂಸಾಚಾರ ಕುರಿತಂತೆ ಸೇನಾ ತರಬೇತಿ ನೀಡುವ ಸಂಸ್ಥೆಯೊಂದರ ಮುಖ್ಯಸ್ಥ ಅವುಲಾ ಸುಬ್ಬರಾವ್ ಎಂಬುವರನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ. ಸೇನಾ ತರಬೇತಿ ನೀಡುವ ಸಂಸ್ಥೆಗಳು ಹಿಂಸಾಚಾರದಲ್ಲಿ ಭಾಗಿಯಾಗಿವೆಯೇ ಎಂಬ ಆಯಾಮದಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಹಿಂಸಾಚಾರಕ್ಕೆ ಮುಖ್ಯಮಂತ್ರಿ ಕಚೇರಿ ಕುಮ್ಮಕ್ಕು ನೀಡಿದೆ ಎಂದು ಬಿಜೆಪಿ ರಾಜ್ಯ ಘಟಕ ಆರೋಪಿಸಿದೆ
- ಬಿಹಾರ ಉಪಮುಖ್ಯಮಂತ್ರಿ ರೇಣು ದೇವಿ, ಬಿಹಾರ ಬಿಜೆಪಿ ಘಟಕದ ಅಧ್ಯಕ್ಷ ಸಂಜಯ್ ಜೈಸ್ವಾಲ್ ಸೇರಿದಂತೆ ಬಿಹಾರ ಬಿಜೆಪಿಯ ಹತ್ತು ಮುಖಂಡರಿಗೆ ಸಿಆರ್‌ಪಿಎಫ್ ನಿಂದ ವಿಐಪಿ ಭದ್ರತೆ ಒದಗಿಸಲು ಕೇಂದ್ರ ಗೃಹ ಸಚಿವಾಲಯ ನಿರ್ಧರಿಸಿದೆ

ಸೇನಾ ಮುಖ್ಯಸ್ಥರ ಜತೆ ರಾಜನಾಥ್ ಚರ್ಚೆ

ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್. ಹರಿ ಕುಮಾರ್ ಮತ್ತು ಭೂಸೇನಾ ಉಪಮುಖ್ಯಸ್ಥ ಬಿ.ಎಸ್. ರಾಜು ಅವರ ಜತೆಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಶನಿವಾರ ಸಭೆ ನಡೆಸಿದ್ದಾರೆ. 'ಅಗ್ನಿಪಥ' ಯೋಜನೆಯ ತ್ವರಿತ ಜಾರಿ ಮತ್ತು ಪ್ರತಿಭಟನಕಾರರ ಮನವೊಲಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ. ಭೂಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಹೈದರಾಬಾದ್ ಪ್ರವಾಸದಲ್ಲಿದ್ದ ಕಾರಣ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲ.

ವ್ಯಾಪಕ ಸಮಾಲೋಚನೆ ಬಳಿಕವೇ ಅಗ್ನಿಪಥ ಯೋಜನೆ ಘೋಷಿಸಲಾಗಿದೆ. ಆದರೆ, ರಾಜಕೀಯ ಕಾರಣಗಳಿಗಾಗಿ ಯೋಜನೆ ಬಗ್ಗೆ ತಪ್ಪುಗ್ರಹಿಕೆ ಪಸರಿಸಲಾಗುತ್ತಿದೆ
ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಹಿಂಸೆಗೆ ಇಳಿಯಬೇಡಿ, ಯೋಜನೆಯ ಯಾವುದೇ ಕುಂದುಕೊರತೆಗಳನ್ನು ಪರಿಶೀಲಿಸಲು ಸರ್ಕಾರ ಮುಕ್ತವಾಗಿದೆ. ಅಗತ್ಯಬಿದ್ದರೆ ಬದಲಾವಣೆ ತರಲಾಗುವುದು
ಅನುರಾಗ್ ಠಾಕೂರ್, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ

ಸಶಸ್ತ್ರ ಪಡೆಗಳು, ಭದ್ರತೆ, ಯುವಜನರ ಭವಿಷ್ಯದ ವಿಚಾರದಲ್ಲಿ ಮೊದಲು ನಿರ್ಧಾರ ಕೈಗೊಂಡು ನಂತರ ಚಿಂತಿಸುವುದು ಸಂವೇದನಾಶೀಲ ಸರ್ಕಾರಕ್ಕೆ ತರವಲ್ಲ
ವರುಣ್ ಗಾಂಧಿ, ಬಿಜೆಪಿ ಸಂಸದ

ಅಭಿಪ್ರಾಯ, ಸಲಹೆ, ಸಮ್ಮತಿ, ಸಮಾಲೋಚನೆ, ಚರ್ಚೆಯಂಥ ಪದಗಳು ಬಿಜೆಪಿ ನಿಘಂಟಿನಲ್ಲಿ ಇಲ್ಲವೇ ಇಲ್ಲ. ಹಾಗಾಗಿಯೇ ನಿರಂಕುಶ ನಿರ್ಧಾರಗಳನ್ನು ಹೇರಲಾಗುತ್ತಿದೆ
ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

ಸತತ ನಾಲ್ಕನೇ ದಿನವೂ ಆಕ್ರೋಶ

ಪಟ್ನಾ/ಕೋಲ್ಕತ್ತ/ಭುವನೇಶ್ವರ/ರಾಂಚಿ (ಪಿಟಿಐ): ಅಗ್ನಿಪಥ ಯೋಜನೆಯ ವಿರುದ್ಧದ ಆಕ್ರೋಶ ಶನಿವಾರವೂ ಮುಂದುವರಿದಿದೆ. ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ ರೈಲ್ವೆ ಸೊತ್ತುಗಳ ಮೇಲೆ ಪ್ರತಿಭಟನಕಾರರು ಪ್ರಹಾರ ನಡೆಸಿದ್ದಾರೆ. ಸತತ ನಾಲ್ಕನೇ ದಿನವೂ ಈ ಎರಡು ರಾಜ್ಯಗಳಲ್ಲಿ ರೈಲು ಸಂಚಾರ ಅಸ್ತವ್ಯಸ್ತಗೊಂಡಿದೆ. ಒಡಿಶಾ ಮತ್ತು ಜಾರ್ಖಂಡ್‌ನ ರಸ್ತೆಗಳಲ್ಲಿ ಪ್ರತಿಭಟನೆ ನಡೆಸಲಾಗಿದೆ.

ರಕ್ಷಣಾ ಪಡೆಗಳಲ್ಲಿನ ಉದ್ಯೋಗದ ಆಕಾಂಕ್ಷಿಗಳು ಬಿಹಾರದ ರಾಜಧಾನಿ ಪಟ್ನಾ ಮತ್ತು ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಗಳಲ್ಲಿ ವ್ಯಾಯಾಮ ಮಾಡುವ ಮೂಲಕ ಪ್ರತಿಭಟನೆ ನಡೆಸಿದರು. ಬಿಹಾರದ ತಾರೇಗಾನ ರೈಲು ನಿಲ್ದಾಣಕ್ಕೆ ಬೆಂಕಿ ಹಚ್ಚಲಾಗಿದೆ.

ಜೆಹನಾಬಾದ್‌ನಲ್ಲಿ ಕಲ್ಲು ತೂರಾಟದಲ್ಲಿ ಹಲವು ಪೊಲೀಸರು ಗಾಯಗೊಂಡಿದ್ದಾರೆ. ರೈಲ್ವೆ ಪೊಲೀಸ್ ಸಿಬ್ಬಂದಿಯ ವಾಹನವೊಂದಕ್ಕೆ ಬೆಂಕಿ ಹಚ್ಚಲಾಗಿದೆ. ಪೊಲೀಸ್ ಸಿಬ್ಬಂದಿಯೊಂದಿಗೆ ಗುಂಡಿನ ಚಕಮಕಿಯೂ ನಡೆದಿದೆ. ಪ್ರತಿಭಟನೆಯನ್ನು ವರದಿ ಮಾಡುತ್ತಿದ್ದ ಪತ್ರಕರ್ತರ ಮೇಲೆಯೂ ಹಲ್ಲೆ ನಡೆಸಲಾಗಿದೆ.

ಬಿಹಾರದಲ್ಲಿ ಬಂದ್‌ಗೆ ಕರೆ ನೀಡಲಾಗಿತ್ತು. ಬಂದ್ ಬೆಂಬಲಿಗರು ದಾನಾಪುರದಲ್ಲಿ ಆಂಬುಲೆನ್ಸ್ ಒಂದಕ್ಕೆ ಹಾನಿ ಮಾಡಿದ್ದಾರೆ. ಅದರ ಒಳಗೆ ಇದ್ದವರನ್ನೂ ಥಳಿಸಲಾಗಿದೆ. ಜೆಹನಾಬಾದ್‌ನಲ್ಲಿ ಪೊಲೀಸ್ ಹೊರಠಾಣೆಯಲ್ಲಿ ದಾಂದಲೆ ನಡೆಸಲಾಗಿದೆ. ಕೆಲವು ಪೊಲೀಸರು ಗಾಯಗೊಂಡಿದ್ದಾರೆ.

ಪ್ರತಿಭಟನಕಾರರ ಆಕ್ರೋಶಕ್ಕೆ ಗುರಿಯಾಗಿರುವ ಬಿಹಾರ ಬಿಜೆಪಿ ಘಟಕದ ಕಚೇರಿಗೆ ಭಾರಿ ಬಂದೋಬಸ್ತ್ ಒದಗಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಸಿಯಾಲ್‌ದಹ-ಬಾರಕ್‌ಪುರ ಮಾರ್ಗದಲ್ಲಿ ರೈಲು ಸಂಚಾರ ರದ್ದುಗೊಳಿಸಲಾಗಿದೆ. ಬಿಹಾರದಲ್ಲಿ ಶನಿವಾರ ರಾತ್ರಿ 8 ಗಂಟೆಯವರೆಗೆ ರೈಲು ಸಂಚಾರ ರದ್ದುಪಡಿಸಲಾಗಿತ್ತು. ಭಾನುವಾರ ಮುಂಜಾನೆ 4 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ರೈಲು ಸಂಚಾರ ಇರುವುದಿಲ್ಲ. ಜಾರ್ಖಂಡ್‌ನ ಧನಬಾದ್, ಮೊರಬಡಿಯಲ್ಲಿ ಜೋರು ಪ್ರತಿಭಟನೆ ನಡೆದಿದೆ. ಬಿಜೆಪಿ ರಾಜ್ಯ ಘಟಕದ ಕಚೇರಿಗೆ ತ್ವರಿತ ಕ್ರಿಯಾ ಪಡೆಯ ಪೊಲೀಸರಿಂದ ರಕ್ಷಣೆ ಒದಗಿಸಲಾಗಿದೆ.

ಕಾಂಗ್ರೆಸ್ 'ಸತ್ಯಾಗ್ರಹ' ಇಂದು

ನವದೆಹಲಿ: ಅಗ್ನಿಪಥ ಯೋಜನೆ ವಿರುದ್ಧದ ತನ್ನ ಹೋರಾಟವನ್ನು ಕಾಂಗ್ರೆಸ್ ತೀವ್ರಗೊಳಿಸಿದೆ. ಯೋಜನೆಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿ ದೆಹಲಿಯ ಜಂತರ್‌ಮಂತರ್‌ನಲ್ಲಿ ಭಾನುವಾರ ಸತ್ಯಾಗ್ರಹ ಹಮ್ಮಿಕೊಳ್ಳಲು ಪಕ್ಷ ತೀರ್ಮಾನಿಸಿದೆ. ಯೋಜನೆ ವಿರೋಧಿಸಲು ಶಾಂತಿಯುತ ಪ್ರತಿಭಟನಾ ಮಾದರಿ ಅನುಸರಿಸುವಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಯುವಜನರಿಗೆ ಶನಿವಾರ ಕರೆ ನೀಡಿದ್ದಾರೆ.

ಜಂತರ್‌ಮಂತರ್‌ನಲ್ಲಿ ನಡೆಯುವ ಪ್ರತಿಭಟನಾ ಧರಣಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರು, ಸಂಸದರು ಭಾಗಿಯಾಗುವ ನಿರೀಕ್ಷೆಯಿದೆ. ಭಾನುವಾರ ದೆಹಲಿಯಲ್ಲಿ ಇರುವಂತೆ ಸಂಸದರಿಗೆ ಸೂಚಿಸಲಾಗಿದೆ.

ಧಾರವಾಡ: 'ಅಗ್ನಿಪಥ'ಕ್ಕೆ ವಿರೋಧ- ಲಘು ಲಾಠಿ ಪ್ರಹಾರ

ಧಾರವಾಡ: ಸೇನಾ ಅಲ್ಪಾವಧಿ ನೇಮಕಾತಿ ಯೋಜನೆ 'ಅಗ್ನಿಪಥ' ಖಂಡಿಸಿ ಶನಿವಾರ ದಿಢೀರನೆ ಪ್ರತಿಭಟನೆ ನಡೆಸಿದ ಅಭ್ಯರ್ಥಿಗಳು, ಉದ್ರಿಕ್ತರಾಗಿ ಘೋಷಣೆ ಕೂಗಿ ಖಾಸಗಿ ಬಸ್‌ಗಳ ಮೇಲೆ ಕಲ್ಲು ತೂರಿದರು. ಅವರ ಮೇಲೆ ಪೊಲೀಸರು ಲಘು ಲಾಠಿಪ್ರಹಾರ ನಡೆಸಿದರು.

ಜಿಲ್ಲೆಯ ವಿವಿಧ ಭಾಗಗಳಿಂದ ವಾಹನಗಳ ಮೂಲಕ ತಂಡೋಪತಂಡವಾಗಿ ಬಂದ ಅಭ್ಯರ್ಥಿಗಳು ಜಿಲ್ಲಾ ನ್ಯಾಯಾಲಯದ ಬಳಿಯ ವೃತ್ತದಲ್ಲಿ ಬೆಳಿಗ್ಗೆ ಜಮಾಯಿಸಿದರು.

ಸುಮಾರು 200ಕ್ಕೂ ಹೆಚ್ಚು ಅಭ್ಯರ್ಥಿಗಳು ಇದ್ದರು. ನವಲಗುಂದ, ಅಣ್ಣಿಗೇರಿ ಹಾಗೂ ಇನ್ನಿತರ ಭಾಗಗಳಿಂದ ವಾಹನಗಳ ಮೂಲಕ ಅಭ್ಯರ್ಥಿಗಳು ಬರುತ್ತಲೇ ಇದ್ದರು.

'ಅಗ್ನಿಪಥ' ವಿರುದ್ಧ ದೇಶವ್ಯಾಪಿ ನಡೆಯುತ್ತಿರುವ ಅಭಿಯಾನದ ಭಾಗವಾಗಿ ರಚಿಸಿಕೊಂಡಿದ್ದ ವಾಟ್ಸ್‌ಆ್ಯಪ್ ಗುಂಪುಗಳ ಮೂಲಕ ಇವರು ಸಂಘಟಿತರಾಗಿದ್ದರು ಎನ್ನಲಾಗಿದೆ.

ಧಾರವಾಡದ ಜಿಲ್ಲಾ ನ್ಯಾಯಾಲಯ ಬಳಿ ಸೇರಿದ್ದ ಗುಂಪನ್ನು ಚದುರಿಸಿದ ಪೊಲೀಸರು ವ್ಯಕ್ತಿಯೊಬ್ಬನನ್ನು ವಶಕ್ಕೆ ಪಡೆದರು

ರಕ್ಷಣಾ ಇಲಾಖೆಯಲ್ಲಿ ಗುತ್ತಿಗೆ, ದಿನಗೂಲಿ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಳ್ಳುವುದು ಸರಿಯಲ್ಲ. ನೇಮಕಾತಿ ಮಾಡಿಕೊಂಡು ನಾಲ್ಕೇ ವರ್ಷಕ್ಕೆ ಮನೆಗೆ ಕಳುಹಿಸಿದರೆ ಹೇಗೆ?
ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿರೋಧ ಪಕ್ಷದ ನಾಯಕ

ಗುಂಪು ಸೇರುತ್ತಿದ್ದುದನ್ನು ಅರಿತ ಪೊಲೀಸರು ತಕ್ಷಣವೇ ಸ್ಥಳದಲ್ಲಿ ಸೇರಿ, ಪ್ರತಿಭಟನಾ ರ‍್ಯಾಲಿ ತಡೆದರು. ಸ್ಥಳದಲ್ಲೇ ಮನವಿ ನೀಡಿ ಪ್ರತಿಭಟನೆ ಕೈಬಿಡುವಂತೆ ಮನವೊಲಿಸಲು ಯತ್ನಿಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಶಿವಾನಂದ ಭಜಂತ್ರಿ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿದರು. ಆದರೆ ಜಿಲ್ಲಾಧಿಕಾರಿ ಕಚೇರಿವರೆಗೂ ಪ್ರತಿಭಟನೆ ನಡೆಸಲು ಅಭ್ಯರ್ಥಿಗಳು ಪಟ್ಟು ಹಿಡಿದರು. ಪೊಲೀಸರು ಇದಕ್ಕೆ ಅವಕಾಶ ನೀಡದಿದ್ದಾಗ ಉದ್ರಿಕ್ತರಾಗಿ ಘೋಷಣೆ ಕೂಗಿದರು. ಖಾಸಗಿ ಬಸ್ಸುಗಳ ಮೇಲೆ ಕಲ್ಲು ತೂರಿದರು.

ಗುಂಪು ಚದುರಿಸಲು ಪೊಲೀಸರು ಲಘು ಲಾಠಿಪ್ರಹಾರ ನಡೆಸಿದರು. ಯುವಕರು ಘೋಷಣೆ ಕೂಗುತ್ತಲೇ ಎಲ್‌ಇಎ ಕ್ಯಾಂಟೀನ್ ಮಾರ್ಗದಲ್ಲಿ ಓಡಿದರು. ಕೆಲವರು ಪೊಲೀಸ್ ವಶಕ್ಕೆ ಸಿಕ್ಕರು. ಉಳಿದವರು ದಿಕ್ಕಾಪಾಲಾಗಿ ಓಡಿದರು. ದಿಢೀರನೆ ಎದುರಾದ ಪ್ರತಿಭಟನೆ ನಿಯಂತ್ರಿಸಲು ಪೊಲೀಸ್ ಇಲಾಖೆ ಸಿಸಿಬಿ ಹಾಗೂ ಇನ್ನಿತರ ಪೊಲೀಸ್ ವಿಭಾಗಗಳಿಂದ ಪೊಲೀಸರನ್ನು ಕರೆಯಿಸಿಕೊಂಡರು.

ಪೊಲೀಸ್ ಆಯುಕ್ತ ಲಾಭೂರಾಮ್ ಸ್ಥಳಕ್ಕೆ ಭೇಟಿ ನೀಡಿದರು.

'ಬಡವರ ಕಲ್ಯಾಣ ಸಂಕಲ್ಪಕ್ಕೆ ತಾಯಿಯೇ ಸ್ಫೂರ್ತಿ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿಯವರ ತಾಯಿ ಹೀರಾಬೆನ್ ಮೋದಿ ಅವರು ಶನಿವಾರ 100ನೇ ವರ್ಷಕ್ಕೆ ಕಾಲಿಟ್ಟಿದ್ದಾರೆ. ತಮ್ಮ ಜೀವನದಲ್ಲಿ ಅಮ್ಮನ ಪಾತ್ರ ಕುರಿತಂತೆ ಮೋದಿ ತಮ್ಮ ಬ್ಲಾಗ್‌ನಲ್ಲಿ ಭಾವನಾತ್ಮಕ ಸಂದೇಶ ಬರೆದಿದ್ದಾರೆ.

ತಮ್ಮ ಸರ್ಕಾರ ಜಾರಿಗೊಳಿಸಿರುವ ಹಲವಾರು ಕಾರ್ಯಕ್ರಮಗಳನ್ನು ಪ್ರಸ್ತಾಪಿಸಿರುವ ಅವರು, 'ಬಡವರ ಕಲ್ಯಾಣಕ್ಕಾಗಿ ನಾನು ದೃಢಸಂಕಲ್ಪ ಕೈಗೊಳ್ಳಲು ನನ್ನ ತಾಯಿಯೇ ಪ್ರೇರಣೆ. ವ್ಯಕ್ತಿತ್ವ ರೂಪಿಸುವಲ್ಲಿ, ನನ್ನಲ್ಲಿ ಆತ್ಮವಿಶ್ವಾಸ ತುಂಬುವಲ್ಲಿ ಅವರ ಪಾತ್ರ ದೊಡ್ಡದು' ಎಂದು ಬರೆದುಕೊಂಡಿದ್ದಾರೆ.

'2001ರಲ್ಲಿ ಗುಜರಾತ್ ಮುಖ್ಯಮಂತ್ರಿ ಸ್ಥಾನಕ್ಕೆ ಬಿಜೆಪಿ ನನ್ನನ್ನು ಆಯ್ಕೆ ಮಾಡಿದಾಗ ತಾಯಿ ಸಂಭ್ರಮಿಸಿದ್ದರು. ಸರ್ಕಾರದಲ್ಲಿ ನಿನ್ನ ಕೆಲಸ ಏನು ಎಂಬುದು ನನಗೆ ಗೊತ್ತಾಗುವುದಿಲ್ಲ. ಆದರೆ, ಎಂದಿಗೂ ಲಂಚ ತೆಗೆದುಕೊಳ್ಳಬಾರದು ಎಂಬುದಾಗಿ ಕಿವಿಮಾತು ಹೇಳಿದ್ದರು' ಎಂದು ಅವರು ವಿವರಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು 100ನೇ ವರ್ಷಕ್ಕೆ ಕಾಲಿಟ್ಟ ತಮ್ಮ ತಾಯಿಯನ್ನು ಗಾಂಧಿನಗರದಲ್ಲಿ ಶನಿವಾರ ಭೇಟಿ ಮಾಡಿ, ಆಶೀರ್ವಾದ ಪಡೆದರು – ಪಿಟಿಐ ಚಿತ್ರ



ಗಾಂಧಿ ಬಳ್ಳಿಯಲ್ಲಿ ಹೊಸ ಹೂವು 12

ಮಹಾಭಾರತದ ದೃಶ್ಯಕಾವ್ಯ 13

ಅಜ್ಜ–ಅಜ್ಜಿ

ನೆನಪಿನ ಹೊನಲು

ತಮ್ಮ ಅಜ್ಜ, 'ಡೆಕ್ಕನ್ ಹೆರಾಲ್ಡ್', 'ಪ್ರಜಾವಾಣಿ' ದಿನಪತ್ರಿಕೆಗಳ ಸ್ಥಾಪಕ ಕೆ.ಎನ್. ಗುರುಸ್ವಾಮಿ ಮತ್ತು ಅಜ್ಜಿ ಕದಿರಮ್ಮ ಅವರ ಕುರಿತು ಮೊಮ್ಮಗ ಕೆ.ಎನ್. ಹರಿಕುಮಾರ್ ಅವರ ಆಪ್ತ ನೆನಪುಗಳು. 1948ರಲ್ಲಿ ಎರಡೂ ಪತ್ರಿಕೆಗಳನ್ನು ಆರಂಭಿಸುವಾಗಿನ ಆ ಕ್ಷಣಗಳನ್ನೂ ಅವರು ಇಲ್ಲಿ ಮೆಲುಕು ಹಾಕಿದ್ದಾರೆ...

ಕೆ.ಎನ್. ಗುರುಸ್ವಾಮಿ

ನನ್ನ ಅಜ್ಜ-ಅಜ್ಜಿಯ ವಿಶಾಲವಾದ ಹಾಸಿಗೆಯಲ್ಲಿ, ಅವರ ನಡುವೆ, ರಾತ್ರಿ ಮಲಗುತ್ತಿದ್ದುದು (ನಾನು, ನನ್ನ ತಂದೆ-ತಾಯಿಯ ಜತೆ ಮಲಗುತ್ತಲೇ ಇರಲಿಲ್ಲ. ಅವರೊಂದಿಗೆ ನನ್ನ ತಮ್ಮ ತಿಲಕ್ ಮಲಗುತ್ತಿದ್ದ) ನನ್ನ ಬಾಲ್ಯದ ಮೊದಲ ನೆನಪುಗಳಲ್ಲಿ ಒಂದು. ನನ್ನ ಅಜ್ಜಿಯಂತೂ ತಾವು ಬಯಸಿದ್ದನ್ನು ಪಡೆಯುವುದಕ್ಕಾಗಿ, ಅದೂ ಆ ಸಂದರ್ಭದಲ್ಲಿ ತಾವು ಆರಾಧಿಸುತ್ತಿದ್ದ ಹಿಂದೂ-ಮುಸ್ಲಿಂ ಭಾವೈಕ್ಯ ಸಂತ ಮತ್ತು ಅವರ ಪಂಥದ ಅನುಯಾಯಿಗಳಿಗೆ ಆಶ್ರಮವೊಂದನ್ನು ನಿರ್ಮಾಣ ಮಾಡುವುದಕ್ಕಾಗಿ, ಅಜ್ಜನನ್ನು ತುಂಬಾ ಪೀಡಿಸುತ್ತಿದ್ದುದು ಹಾಗೂ ಅದಕ್ಕೆ ಒಪ್ಪಿಗೆ ಪಡೆಯುವತನಕ ಅವರಿಗೆ ನಿದ್ರೆ ಮಾಡಲೂ ಬಿಡದೆ ಪಟ್ಟು ಹಿಡಿದುದ್ದುದು ಕೂಡ ನನಗೆ ಅಸ್ಪಷ್ಟ ನೆನಪು. ನನ್ನ ಅಜ್ಜ-ಅಜ್ಜಿ ಬಾಲ್ಯದಲ್ಲಿ ನನ್ನನ್ನು ಎಷ್ಟೊಂದು ಆವರಿಸಿದ್ದರೆಂದರೆ ಆಗ ನನ್ನ ಅಪ್ಪ-ಅಮ್ಮ ಸಹ ಮಸುಕಾಗಿ ಹೋಗಿದ್ದರು.

ನನ್ನಜ್ಜ ಕೆ.ಎನ್. ಗುರುಸ್ವಾಮಿಯವರದು ತುಂಬಾ ಗಟ್ಟಿಮುಟ್ಟಾದ ಮೈಕಟ್ಟು. ಕುಳ್ಳಗಿದ್ದರೂ ವಿಶಾಲವಾದ ಭುಜ ಹಾಗೂ ಬಲಶಾಲಿ ಸ್ನಾಯುಗಳಿಂದ ಮೈದುಂಬಿಕೊಂಡಿದ್ದ ಮನುಷ್ಯ. ಕುಸ್ತಿ ಪೈಲ್ವಾನ ಇಲ್ಲವೆ ದೇಹದಾರ್ಢ್ಯ ಪಟುವಿನಂತೆ ಅವರ ಅಂಗಸೌಷ್ಟವ ಕಂಗೊಳಿಸುತ್ತಿತ್ತು. ಸದಾ ಹೊರಜಗತ್ತಿನಲ್ಲಿ ಕ್ರಿಯಾಶೀಲವಾಗಿರುತ್ತಿದ್ದ ಈ ಬೇಟೆಗಾರ, ಕುದುರೆ ಸವಾರ, ಮನೆಯೊಳಗೆ ತಮ್ಮ ಕೋಣೆಗಳಲ್ಲಿ ವಿವಿಧ ವ್ಯಾಯಾಮ ಸಾಧನಗಳನ್ನೂ ಇಟ್ಟುಕೊಂಡಿದ್ದರು. ಅಜ್ಜನಿಗೆ ಅವರ ಸ್ವಂತ ಸೇವಕ ರಾಮಯ್ಯನೇ ನಿತ್ಯ ಅಭ್ಯಂಜನ ಮಾಡಿಸುತ್ತಿದ್ದ. ಪ್ರತೀ ಶನಿವಾರ ಅಜ್ಜನೊಂದಿಗೆ ನಾನು ಮತ್ತು ನನ್ನ ತಮ್ಮ ತಪ್ಪದೇ ಎಣ್ಣೆಸ್ನಾನವನ್ನು ಮಾಡಬೇಕಿತ್ತು.

ನಾನು, ನನ್ನಜ್ಜಿ ಕದಿರಮ್ಮ ಅವರಿಗೆ ಆತುಕೊಂಡು ಬೆಳೆದೆ. ವಿದ್ಯಾವಂತ ಹಾಗೂ ನಗರ ಸಮಾಜಕ್ಕೆ ಹೊರತಾದ ವಾತಾವರಣದಲ್ಲಿ ಬೆಳೆದಿದ್ದ ಅವರು, ಸ್ವತಂತ್ರ ಮನೋಭಾವದ, ಪ್ರಬಲ ಇಚ್ಛಾಶಕ್ತಿಯುಳ್ಳ, ಸಮರ್ಥ ಮಹಿಳೆಯಾಗಿದ್ದರು. ಆದರೆ, ಹಳ್ಳಿಯಿಂದ ಬಂದಿದ್ದ ಅವರು ಅನಕ್ಷರಸ್ಥರಾಗಿದ್ದರು ಹಾಗೂ ಅವರಲ್ಲಿ ನಗರಗಳಲ್ಲಿನ ಸುಶಿಕ್ಷಿತರ ನಯ ನಾಜೂಕುತನ ಇರಲಿಲ್ಲ. ಮನೆಯ ಮುಂದಿನ ಚಿಕ್ಕದಾದ ತ್ರಿಕೋನಾಕಾರದ ಕೋಣೆಯ ನೆಲಹಾಸಿನ ಮೇಲೆ ತಂಬಾಕು ಜಗಿಯುತ್ತಾ, ಸುತ್ತಲೂ ನೆರೆದಿರುತ್ತಿದ್ದ ಪರಿವಾರದ ಮಧ್ಯೆ ದರ್ಬಾರ್ ನಡೆಸುತ್ತಾ ನನ್ನಜ್ಜಿ ಕುಳಿತಿರುತ್ತಿದ್ದಾಗ ಅವರ ತೊಡೆಯ ಮೇಲೆ ನಾನು ತಲೆಯಿಟ್ಟು ಮಲಗಿರುತ್ತಿದ್ದೆ. ನನ್ನ ತಾಯಿಯ ತೀವ್ರ ಕ್ರೋಧದಿಂದ ನನ್ನನ್ನು ರಕ್ಷಿಸಲು ಅವರು ಸದಾ ನನ್ನ ಪಕ್ಷವನ್ನೇ ವಹಿಸಿಕೊಂಡು ನಿಲ್ಲುತ್ತಿದ್ದರು. ಅಂತಹ ಎಲ್ಲ ಯತ್ನಗಳಲ್ಲಿ ಅಜ್ಜಿ ಯಶಸ್ವಿ ಆಗಿಬಿಡುತ್ತಿದ್ದರು ಎಂದೇನಿರಲಿಲ್ಲ. ತಮ್ಮ ಬದುಕಿನ ಕೊನೆಯ ವರ್ಷಗಳಲ್ಲಿ ಅಜ್ಜಿ ಆಶ್ರಮವನ್ನು ಕಟ್ಟಿಸಿಕೊಳ್ಳುವಲ್ಲಿ ಯಶ ಕಂಡಿದ್ದರು (ಆಗ ಬೆಂಗಳೂರಿನ ಹೊರವಲಯದಲ್ಲಿ ಅಜ್ಜ ಖರೀದಿಸಿಕೊಟ್ಟಿದ್ದ ನಾಲ್ಕೂವರೆ ಎಕರೆಯಷ್ಟು ಭೂಮಿಯಲ್ಲಿ, ಆಶ್ರಮವನ್ನು ನಿರ್ಮಿಸಲಾಯಿತು). ಆ ಆಶ್ರಮಕ್ಕೆ ಅಜ್ಜಿ ಆಗಾಗ ತಮ್ಮ ಚಿಕ್ಕ, ಕಪ್ಪುಬಣ್ಣದ ವುಲ್ಸ್‌ಲೇ ಕಾರಿನಲ್ಲಿ ಹೋಗುತ್ತಿದ್ದರು. ಕೃಷ್ಣ ರೆಡ್ಡಿ ಎಂಬಾತ ಆ ಕಾರಿನ ಚಾಲಕನಾಗಿದ್ದ. ಆಶ್ರಮದ ದೈನಂದಿನ ಚಟುವಟಿಕೆಗಳಲ್ಲದೆ ಅಲ್ಲಿ ಭಕ್ತಾದಿಗಳಿಗಾಗಿ ನಡೆಯುತ್ತಿದ್ದ ವಾರ್ಷಿಕ ಆರಾಧನೆಯ ಉಸ್ತುವಾರಿಯೂ ಅಜ್ಜಿಯದೇ ಆಗಿತ್ತು. ನಾನು ಹದಿಹರೆಯದ ಹುಡುಗನಾಗಿದ್ದಾಗ, 1965ರಲ್ಲಿ, ಅಜ್ಜಿ ತೀರಿಕೊಂಡರು. ಕುಟುಂಬದ ಸ್ಮಶಾನದ ಬದಲು (ನನ್ನಜ್ಜ, ಅಲ್ಲಿ ತಮ್ಮ ತಂದೆ-ತಾಯಿಯ ಸಮಾಧಿಯ ಮೇಲೆ ಭವ್ಯ ಛತ್ರಿ ಕಟ್ಟಿಸಿದ್ದರು), ಅಜ್ಜಿಯ ಇಚ್ಛೆಯಂತೆ ಆಶ್ರಮದ ಆವರಣದಲ್ಲೇ ಅವರ ಪಾರ್ಥಿವ ಶರೀರವನ್ನು ಹೂಳಲಾಯಿತು. ಮುಂದೆ, ಇಪ್ಪತ್ತೈದು ವರ್ಷಗಳ ಬಳಿಕ ಅಜ್ಜನೂ ತೀರಿಹೋದಾಗ ಅವರ ಕೊನೆಗಾಲದ ಇಚ್ಛೆಯಂತೆ ಅಜ್ಜಿಯ ಸಮಾಧಿ ಪಕ್ಕವೇ ಅವರ ಪಾರ್ಥಿವ ಶರೀರವನ್ನು ಹೂಳಲಾಯಿತೇ ಹೊರತು ಅವರ ಮೊದಲಿನ ಬಯಕೆಯಂತೆ ಕುಟುಂಬದ ಸ್ಮಶಾನದಲ್ಲಿದ್ದ ಅವರ ತಂದೆ-ತಾಯಿಗಳ ಸಮಾಧಿಯ ಪಕ್ಕದಲ್ಲಿ ಅಲ್ಲ.

60ನೇ ಜನ್ಮದಿನದ ಕಾರ್ಯಕ್ರಮದಲ್ಲಿ... ಪತ್ನಿ ಕದಿರಮ್ಮ ಅವರೊಂದಿಗೆ

ನನ್ನಜ್ಜ, ಮಕ್ಕಳನ್ನು ತುಂಬಾ ಪ್ರೀತಿಸುತ್ತಿದ್ದರು. ಮಕ್ಕಳೂ ಅಜ್ಜನನ್ನು ಅಷ್ಟೇ ಉತ್ಕಟವಾಗಿ ಪ್ರೀತಿಸುತ್ತಿದ್ದರು. ಮಕ್ಕಳೊಂದಿಗೆ ಆಡುವಾಗ ಅಜ್ಜ ಮಗುವೇ ಆಗಿಬಿಡುತ್ತಿದ್ದರು. ಸಂತಾನ ಇಲ್ಲದಿದ್ದರಿಂದ ಅವರು ತಮ್ಮ ಕಿರಿಯ ಸಹೋದರನ ಮಗನನ್ನು (ನನ್ನ ತಂದೆ) ದತ್ತು ಪಡೆದಿದ್ದರು. ನನ್ನ ತಂದೆ ಪುಟ್ಟ ಮಗುವಾಗಿದ್ದಾಗಲೇ ಅವರ ತಾಯಿ ಕ್ಷಯರೋಗಕ್ಕೆ ತುತ್ತಾಗಿದ್ದರು. ನನ್ನ ತಂದೆಯನ್ನು ತುಂಬಾ ಪ್ರೀತಿ ಮತ್ತು ಕಾಳಜಿಯಿಂದ ನನ್ನಜ್ಜ ಬೆಳೆಸಿದರು. ಹೈದರಾಬಾದ್ ಮತ್ತು ನಿಜಾಮಾಬಾದ್‌ನಲ್ಲಿ ಅತ್ಯಂತ ಶ್ರೀಮಂತ ಕುಟುಂಬ ಎಂದು ಹೆಸರಾಗಿದ್ದ ಮನೆತನದ ಹುಡುಗಿಯನ್ನು (ನನ್ನ ತಾಯಿ) ಹುಡುಕಿ, ನನ್ನ ತಂದೆಯ ಮದುವೆಯನ್ನು ಗೊತ್ತುಮಾಡಿದರು. 'ನನ್ನದೆಲ್ಲವೂ ಅವನದು' ಎಂಬ ಅಜ್ಜನ ಘೋಷಣೆ, ನನ್ನ ತಾಯಿಯ ಅಪ್ಪ-ಅಮ್ಮನಿಗೆ ಹಿತಕರವಾಗಿ ಕೇಳಿಸಿ, ಅವರಲ್ಲಿ ಭರವಸೆಯನ್ನು ತುಂಬಿತ್ತು. ಅಷ್ಟೇ ಅಲ್ಲ, ಪತ್ರಿಕಾ ಕಂಪನಿಯಲ್ಲಿ ನನ್ನ ತಂದೆಯನ್ನು ಕಾರ್ಯದರ್ಶಿ ಹುದ್ದೆಗೆ ನೇಮಕವನ್ನೂ ಮಾಡಿದ್ದರು ನನ್ನಜ್ಜ. ಆ ಹುದ್ದೆ ಇಂದಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಗೆ ಸರಿಸುಮಾರು ಸಮಾನ ಎನ್ನಬಹುದು. ಮುಂದೆ, ಅಜ್ಜ ಮತ್ತು ಅಪ್ಪನ ನಡುವೆ ತಪ್ಪು ತಿಳಿವಳಿಕೆಗಳು ಮೂಡಿ, ಇಬ್ಬರ ನಡುವೆ ಉದ್ವಿಗ್ನ ವಾತಾವರಣ ಸೃಷ್ಟಿಯಾಗಿತ್ತು. ಆದರೆ, 47ರ ಸಣ್ಣ ವಯಸ್ಸಿನಲ್ಲಿಯೇ ನನ್ನ ತಂದೆ ತೀರಿಹೋದಾಗ ಅಜ್ಜ ಅತೀವ ದುಃಖ ಮತ್ತು ಆಘಾತದಲ್ಲಿ ತತ್ತರಿಸಿದರು. ತಮ್ಮ ಕೆಲವು ಕಾರ್ಯಗಳಿಗೆ ಪಶ್ಚಾತ್ತಾಪ ಪಡುತ್ತಾ, ದೀರ್ಘಕಾಲದ ಉದ್ಯಮದ ಪಾಲುದಾರ ವೆಂಕಟಸ್ವಾಮಿ ಅವರ ತೀಕ್ಷ್ಣ ಹಾಗೂ ಬಗ್ಗದ ವಿರೋಧವನ್ನು ಧೈರ್ಯದಿಂದ ನಿರ್ಲಕ್ಷಿಸಿ, ಪತ್ರಿಕಾ ಕಂಪನಿಯ ಷೇರುಗಳನ್ನು ತಮ್ಮ ಮೂವರೂ ಮೊಮ್ಮಕ್ಕಳಿಗೆ ವರ್ಗಾಯಿಸಿದ ಅಜ್ಜ, ಉದ್ಯಮದಲ್ಲಿ ಅವರ ಸುಸೂತ್ರ ಪ್ರವೇಶದ ಮೇಲುಸ್ತುವಾರಿಯನ್ನೂ ತಾವೇ ನೋಡಿಕೊಂಡರು. ತಮ್ಮ ಮರಣಾನಂತರ ತಮ್ಮ ಆಸ್ತಿಯೆಲ್ಲ ಮೂವರೂ ಮೊಮ್ಮಕ್ಕಳಿಗೆ ಸಮಾನವಾಗಿ ಹಂಚಿಕೆಯಾಗುವ ವ್ಯವಸ್ಥೆಯನ್ನು ಸಹ ಅವರು ಮಾಡಿದರು. ಕೊಟ್ಟ ಮಾತಿನಂತೆ ನಡೆಯುವುದು ಅವರ ಬದುಕಿನ ಮುಖ್ಯ ಸಿದ್ಧಾಂತವಾಗಿತ್ತು. ಈ ವಿಷಯದಲ್ಲೂ ಅವರು ಹಾಗೇ ನಡೆದುಕೊಂಡರು.

ರಾವ್ ಸಾಹೇಬ್ ನೆಟ್ಟಕಲ್ಲಪ್ಪ
ಕೆ.ಎನ್. ಗುರುಸ್ವಾಮಿ ಅವರ ತಂದೆ

ವಿಶೇಷ ಬಸ್‌ನಲ್ಲಿ ವನಂ ಪ್ರವಾಸ

ನಾವು ಚಿಕ್ಕವರಿದ್ದಾಗ ನನ್ನನ್ನು ಮತ್ತು ನನ್ನ ತಮ್ಮನನ್ನು ಅಜ್ಜ 'ವನಂ'ಗೆ ಕರೆದೊಯ್ಯುತ್ತಿದ್ದರು. ಅಲ್ಲಿ ಕಳ್ಳು - ಹೆಂಡ ಆಗುವ ರಸವನ್ನು ಇಳಿಸುವ ಹಾಗೂ ಕೆಲಸಗಾರರಿಗೆ ಸಂಬಳ ಹಂಚುವ ಕೆಲಸದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು. ಈ ಯಾನಕ್ಕಾಗಿಯೇ ವಿಶೇಷವಾಗಿ ನಿರ್ಮಿಸಿದ ಬಸ್ಸನ್ನು ಅವರು ಹೊಂದಿದ್ದರು. ಆ ಬಸ್ಸನ್ನು ಅವರ ಸ್ವಂತ ಚಾಲಕ ಮುನಿಸ್ವಾಮಿ ಓಡಿಸುತ್ತಿದ್ದ. 'ವನಂ'ನಲ್ಲಿ ನಾವು ದೊಡ್ಡದೊಂದು ಗುಡಿಸಲಿನಲ್ಲಿ ಉಳಿಯಬೇಕಿತ್ತು. ಮೇಲೆ ಹುಲ್ಲಿನ ಚಾವಣಿಯಿದ್ದರೆ, ಕೆಳಗಿನ ನೆಲವನ್ನು ಸಗಣಿಯಿಂದ ಬಳಿದಿರುತ್ತಿದ್ದರು. ಈ ಗುಡಿಸಲಿನ ಮುಂದಿನ ದೊಡ್ಡ ಅಂಗಳದ ಎರಡೂ ಬದಿಗಳಲ್ಲಿ ಕಳ್ಳು ತೆಗೆಯುವವರ ಪುಟ್ಟ ಪುಟ್ಟ ಗುಡಿಸಲುಗಳ ಸಾಲುಗಳು ಇರುತ್ತಿದ್ದವು. ಅಲ್ಲಿ ತೆಗೆಯುತ್ತಿದ್ದ ಕಳ್ಳಿನ ವಾಸನೆಗೆ ಒಗ್ಗಿಕೊಳ್ಳುವುದು ನನಗಾಗಲಿ, ನನ್ನ ತಮ್ಮನಿಗಾಗಲಿ ಎಂದಿಗೂ ಸಾಧ್ಯವಾಗುತ್ತಿರಲಿಲ್ಲ. ಸರ್ಕಾರ ನಡೆಸುತ್ತಿದ್ದ ಅಬಕಾರಿ ಹರಾಜಿನಲ್ಲಿ ಹೆಂಡವನ್ನು ಮಾರಾಟ ಮಾಡಲು ಅಜ್ಜ ಎಲ್ಲೆಲ್ಲಿ ಲೈಸೆನ್ಸ್ ಪಡೆದಿದ್ದರೋ ಅಲ್ಲಲ್ಲಿನ ಅಂಗಡಿಗಳಿಗೆ ದೊಡ್ಡ ಬ್ಯಾರಲ್‌ಗಳಲ್ಲಿ ಹೆಂಡವನ್ನು ತುಂಬಿ ಲಾರಿಗಳಲ್ಲಿ ಕಳಿಸಲಾಗುತ್ತಿತ್ತು.

ರಾಜಕ್ರೀಡೆ ಎನಿಸಿದ ಬೇಟೆ ಆಡುವುದೂ ಅಜ್ಜನ 'ವನಂ' ಪಯಣದ ಉದ್ದೇಶಗಳಲ್ಲಿ ಒಂದಾಗಿರುತ್ತಿತ್ತು. ಬರ್ಮಾದಲ್ಲಿ ಫಾರೆಸ್ಟರ್ ಆಗಿ ಅನುಭವವಿದ್ದ ವ್ಯಕ್ತಿಯೊಬ್ಬರು (ರೇಂಜರ್ ಎಂದು ಮಾತ್ರ ನಾವು ಅವರನ್ನು ಬಲ್ಲವರಾಗಿದ್ದೆವು) ಅಜ್ಜನ ಜೊತೆಗೂಡುತ್ತಿದ್ದರು. ಬೇಟೆಯಾಡಲು ಅಜ್ಜನ ಬಳಿ ವಿಧ ವಿಧವಾದ ಗನ್‌ಗಳಿದ್ದವು. ಅವುಗಳಲ್ಲಿ ಹೆಚ್ಚಿನ ಮಾನ್ಯತೆಯನ್ನು ಗಿಟ್ಟಿಸಿದ್ದೆಂದರೆ 'ಡಬಲ್ ಬ್ಯಾರೆಲ್ .375 ಹಾಲೆಂಡ್ ಆ್ಯಂಡ್ ಹಾಲೆಂಡ್ ಮ್ಯಾಗ್ನಮ್ ರೈಫಲ್'. ಅವರಲ್ಲಿ '.470 ಬೋರ್ ಡಬಲ್ ಬ್ಯಾರೆಲ್ಡ್ ರೈಫಲ್' ಸಹ ಇತ್ತು. ಅದರಿಂದ ಅವರು, ಪುಂಡಾನೆ ಎಂದು ಘೋಷಿತವಾದ ಆನೆಯೊಂದನ್ನು ಕೊಂದಿದ್ದರು. ಕೆಲವೊಮ್ಮೆ ಅವರು ಮೋಟರ್‌ಬೋಟ್ ಅನ್ನು ಕೆರೆಗಳಲ್ಲಿ ಬಾತುಕೋಳಿ ಬೇಟೆಗೆ ಒಯ್ಯುತ್ತಿದ್ದರು. ಬೆಳವ ಮತ್ತಿತರ ಹಕ್ಕಿಗಳು, ಬಾವಲಿಗಳು, ಕಾಡು ಕುರಿಗಳ ಬೇಟೆಗೆ ನಾವೂ ಸಾಕ್ಷಿಯಾಗಿದ್ದಿದೆ. ಆ ವೇಳೆಗಾಗಲೇ, ಹೆಚ್ಚುತ್ತಿದ್ದ ಅವರ ವಯಸ್ಸು, ಕಡಿಮೆಯಾಗುತ್ತಿದ್ದ ಅರಣ್ಯ ಪ್ರದೇಶ ಹಾಗೂ ಇಳಿಮುಖವಾಗುತ್ತಿದ್ದ ಕಾಡುಪ್ರಾಣಿಗಳ ಸಂಖ್ಯೆಯ ಕಾರಣದಿಂದ ದೊಡ್ಡ ಪ್ರಾಣಿಗಳ ಬೇಟೆಯ ದಿನಗಳು ಹಿಂದಕ್ಕೆ ಸರಿದಿದ್ದವು. ಆದರೆ, ನಮ್ಮ ಮನೆಯಲ್ಲಿ ಹಳೆಯ ಬೇಟೆಯಾತ್ರೆಗಳ ಸಾಕ್ಷಿಯಾಗಿ ಹಲವು ಸ್ಮರಣಿಕೆಗಳು ಕಿಕ್ಕಿರಿದಿದ್ದವು. ಅವುಗಳಲ್ಲಿ ಹುಲಿ, ಚಿರತೆ, ಕಾಡುಕೋಣ, ಕರಡಿ, ಸಾಂಬಾರ್ ಹಾಗೂ ಜಿಂಕೆಯ ಚರ್ಮಗಳು, ತಲೆಗಳು, ಕೋಡುಗಳು ಸಹ ಸೇರಿದ್ದವು. ಬಹುದೊಡ್ಡ ಗಾತ್ರದ ಆನೆಯ ದಂತಗಳು (ಮರದ ಚೌಕಟ್ಟಿನ ಮೇಲೆ ಶೋಭಿಸುತ್ತಿದ್ದ ಆ ದಂತಗಳ ನಡುವೆ ನನ್ನ ಮುತ್ತಜ್ಜನ ಭಾವಚಿತ್ರವಿತ್ತು), ಸೊಂಡಿಲು (ವಾಕಿಂಗ್ ಸ್ಟಿಕ್ ಸ್ಟ್ಯಾಂಡ್ ಆಗಿತ್ತು) ಮತ್ತು ಪಾದಗಳು (ಸ್ಟೂಲ್ ಆಗಿದ್ದವು) ಇದ್ದವು. ಪಾರಿವಾಳದಂತಹ ಪಕ್ಷಿಗಳಾದ ಬೆಳವಗಳನ್ನು ಹೊಡೆದುರುಳಿಸುತ್ತಿದ್ದ ಅಜ್ಜ, ಅದರ ರಕ್ತಕ್ಕೆ ಮಸಾಲೆ ಸೇರಿಸಿ ಕುಡಿಯುತ್ತಿದ್ದರು. ಆಗ ಹೆಚ್ಚುತ್ತಿದ್ದ ದೇಹದ ಉಷ್ಣತೆಯನ್ನು ಕಡಿಮೆ ಮಾಡಿಕೊಳ್ಳಲು ನಿದ್ರೆಗೆ ಜಾರುತ್ತಿದ್ದರು.

ಅಜ್ಜ ಮತ್ತು ಪಂಚಕಲ್ಯಾಣಿ ಕುದುರೆ

ಅಜ್ಜನಿಗೆ ಕುದುರೆಗಳೆಂದರೆ ತುಂಬಾ ಪ್ರೀತಿ. ಅದು ಕುದುರೆ ಸವಾರಿ ಇರಬಹುದು, ಕುದುರೆ ರೇಸ್ ಇರಬಹುದು, ಎರಡನ್ನೂ ಅಷ್ಟೇ ಪ್ರೀತಿಸುತ್ತಿದ್ದರು. ಮನೆಯಲ್ಲಿದ್ದ 'ಪಂಚಕಲ್ಯಾಣಿ' ಎಂಬ ಕುದುರೆ ಅವರ ಅಚ್ಚುಮೆಚ್ಚಿನದಾಗಿತ್ತು. ಅದರ ನಾಲ್ಕೂ ಕಾಲುಗಳು ಮತ್ತು ಹಣೆಯ ಮೇಲೆ ಬಿಳಿಬಣ್ಣದ ಪಟ್ಟೆ ಇದ್ದುದರಿಂದ ಸಂಸ್ಕೃತದ ಆ ಹೆಸರನ್ನು ಅದಕ್ಕೆ ಇಟ್ಟಿದ್ದರು. ಮೊದಮೊದಲು ನಮಗೆ ಮನೆಯ ಕಾಂಪೌಂಡ್‌ನಲ್ಲೇ ಕುದುರೆ ಸವಾರಿಯನ್ನು ಮಾಡಿಸುತ್ತಿದ್ದರು. ನಾವು ಸ್ವಲ್ಪ ದೊಡ್ಡವರಾದಂತೆ ಮನೆ ಹೊರಗಿನ ಸುತ್ತಮುತ್ತ ಸವಾರಿ ಮಾಡಲು ನಮ್ಮನ್ನು ಕಳಿಸುತ್ತಿದ್ದರು. ನಾವು ಹುಡುಗರಾಗಿದ್ದಾಗ ನಮ್ಮನ್ನು ಬೆಳಗಿನ ಹೊತ್ತು ರೈಡಿಂಗ್ ಕ್ಲಬ್‌ಗೆ ಕರೆದುಕೊಂಡು ಹೋಗುತ್ತಿದ್ದರು. ಬೇಲಿ ಹಾಕಿದ್ದ ಕ್ಲಬ್‌ನ ಆವರಣದೊಳಗೆ ಹಾಗೂ ಹೊರಗೆ ಬಯಲು ಜಾಗದಲ್ಲಿ ನಾವು ಕುದುರೆ ಸವಾರಿ ಮಾಡುತ್ತಿದ್ದೆವು. ಹವ್ಯಾಸಿ ಸವಾರರಿಗಿರುವ ಜಿಮ್ಖಾನಾ ರೇಸ್‌ಗಳು ಮಾತ್ರವಲ್ಲದೆ ಒಳ್ಳೆಯ ತಳಿಗಳ ಕುದುರೆ ರೇಸ್‌ಗಳಿಗೂ ನಮ್ಮನ್ನು ಕರೆದೊಯ್ಯುತ್ತಿದ್ದರು. ಸ್ಟ್ಯುವರ್ಡ್ ಹಾಗೂ ಚೇರ್‌ಮನ್ ಸೇರಿದಂತೆ ಬೆಂಗಳೂರು ರೇಸ್ ಕ್ಲಬ್‌ನ (ಮುಂದೆ ಬೆಂಗಳೂರು ಟರ್ಫ್ ಕ್ಲಬ್) ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದ ಅಜ್ಜ, ರಾಷ್ಟ್ರಾದ್ಯಂತ ಇತರ ಟರ್ಫ್ ಕ್ಲಬ್‌ಗಳ ಜೊತೆಗೂ ಸಕ್ರಿಯವಾದ ಸಂಪರ್ಕ ಹೊಂದಿದ್ದರು. ಕುದುರೆ ರೇಸ್ ಎಂದರೆ ರಾಜರುಗಳ ಕ್ರೀಡೆ ಎಂದುಕೊಂಡಿದ್ದರು ಅವರು. ಕುದುರೆ ರೇಸ್ ಕುರಿತು ಅತ್ಯುತ್ಸಾಹ ತೋರುತ್ತಿದ್ದರೂ ತಾವು ಮಾತ್ರ ಜೀವನದಲ್ಲಿ ಒಮ್ಮೆಯೂ ಬಾಜಿಯನ್ನು ಕಟ್ಟಿಲ್ಲ ಎಂಬ ಹೆಮ್ಮೆ ಅವರಲ್ಲಿತ್ತು.

ಅಜ್ಜನ ಕಳ್ಳು ಮತ್ತು ಸಾರಾಯಿ ಉದ್ಯಮದ ಕಚೇರಿ ನಮ್ಮ ಮನೆಗೆ ಹೊಂದಿಕೊಂಡ ಕಟ್ಟಡದಲ್ಲಿಯೇ ಇತ್ತು. ಅಲ್ಲಿ ಅವರಿಗೆ ಪ್ರತ್ಯೇಕವಾದ ಕೋಣೆಯಿತ್ತು. ಅವರ ವಿಶ್ವಾಸ ಗಳಿಸಿದ ದೀರ್ಘಕಾಲದ ಸಹಾಯಕರು, ಮ್ಯಾನೇಜರ್‌ಗಳಾದ ಷಣ್ಮುಗಂ, ಆಶೀರ್ವಾದಂ, ಗೋವಿಂದಪ್ಪ, ರಾಮಚಂದ್ರ ರಾವ್ ಮತ್ತಿತರರು ಅಕ್ಕಪಕ್ಕದ ಕೋಣೆಗಳಲ್ಲಿ ಕುಳಿತಿರುತ್ತಿದ್ದರು. ನಿರ್ದಿಷ್ಟ ಪ್ರದೇಶಗಳಲ್ಲಿ ಹೆಂಡ ಮತ್ತು ಸಾರಾಯಿ ಮಾರಾಟಕ್ಕಾಗಿ ಲೈಸೆನ್ಸ್ ನೀಡಲು ನಡೆಯುತ್ತಿದ್ದ ಅಬಕಾರಿ ಹರಾಜಿನಲ್ಲಿ ಪಾಲ್ಗೊಳ್ಳಲು ಅಜ್ಜ ತಮ್ಮ ಒಡನಾಡಿಗಳೊಂದಿಗೆ, ತುಸು ಬೆಳೆದು ದೊಡ್ಡವರಾದ ಮೇಲೆ, ನಮ್ಮನ್ನೂ ಕರೆದೊಯ್ಯುತ್ತಿದ್ದರು. ನನ್ನಜ್ಜನಿಗೆ ಈ ಕಳ್ಳು ಉದ್ಯಮ, ಅವರ ತಂದೆ ಕೆ. ನೆಟ್ಟಕಲ್ಲಪ್ಪ ಅವರಿಂದ ಪಿತ್ರಾರ್ಜಿತವಾಗಿ ಬಂದಿತ್ತು. ಕಳ್ಳು ಇಳಿಸುವುದು ಸಾಂಪ್ರದಾಯಿಕವಾಗಿ ನಮ್ಮ ಜಾತಿಯನ್ನು ಆಧರಿಸಿದ ವೃತ್ತಿಯಾಗಿತ್ತು. ಅವರ ಉದ್ಯಮದಲ್ಲಿ ಪಾಲುದಾರರಾಗಿದ್ದ ಬಹುತೇಕರು ಅವರ ಹತ್ತಿರದ ಇಲ್ಲವೆ ದೂರದ ಸಂಬಂಧಿಗಳೇ ಆಗಿದ್ದರು. ಸ್ವಜಾತಿಯ ಇತರ ಬಂಧು-ಮಿತ್ರರು ಸಹ ಅದರಲ್ಲಿ ಸೇರಿದ್ದರು. ಈ ಪಾಲುದಾರಿಕೆಯು ಹಲವು ಪೀಳಿಗೆಗಳಿಂದ ಹಾಸುಹೊಕ್ಕಾಗಿ ಬೆಳೆದುಬಂದಿತ್ತು.

ಅಜ್ಜ, ತಮ್ಮೆಲ್ಲ ಉದ್ಯಮದ ಚಟುವಟಿಕೆಗಳಲ್ಲಿ ಕೆ.ವೆಂಕಟಸ್ವಾಮಿ ಅವರನ್ನು ಹೆಚ್ಚಾಗಿ ಅವಲಂಬಿಸಿದ್ದರು. ಕುಟುಂಬದ ಹಿರಿಯರು ಹೇಳುವ ಪ್ರಕಾರ, ಈ ವೆಂಕಟಸ್ವಾಮಿಯವರು ನನ್ನ ಮುತ್ತಜ್ಜನ ಕಳ್ಳು ಉದ್ಯಮದಲ್ಲಿ ಸೂಪರ್‌ವೈಸರ್ ಆಗಿದ್ದ ವ್ಯಕ್ತಿಯೊಬ್ಬರ ಮಗ. ಕಾನೂನಿನ ಸಂಕಷ್ಟಕ್ಕೆ ಸಿಲುಕಿದ್ದ ಆ ವ್ಯಕ್ತಿಯು ತಮ್ಮ ಸಮುದಾಯಕ್ಕೇ ಸೇರಿದ್ದ ಮನುಷ್ಯ ಎನ್ನುವ ಕಾರಣಕ್ಕಾಗಿ ನನ್ನ ಮುತ್ತಜ್ಜನೇ ಆತನನ್ನು ರಕ್ಷಿಸಿ, ಆತನಿಗೆ ಸೂಪರ್‌ವೈಸರ್ ಕೆಲಸದ ಮೂಲಕ ಪುನರ್ವಸತಿ ಕಲ್ಪಿಸಿದ್ದರಂತೆ. ಎಲ್ಲಿ ಅಡ್ಡದಾರಿ ಹಿಡಿಯುವನೋ ಎಂಬ ಭೀತಿಯಿಂದ ನನ್ನ ಮುತ್ತಜ್ಜ, ವೆಂಕಟಸ್ವಾಮಿ ಅವರನ್ನು ತಮ್ಮ ಕಣ್ಗಾವಲಿನಲ್ಲೇ ಇರುವಂತೆ ನೋಡಿಕೊಂಡಿದ್ದರು. ವೆಂಕಟಸ್ವಾಮಿ ಅವರ ಚುರುಕುತನಕ್ಕೆ ಮಾರುಹೋಗಿ ಅವರ ಬೆಳವಣಿಗೆಗೆ ಪೂರಕವಾದ ಕೆಲವು ಕೆಲಸಗಳನ್ನು ಕೊಡುವ ಮೂಲಕ ಅವರನ್ನು ಪ್ರೋತ್ಸಾಹಿಸಿದ್ದರು ಕೂಡ. ಬಾಲ್ಯದಲ್ಲಿ ಅವರು, ಅಜ್ಜ ಮತ್ತು ಅಜ್ಜನ ಸಹೋದರರ ಜೊತೆಯಲ್ಲೇ ಆಟವಾಡುತ್ತಿದ್ದರು. ಚುರುಕಾದ, ತೀಕ್ಷ್ಣ ಬುದ್ಧಿವಂತಿಕೆಯ, ಚಾಣಕ್ಯ ತಂತ್ರದ, ಪ್ರಬಲ ಇಷ್ಟಾನಿಷ್ಟದ, ತುಂಬಾ ಗಟ್ಟಿಯಾದ ಸಂಕಲ್ಪಶಕ್ತಿಯ ಮತ್ತು ಅಸಾಧ್ಯ ಸಾಮರ್ಥ್ಯದ, ತೆಳ್ಳಗೆನಿಸುವ ಶರೀರದ ಆ ವ್ಯಕ್ತಿ, ಒಬ್ಬರ ಮೇಲೆ ಒಬ್ಬರನ್ನು ಎತ್ತಿಕಟ್ಟುತ್ತಲೇ ತಮ್ಮ ಕಾರ್ಯ ನಿರ್ವಹಿಸುತ್ತಿದ್ದರು. ಸದಾ ಒಂದು ಪುಟ್ಟ ನೋಟ್‌ಬುಕ್ ಇಟ್ಟುಕೊಂಡು ಅದರಲ್ಲಿ ಟಿಪ್ಪಣಿ ಬರೆದುಕೊಳ್ಳುತ್ತಾ, ನಿಗದಿಪಡಿಸಿದ ನಿತ್ಯದ ಕಾರ್ಯಗಳನ್ನು ಪೂರ್ಣಗೊಳಿಸಿದ ಮೇಲೆ ಅವನ್ನು ಹೊಡೆದುಹಾಕುತ್ತಾ, ರೋಟರಿ ಡಯಲ್ ಲ್ಯಾಂಡ್ ಲೈನ್ ಫೋನ್ ಮೂಲಕ ನಿರಂತರವಾಗಿ ಫೋನ್ ಮಾಡುತ್ತಾ ಅವರು ಕೆಲಸ ಮಾಡುತ್ತಿದ್ದುದನ್ನು ನಾನೂ ನೋಡಿದ್ದು ನೆನಪಿದೆ.

ಅತ್ಯುತ್ಸಾಹದ ಲವಲವಿಕೆಯಲ್ಲಿ, ವೈಭವಯುತವಾಗಿ ಬಾಳಿದ ಅಜ್ಜ, ಬದುಕು ನೀಡಬಹುದಾದ ವೈವಿಧ್ಯಮಯ ಭೋಗಗಳನ್ನು ಆಳವಾಗಿ ಅನುಭವಿಸಿದ್ದರು...

ಅಜ್ಜನಿಗೆ ಅವರು ಸಹಜ ಒಡನಾಡಿಯಾದರು. ಪರಸ್ಪರರಿಗೆ ಅಗತ್ಯವಾಗಿದ್ದ ಗುಣಗಳು, ಭಿನ್ನ ಮನೋಧರ್ಮಗಳು ಇಬ್ಬರಲ್ಲೂ ಪೂರಕವಾಗಿ ಇದ್ದವು. ಅಜ್ಜನಲ್ಲಿ ಕೊರತೆಯಿದ್ದ, ಆದರೆ ಅವರಿಗೆ ಅಗತ್ಯವಾಗಿದ್ದ, ಅನೇಕ ಸಾಮರ್ಥ್ಯಗಳನ್ನು ವೆಂಕಟಸ್ವಾಮಿ ಹೊಂದಿದ್ದರು. ಅವರಿಬ್ಬರು ಚೆನ್ನಾಗಿ ಹೊಂದಿಕೊಂಡರು ಮತ್ತು ದೀರ್ಘಕಾಲದ, ಪರಸ್ಪರ ಫಲಪ್ರದವಾದ ವ್ಯಾಪಾರ ಸಂಬಂಧವನ್ನೂ ಬೆಳೆಸಿಕೊಂಡರು. ಅಜ್ಜನಿಗೆ ವ್ಯವಹಾರದ ನಿತ್ಯದ ಆಗುಹೋಗುಗಳಲ್ಲಿ ಅಷ್ಟಾಗಿ ಆಸಕ್ತಿಯಿರದ ಕಾರಣ ಅವರಿಗೆ ವೆಂಕಟಸ್ವಾಮಿ ಅನಿವಾರ್ಯವಾದರು. ಸರ್ಕಾರದೊಂದಿಗೆ ತಮ್ಮ ಪರವಾಗಿ ಮಾತನಾಡಲು ಮತ್ತು ಲಾಬಿ ನಡೆಸಲು ಸಹ ಅವರನ್ನೇ ಕಳಿಸುತ್ತಿದ್ದರು. ನಂತರದ ದಿನಗಳಲ್ಲಿ ವೆಂಕಟಸ್ವಾಮಿ ಅವರನ್ನು ಅಜ್ಜ ತಮ್ಮ ಸಾರಾಯಿ ವ್ಯವಹಾರದಲ್ಲಿ ಪಾಲುದಾರರನ್ನಾಗಿ ಮಾಡಿಕೊಂಡು, ಒಂದು ಪಾಲನ್ನು ಬಿಟ್ಟುಕೊಟ್ಟರು. ದಿನಗಳು ಉರುಳಿದಂತೆ ಆ ಪಾಲು ಬೆಳೆಯುತ್ತಾ ಹೋಗಿ ವೆಂಕಟಸ್ವಾಮಿ ಅವರ ಕೊನೆಗಾಲದ ವರ್ಷಗಳ ಹೊತ್ತಿಗೆ ವ್ಯವಹಾರದಲ್ಲಿ ಅಜ್ಜನಷ್ಟೇ ಸಮಾನ ಮೊತ್ತದ ಪಾಲನ್ನು ಅವರು ಹೊಂದಿದ್ದರು. ಪತ್ರಿಕಾ ಕಂಪನಿಯಲ್ಲೂ ಅವರನ್ನು ಪಾಲುದಾರರನ್ನಾಗಿ ಮಾಡಿಕೊಂಡ ಅಜ್ಜ, ಆರಂಭದಿಂದಲೇ ಅವರನ್ನೂ ಒಬ್ಬ ನಿರ್ದೇಶಕರನ್ನಾಗಿ ನೇಮಕ ಮಾಡಿ ಆಡಳಿತದಲ್ಲಿ ತೊಡಗಿಸಿಕೊಂಡರು. ವೆಂಕಟಸ್ವಾಮಿ ಅವರಿಗೂ (ಇಂದಿನ ಇಎಸ್‌ಒಪಿ ಮಾದರಿಯಂತೆ) ವ್ಯವಹಾರದಲ್ಲಿ ಪಾಲನ್ನು ನೀಡಿದ್ದು ಅಜ್ಜನ ಉದ್ಯಮದ ಯಶಸ್ಸಿನಲ್ಲಿ ಪ್ರಮುಖ ಪಾತ್ರವನ್ನು ವಹಿಸಿತ್ತು ಎನ್ನುವುದು ನನ್ನ ಊಹೆ.

ಆದರೆ, ಈ ಸಂಬಂಧ, ಕಷ್ಟನಷ್ಟವನ್ನೂ ತಂದಿತ್ತು. ಇದರಿಂದ ತಮ್ಮ ಸಹೋದರರೊಂದಿಗಿನ ಅಜ್ಜನ ಸಂಬಂಧದಲ್ಲಿ ಘರ್ಷಣೆಗಳು ಹೆಚ್ಚಾದವು. ಕೂಡು ಕುಟುಂಬವು ಒಡೆದುಹೋಯಿತು. ಕುಟುಂಬದ ಉದ್ಯಮವನ್ನು ಹಂಚಿಕೊಳ್ಳುವ ಬಗ್ಗೆ ಪರಸ್ಪರ ಆಕ್ಷೇಪಗಳು ಬಂದವು. ಅಬಕಾರಿ ಹರಾಜುಗಳಲ್ಲಿ ಸಹೋದರರೇ ಪರಸ್ಪರ ಎದುರಾಗಿ ನಿಂತು ಸವಾಲು ಕೂಗುವಂತಹ ಸನ್ನಿವೇಶ ಸೃಷ್ಟಿಯಾಯಿತು. ಕೆಲವು ವರ್ಷಗಳ ಬಳಿಕ ಸಹೋದರರ ನಡುವೆ ಸಮನ್ವಯ ಮೂಡಿದರೂ ಅವರ ಬಾಂಧವ್ಯದ ಸ್ವರೂಪ ಮತ್ತೆ ಪೂರ್ತಿಯಾಗಿ ಮುಂಚಿನ ಸ್ಥಿತಿಗೆ ಮರಳಲಿಲ್ಲ. ತುಂಬಾ ನೆಚ್ಚಿನ ಮಗನೊಂದಿಗೆ ಅಜ್ಜ ತಮ್ಮ ಸಂಬಂಧವನ್ನೇ ಕಡಿದುಕೊಳ್ಳುವ ಹಂತ ತಲುಪುವಷ್ಟು ಪರಿಸ್ಥಿತಿ ವಿಕೋಪಕ್ಕೆ ಹೋಗಲೂ ಈ ಸಂಬಂಧ ಕಾರಣವಾಯಿತು. ಈ ಸಮಸ್ಯೆ ತಿಳಿಯಾಗಿದ್ದು ನನ್ನ ತಂದೆಯ ಸಾವಿನ ನಂತರವೇ. ಆದರೆ, ಕದಿರಮ್ಮನ ರೂಪದಲ್ಲಿ ವೆಂಕಟಸ್ವಾಮಿಯವರಿಗೆ ಸಮಾನ ಪ್ರತಿಸ್ಪರ್ಧಿಯೊಬ್ಬರು ಎದುರಾಗಿದ್ದರು. ತಮ್ಮ ಮನೆಯಲ್ಲಿ ಕಾಲಿಡದಂತೆ ಆಕೆ, ಅವರನ್ನು ನಿರ್ಬಂಧಿಸಿದ್ದರು. ವೆಂಕಟಸ್ವಾಮಿ ಅವರ ಸಾವಿನ ನಂತರ ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದ ಅವರ ಮಕ್ಕಳು ಪತ್ರಿಕಾ ಕಂಪನಿಯಲ್ಲಿ ತಾವು ಹೊಂದಿದ್ದ ಷೇರುಗಳನ್ನು ಖರೀದಿಸುವಂತೆ ನಮ್ಮನ್ನು ಕೇಳಿಕೊಂಡರು. ಸಾರಾಯಿ ಕಂಪನಿಯಲ್ಲಿ ದೀರ್ಘಕಾಲದ ಪಾಲುದಾರರಾಗಿದ್ದವರು, 'ಅಷ್ಟೊಂದು ಸಂಪತ್ತು ಎಲ್ಲಿಗೆ ಹೋಯಿತು' ಎಂದು ಆಶ್ಚರ್ಯಚಕಿತರಾದರು.

ಅಜ್ಜನ ವೈಯಕ್ತಿಕ, ಜಾತಿಯ ಹಾಗೂ ವ್ಯವಹಾರದ ಹಿನ್ನೆಲೆಯನ್ನು ಗಮನಿಸಿದಾಗ ನಾನಾಗಲಿ, ಅವರ ಪರಿಚಯ ಇರುವ ಹಲವರಾಗಲಿ, ಅವರೇ ಪತ್ರಿಕೆಗಳ ಸಂಸ್ಥಾಪಕರಾಗುವುದು ಅಸಂಭವ ಎಂದುಕೊಳ್ಳುವುದು ಸಹಜ. 'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ' ಪತ್ರಿಕೆಗಳನ್ನು ಅಜ್ಜ ಏಕೆ ಮತ್ತು ಹೇಗೆ ಪ್ರಾರಂಭಿಸಲು ನಿರ್ಧರಿಸಿದರು ಎಂದು ನಾನು ಅವರನ್ನು ಕೇಳುವ ಗೋಜಿಗೆ ಹೋಗಲಿಲ್ಲ. ಈ ಕುರಿತು ನನಗಾಗಲಿ ಅಥವಾ ನನಗೆ ತಿಳಿದ ಇತರ ಯಾರಿಗಾಗಲಿ ಅವರು ಕೂಡ ಏನನ್ನೂ ಹೇಳಲಿಲ್ಲ. ಕೆಲವು ವರ್ಷಗಳ ಹಿಂದೆ ಅಜ್ಜನ ಹಳೆಯ ದಾಖಲೆಗಳನ್ನೆಲ್ಲ ಪರಿಶೀಲಿಸುವಾಗ 1938ರ ಡಿಸೆಂಬರ್ 8ರಂದು ಅವರಿಗೆ ಬರೆಯಲಾಗಿದ್ದ ಪತ್ರವೊಂದು ಆಕಸ್ಮಿಕವಾಗಿ ಕಣ್ಣಿಗೆ ಬಿತ್ತು. ಅದು ಆ ಕಾಲಕ್ಕೆ ಜನಜನಿತ ವ್ಯಕ್ತಿಯಾಗಿದ್ದ, ಬ್ರಾಹ್ಮಣ ಸಮುದಾಯದ ಮುಖಂಡರಾಗಿದ್ದ ಮತ್ತು ಆಗಿನ ಮೈಸೂರು ಸಂಸ್ಥಾನ ಹಾಗೂ ಬೆಂಗಳೂರಿನ ಪ್ರಮುಖ ಉದ್ಯಮಿಯೂ ಆಗಿದ್ದ ಬಿ.ಕೆ. ಗರುಡಾಚಾರ್ ಅವರು ಅಜ್ಜನಿಗೆ ಬರೆದ ಪತ್ರವಾಗಿತ್ತು. 'ಉದ್ದೇಶಿತ ಕನ್ನಡ ಪತ್ರಿಕೆಗೆ ಸಂಬಂಧಿಸಿದಂತೆ ತಾವು ಕಳುಹಿಸಿದ 2,500 ರೂಪಾಯಿ ತಲುಪಿದ್ದನ್ನು ದೃಢೀಕರಿಸುವ ಸಲುವಾಗಿ ಈ ಪತ್ರವನ್ನು ಬರೆಯುತ್ತಿದ್ದೇನೆ. ಮುಂದಿನ ತಾತ್ಕಾಲಿಕ ಸಮಿತಿ ಸಭೆಗೆ ತಾವು ಹಾಜರಿದ್ದು ಸಹಕಾರವನ್ನು ಮುಂದುವರಿಸಿದರೆ ನನಗೆ ಅತೀವ ಸಂತೋಷವಾಗುತ್ತದೆ' ಎಂದು ಆ ಪತ್ರದಲ್ಲಿ ಅವರು ಬರೆದಿದ್ದರು.

ಮುಂದಿನ ಪುಟಕ್ಕೆ...

ಪುಂಡಾನೆ ಎಂದು ಘೋಷಿತವಾದ ಆನೆಯನ್ನು ಕೊಂದಾಗ... (ಮೊದಲ ಚಿತ್ರ). ಪ್ರೀತಿಯ 'ಪಂಚಕಲ್ಯಾಣಿ' ಕುದುರೆಯೊಂದಿಗೆ


LOKASEVARATNA, RAO BAHADUR
B. K. GARUDACHAR
BANGALORE CITY
8th December 1938.

Strictly personal and confidential
No37

My Dear Sir,

I write to acknowledge receipt of the sum of Rs [illegible] so kindly sent by you in connection with the proposed Kannada News paper. Arrangements are being made in this regard. I shall be glad if you could kindly arrange to be present at the next meeting of the provisional Committee, of which advance notice will be duly given to you, and extend your kindly co-operation.

Yours sincerely,
[signature]

To
K.N. Guruswami, Esq.,
Contractor,
Bangalore

ಪತ್ರಿಕೆ ಆರಂಭಿಸುವ ಸಂಬಂಧ ಹಣ ಸ್ವೀಕರಿಸಿದ ದಾಖಲೆಯಾಗಿ 1938ರಲ್ಲಿ ಬಿ.ಕೆ. ಗರುಡಾಚಾರ್ ಅವರು ಬರೆದ ಪತ್ರ

...ಹಿಂದಿನ ಪುಟದಿಂದ

ನನ್ನ ತಂದೆಯ ವಿರುದ್ಧದ ವ್ಯಾಜ್ಯದಲ್ಲಿ ಸಂಪೂರ್ಣ ವಿಜಯ ಘೋಷಿಸುವುದಕ್ಕಾಗಿ ವೆಂಕಟಸ್ವಾಮಿ ಅವರು 1975ರಲ್ಲಿ 'ದಿ ಸ್ಟೋರಿ ಆಫ್ ಡೆಕ್ಕನ್ ಹೆರಾಲ್ಡ್' ಎಂಬ ಸ್ವಯಂಉತ್ತೇಜಿತ ವಿವರಣೆ ಕಿರುಹೊತ್ತಿಗೆಯೊಂದನ್ನು ಹೊರತಂದಿದ್ದರು. ಮೈಸೂರು ಸಂಸ್ಥಾನದ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರ ಸಲಹೆಯಂತೆ 1948ರಲ್ಲಿ ಪತ್ರಿಕೆ ಶುರುವಾಗಲು ತಾವೇ ಕಾರಣ ಎಂದೂ ಅವರು ಬರೆದುಕೊಂಡಿದ್ದಾರೆ. 'ನನ್ನ ಬಾಲ್ಯದ ಗೆಳೆಯ ಮತ್ತು ಉದ್ಯಮದ ಪಾಲುದಾರ ಕೆ.ಎನ್. ಗುರುಸ್ವಾಮಿ ಬಳಿ ಹೋಗಿ 50:50 ಪಾಲುದಾರಿಕೆಯಲ್ಲಿ ಪತ್ರಿಕೆ ಆರಂಭಿಸುವ ಪ್ರಸ್ತಾಪ ಮಾಡಿದೆ' ಎಂಬುದಾಗಿಯೂ ಆ ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಅವರ ಪ್ರಕಾರ, 'ಮಾತೃಭೂಮಿ' ಎಂಬ ಕನ್ನಡ ಪತ್ರಿಕೆಯನ್ನು ಪ್ರಕಟಿಸಲು ಹೋಗಿ ಸಾಕಷ್ಟು ಹಣ ಕಳೆದುಕೊಂಡಿದ್ದನ್ನು ನೆನಪಿಸಿಕೊಂಡಿದ್ದ ಅಜ್ಜ, 'ನೀನು, ನನಗಾಗಿಯಷ್ಟೇ ಈ ಪತ್ರಿಕೆಯನ್ನು ಶುರು ಮಾಡಬೇಕು' ಎಂದೂ ಮನವಿ ಮಾಡಿದ್ದರಂತೆ. ಹೀಗಾಗಿ ನನ್ನಜ್ಜನ ಮನವಿಯನ್ನು ತಾವು ಪುರಸ್ಕರಿಸಿದ್ದಾಗಿಯೂ ಅವರು ಬರೆದಿದ್ದಾರೆ.

'ಡೆಕ್ಕನ್ ಹೆರಾಲ್ಡ್'ನ ಮೊದಲ ಸುದ್ದಿ ಸಂಪಾದಕ, ಬೆಂಗಳೂರಿನವರೇ ಆಗಿದ್ದ ಇ.ಪಿ. ಸ್ಯಾಟ್, 1996ರಲ್ಲಿ 'ಡೆಕ್ಕನ್ ಹೆರಾಲ್ಡ್- ದಿ ಫಸ್ಟ್ ಫಿಫ್ಟಿ ಇಯರ್ಸ್' ಎಂಬ ಕೃತಿಯಲ್ಲಿ ತಮ್ಮ ನೆನಪುಗಳನ್ನು ದಾಖಲಿಸಿದ್ದಾರೆ. 'ಸಿಜಿಕೆ ರೆಡ್ಡಿ ಅವರಿಲ್ಲದಿದ್ದರೆ 'ಡೆಕ್ಕನ್ ಹೆರಾಲ್ಡ್' ಪತ್ರಿಕೆ ಎಂದಿಗೂ ಪ್ರಕಾಶನದ ಭಾಗ್ಯವನ್ನೇ ಕಾಣುತ್ತಿರಲಿಲ್ಲ. ಎಲ್ಲ ನಿರ್ದೇಶಕರ ಹಿಂದಿನ ಪ್ರೇರಕಶಕ್ತಿಯಾಗಿದ್ದ ಕೆ.ಎನ್. ಗುರುಸ್ವಾಮಿ ಅವರಿಗೆ 'ಇಂಗ್ಲಿಷ್ ಪತ್ರಿಕೆಯು ಯಶಸ್ವಿಯಾಗಬಹುದೆಂಬ ಮನವರಿಕೆ ಮಾಡಿಕೊಡುವಲ್ಲಿ ಪ್ರಧಾನ ವ್ಯವಸ್ಥಾಪಕರಾದ ರೆಡ್ಡಿ ಅವರು ತುಂಬಾ ನಿರ್ಣಾಯಕ ಪಾತ್ರ ವಹಿಸಿದ್ದರು' ಎಂದು ಅವರು ಸ್ಮರಿಸಿದ್ದಾರೆ. 'ಇಂಡಿಯನ್ ಎಕ್ಸ್‌ಪ್ರೆಸ್‌ನ ಮಾಲೀಕರಾದ ರಾಮನಾಥ್ ಗೋಯೆಂಕಾ ಅವರ ವಿಷಯವಾಗಿ 'ಅವರು' (ಮುಂದೆ ಡೆಕ್ಕನ್ ಹೆರಾಲ್ಡ್ ಸಂಪಾದಕರಾಗಿ ನೇಮಕಗೊಂಡ ಪೋಥನ್ ಜೋಸೆಫ್) ಅತೃಪ್ತಿಯನ್ನು ಹೊಂದಿದ್ದಾರೆ ಎನ್ನುವ ಮಾಹಿತಿ ಸಿಜಿಕೆ ಗೊತ್ತಿದ್ದರಿಂದ ಅವರಿಗೆ ಸೂಚನೆ ಕಳಿಸಲಾಯಿತು... 'ಇದರಿಂದಾಗಿ ಪೋಥನ್ ಜೋಸೆಫ್ ಅವರನ್ನು ಡೆಕ್ಕನ್ ಹೆರಾಲ್ಡ್ ಸಂಪಾದಕರಾಗಲು ಒಪ್ಪಿಸುವುದಕ್ಕಾಗಿ ಹೆಚ್ಚಿನ ಮನವೊಲಿಕೆ ಮಾಡಬೇಕಾದ ಅಗತ್ಯ ಸಿಜಿಕೆ ಅವರಿಗೆ ಬರಲಿಲ್ಲ' ಎಂದೂ ಸ್ಯಾಟ್ ಬರೆದಿದ್ದಾರೆ. ರಾಮಸ್ವಾಮಿ ಮೊದಲಿಯಾರ್ ಕುರಿತು ಸ್ಯಾಟ್ ಅವರು ಅಭಿಪ್ರಾಯ ಉಲ್ಲೇಖ ಮಾಡಿರಲಿಲ್ಲ.

ವೆಂಕಟಸ್ವಾಮಿ ಅವರ ಕಿರುಹೊತ್ತಿಗೆಗೆ ಮುನ್ನುಡಿಯನ್ನು ಬರೆದಿದ್ದ ನಿವೃತ್ತ ಐಸಿಎಸ್ ಅಧಿಕಾರಿ ಒ.ಪುಲ್ಲರೆಡ್ಡಿ, ವೆಂಕಟಸ್ವಾಮಿ ಮತ್ತು ನನ್ನಜ್ಜನ ಜೊತೆಗಿನ ದಶಕಗಳ ತಮ್ಮ ಸುದೀರ್ಘ ಸ್ನೇಹಸಂಬಂಧವನ್ನು ಮೆಲುಕು ಹಾಕಿದ್ದರು. 'ನಾನು ಹಿಂದಿನ ಮೈಸೂರು ಸರ್ಕಾರದಲ್ಲಿ 1944-46ರ ಅವಧಿಯಲ್ಲಿ ಉನ್ನತ ಹುದ್ದೆಯಲ್ಲಿದ್ದಾಗ ರಾಜ್ಯದ ಸಾರ್ವಜನಿಕ ಜೀವನದಲ್ಲಿ ಒಂದು ಮಹತ್ವದ ಕೊರತೆಯನ್ನು ಗಮನಿಸಿದ್ದೆ. ಹೀಗಾಗಿ ಬೆಂಗಳೂರಿನಲ್ಲಿ ಒಂದು ಶ್ರೇಷ್ಠ ಇಂಗ್ಲಿಷ್ ಪತ್ರಿಕೆಯನ್ನು ಆರಂಭಿಸುವಂತೆ ನನ್ನ ಸ್ನೇಹಿತರಿಗೆ ಹೇಳಿದ್ದೆ. ಆದರೆ, ತಮಗೆ ಸಂಪೂರ್ಣ ಅಪರಿಚಿತವಾಗಿದ್ದ ಕ್ಷೇತ್ರಕ್ಕೆ ಧುಮುಕಲು ನನ್ನ ಇಬ್ಬರೂ ಸ್ನೇಹಿತರು ಹಿಂಜರಿಯುತ್ತಿದ್ದರು. ಕೊನೆಗೆ ಪತ್ರಿಕೆ ಆರಂಭಿಸುವ ಪರಿಕಲ್ಪನೆ ಸರ್ ಎ.ಆರ್. ಮೊದಲಿಯಾರ್ ಅವರ ಕ್ರಿಯಾಶೀಲ ಮಾರ್ಗದರ್ಶನದಲ್ಲಿ ಸ್ಪಷ್ಟರೂಪವನ್ನು ಪಡೆದುಕೊಂಡಿತು' ಎಂದು ಬರೆದಿದ್ದಾರೆ. ಈ ಭಿನ್ನ ಪ್ರತಿಪಾದನೆಗಳು 'ಯಶಸ್ಸಿಗೆ ಹಲವು ಅಪ್ಪಂದಿರು, ಸೋಲು ಅನಾಥ' ಎಂಬ ಗಾದೆಯನ್ನು ನನಗೆ ನೆನಪಿಸುತ್ತವೆ.

ವೆಂಕಟಸ್ವಾಮಿ ಅವರ ಕಿರುಹೊತ್ತಿಗೆಗೆ ಅಜ್ಜನ ಮುನ್ನುಡಿಯೂ ಇದೆ. 'ನಾನು ಇಲ್ಲಿನ ವಿವರಗಳನ್ನು ಗಮನವಿಟ್ಟು ಓದಿದ್ದೇನೆ. ಈ ಕಿರುಹೊತ್ತಿಗೆಯು ಆಸಕ್ತಿದಾಯಕವಾಗಿದೆ' ಎಂದು ಅವರು ಬರೆದಿದ್ದಾರೆ. ವೆಂಕಟಸ್ವಾಮಿ ಮತ್ತು ತಾವು 'ಜೀವಮಾನದ ಗೆಳೆಯರು' ಎಂದೂ ಅಜ್ಜ ಹೇಳಿಕೊಂಡಿದ್ದಾರೆ. ಮುಂದುವರಿದು, 'ಬೆಂಗಳೂರಿನಲ್ಲಿ ಇಂಗ್ಲಿಷ್ ಪತ್ರಿಕೆಯನ್ನು ಪ್ರಾರಂಭಿಸುವ ಆಲೋಚನೆಯು ಹರಳುಗಟ್ಟಿದಾಗ, ಅದನ್ನು ಹೇಗೆ ರೂಪಿಸಬೇಕು ಮತ್ತು ಪರಿಣಾಮಕಾರಿಯಾಗಿ ನಡೆಸಬೇಕು ಎಂಬುದನ್ನು ಅವರು ಮತ್ತು ನಾನು ಕೂಡಿ ನಿರ್ಧರಿಸಿದ್ದೆವು' ಎಂದು ವಿವರಿಸಿದ್ದಾರೆ. ಮತ್ತೂ ಮುಂದುವರಿದು, 'ಪತ್ರಿಕೆಗಳು ಆರ್ಥಿಕ ಸಂಕಷ್ಟ ಹಾಗೂ ಇತರ ಸಮಸ್ಯೆಗಳನ್ನು ಎದುರಿಸಿದ 1950ರ ಸೆಪ್ಟೆಂಬರ್‌ನ ಆ ಕರಾಳ ದಿನಗಳಿಂದಲೂ ಶ್ರೀ ವೆಂಕಟಸ್ವಾಮಿ, ನಿರ್ದೇಶಕರ ಮಂಡಳಿ ಹಾಗೂ ನಿರ್ವಹಣೆಯ ಹೊಣೆ ಹೊತ್ತು ಸಂಸ್ಥೆಯೊಂದಿಗೆ ಕ್ರಿಯಾಶೀಲವಾಗಿ ತೊಡಗಿಕೊಳ್ಳಲು ಸಿದ್ಧವಾಗಿ ನಿಂತಿದ್ದನ್ನು ಕೃತಜ್ಞತೆಯಿಂದ ಸ್ಮರಿಸುವೆ' ಎಂದು ಬರೆದಿದ್ದಾರೆ. 'ಡೆಕ್ಕನ್ ಹೆರಾಲ್ಡ್'ನ ಸ್ಥಾಪನೆಯಿಂದ ಹಿಡಿದು 1975ರವರೆಗಿನ ಅದರ ಕ್ರಿಯಾತ್ಮಕ ಶಕ್ತಿ ತಾವೇ ಎಂದು ವೆಂಕಟಸ್ವಾಮಿಯವರು ಬಿಂಬಿಸಿಕೊಂಡಿದ್ದನ್ನು, ಅದೊಂದು ಜಂಟಿ ನಿರ್ಧಾರ ಎಂಬುದನ್ನು ಸ್ಪಷ್ಟಪಡಿಸುವ ಮೂಲಕ, ಅಜ್ಜ ಪರೋಕ್ಷವಾಗಿ ಪ್ರಶ್ನಿಸಿದ್ದಾರೆ. ಈ ಹೊತ್ತಿಗೆಗೆ ಮುನ್ನುಡಿಗಳನ್ನು ಬರೆದ ಇತರ ಐವರು ವೆಂಕಟಸ್ವಾಮಿಯವರ ಅಭಿಪ್ರಾಯಕ್ಕೆ ಸಹಮತ ವ್ಯಕ್ತಪಡಿಸಿದರೆ, ಅಜ್ಜ ಮಾತ್ರ ಅವರನ್ನು ಅನುಸರಿಸಲು ಹೋಗಲಿಲ್ಲ.

ಹೌದು, ಎ.ರಾಮಸ್ವಾಮಿ ಮೊದಲಿಯಾರ್ ಅವರ ಉಲ್ಲೇಖವನ್ನು ಅಜ್ಜ ಎಲ್ಲಿಯೂ ಮಾಡುವುದಿಲ್ಲ. ದುರದೃಷ್ಟವಶಾತ್, ಪತ್ರಿಕೆ ಆರಂಭಿಸುವ ಯೋಚನೆ ಹೇಗೆ ಹುಟ್ಟಿತು ಎಂಬುದನ್ನು ವಿವರಿಸುವ ಗೋಜಿಗೂ ಅವರು ಹೋಗಲಿಲ್ಲ. ಅದು ಸರಿಯಾದ ಸಂದರ್ಭ ಅಲ್ಲ ಎನ್ನುವುದು ಅದಕ್ಕೆ ಕಾರಣವಾಗಿರಬಹುದು.

ಅಲ್ಲಿ ಇನ್ನೂ ಹಲವು ಮೌನಗಳು ಇವೆ. ಕಿರುಹೊತ್ತಿಗೆಗೆ ಮುನ್ನುಡಿ ಬರೆದ ಎ. ರಾಮಸ್ವಾಮಿ ಮೊದಲಿಯಾರ್ ಮತ್ತು ಬಿ.ವಿ. ನಾರಾಯಣ ರೆಡ್ಡಿ ಇಬ್ಬರೂ ವೆಂಕಟಸ್ವಾಮಿ ಅವರ ನಿರೂಪಣೆಯನ್ನೇ ಅನುಮೋದಿಸಿದ್ದಾರೆ.

1967ರ ಏಪ್ರಿಲ್ 22ರ ಶನಿವಾರದಂದು, ಆರ್ಯ ಈಡಿಗರ ಸಂಘದಿಂದ ವೆಂಕಟಸ್ವಾಮಿ ಹಾಗೂ ಅಜ್ಜನನ್ನು ಸನ್ಮಾನಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಆ ಕಾರ್ಯಕ್ರಮದಲ್ಲಿ ಮಾತನಾಡಿದ್ದ ವೆಂಕಟಸ್ವಾಮಿ ಅವರು, 'ಡೆಕ್ಕನ್ ಹೆರಾಲ್ಡ್' ಪತ್ರಿಕೆ ಶುರುಮಾಡುವಲ್ಲಿ ನಿರ್ಣಾಯಕ ನೆರವು ನೀಡಿದ್ದ' ರಾಮಸ್ವಾಮಿ ಮೊದಲಿಯಾರ್ ಅವರಿಗೆ ಕೃತಜ್ಞತೆಯನ್ನು ಅರ್ಪಿಸಿದ್ದರು. ರಾಮಸ್ವಾಮಿ ಹಾಗೂ ರೆಡ್ಡಿ ಅವರ ಭಾಷಣಗಳೂ 'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ'ಯಲ್ಲಿ ವರದಿಯಾಗಿವೆ. ಆದರೆ, ವೆಂಕಟಸ್ವಾಮಿ ಅವರ ಮಾತಿಗೆ ಇವರಿಬ್ಬರಿಂದ ಯಾವುದೇ ಪ್ರತಿಕ್ರಿಯೆ ಇರಲಿಲ್ಲ.

ಹಲವು ಪ್ರಶ್ನೆಗಳಿಗೆ ಮೌನವೇ ಉತ್ತರ

ವಾಸ್ತವವಾಗಿ ರಾಮಸ್ವಾಮಿ ಮೊದಲಿಯಾರ್ ಮತ್ತು 'ಡೆಕ್ಕನ್ ಹೆರಾಲ್ಡ್' ನಡುವಿನ ಸಂಬಂಧದ ಕುರಿತು ಪತ್ರಿಕಾ ವರದಿಗಳು ಮೌನ ವಹಿಸಿವೆ. 1972ರ ನವೆಂಬರ್ 30ರಂದು, ಶುಕ್ರವಾರ, ಪೋಥನ್ ಜೋಸೆಫ್ ಅವರ ನಿಧನಕ್ಕೆ ಸಂಬಂಧಿಸಿದ 'ಡೆಕ್ಕನ್ ಹೆರಾಲ್ಡ್' ವರದಿಯಲ್ಲಿ ಹೀಗೆ ಬರೆಯಲಾಗಿದೆ: 'ಸ್ವಾತಂತ್ರ್ಯದ ನಂತರ ಜೋಸೆಫ್ ಅವರಿಗೆ 'ಡೆಕ್ಕನ್ ಹೆರಾಲ್ಡ್'ನ ಸಂಪಾದಕತ್ವವನ್ನು ವಹಿಸಿಕೊಡಲಾಯಿತು. ಆ ಕೆಲಸವನ್ನು ಅವರು ಉತ್ಸಾಹದಿಂದ ಕೈಗೆತ್ತಿಕೊಂಡರು'.

ಟಿಜೆಎಸ್ ಜಾರ್ಜ್ ಅವರು 1992ರಲ್ಲಿ ಬರೆದಿರುವ ಪೋಥನ್ ಜೋಸೆಫ್ ಅವರ ಜೀವನಚರಿತ್ರೆಯಲ್ಲಿ ಪೋಥನ್ ಅವರ ಮಾತುಗಳು, ಕುಟುಂಬದ ಸದಸ್ಯರು, ಸ್ನೇಹಿತರು ಹಾಗೂ ಸಾರ್ವಜನಿಕರಿಗೆ ಅವರು ಬರೆದ ಪತ್ರಗಳು ಮತ್ತು ಬರಹಗಳನ್ನು ಹೇರಳವಾಗಿ ಉಲ್ಲೇಖಿಸಿದ್ದಾರೆ. ಆದರೆ, 'ಡೆಕ್ಕನ್ ಹೆರಾಲ್ಡ್' ಪತ್ರಿಕೆ ಹೇಗೆ ಸ್ಥಾಪನೆಯಾಯಿತು ಇಲ್ಲವೆ ಪತ್ರಿಕೆಗೆ ಪೋಥನ್ ಹೇಗೆ ಬಂದರು ಎಂಬ ವಿಷಯವಾಗಿ ಪೋಥನ್ ಅವರ ಒಂದೇ ಒಂದು ಹೇಳಿಕೆಯನ್ನೂ ಉಲ್ಲೇಖಿಸಿಲ್ಲ. ಈ ವಿಷಯದಲ್ಲಿ ಜಾರ್ಜ್ ಅವರು ಯಾರನ್ನೂ ಉಲ್ಲೇಖಿಸದೆ ಕೊಡುವ ವಿವರವೂ ವೆಂಕಟಸ್ವಾಮಿ ಅವರ ನಿರೂಪಣೆಯನ್ನೇ ಹೋಲುತ್ತದೆ.

ಮೈಸೂರು ರಾಜ್ಯದ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿದ್ದ ಟಿ. ಸಿದ್ದಲಿಂಗಯ್ಯ ಅವರ ಸಂದೇಶದ ಪ್ರತಿಯನ್ನು 1948ರ ಜೂನ್ 17ರಂದು ಪ್ರಕಟವಾದ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ಮೊತ್ತಮೊದಲ ಸಂಚಿಕೆಯ ಮುಖಪುಟದ ಮೇಲ್ಭಾಗದಲ್ಲೇ ಯಥಾವತ್ತಾಗಿ ಪ್ರಕಟಿಸಲಾಗಿದೆ. ಪತ್ರಿಕೆಯ ಬಿಡುಗಡೆ ಸಮಾರಂಭದ ವರದಿಯನ್ನು ಅದೇ ಸಂಚಿಕೆಯ ಐದನೇ ಪುಟದ ಮೇಲ್ಭಾಗದಲ್ಲಿ ಹಾಕಲಾಗಿದೆ. ಮೈಸೂರು ಸಂಸ್ಥಾನದ ದಿವಾನರು ಸೇರಿದಂತೆ ಹಲವು ಗಣ್ಯರು ಆ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಆದರೆ, ನಿರ್ದೇಶಕರ ಪರವಾಗಿ ಮಾತನಾಡಿದ ವೆಂಕಟಸ್ವಾಮಿ ಅವರ ಭಾಷಣದಲ್ಲಾಗಲಿ (ಅದು ತುಂಬಾ ದೀರ್ಘವಾಗಿ ವರದಿಯಾಗಿದೆ), "Ourselves" ಎಂಬ ಅಂದಿನ ಸಂಪಾದಕೀಯದಲ್ಲಾಗಲಿ, ಪೋಥನ್ ಜೋಸೆಫ್ ಅವರ "Over a cup of tea" ಅಂಕಣದಲ್ಲಾಗಲಿ ಅಥವಾ ಪತ್ರಿಕೆ ಬಿಡುಗಡೆಗೆ ಸಂಬಂಧಿಸಿದ ಬೇರೆ ಎಲ್ಲಿಯೇ ಆಗಲಿ ಎ.ರಾಮಸ್ವಾಮಿ ಮೊದಲಿಯಾರ್ ಅವರ ಹೆಸರು ಪ್ರಸ್ತಾಪವಾಗಿಲ್ಲ.

> ಅಜ್ಜ, ತಮ್ಮ ವ್ಯವಹಾರಗಳಲ್ಲಿ ಕೆಲವು ತತ್ವಗಳಿಗೆ ತುಂಬಾ ಬಲವಾಗಿ ಅಂಟಿಕೊಂಡಿದ್ದರು. ಹೀಗಾಗಿ 1960ರ ದಶಕದಲ್ಲಿ ಕಳ್ಳು ವ್ಯವಹಾರದಿಂದಲೇ ಹಿಂದೆ ಸರಿದರು...

ಅಂತಿಮವಾಗಿ, ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರು ಬ್ರಾಹ್ಮಣೇತರ ಜಸ್ಟಿಸ್ ಪಾರ್ಟಿಯ ಪ್ರಮುಖ ನಾಯಕರಾಗಿದ್ದರು. ಆ ಪಕ್ಷವು ಹಿಂದಿನ ಮದ್ರಾಸ್ ಪ್ರೆಸಿಡೆನ್ಸಿಯ ತಮಿಳು ಮಾತನಾಡುವ ಪ್ರದೇಶಗಳಲ್ಲಿ ಗಣನೀಯ ಪ್ರಮಾಣದ ಅನುಯಾಯಿಗಳನ್ನು ಹೊಂದಿತ್ತು. ಏಕೀಕೃತ, ಸ್ವತಂತ್ರ ಭಾರತದಲ್ಲಿ ಸಂಭಾವ್ಯ ಬ್ರಾಹ್ಮಣ ಪ್ರಾಬಲ್ಯಕ್ಕೆ ಹೆದರಿ, ಬ್ರಿಟಿಷ್ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ (ದಕ್ಷಿಣ ಭಾರತದ ದ್ರಾವಿಡ ಭಾಷೆಗಳನ್ನು ಮಾತನಾಡುವ ಪ್ರದೇಶಗಳನ್ನು ಒಳಗೊಂಡ) ಪ್ರತ್ಯೇಕ ಹಾಗೂ ಸಾರ್ವಭೌಮ 'ದ್ರಾವಿಡ ನಾಡು' ರಾಷ್ಟ್ರ ನಿರ್ಮಾಣಕ್ಕಾಗಿ ಹೋರಾಡುತ್ತಿದ್ದ ಪಕ್ಷ ಅದಾಗಿತ್ತು. ಸ್ವಾತಂತ್ರ್ಯದ ಆ ಕಾಲಘಟ್ಟದಲ್ಲಿ ರಾಮಸ್ವಾಮಿ ಮೊದಲಿಯಾರ್ ಅವರು ಮೈಸೂರು ಮಹಾರಾಜರಿಗೆ ಭಾರತೀಯ ಒಕ್ಕೂಟವನ್ನು ಸೇರಿಕೊಳ್ಳದಂತೆ ಸಲಹೆ ನೀಡಿದ್ದರು ಎಂದು ಬಹುವಾಗಿ ನಂಬಲಾಗಿದೆ. ಅದು ನಿಜವಾಗಿದ್ದರೆ, ಅವರ ಆ ಸಲಹೆ, ಅವರ ಬದ್ಧತೆಗೆ ಅನುಗುಣವಾಗಿಯೇ ಇದೆ. ಆದರೆ, ಬ್ರಾಹ್ಮಣೇತರ ಹಾಗೂ ದ್ರಾವಿಡ ಭಾಷೆ ಮಾತನಾಡುವ ವ್ಯಕ್ತಿಯಾಗಿದ್ದೂ ಮೈಸೂರು ರಾಜ್ಯದ ಬಹುತೇಕರಂತೆ ಅವರು ರಾಜಕೀಯ ಸಿದ್ಧಾಂತ ಹಾಗೂ ಕಾರ್ಯಸೂಚಿಯನ್ನು ಹೊಂದಿರದ ವ್ಯಕ್ತಿಗೆ ಇಂಗ್ಲಿಷ್ ದಿನಪತ್ರಿಕೆ ಆರಂಭಿಸುವಂತೆ ಸಲಹೆ ನೀಡುವಲ್ಲಿ ಅವರಿಗಿದ್ದ ಹಿತಾಸಕ್ತಿಯಾದರೂ ಏನೆಂಬುದು ಸ್ಪಷ್ಟವಿಲ್ಲ. ವಾಸ್ತವವಾಗಿ, ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾನಂತರ ಕಾಲಘಟ್ಟದ ಬ್ರಾಹ್ಮಣೇತರ ಮತ್ತು ಹಿಂದುಳಿದ ವರ್ಗಗಳ ರಾಜಕೀಯದ ಕುರಿತು ವೆಂಕಟಸ್ವಾಮಿ ಹಾಗೂ ನನ್ನಜ್ಜ ಹೊಂದಿದ್ದ ಉದಾಸೀನತೆ ಹಾಗೂ ಏಕೀಕೃತ ಭಾರತ ದೇಶ ಮತ್ತು ಸರ್ಕಾರದ ಬಗೆಗೆ ಹೊಂದಿದ್ದ ಬದ್ಧತೆಯನ್ನು ಪರಿಗಣಿಸಿದಲ್ಲಿ, ಸಾರ್ವಜನಿಕ ಒಳಿತು ಹಾಗೂ ಸೇವೆಯ ಕುರಿತಾಗಿ ರಾಮಸ್ವಾಮಿ ಮೊದಲಿಯಾರ್ ಅವರ ಸಿದ್ಧಾಂತಕ್ಕೂ ವೆಂಕಟಸ್ವಾಮಿ ಮತ್ತು ನನ್ನಜ್ಜನ ಯೋಚನೆಗಳಿಗೂ ಸಂಪೂರ್ಣ ವೈರುಧ್ಯವಿತ್ತು.

ಡೆಕ್ಕನ್ ಹೆರಾಲ್ಡ್‌ನ ಮೊದಲ ಸಂಪಾದಕ ಪೋಥನ್ ಜೋಸೆಫ್ ಅವರೊಂದಿಗೆ ಕೆ.ಎನ್. ಗುರುಸ್ವಾಮಿ

ಪೋಥನ್ ಜೋಸೆಫ್ ಹೇಗೆ ಸಿಕ್ಕರು?

ಮತ್ತೊಂದು ಕುತೂಹಲದ ಪ್ರಶ್ನೆ: ಆಗಿನ ಕಾಲದಲ್ಲಿ ಹೆಚ್ಚೆಂದರೆ ಪುಟ್ಟ ಹಾಗೂ ಹಿಂದುಳಿದ ಪಟ್ಟಣವಾಗಿದ್ದ ಬೆಂಗಳೂರಿನಲ್ಲಿ ಉದ್ಯಮಿಯಾಗಿದ್ದ ಅಜ್ಜನಿಗೆ, ಬಾಂಬೆ, ದೆಹಲಿ, ಕರಾಚಿ, ಮದ್ರಾಸ್ ಮೊದಲಾದ ಕಡೆಗಳ ದೊಡ್ಡ ಪತ್ರಿಕೆಗಳಲ್ಲಿ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡಿ, ರಾಷ್ಟ್ರಮಟ್ಟದಲ್ಲಿ ಖ್ಯಾತಿ ಗಳಿಸಿದ್ದ ಪೋಥನ್ ಜೋಸೆಫ್ ಅವರಂತಹ ಪತ್ರಕರ್ತರನ್ನು ಸಂಪಾದಕರನ್ನಾಗಿ ಕರೆತರಲು ಹೇಗೆ ಸಾಧ್ಯವಾಯಿತು? ಆ ಸಮಯದಲ್ಲಿ, ಮದ್ರಾಸಿನಲ್ಲಿ ಪತ್ರಿಕೋದ್ಯಮದ ಅವಕಾಶಗಳನ್ನು ಅನ್ವೇಷಿಸುತ್ತಿದ್ದ ತಮ್ಮ ಸ್ನೇಹಿತ ಪೋಥನ್ ಜೋಸೆಫ್ ಅವರಿಗೆ, ಹೊಸ ಹುದ್ದೆಯನ್ನು ದೊರಕಿಸಿ ಕೊಡುವ ಸಲುವಾಗಿ ರಾಮಸ್ವಾಮಿ ಮೊದಲಿಯಾರ್ ಅವರು, ಜೋಸೆಫ್ ಅವರ ಹೆಸರನ್ನು ಸೂಚಿಸಿರುವ ಸಾಧ್ಯತೆ ಹೆಚ್ಚಾಗಿದೆ ಎಂದು ಅನ್ನಿಸುತ್ತದೆ. ಆ ಮೊದಲು ಪತ್ರಿಕಾ ಯೋಜನೆಯಲ್ಲಿ ವೈಫಲ್ಯದ ಕಹಿ ಉಂಡಿದ್ದ ಅಜ್ಜ, ಪ್ರಸಿದ್ಧ ಸಂಪಾದಕರನ್ನು ಹೊಂದುವ ಅವಕಾಶವನ್ನು ಬಿಟ್ಟುಕೊಡಲಿಲ್ಲ ಎನ್ನುವುದನ್ನು ಊಹಿಸಿಕೊಳ್ಳುವುದು ಕಷ್ಟವೇನಲ್ಲ.

ಇದೆಲ್ಲವೂ ದಶಕಗಳ ಬಳಿಕ ಬೇರೆ, ಬೇರೆ ವ್ಯಕ್ತಿಗಳು ತಮ್ಮದೇ ಕಾರ್ಯಸೂಚಿ ಮತ್ತು ಉದ್ದೇಶಗಳನ್ನು ಇಟ್ಟುಕೊಂಡು ನೀಡಿರುವಂತಹ ತಾಳೆಯೇ ಆಗದ ಹೇಳಿಕೆಗಳು ಹಾಗೂ ಲಭ್ಯವಿರುವ ಪುರಾವೆಗಳ ಆಧಾರದ ಮೇಲೆ ನಡೆಸಿದ ವಿಶ್ಲೇಷಣೆಗಳಿಂದ ಘಟನಾವಳಿಗಳು ಹೀಗೆ ನಡೆದಿರಬಹುದು ಎಂದು ನಾನು ಮಾಡಿದ ಊಹೆಯಷ್ಟೆ. ನಿರ್ದಿಷ್ಟವಾಗಿ ಪತ್ರಿಕೆ ಆರಂಭವಾದ ಅವಧಿಯಲ್ಲಿನ ವ್ಯಕ್ತಿಗಳು ಅಥವಾ ಅವರ ಸಹವರ್ತಿಗಳ ಬೇರೆ ಇನ್ನಾವುದಾದರೂ ಸಂಬಂಧಿಸಿದ ಖಾಸಗಿ ಅಥವಾ ಸಾರ್ವಜನಿಕ ದಾಖಲೆ ಬೆಳಕಿಗೆ ಬರುವವರೆಗೂ ಬಹುಶಃ ಇದಷ್ಟೇ ಹೇಳಲಿಕ್ಕಾಗುವುದು. ವೃತ್ತಿಯ ಉತ್ತುಂಗದಲ್ಲಿದ್ದ ಪೋಥನ್ ಜೋಸೆಫ್, ಅದು ಯಾವುದೇ ಕಾರಣಕ್ಕಾಗಿ, ಹೆಚ್ಚೆಂದರೆ ಅನಿಶ್ಚಿತ ಭವಿಷ್ಯವಿದ್ದ ಹೊಸ ಪತ್ರಿಕೆಯ ಸಂಪಾದಕರಾಗಿ ಬಂದಿದ್ದರೂ, ಆ ಹುದ್ದೆಯಲ್ಲಿ ಒಂದು ದಶಕದವರೆಗೆ ಅವರು ಮುಂದುವರಿದಿದ್ದು ಹೊಸ ಉದ್ಯಮದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಇದಲ್ಲದೆ, ಹೊಸ ಪತ್ರಿಕೆಯನ್ನು ಶುರು ಮಾಡಿದ ಸಮಯ ಕೂಡ ಯಶಸ್ಸಿಗೆ ಅನುಕೂಲಕರವಾಗಿಯೇ ಇತ್ತು. ಇಂತಹ ಮಹತ್ವಾಕಾಂಕ್ಷೆಯ ಯೋಜನೆಯನ್ನು ಕಾರ್ಯಗತಗೊಳಿಸಲು ಮತ್ತು ಉಳಿಸಿಕೊಳ್ಳಲು ಅಜ್ಜನಿಗೆ ಬೇಕಾದ ಸಂಪನ್ಮೂಲ, ಆಸಕ್ತಿ ಮತ್ತು ಬದ್ಧತೆ ಎಲ್ಲವೂ ಇದ್ದವು. ಅಜ್ಜನ ವ್ಯವಸ್ಥಾಪಕರ ಪ್ರಕಾರ, ಎರಡನೇ ಜಾಗತಿಕ ಸಮರದ ಸಮಯದಲ್ಲಿ, ಕಳ್ಳು ವ್ಯವಹಾರದಲ್ಲಿ ಅವರು ಅಭೂತಪೂರ್ವ ಲಾಭವನ್ನು ಗಳಿಸಿದ್ದರು. ಇದರಿಂದ ಕಂಪನಿಯ ಬಹಳಷ್ಟು ಷೇರುಗಳನ್ನು ಹೊಂದಲು ಮತ್ತು ಅದರ ಮೇಲೆ ನಿಯಂತ್ರಣ ಸಾಧಿಸಲು ಅವರಿಗೆ ಸಾಧ್ಯವಾಯಿತು. ಸ್ವಾತಂತ್ರ್ಯವು ಆಗಷ್ಟೇ ಉದಯಿಸಿತ್ತು ಮತ್ತು ದೇಶ ನಿಧಾನವಾಗಿ ಪ್ರಜಾಪ್ರಭುತ್ವದ ಹಾದಿಯನ್ನು ಹಿಡಿದಿತ್ತು. ಆಗ ಶುರುವಾದ ಈ ಪತ್ರಿಕಾ ಕಂಪನಿಯು ಬೆಂಗಳೂರಿನ, ಮೈಸೂರು ರಾಜ್ಯದ, ಬಳಿಕ ಏಕೀಕೃತ ಕರ್ನಾಟಕದ ಮೊತ್ತಮೊದಲ ಪೂರ್ಣಪ್ರಮಾಣದ ಇಂಗ್ಲಿಷ್ ಪತ್ರಿಕೋದ್ಯಮ ಸಂಸ್ಥೆ ಎಂಬ ಹಿರಿಮೆಗೆ ಪಾತ್ರವಾಯಿತು. ಜಾಗತೀಕರಣದ ಜಗತ್ತಿನಲ್ಲಿ, ದೇಶದ ಮೆಟ್ರೊಪಾಲಿಟನ್ ನಗರಗಳಲ್ಲಿ ಒಂದಾಗುವ ಹಾದಿಯನ್ನು ಆಗಷ್ಟೇ ಹಿಡಿದಿದ್ದ ಬೆಂಗಳೂರು, ದೇಶದ ಐ.ಟಿ ಮತ್ತು ಆವಿಷ್ಕಾರಗಳ ರಾಜಧಾನಿ ಎನಿಸಿಕೊಳ್ಳುವ ರೂಪಾಂತರಕ್ಕೆ ನಿಧಾನವಾಗಿ ಸಜ್ಜಾಗಲು ಆರಂಭಿಸಿತ್ತು.

ಸವಾಲಿನ ದಿನಗಳಿಗೆ ಎದೆಗೊಟ್ಟ ಅಜ್ಜ

'ಡೆಕ್ಕನ್ ಹೆರಾಲ್ಡ್' ಮತ್ತು ಅದೇ ವರ್ಷ (1948) ಅಕ್ಟೋಬರ್ 15ರಂದು ಆರಂಭವಾದ 'ಪ್ರಜಾವಾಣಿ' ಪತ್ರಿಕೆಗಳ ಪ್ರಸರಣ ಸಂಖ್ಯೆ ನಿಧಾನವಾಗಿ ಬೆಳೆಯುತ್ತಿದ್ದರೂ ಸಂಸ್ಥೆಯ ಪಾಲಿಗೆ ಆರಂಭಿಕ ವರ್ಷಗಳು ಆರ್ಥಿಕವಾಗಿ ಮತ್ತು ಸಂಘಟನಾತ್ಮಕವಾಗಿ ಸವಾಲಿನ ದಿನಗಳೇ ಆಗಿದ್ದವು. ಅಜ್ಜನ ಪಾಲಿಗೆ ಇದೊಂದು ಹೊಸ ಉದ್ಯಮವಾಗಿದ್ದುದೂ ಇದಕ್ಕೆ ಒಂದು ಕಾರಣವಾಗಿತ್ತು. ಮಹಾತ್ಮ ಗಾಂಧಿ ರಸ್ತೆಯಲ್ಲಿನ ತಮ್ಮ ವೈಯಕ್ತಿಕ ಆಸ್ತಿಯನ್ನೇ ಕಂಪನಿಗಾಗಿ ಹೆಸರಿಗೆ ಮಾತ್ರ ಬಾಡಿಗೆಗೆ ಕೊಟ್ಟರು. ಕೆಲವು ವರ್ಷಗಳವರೆಗೆ ಬಡ್ಡಿರಹಿತ ಸಾಲವನ್ನೂ ಈ ಕಂಪನಿಗೆ ಒದಗಿಸಿದರು. ಒಂದು ಹಂತದಲ್ಲಿ ವೆಂಕಟಸ್ವಾಮಿಯವರೂ ಸೇರಿದಂತೆ ಎಲ್ಲರೂ ನಷ್ಟಕ್ಕೆ ಕಡಿವಾಣ ಹಾಕಲು ಪತ್ರಿಕೆಗಳನ್ನು ಮುಚ್ಚುವಂತೆ ಸಲಹೆ ನೀಡಿದಾಗಲೂ ಅಜ್ಜ ಮಾತ್ರ ಹತಾಶೆಯನ್ನು ಮೆಟ್ಟಿ, ತಮ್ಮ ನಿರ್ಧಾರಕ್ಕೆ ತುಂಬಾ ಗಟ್ಟಿಯಾಗಿ ಅಂಟಿಕೊಂಡು ನಿಂತಿದ್ದರು ಎಂದು ನಮ್ಮ ಪತ್ರಿಕೆಗಳಲ್ಲಿದ್ದ ಹಿರಿಯ ಪತ್ರಕರ್ತರು ನನಗೆ ತಿಳಿಸಿದ್ದರು.

ಮೊದಲ ಒಂದು ದಶಕದ ಬಳಿಕ ಕಂಪನಿಯು ಸ್ಥಿರತೆಯನ್ನು ಸಾಧಿಸಿತಾದರೂ ಗಣನೀಯ ಲಾಭ ಮಾಡಲು ಅದಕ್ಕೆ ಮತ್ತೆ 20 ವರ್ಷಗಳು ಬೇಕಾದವು. ಆ ವೇಳೆಗೆ, 1960ರ ದಶಕದ ಮಧ್ಯಭಾಗದಲ್ಲಿ, ಶುರುಮಾಡಿದ್ದ ಕನ್ನಡ ನಿಯತಕಾಲಿಕಗಳಾದ 'ಸುಧಾ' ಮತ್ತು 'ಮಯೂರ' ಬೆಂಗಳೂರು ಮಾತ್ರವಲ್ಲದೆ ರಾಜ್ಯದಲ್ಲೂ ಅಗ್ರಸ್ಥಾನವನ್ನು ಗಳಿಸಿದ್ದವು. 1990ರಲ್ಲಿ, ಅಜ್ಜ ತಮ್ಮ 89ನೇ ವಯಸ್ಸಿನಲ್ಲಿ ತೀರಿಕೊಳ್ಳುವ ಹೊತ್ತಿಗೆ ಕಂಪನಿಯ ಚೇರ್‌ಮನ್ ಹಾಗೂ ಆಡಳಿತ (ಮುಂದೆ ವ್ಯವಸ್ಥಾಪಕ) ನಿರ್ದೇಶಕರಾಗಿ 42 ವರ್ಷಗಳವರೆಗೆ ಮಾರ್ಗದರ್ಶನವನ್ನು ಮಾಡಿದ್ದರು.

ಅಜ್ಜ, ತಮ್ಮ ವ್ಯವಹಾರಗಳಲ್ಲಿ ಕೆಲವು ತತ್ವಗಳಿಗೆ ತುಂಬಾ ಬಲವಾಗಿ ಅಂಟಿಕೊಂಡಿದ್ದರು. ಇದೇ ಕಾರಣದಿಂದ 1960ರ ದಶಕದಲ್ಲಿ ಕಳ್ಳು ವ್ಯವಹಾರದಿಂದಲೇ ಹಿಂದೆ ಸರಿದರು. ಏಕೆಂದರೆ, ಕ್ಲೋರಲ್ ಹೈಡ್ರೇಟ್ ರಾಸಾಯನಿಕ ಆರೋಗ್ಯಕ್ಕೆ ಹಾನಿಕಾರಕವೆಂದು ಪರಿಗಣಿಸಲ್ಪಟ್ಟದ್ದರಿಂದ ಹೆಂಡದಲ್ಲಿ ಅದನ್ನು ಮಿಶ್ರಣ ಮಾಡಲು ಅವರು ಬಯಸಲಿಲ್ಲ. ಹೀಗಾಗಿ ಹರಾಜಿನಲ್ಲಿ ಉಳಿದ ಬಿಡ್ಡರ್‌ಗಳೊಂದಿಗೆ ಸ್ಪರ್ಧಿಸುವುದು ಅವರಿಗೆ ಸಾಧ್ಯವಾಗಲಿಲ್ಲ. ಅಜ್ಜ, ತಮ್ಮ ಹರಾಜಿನ ಮೊತ್ತ ಮತ್ತು ತೆರಿಗೆಯನ್ನು ಸರ್ಕಾರಕ್ಕೆ ಯಾವಾಗಲೂ ಸಕಾಲದಲ್ಲೇ ಪಾವತಿಸುತ್ತಿದ್ದರು. ಉಳಿದವರು ಹರಾಜಿನ ಮೊತ್ತವನ್ನು ತುಂಬುವುದನ್ನು ವಿಳಂಬ ಮಾಡುತ್ತಿದ್ದರು ಮತ್ತು ಕೊಡಬೇಕಾದ ಬಾಕಿ ಮನ್ನಾ ಮಾಡಿಸಿಕೊಳ್ಳಲು ಹಾತೊರೆಯುತ್ತಿದ್ದರು. ಇಂತಹ ಸನ್ನಿವೇಶದಲ್ಲಿ ಇತರರೊಂದಿಗೆ ಅವರು ಸ್ಪರ್ಧಾತ್ಮಕವಾಗಿ ಹರಾಜಿನಲ್ಲಿ ಪಾಲ್ಗೊಳ್ಳುವುದು ಕಷ್ಟವಾಗಿತ್ತು. 1980ರ ದಶಕದ ಮಧ್ಯಭಾಗದಲ್ಲಿ ಅದಾಗಲೇ ತೀವ್ರ ಮುಪ್ಪಿನಲ್ಲಿದ್ದು, ಆ ವೇಳೆಗೆ ವೆಂಕಟಸ್ವಾಮಿ ಸಹ ತೀರಿ ಹೋಗಿದ್ದರಿಂದ ಸಾರಾಯಿ ವ್ಯವಹಾರದಿಂದ ಅವರು ಸಂಪೂರ್ಣವಾಗಿ ಹೊರಬರಬೇಕಾಯಿತು. ಹೀಗಿರುವಾಗ, ಆ ಸಂದರ್ಭದಲ್ಲಿ ನಾನು ಅವರಿಗೆ ನಷ್ಟ ಆಗುತ್ತಾ ಇರುವ ಸಾರಾಯಿ ಕಂಪನಿಯಿಂದ ಹೊರಬರಬೇಕು ಎಂದು ಸಲಹೆ ಮಾಡಿದ ಸನ್ನಿವೇಶದಲ್ಲಿ, ಒಬ್ಬರು ಪ್ರಮುಖ ಪಾಲುದಾರರು, 'ಅಜ್ಜನಿಗೆ ಪಿತ್ರಾರ್ಜಿತ ವ್ಯವಹಾರದಲ್ಲಿ ಭಾವನಾತ್ಮಕ ನಂಟು ಇರಬಹುದಾದ್ದರಿಂದ ಅವರನ್ನು ಮತ್ತೆ ಕೇಳಿ ನೋಡಿ' ಎಂದಿದ್ದರೆಂಬುದನ್ನು ಹೇಳಿದಾಗ, ಆ ಮಾತನ್ನು ತಳ್ಳಿಹಾಕಿ ತಮ್ಮದೇ ನಿರ್ಧಾರವನ್ನು ಮತ್ತೊಮ್ಮೆ ಹೇಳಿದ್ದರು.

ಅಜ್ಜನೊಂದಿಗೆ ಕೆಲಸ ಮಾಡಿದ ನನ್ನ ಅನುಭವದ ಮೇಲೆ ಹೇಳುವುದಾದರೆ ಉದ್ಯಮ ಹಾಗೂ ಆಡಳಿತ ವಿಚಾರಗಳಲ್ಲಿ ಅವರಿಗೆ ಸ್ಪಷ್ಟ ದರ್ಶನ ಇತ್ತು. ಗುರಿ ನಿಗದಿ ಹಾಗೂ ನಿರ್ಧಾರ, ನಿರ್ದೇಶನ, ಆದೇಶಗಳನ್ನು ನೀಡುವಲ್ಲಿ ಸ್ಪಷ್ಟತೆ ಇತ್ತು. ಆಜ್ಞೆಗಳನ್ನು ಮಾಡಲೆಂದೇ ಜನಿಸಿದಂತಿದ್ದ ಅಜ್ಜ, ತಮ್ಮ ಆಜ್ಞೆಗಳೆಲ್ಲ ಪರಿಪಾಲನೆ ಆಗುವಂತೆಯೂ ನೋಡಿಕೊಳ್ಳುತ್ತಿದ್ದರು. ಪತ್ರಿಕೆಯ ಶಕ್ತಿ ಏನೆಂಬುದು ಅವರಿಗೆ ಸಂಪೂರ್ಣವಾಗಿ ಗೊತ್ತಿತ್ತು ಮತ್ತು ಹಾಗೆಯೇ ತಮ್ಮ ಪತ್ರಿಕೆಗಳು ರೂಪುಗೊಳ್ಳುವಂತೆ ನಿರ್ದೇಶಿಸುತ್ತಿದ್ದರು. 'ಪತ್ರಿಕೆ ಅತ್ಯಂತ ಶಕ್ತಿಶಾಲಿ ಸಾಧನವಾಗಿದೆ. ಅದರಿಂದ ಯಾರಾದರೂ ದೇಶವನ್ನೂ ವಿಭಜನೆ ಮಾಡಬಹುದು (The press is a very powerful instrument. One can divide a nation with it)' ಎಂದು, ಅವರು ತಮ್ಮದೇ ಮಾತುಗಳಲ್ಲಿ ಹೇಳುತ್ತಿದ್ದರು.

'ಡೆಕ್ಕನ್ ಹೆರಾಲ್ಡ್'ನ ಸಂಪಾದಕರಾಗಿದ್ದ ವಿ.ಕೆ. ನರಸಿಂಹನ್ ಅವರು 1980ರಲ್ಲಿ ನಿವೃತ್ತಿ ಹೊಂದುವಾಗ ಅಜ್ಜನಿಗೆ, 'ನಿಮಗೆ ಪಕ್ಕಾ ಉದ್ಯಮಿಯ ಮೂಲ ಪ್ರವೃತ್ತಿ ಇದೆ' ಎಂದಿದ್ದರು. ಅಜ್ಜನ ಈ ಸ್ವಭಾವವೇ ಜೀವನಪರ್ಯಂತ ಅವರ ಯಶಸ್ಸಿನ ಹಿಂದಿದ್ದ ಗುಟ್ಟಾಗಿತ್ತು ಎನ್ನುವುದು ನನ್ನ ಅಭಿಮತ. 1980ರ ದಶಕದ ಮಧ್ಯಭಾಗದಲ್ಲಿ 'ನಾವು ಪತ್ರಿಕೋದ್ಯಮದಲ್ಲಿ ಗಳಿಸುತ್ತಿರುವ ಗಣನೀಯ ಪ್ರಮಾಣದ ಲಾಭವನ್ನು ಹೊಸ ವ್ಯವಹಾರಗಳಲ್ಲಿ ತೊಡಗಿಸಲು ಉದ್ದೇಶಿಸಿದ್ದೇವೆ' ಎಂದು ನಾನು ಅಜ್ಜನಿಗೆ ಹೇಳಿದಾಗ, ಅದಕ್ಕೆ ಅವರು ನನ್ನನ್ನು ಹೀಯಾಳಿಸುತ್ತಾ, 'ಹೊಸ ವ್ಯವಹಾರ ಶುರು ಮಾಡುವ ಯೋಚನೆ ಬಿಡಿ, ನಾನು ಕಟ್ಟಿ ಬೆಳೆಸಿದ ಉದ್ಯಮವನ್ನು ನೀವು ಮೂವರೂ (ಅಣ್ಣ-ತಮ್ಮಂದಿರು) ಜಗಳವಾಡದೆ ಮುಂದುವರಿಸಿಕೊಂಡು ಹೋದರೆ ಅದೇ ಒಂದು ದೊಡ್ಡ ಸಾಧನೆ' ಎಂದಿದ್ದರು. ಅವರದು ಮುನ್ನರಿವಿನ ಮಾತು.

ಸಾರ್ವಜನಿಕ ರಂಗದಲ್ಲೂ ಹೆಜ್ಜೆ ಗುರುತು

ಅಜ್ಜ, ತಮ್ಮ ಈಡಿಗ ಅಥವಾ ಕಳ್ಳು ಇಳಿಸುವ ಸಮುದಾಯದ ಸಮಾಜೋ-ಆರ್ಥಿಕ ಮತ್ತು ರಾಜಕೀಯ ಉನ್ನತಿಗಾಗಿ ಆ ಸಮುದಾಯವನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಮೂಲಕ ಸಾರ್ವಜನಿಕ ರಂಗಕ್ಕೂ ಕಾಲಿಟ್ಟರು. 1944ರಲ್ಲಿ ಮೈಸೂರು ಆರ್ಯ ಈಡಿಗರ ಸಂಘ ಸ್ಥಾಪನೆಯಾದಾಗ ಅಜ್ಜನೇ ಅದರ ಮೊತ್ತಮೊದಲ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ಏಕೀಕೃತ ಮೈಸೂರು/ಕರ್ನಾಟಕ ರಾಜ್ಯದಲ್ಲಿ ಈ ಸಮುದಾಯ ಎದುರಿಸುತ್ತಿದ್ದ ಸಮಸ್ಯೆಗಳನ್ನು ಆಡಳಿತ ವ್ಯವಸ್ಥೆಯ ಗಮನಕ್ಕೆ ತಂದು, ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಅಜ್ಜನೇ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಎರಡು ಬಾರಿ -1958 ಮತ್ತು 1961ರಲ್ಲಿ- ಸಮುದಾಯದ ರಾಜ್ಯಮಟ್ಟದ ಸಮಾವೇಶಗಳನ್ನೂ ಸಂಘಟಿಸಲಾಗಿತ್ತು. ದಕ್ಷಿಣದ ನೆರೆಯ ರಾಜ್ಯಗಳ ಕಳ್ಳು ಇಳಿಸುವ ಸಮುದಾಯಗಳೊಂದಿಗೆ ರಾಜ್ಯದ ಈಡಿಗರ ಸಂಬಂಧ ಬೆಸೆಯುವ ಕೆಲಸವನ್ನೂ ಈ ಸಮಾವೇಶವು ಮಾಡಿತ್ತು. ಬರಲಿದ್ದ ಹೆಂಡ ನಿಷೇಧ ನೀತಿಯಿಂದ ಸಂಕಷ್ಟಕ್ಕೆ ಸಿಲುಕಲಿದ್ದ, ಅದೇ ವೃತ್ತಿಯನ್ನು ನಂಬಿಕೊಂಡಿದ್ದ ಸಮುದಾಯದ ಜನರ ಜೀವನ ನಿರ್ವಹಣೆಗಾಗಿ ಪರ್ಯಾಯ ವ್ಯವಸ್ಥೆ ಮಾಡಬೇಕು ಎನ್ನುವುದು ಸಮಾವೇಶದ ಪ್ರಮುಖ ಬೇಡಿಕೆಯಾಗಿತ್ತು. ಸಂಘದಿಂದ ಬೆಂಗಳೂರು ಮತ್ತು ಬಳ್ಳಾರಿಯಲ್ಲಿ ವಿದ್ಯಾರ್ಥಿಗಳ ವಸತಿನಿಲಯ ಸ್ಥಾಪನೆಯಾಗುವಂತೆಯೂ ಅಜ್ಜ ನೋಡಿಕೊಂಡಿದ್ದರು. ಈಡಿಗ ಸಮುದಾಯವನ್ನು ಹಿಂದುಳಿದ ವರ್ಗಗಳಲ್ಲಿ ಒಂದಾಗಿ ಪರಿಗಣಿಸಿದ್ದರೂ 1920ರ ನಂತರದ ಕಾಲಘಟ್ಟದಲ್ಲಿ ಮೈಸೂರು ಸಂಸ್ಥಾನದಲ್ಲಿ ರೂಪುಗೊಂಡ ಹಿಂದುಳಿದ ವರ್ಗಗಳ ಆಂದೋಲನದಲ್ಲಿ ಅವರೇನೂ ಪಾಲ್ಗೊಳ್ಳಲಿಲ್ಲ. ಹಾಗೆಯೇ ಸ್ವಾತಂತ್ರ್ಯಪೂರ್ವ ಇಲ್ಲವೆ ಸ್ವಾತಂತ್ರ್ಯೋತ್ತರದ ರಾಜ್ಯ ರಾಜಕೀಯದಲ್ಲೂ ಅವರು ಭಾಗಿಯಾಗಲಿಲ್ಲ. ಆಧುನಿಕ ರಾಜಕೀಯ ವ್ಯವಸ್ಥೆಯ ಕುರಿತು ಅವರಿಗೆ ಆಸಕ್ತಿಯಾಗಲಿ, ಒಲವಾಗಲಿ ಇರಲಿಲ್ಲ. ಅಜ್ಜನ ಮತ್ತೊಂದು ಸಾಮಾಜಿಕ ತೊಡಗುವಿಕೆಯೆಂದರೆ ಅವರು ಫ್ರೀಮೇಸನ್ ಆಗಿದ್ದರು. ಬೆಂಗಳೂರಿನ 'ಲಾಡ್ಜ್ ಸ್ಟಾರ್ ಆಫ್ ದಿ ಸೌತ್ ನಂ. 101'ರ ಮಾಸ್ಟರ್ ಆಗಿ ಮೂರು ಬಾರಿ (1934, 1971 ಮತ್ತು 1972) ಹೊಣೆಯನ್ನು ನಿಭಾಯಿಸಿದ್ದರು.

ಟಿಪ್ಪು ಸುಲ್ತಾನನನ್ನು ತೀವ್ರವಾಗಿ ಮೆಚ್ಚಿದ್ದ ಅಜ್ಜ, ಆತನೊಬ್ಬ ಬ್ರಿಟಿಷರ ವಿರುದ್ಧ ಹೋರಾಡಿದ ಮಹಾನ್ ಯೋಧ ಎಂದು ಮೆಚ್ಚುತ್ತಾ ಟಿಪ್ಪುವಿನಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದರು. ಟಿಪ್ಪುವಿನ ಜೀವನದ ಮಹತ್ವದ ಘಟ್ಟಗಳ ಕಥೆ ಹೇಳುವ ಕೆತ್ತನೆಯ ನಾಲ್ಕು ದೊಡ್ಡ ಚಿತ್ರಗಳನ್ನು ನಮ್ಮ ಮನೆಯ ಉಪ್ಪರಿಗೆಯ ಊಟದ ಕೋಣೆಯ ಗೋಡೆಗಳ ಮೇಲೆ ತೂಗು ಹಾಕಲಾಗಿತ್ತು. ಮಹಾತ್ಮ ಗಾಂಧಿಯನ್ನು ಒಬ್ಬ ಸನ್ಯಾಸಿ ಎನ್ನುತ್ತಿದ್ದ ಅಜ್ಜ, ಅವರ ಬಗ್ಗೆ ಅಪಾರ ಗೌರವವನ್ನೂ ಹೊಂದಿದ್ದರು. ಆದರೆ, ಆಡಳಿತದ ಮತ್ತು ಲೌಕಿಕ ಚಟುವಟಿಕೆಗಳಲ್ಲಿ ಸದಾಕಾಲ ಅಹಿಂಸೆಯು ಸರಿಯಾದ ಮತ್ತು ಪರಿಣಾಮಕಾರಿಯಾದ ಮಾರ್ಗವಾಗಬಲ್ಲುದೇ ಎಂದು ಅವರು ಸಂಶಯ ವ್ಯಕ್ತಪಡಿಸುತ್ತಿದ್ದರು. ರಾಜಮನೆತನಗಳ ಬಗೆಗೆ ಅಪಾರ ಅಭಿಮಾನವನ್ನು ಹೊಂದಿದ್ದ ಅಜ್ಜ, ರಾಜರಂತೆಯೇ ಬದುಕಲು ಯತ್ನಿಸಿದ್ದರು.

ಅಜ್ಜನ ಬಹುತೇಕ ಸ್ನೇಹಿತರು ಉದ್ಯಮಿಗಳು. ಕೆಲವರು, ಶ್ರೀಮಂತ ಕುಟುಂಬದವರು ಮತ್ತು ರಾಜಮನೆತನದವರೂ ಇದ್ದರು. ಅವರ ಬಗ್ಗೆ ಅಜ್ಜನಿಗೆ ವಿಸ್ಮಯಭರಿತ ಅಪಾರ ಗೌರವವಿರುತ್ತಿತ್ತು. ಅವರ ಸ್ನೇಹವರ್ಗದಲ್ಲಿ ಕೆಲವರು ಹಿರಿಯ ನ್ಯಾಯಾಧೀಶರು ಮತ್ತು ಅಧಿಕಾರಿಗಳೂ ಇದ್ದರು. ಕೆಲವೊಮ್ಮೆ ತಮ್ಮ ವ್ಯವಹಾರದಲ್ಲಿ ಅವರನ್ನೂ ತೊಡಗಿಸಿಕೊಳ್ಳುತ್ತಿದ್ದರು. ತಮ್ಮ ಸ್ನೇಹಿತರಾಗಿದ್ದ ಹಿಂದುಪುರದ ಖಾನ್ ಬಹದ್ದೂರ್ ಬುಡನ್ ಸಾಹೇಬ್ ಅವರಿಗೆ ಪತ್ರಿಕಾ ಕಂಪನಿಯಲ್ಲಿ ಅವರು ಷೇರು ನೀಡಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಮೈಸೂರು ಸಂಸ್ಥಾನ ಮತ್ತು ಅದಕ್ಕೆ ಸಂಬಂಧಿಸಿದ ವಿವಿಧ ಆಡಳಿತ ಸಂಸ್ಥೆಗಳ ಹಿರಿಯ ಆಡಳಿತಗಾರರು ಹಾಗೂ ಜನನಾಯಕರ ಬಗೆಗೆ ಅಜ್ಜ ಗೌರವವನ್ನು ಹೊಂದಿದ್ದರೂ ಸ್ವಾತಂತ್ರ್ಯಪೂರ್ವದಲ್ಲೂ ಸ್ವಾತಂತ್ರ್ಯಾನಂತರವೂ ಕಾಂಗ್ರೆಸ್ ಹಾಗೂ ಇತರ ರಾಜಕಾರಣಿಗಳಿಂದ ಅವರು ಬಹುಮಟ್ಟಿಗೆ ದೂರವೇ ಇದ್ದರು. ಸ್ವಾತಂತ್ರ್ಯಾನಂತರದ ಸ್ಥಿತಿಗತಿಗಳ ಕುರಿತು ಒಮ್ಮೊಮ್ಮೆ ಭ್ರಮನಿರಸನಗೊಂಡು 'ಒಂದು ರೀತಿಯಲ್ಲಿ ಬ್ರಿಟಿಷರ ಆಡಳಿತವೇ ಎಷ್ಟೋ ಉತ್ತಮವಾಗಿತ್ತು. ಕನಿಷ್ಠಪಕ್ಷ ಅವರು ಕೆಲವು ನಿಯಮಗಳಿಗಾದರೂ ಅಂಟಿಕೊಂಡಿದ್ದರು' ಎನ್ನುತ್ತಿದ್ದರು.

ಸಂಪ್ರದಾಯಸ್ಥ ಹಿಂದೂ, ಉದಾರ ದೇಣಿಗೆದಾರ

ಅಜ್ಜ ಸಂಪ್ರದಾಯಸ್ಥ ಮತ್ತು ವಿಧಿವಿಧಾನಗಳನ್ನು ಆಚರಿಸುವ ಹಿಂದೂವಾಗಿದ್ದರು. ನಮ್ಮ ಮನೆಯಲ್ಲಿ ಯುಗಾದಿ ಮತ್ತು ಆಯುಧ ಪೂಜೆ ಎರಡೂ ಹಬ್ಬಗಳನ್ನು ಆಚರಿಸಲಾಗುತ್ತಿತ್ತು. ಯುಗಾದಿ ಸಂದರ್ಭದಲ್ಲಿ ಮನೆಯನ್ನು ಸಂಪೂರ್ಣವಾಗಿ ಶುಚಿಗೊಳಿಸಲಾಗುತ್ತಿತ್ತು ಮತ್ತು ಮನೆ ಮಂದಿಯೆಲ್ಲ ಹೊಸ ಬಟ್ಟೆಯನ್ನು ಧರಿಸುತ್ತಿದ್ದರು. ಕುಲದೈವಕ್ಕೆ ಪೂಜೆ ಸಲ್ಲಿಸುವುದಲ್ಲದೆ ಅಜ್ಜನ ಅಪ್ಪ-ಅಮ್ಮ ಹಾಗೂ ಇತರ ಹಿರಿಯ ಸಂಬಂಧಿಗಳ ಸಮಾಧಿಗಳಿರುವ ಸ್ಥಳಕ್ಕೆ ತೆರಳಿ, ಗೌರವ ಸಲ್ಲಿಸಿ ಬರಬೇಕಿತ್ತು. ಆಯುಧ ಪೂಜೆಯ ಸಮಯದಲ್ಲಿ ರೈಫಲ್‌ಗಳು, ಶಾಟ್‌ಗನ್‌ಗಳು, ರಿವಾಲ್ವರ್‌ಗಳು, ಪಿಸ್ತೂಲ್‌ಗಳು, ಕತ್ತಿಗಳು, ಕಠಾರಿಗಳು ಸೇರಿದಂತೆ ಶಸ್ತ್ರಾಸ್ತ್ರ ಸಂಗ್ರಹಾಗಾರದಲ್ಲಿದ್ದ ಎಲ್ಲ ಆಯುಧಗಳಿಗೆ, ವಾಹನಗಳಿಗೆ ಪೂಜೆ ಸಲ್ಲಿಸಲಾಗುತ್ತಿತ್ತು. ಈ ಸಂದರ್ಭದಲ್ಲಿ ಕುರಿಯನ್ನು ಮಚ್ಚಿನಿಂದ ಒಂದೇ ಏಟಿಗೆ ಹೊಡೆದು ಬಲಿ ಕೊಟ್ಟು, ಅದರ ರಕ್ತವನ್ನು ಎಲ್ಲ ವಾಹನಗಳ ಮೇಲೆ ವಿಧಿಯುಕ್ತವಾಗಿ ಲೇಪಿಸಲಾಗುತ್ತಿತ್ತು. ಹಲವು ಹಿಂದೂ ಮಠಗಳು ಮತ್ತು ದೇವಸ್ಥಾನಗಳಿಗೆ ಮಾತ್ರವಲ್ಲದೆ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಿಗೂ ಅಜ್ಜ ದೇಣಿಗೆಯನ್ನು ನೀಡುತ್ತಿದ್ದರು.

ಅಜ್ಜನಿಗೆ ಕೆಲವು ಸಣ್ಣಪುಟ್ಟ ವಿಲಕ್ಷಣ ದೋಷಗಳಿದ್ದವು, ದೌರ್ಬಲ್ಯಗಳೂ ಇದ್ದವು. ಆಗ ವಿವೇಚನೆ ಇಲ್ಲದೆ ಅವರು ವರ್ತಿಸುತ್ತಿದ್ದುದುಂಟು. ಸುಖದ ಸುಪ್ಪತ್ತಿಗೆಯಲ್ಲಿ, ಐಷಾರಾಮಿ ವಾತಾವರಣದಲ್ಲಿ ಮತ್ತು ಸೇವಕರ ಮಧ್ಯೆ ಬೆಳೆದಿದ್ದ ಅವರು, ಜೀವನದಲ್ಲಿ ಕಠೋರ ಸತ್ಯಗಳು ಧುತ್ತೆಂದು ಎದುರಾದಾಗ ಮಂಕಾಗುತ್ತಿದ್ದರು. ವೃದ್ಧಾಪ್ಯದವರೆಗೆ ಅವರಲ್ಲಿ ಮಗುವಿನಂತಹ ಮುಗ್ಧ ಅಹಂಭಾವ ಮತ್ತು ಆತ್ಮಪ್ರಶಂಸೆಯ ಸ್ವಭಾವ ಜಾಗೃತವಾಗಿತ್ತು. ಹೊಗಳಿಕೆಯಿಂದ ಅವರು ಸುಲಭವಾಗಿ ಮೈಮರೆಯುತ್ತಿದ್ದರು. ಸಮಾಜ ಮತ್ತು ಜನರೊಂದಿಗೆ ಅಂತರ ಕಾಯ್ದುಕೊಂಡು ಬಂದಿದ್ದರಿಂದ ಹಾಗೂ ಹೊರಜಗತ್ತಿನೊಂದಿಗೆ ಸಂಪರ್ಕವನ್ನು ಹೊಂದಲು ತಮ್ಮ ನಿಕಟ ವಲಯವನ್ನೇ ಸಂಪೂರ್ಣವಾಗಿ ಆಶ್ರಯಿಸಿದ್ದರಿಂದ ಎಷ್ಟೋ ಸಂದರ್ಭಗಳಲ್ಲಿ ವಾಸ್ತವಿಕ ಸನ್ನಿವೇಶದ ಅರಿವು ಅವರಿಗೆ ಇರುತ್ತಿರಲಿಲ್ಲ. ಮತ್ತೊಬ್ಬರ ಗುಣಸ್ವಭಾವವನ್ನು ಸರಿಯಾಗಿ ಗುರುತಿಸುವಲ್ಲಿ ವಿಫಲರಾಗಿ ಎಲ್ಲರನ್ನೂ ಸುಲಭವಾಗಿ ನಂಬುತ್ತಿದ್ದರಿಂದ, ಅವರ ಸಂಪರ್ಕ ಸಾಧಿಸಿದ್ದ ಯಾರು ಬೇಕಾದರೂ ತಮ್ಮ ಅನುಕೂಲಕ್ಕೆ ತಕ್ಕಂತೆ ಅವರನ್ನು ಬಳಸಿಕೊಳ್ಳಬಹುದಿತ್ತು. ಅಂಥವರಿಂದಾಗಿ ಅಜ್ಜನ ಕುಟುಂಬ ಹಾಗೂ ಸ್ನೇಹದ ಸಂಬಂಧಗಳು ಹಾಳಾದದ್ದೂ ಉಂಟು. ಅದರ ಹೊರತಾಗಿಯೂ ಕೆಲವು ಸಂಬಂಧಗಳು ಬಾಳಿದವು.


ಪ್ರಜಾವಾಣಿಯ ಮೊದಲ ಸಂಪಾದಕ ಬಿ.ಪುಟ್ಟಸ್ವಾಮಯ್ಯ

ಪ್ರಜಾವಾಣಿಯ ಸಂಪಾದಕರಾಗಿದ್ದ ಟಿ.ಎಸ್. ರಾಮಚಂದ್ರ ರಾವ್

ಅತ್ಯುತ್ಸಾಹದ ಲವಲವಿಕೆಯಲ್ಲಿ, ವೈಭವಯುತವಾಗಿ ಬಾಳಿದ ಅಜ್ಜ, ಬದುಕು ನೀಡಬಹುದಾದ ವೈವಿಧ್ಯಮಯ ಭೋಗಗಳನ್ನು ಆಳವಾಗಿ ಅನುಭವಿಸಿದ್ದರು. ಆದರೂ ಎಂದಿಗೂ ಮಿತಿ ಮೀರಲಿಲ್ಲ. ಸಾಮಾಜಿಕ ಚಟುವಟಿಕೆಗಳಲ್ಲಿ ತುಂಬಾ ತೊಡಗಿಕೊಳ್ಳುತ್ತಿದ್ದರು ಅಜ್ಜ. ಸಮಾಜದ ಗಣ್ಯರಲ್ಲಿ ಹಲವರು ಸ್ನೇಹಿತರನ್ನು ಹೊಂದಿದ್ದ ಅವರು, ದೊಡ್ಡ ಔತಣಕೂಟಗಳನ್ನೂ ಏರ್ಪಡಿಸುತ್ತಿದ್ದರು. ಒಳ್ಳೆಯ ಭೋಜನವನ್ನು ಅವರು ಆನಂದಿಸುತ್ತಿದ್ದರು. ಬೇರೆಯವರ ಮನೆಗಳಿಗೆ, ಔತಣಕೂಟಗಳಿಗೆ ಹೋದಾಗ ಇಷ್ಟವಾದ ತಿಂಡಿ ತಿನಿಸುಗಳ ಪಾಕ ವಿಧಾನದ ವಿವರವನ್ನೂ ಪಡೆದುಕೊಳ್ಳುತ್ತಿದ್ದರು. ಮನೆಯಲ್ಲಿ ಅಡುಗೆಯವರಿಂದ ಅದೇ ಖಾದ್ಯಗಳನ್ನು ಮಾಡಿಸುತ್ತಿದ್ದರು. ಹೀಗಾಗಿ ನಮಗೆ ಮನೆಯಲ್ಲಿ ವಿವಿಧ ಪ್ರದೇಶಗಳು ಮತ್ತು ಸಮುದಾಯಗಳ ಸ್ವಾದಿಷ್ಟವಾದ ಭಕ್ಷ್ಯ ಸವಿಯಲು ಸಿಗುತ್ತಿತ್ತು. ಪ್ರತಿದಿನ ಸಂಜೆಯಾದರೆ ಸಾಕು, ಅಜ್ಜ ವಿಸ್ಕಿಯನ್ನು ಆನಂದಿಸುತ್ತಿದ್ದರು. ವಿಶಾಲ ಹೃದಯದ, ದಯಾ ಗುಣದ ಅಜ್ಜ, ಸಂಬಂಧಿಗಳು ಮತ್ತು ಸ್ನೇಹಿತರ ವಿಷಯದಲ್ಲಿ ಉದಾರವಾಗಿ ನಡೆದುಕೊಳ್ಳುತ್ತಿದ್ದರು. ಯಾರಿಗೂ ಯಾವುದೇ ರೀತಿಯಲ್ಲಿ ಅವರು ತೊಂದರೆ ಬಯಸಲಿಲ್ಲ. ಅಜ್ಜ, ತಮ್ಮ ಉದ್ಯೋಗಿಗಳ ಪಾಲಿಗೆ ಪಿತೃಸಮಾನರಾಗಿದ್ದರು. ಅವರಲ್ಲಿ ಹೆಚ್ಚಿನವರು ಮನೆಯಲ್ಲಿ ಮತ್ತು ಅವರ ಉದ್ಯಮದಲ್ಲಿ ಜೀವನಪೂರ್ತಿ ಜೊತೆಯಾಗಿದ್ದರು. 'ಒಂದು ಹಂತದಲ್ಲಿ ನೀವು ತೃಪ್ತಭಾವ ಹೊಂದಲೇಬೇಕು. ಇಲ್ಲದಿದ್ದರೆ ಅಸೂಯೆಯನ್ನು ಬೆಳೆಯಲು ಬಿಟ್ಟು, ಸದಾ ಅತೃಪ್ತರಾಗಿಯೇ ಸುಖ ಇಲ್ಲದವರಾಗಿ ಉಳಿಯುತ್ತೀರಿ' ಎಂದು ನಮಗೆ ಹೇಳುತ್ತಿದ್ದರು. ತಮ್ಮ ತೃಪ್ತಭಾವದಿಂದಾಗಿ ಕ್ಷೇಮವಾಗಿದ್ದರು ಅವರು. ಎಂತಹ ಬಿಕ್ಕಟ್ಟಿನ ಸಂದರ್ಭದಲ್ಲೂ 'ನಾನು ಚೆನ್ನಾಗಿ ನಿದ್ರೆ ಮಾಡಿದೆ' ಎಂದು ಅವರು ಹೇಳುತ್ತಿದ್ದರು. ತುಂಬಾ ಮುಪ್ಪಿನ ದಿನಗಳವರೆಗೂ ಅಜ್ಜ ಒಳ್ಳೆಯ ಆರೋಗ್ಯವನ್ನು ಹೊಂದಿದ್ದರು.

ಕೆಲವು ಅಸಾಧಾರಣ ವಸ್ತುಗಳು ಅಜ್ಜನ ಹೆಗ್ಗುರುತುಗಳಾಗಿದ್ದವು. ಅವರ ಬೆರಳಿನಲ್ಲಿದ್ದ ತುಂಬಾ ದೊಡ್ಡದಾದ ಒಂಟಿ ವಜ್ರದ ಉಂಗುರ, ಸದಾ ಧರಿಸುತ್ತಿದ್ದ ಬಿಳಿಬಣ್ಣದ ಕಚ್ಚೆ ಪಂಚೆ ಮತ್ತು ಕ್ಲೋಸ್ಡ್ ಕಾಲರ್ ಕೋಟ್, ತಲೆಯ ಮೇಲೆ ಸುತ್ತಿಕೊಳ್ಳುತ್ತಿದ್ದ ಬಿಳಿಬಣ್ಣದ ದೊಡ್ಡ ಗಾತ್ರದ ರುಮಾಲು, ಕಪ್ಪುಬಣ್ಣದ ಮೊಂಟ್‌ಬ್ಲಾಂಕ್ ಪೆನ್ನು ಮತ್ತು ಕಪ್ಪುಬಣ್ಣದ ಉದ್ದನೆಯ ಕ್ಯಾಡಿಲಾಕ್ ಕಾರು- ಅವರ ಹೆಗ್ಗುರುತುಗಳೇ ಆಗಿದ್ದವು.

ತಮ್ಮ ತಂದೆಯ ಹೆಸರನ್ನು ಕುಟುಂಬದ ಹೆಸರಾಗಿ ಎತ್ತಿಹಿಡಿಯಲು ಅವರು ಪ್ರಯತ್ನಿಸುತ್ತಿದ್ದರು. ಸಾರ್ವಜನಿಕ ವಲಯದಲ್ಲಿ ಅವರದೇ ಹೆಸರಿಗಿಂತ ನೆಟ್ಟಕಲ್ಲಪ್ಪ ಎಂದೇ ಅವರನ್ನು ಗುರುತಿಸಲಾಗುತ್ತಿತ್ತು. ತಮ್ಮ ಮಗನಿಗೂ ತಮ್ಮ ತಂದೆಯ ಹೆಸರನ್ನೇ ಇಟ್ಟಿದ್ದರು. ತಮ್ಮ ತಂದೆಯಿಂದ ದೊಡ್ಡ ಸಂಪತ್ತನ್ನು ವಾರಸುದಾರಿಕೆಯಿಂದ ಪಡೆದಿದ್ದ ಅಜ್ಜ, ಕ್ರಮವಾಗಿ ತಮ್ಮ ಮೊಮ್ಮಕ್ಕಳಿಗೆ ಅಷ್ಟೇ ದೊಡ್ಡ ಸಂಪತ್ತು, ಪ್ರಭಾವ, ಪ್ರತಿಷ್ಠೆ ಮತ್ತು ಸಮಾಜದಲ್ಲಿ ಗೌರವದ ವಾರಸುದಾರಿಕೆಯನ್ನು ವರ್ಗಾಯಿಸಿದರು. ಮೂವರೂ ಗಂಡು ಮೊಮ್ಮಕ್ಕಳಿಗೆ ಜನಿಸಿದ ನಾಲ್ವರು ಮರಿ ಮಕ್ಕಳನ್ನೂ ಕಂಡ ಅಜ್ಜ, ವಂಶವೃಕ್ಷ ಬೆಳೆಯುತ್ತಿರುವುದಕ್ಕೂ ಸಾಕ್ಷಿಯಾದರು. ಒಟ್ಟಾರೆ ತಮ್ಮದೇ ಸ್ವಂತ ಹಾಗೂ ಈಗ ಹಿಂದಕ್ಕೆ ಸರಿದಿರುವ, ಮಾಯವಾಗಿರುವ ಮೌಲ್ಯಗಳ ಗತಕಾಲದ ಸಮಾಜದ ನಿಯಮಗಳ ಪ್ರಕಾರ, ಒಂದು ವೈವಿಧ್ಯಮಯ ವೈಭವದ ಹಾಗೂ ಸಾರ್ಥಕದ ಜೀವನ ಬದುಕಿದರು. ಅದಕ್ಕಿಂತ ಹೆಚ್ಚಾಗಿ ನನ್ನಜ್ಜ ರಾಜರ, ಯೋಧರ, ಉದ್ಯಮಿಗಳ, ಧರ್ಮದ, ಜಾತಿಯ ಮತ್ತು ತಾವು ಹುಟ್ಟಿ ಬೆಳೆದ ಕುಟುಂಬದ ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ ಬೆಳೆದಿದ್ದರು. ಸ್ವತಂತ್ರ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯ ಭಾರತದಲ್ಲಿ ಸಾರ್ವಜನಿಕ ಸೇವೆಯ ಗುರಿಯೊಂದಿಗೆ ಅಜ್ಜ ಪತ್ರಿಕೆಗಳನ್ನು ಸ್ಥಾಪಿಸಿದ್ದರು. ಅವುಗಳು ದೊಡ್ಡದಾಗಿ ಬೆಳೆದು ಇಂದಿಗೂ ಉಸಿರಾಡುತ್ತಿವೆ. ಹಳೆಯ ಜಗತ್ತಿನಲ್ಲಾಗಲಿ ಅಥವಾ ಹೊಸದರಲ್ಲಾಗಲಿ ತಾವು ತೊಡಗಿಸಿಕೊಂಡ ಯಾವುದೇ ಚಟುವಟಿಕೆಯಲ್ಲಿ ಅವರೇ ಕೇಂದ್ರಬಿಂದುವಾಗಿರುತ್ತಿದ್ದರು. ಹೌದು, ನಿಜವಾಗಿಯೂ, ತಾವೇ ಗುರುತಿಸಿಕೊಳ್ಳುತ್ತಿದ್ದಂತೆ ಅವರು ಭಾಗ್ಯಶಾಲಿಯಾಗಿದ್ದರು.

❖

ಲೇಖಕ: ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ಸುಧಾ, ಮಯೂರ ಪತ್ರಿಕೆಗಳ ಮಾಜಿ ಪ್ರಧಾನ ಸಂಪಾದಕ ಮತ್ತು ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಮಾಜಿ ಚೇರ್‌ಮನ್ ಹಾಗೂ ವ್ಯವಸ್ಥಾಪಕ ನಿರ್ದೇಶಕ

1

2

3

4

1. ಆರ್ಯ ಈಡಿಗ ಸಂಘದಲ್ಲಿ ಭಾವಚಿತ್ರ ಅನಾವರಣ ಸಮಾರಂಭದಲ್ಲಿ ಕೆ.ಎನ್. ಗುರುಸ್ವಾಮಿ, ಕೆ. ವೆಂಕಟಸ್ವಾಮಿ ಮತ್ತು ಸರ್ ಎ. ರಾಮಸ್ವಾಮಿ 2. ಕಣೇಕಲ್‌ನಲ್ಲಿ ಆರಂಭಿಸಿದ ಬಾಲಕರ ಹಾಸ್ಟೆಲ್‌ನ ಉದ್ಘಾಟನಾ ಸಮಾರಂಭದಲ್ಲಿ ಆಂಧ್ರಪ್ರದೇಶದ ಆಗಿನ ಮುಖ್ಯಮಂತ್ರಿ ಕೆ.ಬ್ರಹ್ಮಾನಂದ ರೆಡ್ಡಿ, ಕೆ. ವೆಂಕಟಸ್ವಾಮಿ ಅವರೊಂದಿಗೆ ಕೆ.ಎನ್. ಗುರುಸ್ವಾಮಿ 3. ರಾಜ್ಯಪಾಲರಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಅರ್ಪಿಸಿದ ಸನ್ಮಾನ ಪತ್ರವನ್ನು ಓದುತ್ತಿರುವ ಕೆ.ಎನ್. ಗುರುಸ್ವಾಮಿ 4. ಅಜ್ಜನ ನೆಚ್ಚಿನ ಚಾಲಕರು

‘ಗಾಂಧಿ ಬಳ್ಳಿ’ಯಲ್ಲಿ ಹೊಸ ಹೂವು

ಮಹತಿ

ಕ್ರಾಂತಿಯ ಪರಿಭಾಷೆಯಲ್ಲಿ ನಡೆಯುವ ಬದಲಾವಣೆಗಳು ಹಿಂಸೆಯೊಂದಿಗೆ ತಳುಕು ಹಾಕಿಕೊಂಡಿರುವುದನ್ನು ಚರಿತ್ರೆಯುದ್ದಕ್ಕೂ ಕಾಣಬಹುದು. ಇದಕ್ಕೆ ಅಪವಾದ ಗಾಂಧಿಮಾರ್ಗ. ಸತ್ಯ ಮತ್ತು ಅಹಿಂಸೆಗಳನ್ನು ಭಾರತದ ಸ್ವಾತಂತ್ರ್ಯದ ಚಳವಳಿಯ ಕೇಂದ್ರವಾಗಿಸಿಕೊಂಡು ಯಶಸ್ಸು ಸಾಧಿಸಿದ ಹಿರಿಮೆ ಗಾಂಧೀಜಿಯದು. ಈ ಸತ್ಯ ಮತ್ತು ಅಹಿಂಸೆಗಳು ಗಾಂಧಿ ಅವರ ಒಳಗೂ ಹೊರಗೂ ಆವರಿಸಿಕೊಂಡಿದ್ದುದು ಹೇಗೆ ಎನ್ನುವುದರ ವಿಶ್ಲೇಷಣೆ – ಪಾಸ್ಕಲ್ ಆಲೆನ್ ನಜರತ್‌ರ ‘ಗಾಂಧಿ: ಆತ್ಮಶಕ್ತಿಯ ಯೋಧ’ ಕೃತಿ. ‘ಕ್ರಾಂತಿಯನ್ನೇ ಕ್ರಾಂತಿಕಾರಕವಾಗಿಸಿ ಅದನ್ನು ಅಧ್ಯಾತ್ಮೀಕರಣಗೊಳಿಸಿದ’ ಎನ್ನುವ ಶೀರ್ಷಿಕೆಯ ಅಡಿಟಿಪ್ಪಣಿ, ಪುಸ್ತಕದ ಹೂರಣದ ಕುರಿತ ಹೇಳಿಕೆಯೂ ಆಗಿದೆ.

ಒಳನೋಟ

ಭಾರತದ ರಾಜತಾಂತ್ರಿಕ ಅಧಿಕಾರಿಯಾಗಿ ದೇಶವಿದೇಶಗಳಲ್ಲಿ ಕಾರ್ಯ ನಿರ್ವಹಿಸಿರುವ ಪಾಸ್ಕಲ್ ಅಲೆನ್ ಅವರ ತೀರದ ಆಸಕ್ತಿಗಳಲ್ಲೊಂದಾದ ‘ಗಾಂಧಿಪ್ರೇಮ’ದ ಅಭಿವ್ಯಕ್ತಿಯಾಗಿ ಈ ಕೃತಿಯನ್ನು ನೋಡಬಹುದು. ಈ ಪುಸ್ತಕಕ್ಕೆ ಟಿಪ್ಪಣಿ ರೂಪದ ಪುಟ್ಟ ಮುನ್ನುಡಿ ಆಭರಣ ತೊಡಿಸಿರುವ ದಲಾಯಿ ಲಾಮ – ‘ಪ್ರಾಮಾಣಿಕವಾದ ಸಹಾನುಭೂತಿ ಎಂದರೆ ಗಾಂಧಿ ಮಾಡಿದ ಹಾಗೆ ಇತರರೊಂದಿಗೆ ಸಾಮೀಪ್ಯದ ಭಾವ ಬೆಳೆಸಿಕೊಳ್ಳುವುದು. ಅದರೊಂದಿಗೆ ಅವರ ಕಲ್ಯಾಣದ ಹೊಣೆಗಾರಿಕೆಯ ಭಾವ ಹೊಂದಿರುವುದು’ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಮಾತನ್ನು ಓದುಗರಿಗೆ ಮನದಟ್ಟು ಮಾಡಿಸುವ ಪ್ರಾಂಜಲ ಪ್ರಯತ್ನ ಪಾಸ್ಕಲ್‌ರ ಗಾಂಧಿ ಕೃತಿ.

ಅಂಜುಬುರುಕ ಬಾಲಕನೊಬ್ಬ ಆತ್ಮಶಕ್ತಿಯೊಂದಿಗೆ ದಿಟ್ಟತನ ರೂಢಿಸಿಕೊಳ್ಳುವುದು ಹಾಗೂ ಮನುಕುಲದ ಏಳ್ಗೆಗಾಗಿ ತನ್ನ ಬದುಕನ್ನೇ ಮುಡಿಪಾಗಿಡುವ ಕಥನವನ್ನು ಪಾಸ್ಕಲ್ ಪಕ್ಷಿನೋಟದಲ್ಲಿ ಚಿತ್ರಿಸಿದ್ದಾರೆ. ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಗಾಂಧಿಯ ಪಾತ್ರವನ್ನು ಹೇಳುವುದಷ್ಟೇ ಈ ಕೃತಿಯ ಉದ್ದೇಶವಲ್ಲ. ಸ್ವಾತಂತ್ರ್ಯಾನಂತರ ವಿಶ್ವದ ಕೆಲವು ದೇಶಗಳು ಪ್ರಜಾಪ್ರಭುತ್ವ ಮಾದರಿಯ ಬಗ್ಗೆ ಕುತೂಹಲ ತಳೆಯಲಿಕ್ಕೆ ಗಾಂಧಿ ಒದಗಿಸಿದ ಪ್ರೇರಣೆಯನ್ನು ವಿಶ್ಲೇಷಿಸುವುದು ಲೇಖಕರ ಉದ್ದೇಶವಾಗಿದೆ. ಪುಸ್ತಕದ ಶೀರ್ಷಿಕೆಯಲ್ಲಿನ ‘ಯೋಧ’ ವಿಶೇಷಣದೊಂದಿಗೆ ನೆನಪಾಗುವ ಕ್ಷಾತ್ರವ್ಯಕ್ತಿತ್ವವನ್ನು ಲೇಖಕರು ಆರ್ದ್ರಗೊಳಿಸಿ ಅಧ್ಯಾತ್ಮ ಸ್ಪರ್ಶ ನೀಡಿರುವುದು ಗಮನಾರ್ಹ.

ಹಿಂದೂಧರ್ಮದ ಅತಿ ಮುಖ್ಯ ಗುಣಗಳಲ್ಲಿ ಸತ್ಯ ಮತ್ತು ಅಹಿಂಸೆಗಳಿದ್ದರೂ, ಅವುಗಳನ್ನು ಪ್ರತ್ಯೇಕವಾಗಿ ಇಡಲಾಗಿತ್ತು ಎನ್ನುವ ಲೇಖಕರು, ಸತ್ಯ ಮತ್ತು ಅಹಿಂಸೆಯನ್ನು ಒಂದೇ ನಾಣ್ಯದ ಎರಡು ಮುಖಗಳಂತೆ ಮೊದಲು ಜೋಡಿಸಿದವರು ಗಾಂಧಿ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ತಮ್ಮ ನಿಲುವಿಗೆ ಕೃತಿಯ ಉದ್ದಕ್ಕೂ ಸಮರ್ಥನೆಗಳನ್ನು ಒದಗಿಸುವ ಪ್ರಯತ್ನ ಮಾಡಿದ್ದಾರೆ. ವಿಶ್ವದ ಮಹಾನ್ ಚೇತನಗಳ ಟೀಕೆ-ಟಿಪ್ಪಣಿಗಳ ಮೂಲಕ ಗಾಂಧಿ ತಾವು ಬದುಕಿದ ಕಾಲದ ಮೇಲೆ ಬೀರಿದ ಪ್ರಭಾವವನ್ನು ಕಟ್ಟಿಕೊಡುವ ಪ್ರಯತ್ನ ಕೃತಿಯಲ್ಲಿದೆ.

ಗಾಂಧೀಜಿ ತನ್ನನ್ನು ತಾನು ‘ಸನಾತನಿ ಹಿಂದೂ’ ಎಂದು ಕರೆದುಕೊಂಡರೂ, ಆ ಸನಾತನಿಯ ವ್ಯಕ್ತಿತ್ವದ ಮೇಲೆ ವಿವಿಧ ಧರ್ಮಗಳು ಬೀರಿದ್ದ ಪ್ರಭಾವವನ್ನು ಪಾಸ್ಕಲ್ ಪುಟ್ಟದಾಗಿಯಾದರೂ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. ‘ನೈತಿಕತೆಯೊಂದಿಗೆ ಹೊಂದಿಕೊಳ್ಳದ ಹಾಗೂ ವೈಚಾರಿಕತೆಗೆ ಒಪ್ಪಿಗೆಯಾಗದ ಯಾವುದೇ ಧಾರ್ಮಿಕ ತತ್ವವನ್ನು ನಾನು ನಿರಾಕರಿಸುತ್ತೇನೆ’ ಎನ್ನುವ ಮಾತು, ಧರ್ಮದ ಕುರಿತು ಗಾಂಧಿ ಮಹಾತ್ಮನ ನಿಲುವನ್ನಷ್ಟೇ ಹೇಳುವುದಿಲ್ಲ; ಎಲ್ಲ ಕಾಲಕ್ಕೂ ನಮಗೆ ಅಗತ್ಯವಾದ ‘ಧರ್ಮ ವಿವೇಕ’ ಯಾವುದೆನ್ನುವುದನ್ನೂ ಮನಗಾಣಿಸುತ್ತದೆ.

ಗಾಂಧಿ ಅನ್ವೇಷಣೆ ಎಂದಿಗೂ ಬರಿದಾಗದ ಅಕ್ಷಯಗಣಿ. ಆ ಗಣಿಯಿಂದ ಪಾಸ್ಕಲ್ ಅವರು ಮೊಗೆದು ದಾಖಲಿಸಿರುವ ಬೊಗಸೆನೋಟಗಳನ್ನು ಪ್ರೊ. ಮೀನಾ ದೇಶಪಾಂಡೆ ಕನ್ನಡಕ್ಕೆ ತಂದಿದ್ದಾರೆ. ಬಹುತ್ವ ಭಾರತದ ಆಶಯಗಳು ಗಾಸಿಗೊಂಡಂತೆ ಕಾಣಿಸುತ್ತಿರುವ ವರ್ತಮಾನದಲ್ಲಿ, ಹೊಸ ತಲೆಮಾರಿಗೆ ಗಾಂಧಿಯನ್ನು ಮತ್ತೆ ಮತ್ತೆ ನೆನಪಿಸುವ ಮೂಲಕ ‘ಭಾರತೀಯ ನಡೆ-ನುಡಿ’ ಯಾವುದಾಗಿರಬೇಕೆಂದು ಸೂಚಿಸುವ ಇಂಥ ಕೃತಿಗಳಿಗೆ ವಿಶೇಷ ಮಹತ್ವವಿದೆ.



ಪು: 198 ₹170

ಗಾಂಧಿ: ಆತ್ಮಶಕ್ತಿಯ ಯೋಧ
ಮೂಲ: ಪಾಸ್ಕಲ್ ಆಲೆನ್ ನಜರತ್,
ಕನ್ನಡಕ್ಕೆ: ಪ್ರೊ. ಮೀನಾ ದೇಶಪಾಂಡೆ
ಪ್ರ: ಗಾಂಧೀ ಸೆಂಟರ್ ಆಫ್ ಸೈನ್ಸ್ ಅಂಡ್ ಹ್ಯೂಮನ್ ವ್ಯಾಲ್ಯೂಸ್, ಬೆಂಗಳೂರು.
ಸಂ: 080-22266525

ಲೆಬನಾನಿನವನ ನೆನಪುಗಳು

ಗೌರಿ

‘ರೇವಿನ ಸಮೀಪ ನಾನೊಂದು ಹೊಸ ಪಟ್ಟಣವನ್ನು ಕಟ್ಟುತ್ತೇನೆ, ಸಮೀಪದ ಒಂದು ದ್ವೀಪದಲ್ಲಿ ಒಂದು ವಿಗ್ರಹ ಪ್ರತಿಷ್ಠಾಪಿಸುತ್ತೇನೆ, ಸ್ವಾತಂತ್ರ್ಯದ ವಿಗ್ರಹವಲ್ಲ, ಸೌಂದರ್ಯದ ವಿಗ್ರಹ. ಏಕೆಂದರೆ ಸ್ವಾತಂತ್ರ್ಯದ ವಿಗ್ರಹದಡಿಯಲ್ಲಿ ಜನ ನಿರಂತರವಾಗಿ ಯುದ್ಧಗಳನ್ನೇ ಮಾಡಿದ್ದಾರೆ. ಆದರೆ, ಸೌಂದರ್ಯದ ವಿಗ್ರಹವಿದ್ದರೆ ಆ ಮುಖದೆದುರಿನಲ್ಲಿ ಜನ ಮಿಕ್ಕೆಲ್ಲರೆಡೆಗೆ ಭ್ರಾತೃತ್ವದ ಕೈಚಾಚುತ್ತಾರೆ’ ಎಂದು ಬರೆದವನು ದಾರ್ಶನಿಕ, ಲೇಖಕ, ಚಿತ್ರಕಲಾವಿದ ಖಲೀಲ್ ಗಿಬ್ರಾನ್. ಲೆಬನಾನಿನಲ್ಲಿ ಜನಿಸಿ, ಫ್ರಾನ್ಸ್‌ನಲ್ಲಿ ಕಲಾಭ್ಯಾಸ ಮಾಡಿ, ಅಮೆರಿಕದಲ್ಲಿ ನೆಲೆನಿಂತ ಖಲೀಲ್ ಬರೆದ ‘ದ ಪ್ರಾಫೆಟ್’ ಎಂಬ ಕೃತಿ ಜಗತ್ತಿನ ನೂರಕ್ಕೂ ಅಧಿಕ ಭಾಷೆಗಳಿಗೆ ಅನುವಾದಗೊಂಡಿದೆ. ಇಂದಿಗೂ ಅಸಂಖ್ಯಾತರ ಎದೆಯಲ್ಲಿ ಖಲೀಲ್ ಬರೆದ ಅಕ್ಷರಗಳು ರಿಂಗಣಿಸುತ್ತಿವೆ. ಜನರ ಮನಸ್ಸಿನ ಗಾಯಗಳಿಗೆ ಮದ್ದಾಗಿ ಒದಗಿಬರುತ್ತಿದೆ.

ಬರಹವನ್ನೇ ಬದುಕುಕಬೇಕು, ಆಡಿದ ಮಾತಿನಲ್ಲಿ ಮೂಡಿದ ಆದರ್ಶ, ಕ್ರಿಯೆಯಲ್ಲಿಯೇ ಸಾರ್ಥಕವಾಗುವುದು ಎಂದು ನಂಬಿ ಬದುಕಿದ್ದ ಖಲೀಲ್ ಗಿಬ್ರಾನ್ ಕುರಿತು ಹಲವು ಪುಸ್ತಕಗಳು ಬಂದಿವೆ. ಅವುಗಳಲ್ಲಿ ‘ದಿಸ್ ಮ್ಯಾನ್ ಫ್ರಮ್ ಲೆಬನಾನ್’ ವಿಶೇಷವಾದದ್ದು. ಈ ಪುಸ್ತಕಕ್ಕಿರುವ ವೈಶಿಷ್ಟ್ಯ ಅದರ ಲೇಖಕಿಯ ಜೊತೆಗೇ ಅಂಟಿಕೊಂಡಿದೆ. ಬಾರ್ಬರಾ ಯಂಗ್ ಎನ್ನುವ ಕಾವ್ಯನಾಮದಿಂದ ಪರಿಚಿತರಾಗಿರುವ ಹೆನ್ರಿಯೆಟಾ ಬ್ರೆಕನ್ ರಿಜ್ ಬಾಟನ್ ಸ್ವತಃ ಕವಯತ್ರಿ ಮತ್ತು ಕಲಾ ವಿಮರ್ಶಕಿ. ಚರ್ಚೊಂದರಲ್ಲಿ ಗಿಬ್ರಾನನ ‘ದ ಪ್ರಾಫೆಟ್’ ಪುಸ್ತಕದ ಪಠಣ ಕೇಳಿದ ಅವರು, ಅದರಿಂದ ಆಕರ್ಷಿತರಾಗಿ ಈ ಬರಹಗಾರನನ್ನು ಭೇಟಿಯಾಗಲೇಬೇಕು ಎಂದು ಗಿಬ್ರಾನನನ್ನು ಸಂಪರ್ಕಿಸುತ್ತಾರೆ. ಹಾಗೆ ಶುರುವಾದ ಅವರ ಸ್ನೇಹ, ಮುಂದಿನ ಏಳು ವರ್ಷಗಳವರೆಗೆ, ಗಿಬ್ರಾನ್ ತೀರಿಹೋಗುವವರೆಗೂ ಮುಂದುವರಿಯುತ್ತದೆ. ಗೆಳತಿಯಾಗಿಯಷ್ಟೇ ಅಲ್ಲ, ಗಿಬ್ರಾನನ ಸೃಜನಶೀಲ ಸೃಷ್ಟಿಕ್ರಿಯೆಯಲ್ಲಿಯೂ ಬಾರ್ಬರಾ ಅವರ ಪಾಲಿದೆ. ಅವರು ಗಿಬ್ರಾನನಿಗೆ ಲಿಪಿಕಾರ್ತಿಯಾಗಿದ್ದರು. ಅವನು ಆಡಿದ ಅಕ್ಷರಗಳ ಬರಹಗಾರ್ತಿಯಷ್ಟೇ ಅಲ್ಲ; ಅವನ ಮನಸ್ಸಿನಾಳದ ಕುದಿಜ್ವಾಲೆಯನ್ನು ಅನುವಾದಕಿಯೂ ಆಗಿದ್ದರು.

ಗಿಬ್ರಾನನ ಜೊತೆಗಿನ ಏಳು ವರ್ಷಗಳ ತನ್ನ ಒಡನಾಟದಲ್ಲಿ ತಾನು ಕಂಡುಕೊಂಡ ವ್ಯಕ್ತಿತ್ವದ ಚಿತ್ರಣವನ್ನು ಆಧರಿಸಿ ಅವರು ‘ದಿಸ್ ಮ್ಯಾನ್ ಫ್ರಮ್ ಲೆಬನಾನ್’ ಬರೆದಿದ್ದಾರೆ. ಇದು ಗಿಬ್ರಾನನ ಜೀವನಚರಿತ್ರೆ ಅಲ್ಲ ಅಥವಾ ಅವನ ಸಾಧನಾ ಚಿತ್ರಣವಷ್ಟೆ ಕೂಡ ಅಲ್ಲ. ಬದಲಿಗೆ ತನ್ನ ಕಣ್ಣಿಗೆ ಕಂಡ ಹಾಗೆ ಅವನ ಕೃತಿ ಮತ್ತು ವ್ಯಕ್ತಿತ್ವ ಎರಡನ್ನೂ ಬೆರೆಸಿ, ತನ್ನ ಒಳನೋಟಗಳನ್ನು ಸೇರಿಸಿ ಹೆಣೆದ ವಿಶಿಷ್ಟ ಪುಸ್ತಕ. ಹಾಗಾಗಿ ಇಲ್ಲಿ ಗಿಬ್ರಾನನ ಕೃತಿಗಳ ಉಲ್ಲೇಖಗಳಿವೆ, ಹಾಗೆಯೇ ಅವನ ವ್ಯಕ್ತಿತ್ವವನ್ನು ಸೂಚಿಸುವ ಹಲವು ಅಪರೂಪದ ಘಟನೆಗಳೂ ಇವೆ. ಅವನ ಚಿತ್ರಗಳ ಕುರಿತು ಉಲ್ಲೇಖವಿದೆ. ಅವನ ಕೃತಿರಚನೆಯ ಹಂತಗಳ ವಿವರಣೆ ಇದೆ. ಈ ಎಲ್ಲವೂ ಸೇರಿ ಒಂದು ವಿಶಿಷ್ಟ ಕೃತಿಯಾಗಿ ಹೊಮ್ಮಿದೆ.

ಈ ಕೃತಿಯನ್ನು ಎನ್. ಸಂಧ್ಯಾರಾಣಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಖಲೀಲ್ ಕನ್ನಡದ ಮನಸ್ಸುಗಳಲ್ಲಿಯೂ ಸುಲಲಿತವಾಗಿ ಇಳಿಯುವಂತೆ ಮಾಡಿದ ಅನುವಾದದ ಶ್ರಮ ಎದ್ದು ಕಾಣಿಸುತ್ತದೆ. ಗಿಬ್ರಾನ್‌ನ ಮೇಲಿನ ಪ್ರೀತಿ ಮತ್ತು ಆ ಪ್ರೀತಿಯನ್ನು ಇತರರೊಂದಿಗೆ ಹಂಚಿಕೊಳ್ಳುವ ಹಂಬಲ ಈ ಅನುವಾದದ ಹಿಂದೆ ಕೆಲಸ ಮಾಡಿದೆ.



ಪು: 196 ₹200

ಇವ... ಲೆಬನಾನಿನವ
ಮೂಲ: ಬಾರ್ಬರಾ ಯಂಗ್
ಅನುವಾದ: ಎನ್. ಸಂಧ್ಯಾರಾಣಿ
ಪ್ರ: ನುಡಿ ಪುಸ್ತಕ
ಸಂ: 8073321430

ಜಯರಾಮಾಚಾರಿ ಅವರ ಮ್ಯಾಜಿಕ್ ಮಶ್ರೂಮ್
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಸ್ಮಿತಾ ಅಮೃತರಾಜ್ ಅವರ ಒಂದು ಮಳೆ ಬಿದ್ದಾಗ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಹರಿಲಾಲರ ದುರಂತ ಬದುಕಿನ ಚಿತ್ರಣ

ಗುಜರಾತಿ ಭಾಷೆಯಲ್ಲಿರುವ ದಿನಕರ್ ಜೋಶಿಯವರ ‘ಮಹಾತ್ಮಾ ವರ್ಸಸ್ ಗಾಂಧಿ’ ಕಾದಂಬರಿ, ಅಲ್ಲಿಂದ ಹಿಂದಿಗೆ ಅನುವಾದಗೊಂಡು, ಇದೀಗ ಕನ್ನಡದ ತಾವನ್ನೂ ಹುಡುಕಿಕೊಂಡು ಬಂದಿದೆ.

ಗಾಂಧೀಜಿಯವರ ಬಗ್ಗೆ ಅನೇಕ ಕೃತಿಗಳು ಬಂದಿದ್ದರೂ, ಈ ಕೃತಿ ವಿಶೇಷ ವಸ್ತುವನ್ನು ಹೊಂದಿದೆ. ಈ ಕಾದಂಬರಿಯಲ್ಲಿ ಅವರ ಜ್ಯೇಷ್ಠ ಪುತ್ರ ಹರಿಲಾಲರ ವ್ಯಕ್ತಿತ್ವ ಮತ್ತು ಬದುಕಿನ ದುರಂತ ಚಿತ್ರಣವಿದೆ. ಜೊತೆಗೆ ಗಾಂಧೀಜಿಯವರ ಜೀವನದ ಮಾರ್ಮಿಕ ಮತ್ತು ಕರುಣಾಜನಕ ಮಗ್ಗಲನ್ನೂ ಈ ಕಾದಂಬರಿ ಬಿಂಬಿಸಿದೆ. ದಿನಕರ ಜೋಶಿ ಅವರು ಬರೆದಿದ್ದ ಮೂಲ ಕಾದಂಬರಿ ಗುಜರಾತಿನ ಹಲವು ಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು. ಡಿ.ಎನ್. ಶ್ರೀನಾಥ್ ಅವರು ಅನುವಾದಿಸಿದ ಈ ಕಾದಂಬರಿ ‘ಬೆಳಕಿನ ನೆರಳು’ ಎಂಬ ಶೀರ್ಷಿಕೆಯಡಿ ‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು.

‘ಇಂದು ಹರಿಲಾಲರ ಹೆಸರು ಯಾರಿಗಾದರೂ ನೆನಪಿದ್ದರೆ ಅದು ಬಹುಶಃ ಅವರ ಅದೃಷ್ಟವೇ ಸರಿ! ರಾಜಾಜಿ ಮತ್ತು ಕಿಶೋರಿಲಾಲರ ಮಾತಿರಲಿ, ಜನ ಬಾಪೂರವರನ್ನೂ ಮರೆತಿದ್ದಾರೆ’ ಎಂದು ದಿನಕರ್ ಜೋಶಿಯವರು ಮುನ್ನುಡಿಯಲ್ಲಿ ಉಲ್ಲೇಖಿಸುತ್ತಾರೆ. ‘ಹರಿಲಾಲರ ಬಗ್ಗೆ ಗ್ರಂಥಗಳಲ್ಲಿ ಅಥವಾ ಬೇರೆ ಕಡೆಗಳಿಂದ ಸಿಕ್ಕ ಸಾಮಾಗ್ರಿಗಳಲ್ಲಿ ನಿರಂತರತೆಯ ಕೊರತೆಯಿದೆ. ಎಲ್ಲ ವಿವರಗಳೂ ಅಸ್ತವ್ಯಸ್ತವಾದಂತಿವೆ. ಅನೇಕ ಸ್ಥಳಗಳಲ್ಲಿ ವಿರೋಧಾಭಾಸವೂ ಇದೆ’ ಎನ್ನುತ್ತಾ, ಇವನ್ನೆಲ್ಲ ಕಾದಂಬರಿ ಮಿತಿಯೊಳಗೆ ಪ್ರಸ್ತುತಪಡಿಸುವ ಪ್ರಯತ್ನ ಮಾಡಿದ್ದೇನೆ ಎಂದಿದ್ದಾರೆ ಜೋಶಿ.

ಮೂವತ್ತೆಂಟು ಅಧ್ಯಾಯದಲ್ಲಿ ತೆರೆದುಕೊಳ್ಳುವ ಕೃತಿ, ಮಹಾತ್ಮನ ಕುಟುಂಬದ ಚರಿತ್ರೆಯ ಪುಟಗಳನ್ನು ಕಣ್ಮುಂದೆ ತರುತ್ತಾ ಹೋಗುತ್ತದೆ. ಶ್ರೀನಾಥ್ ಅವರ ಭಾಷಾಂತರದ ಸರಳ ಭಾಷೆ ಓದಿಗೆ ಪೂರಕವಾಗಿದೆ.



ಪು: 332 ₹300

ಮಹಾತ್ಮಾ ವರ್ಸಸ್ ಗಾಂಧಿ
ಮೂಲ: ದಿನಕರ್ ಜೋಶಿ
ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಪ್ರ: ವಂಶಿ ಪಬ್ಲಿಕೇಷನ್ಸ್, ಬೆಂಗಳೂರು
ಸಂ: 9916595916

ಮುಸ್ಲಿಂ ಜಾತಿವ್ಯವಸ್ಥೆ ಮೇಲೆ ಬೆಳಕು

ಭಾರತದಲ್ಲಿ ಅಲ್ಪಸಂಖ್ಯಾತರ ಕುರಿತಾದ ಚರ್ಚೆಗಳಲ್ಲಿ, ಅದರಲ್ಲಿಯೂ ಮುಸ್ಲಿಂ ಸಮುದಾಯದ ಕುರಿತ ಚರ್ಚೆಗಳಲ್ಲಿ ಅವರ ಮೂಲಭೂತ ಹಕ್ಕುಗಳ ಮೇಲೆ ಆಗುತ್ತಿರುವ ಹಲ್ಲೆಗಳು, ಮಹಿಳಾ ಹಕ್ಕುಗಳಿಗೆ ಇರುವ ಚ್ಯುತಿಗಳು, ವ್ಯವಸ್ಥೆಯು ಅವರ ಅಸ್ತಿತ್ವದ ಮೇಲೆ ನಡೆಸುತ್ತಿರುವ ದಾಳಿಗಳನ್ನು ಎದುರಿಸುವ ವಿಷಯಗಳೇ ಕೇಂದ್ರವಾಗಿರುತ್ತವೆ. ಆದರೆ, ಈ ಎಲ್ಲ ಸಂಗತಿಗಳನ್ನು ಚರ್ಚಿಸುವಾಗ ನಮ್ಮ ಕಣ್ಣ ಮುಂದೆ ಮುಸ್ಲಿಂ ಎನ್ನುವ ಒಂದು ಸಮೂಹ ಇರುತ್ತದೆಯೇ ವಿನಾ ಅದರೊಳಗಿನ ವಿಂಗಡಣೆಗಳಲ್ಲ. ಹಾಗಾಗಿಯೇ ಮುಸ್ಲಿಂ ಧರ್ಮದೊಳಗೇ ಇರುವ ಜಾತಿ ವ್ಯವಸ್ಥೆ ಮತ್ತು ಅದರ ಪರಿಣಾಮಗಳ ಬಗ್ಗೆ ಅಷ್ಟೊಂದು ಚರ್ಚೆ ಆಗಿಲ್ಲ.

ಜಾತಿ ವ್ಯವಸ್ಥೆಯನ್ನು ಒಪ್ಪದ ಮುಸ್ಲಿಂ ಧರ್ಮದೊಳಗೆ ಜಾತಿಗಳು ಹುಟ್ಟಿಕೊಂಡಿದ್ದು ಹೇಗೆ? ಪ್ರಭುತ್ವದ ನಡೆಗಳು ಅದಕ್ಕೆ ಹೇಗೆ ಪುಷ್ಟಿಯೊದಗಿಸಿದವು? ಜಾತಿಯನ್ನು ಗುರ್ತಿಸುವುದು ಹೇಗೋ, ಗುರ್ತಿಸದಿರುವುದೂ ಹೇಗೆ ಅನ್ಯಾಯಕ್ಕೆ ಕಾರಣವಾಗಬಲ್ಲದು? ಒಂದು ಸಮುದಾಯದ ಅಸ್ಮಿತೆಯಲ್ಲಿ ಅವುಗಳ ಪಾಲು ಏನು? ಈ ಎಲ್ಲವಕ್ಕೂ ವ್ಯವಸ್ಥೆ ಕಣ್ಮುಚ್ಚಿ ಕೂಡುವುದರಿಂದ ಒಂದು ವರ್ಗದ ಜನರು ಹೇಗೆ ಅನ್ಯಾಯಕ್ಕೊಳಪಡುತ್ತಿದ್ದಾರೆ? ಈ ಎಲ್ಲ ಪ್ರಶ್ನೆಗಳನ್ನೂ ಎತ್ತಿಕೊಂಡು ವರ್ತಮಾನದ ಹಲವು ಬಿಕ್ಕಟ್ಟುಗಳಿಗೆ ಇತಿಹಾಸದ ದಾಖಲೆ ಮತ್ತು ಭವಿಷ್ಯದ ದೂರದೃಷ್ಟಿಗಳ ಮೂಲಕ ಮುಖಾಮುಖಿಯಾಗುವ ಪ್ರಯತ್ನ ‘ಅಲ್ಪಸಂಖ್ಯಾತರು ಮತ್ತು ಜಾತಿ ವ್ಯವಸ್ಥೆ’ ಎಂಬ ಕೃತಿಯಲ್ಲಿದೆ. ಈ ಶೀರ್ಷಿಕೆಯೇ ಈ ಕೃತಿಯ ಅಗತ್ಯವನ್ನೂ, ಅನನ್ಯತೆಯನ್ನೂ ಹೇಳುವಂತಿದೆ. ಇದು ಅಲ್ಪಸಂಖ್ಯಾತರು ವರ್ಸಸ್ ಜಾತಿ ವ್ಯವಸ್ಥೆ ಅಲ್ಲ. ಜಾತಿ ವ್ಯವಸ್ಥೆಯ ಚೌಕಟ್ಟಿನೊಳಗೇ ಅಲ್ಪಸಂಖ್ಯಾತರನ್ನು ಇಟ್ಟು ನೋಡುವ ಪ್ರಯತ್ನ.

ಲೇಖಕ ಮುಜಾಫರ್ ಅಸ್ಸಾದಿ ಅವರೇ ಹೇಳಿಕೊಂಡಿರುವ ಹಾಗೆ ಈ ಗ್ರಂಥದಲ್ಲಿ ಸಂಶೋಧನೆಯ ಬಲವಿದೆ. ಜೊತೆಗೆ ಅವರ ಬಾಲ್ಯದ ನೆನಪುಗಳ ಬೆಂಬಲವೂ ಇದೆ. ವೈಯಕ್ತಿಕವಾಗಿ ಮುಸ್ಲಿಂ ಸಮುದಾಯವರಾಗಿ ದಕ್ಕಿದ ಒಳಗಿನ ನೋಟ ಮತ್ತು ಒಬ್ಬ ರಾಜ್ಯಶಾಸ್ತ್ರದ ವಿದ್ಯಾರ್ಥಿಯಾಗಿ, ವಿದ್ವಾಂಸರಾಗಿ ದಕ್ಕಿದ ಹೊರನೋಟ ಎರಡೂ ಈ ಕೃತಿ ರಚನೆಗೆ ಕಾರಣವಾಗಿವೆ. ರಾಜ್ಯಶಾಸ್ತ್ರ ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಸಮಾಜ ವ್ಯವಸ್ಥೆಯ ಬಗ್ಗೆ ಕುತೂಹಲವಿರುವ ಯಾರ ಓದಿಗಾದರೂ ಒದಗಬಲ್ಲ ಕೃತಿ ಇದು.

ಅರುಣ್‌ಕುಮಾರ್ ಅವರು ಈ ಕೃತಿಗೆ ರಚಿಸಿರುವ ಸುಂದರ ಮುಖಪುಟಕ್ಕೆ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಮುಖಪುಟ ಚಿತ್ರ ವಿನ್ಯಾಸ ಬಹುಮಾನ ಸಿಕ್ಕಿರುವುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.



ಪು: 264 ₹300

ಅಲ್ಪಸಂಖ್ಯಾತರು ಮತ್ತು ಜಾತಿ ವ್ಯವಸ್ಥೆ
ಲೇ: ಡಾ.ಮುಜಾಫರ್ ಅಸ್ಸಾದಿ
ಪ್ರ: ಬಹುರೂಪಿ ಪ್ರಕಾಶನ ಬೆಂಗಳೂರು
ಸಂ:7019182729

ಘಮಗುಡುವ ಕರಡಿ ಈ ಹಲಸು

ಗುರುಪ್ರಸಾದ್ ಕಂಟಲಗೆರೆ

ಲಹರಿ



ಈಗ ಮಾವ್ನೆಣ್ಣು ಅಳಿಸ್ನಣ್ಣಿನ ಕಾಲ. ಎಲ್ಲೆಲ್ಲೂ ಅವುಗಳದ್ದೇ ಸುಗ್ಗಿಯೋ ಸುಗ್ಗಿ. ಈ ಆ್ಯಪಲ್ಲು ದ್ರಾಕ್ಷಿ ಬರೋದ್ಕಿಂತ ಮುಂಚೆ ಯಾರಾರ ಅತಿಥಿಗಳು ಮನೆಗೆ ಹೋದ್ರೆ ಉದ್ದುಕೆ ಮಾವ್ನೆಣ್ಣ ಹೆಚ್ಚಿ ತಟ್ಟೆಗೆ ಹಾಕಿ ತಂದು ಮುಂದುಕೆ ಇಕ್ಕರು. ಈಗ್ಲೂ ಕೆಲವು ಕಡೆ ಅಂಗೆ ಮಾಡಬಹುದು. ಮಾವ್ನೆಣ್ಣು ಹಿಂಗೆ ಬೀದಿಗೆ ಬಂದ್ರುವೆ ಅಳಿಸ್ನೆಣ್ಣಿಗೆ ಮಾತ್ರ ಮಡಿ ಮೈಲ್ಗೆ ಜಾಸ್ತಿ. ಈಗ ಅಲ್ಲಲ್ಲೆ ಪ್ಲೇಟುಗಳೊಳಗೆ, ಬಸ್‌ನಲ್ಲಿ ಮಾರುವ ಬಾಟ್ಲಿಗಳೊಳಗೆ ಅರುಶ್ನಗೆ, ಕೆಂಪುಗೆ ತೊಳೆಗಳು ಕಾಣಿಸಬಹುದು. ಆದ್ರೆ ಹಿಂದೆ ಈ ಅಳಿಸ್ನೆಣ್ಣು ಹೀಗೆ ಬೀದಿಗೆ ಬಿದ್ದಿದ್ದೆ ಇಲ್ಲ. ಅಳಿಸ್ನಣ್ಣಿನ ಘಮ ಘಮ ಊರೆಲ್ಲ ಸೆಲೆ ಹೊಡೆಯಂಗೆ ಬಡುದ್ರುವೆ, ಈ ವಾಸ್ನೆ ಯಾರಮನೆ ಹೆಂಚಿನ ಸಂದಿಲಾಸಿ ಬತ್ತಾ ಐತೆ ಅಂತ ಗೊತ್ತಾಗ್ತಿರ್ಲಿಲ್ಲ. ಅಪ್ಪ ಅವ್ವಿರು ಯಾರ್ರೂ ಕಾಣುಸ್ದಂಗೆ ಅಳಿಸ್ನಣ್ಣ ತಂದು ಮಡಿಕೆ ಸಾಲ ಸಂದಿಗೆ ದೂಕಿರರು. ಅದು ಬಲ್ತು ಕಳ್ತಂಗೆ ಕಳ್ತಂಗೆ ಚೂರು ಚೂರೆ ವಾಸ್ನೆನ ಬಿಟ್ಕೊಡಕೆ ಶುರುವಾಗದು.

ಕಾಯಾಗಿರೊ ಅದುನ್ನ ಅಣ್ಣಾಗೈತ ಯಂಗ ಅಂತ ಮೂಗ ಅಳ್ಳಿಸ್ಕೆಂಡು ಹೋಗಿ ಅದರ ಮೈಯ್ಯಿಗೆ ಒಡ್ಡಿವು. ವಾಸ್ನೆ ದೂರದಲ್ಲಿ ಐತೆ ಎನ್ನುವಾಗ ಇನ್ನು ಮುಂದುಕ್ಕೆ ಮೂಗ ಹಾಸ್ಕೋಗಿ ಅದರ ಮುಳ್ಳುಗಳು ಮೂಗಿನ ತುದಿಗೆ ಪ್ರೆಸ್ ಆದದ್ದೂ ಇದೆ. ಕೆಲವು ಹಣ್ಣುಗಳು ವಾಸ್ನೆ ಬಿಟ್ಕೊಡ್ಡಲೆ ಕಳ್ಳಾಟ ಆಡ್ತವೆ ಅಂತ ಕುಡ್ಲು ಮೂತಿ ತಗಂಡು ಉಂಡೆ ಹಾಕಿ ಸ್ವಾಡೆನೆಲ್ಲ ಬಗೆಮಾಡಿದಾಗ ಹಣ್ಣಿನ ಸಿಬಿರು ಸಿಕ್ಕದು. ಅದುನ್ನ ಬಾಯ್ಗಿಕ್ಕಂಡ್ರೆ ಒಂಚೂರು ಸಿಹಿ ಮಿಶ್ರಿತ ಉಳ್ಳುಗಿರದು.

ಇಂಥ ಕಿಲಾಡಿ ಅಳಿಸ್ನಣ್ಣುನ್ನ ಕುಯ್ಬೇಕು ಅಂದ್ರೆ ಮನೆಯ ಹಿರಿಯರು ಮಕ್ಳು ಮರಿನೆಲ್ಲ ಕರ್ದು ಸುತ್ತುಕು ಕುಂಡ್ರಿಸ್ಕೆಂಡು, ಕದ ಮುಂದುಕ್ಕೆ ಬಿಟ್ಕಂಡು, ಕೆಳಿಕೊಂದು ಗೋಣಿಚೀಲ ಆಕ್ಯಂಡು, ಎಲ್ಲರ ಕೈಗು ಅರಳೆಣ್ಣೆ ಸವರಿ ಚರ ಚರನ ಕುಯ್ದು ಎರಡು ಪಾಲು ಮಾಡಿ, ಅಲ್ಲಿಂದ ಬತ್ತಿದ್ದ ಅಂಟನ್ನ ಅದರ ಮುಳ್ಳಲ್ಲೆ ಸವರಿ ತೆಗೆದು, ಒಂದೊಂದು ಪಟ್ಟೆನ ಎಲ್ಲರ ಕೈಗು ಕೊಡೋರು. ಬೆಳಕಿನಲ್ಲಿ ಎಂದೂ ಅಳಿಸ್ನಣ್ಣುನ್ನ ಕುಯ್ದಿದ್ದೆ ಇಲ್ಲ. ಮಂದ ದೀಪದ ಬೆಳಕಿನಲ್ಲಿ ಅಳಿಸ್ನಣ್ಣು ಕುಯ್ತಿದ್ನ ಕಣ್ಬಿಟ್ಕಂಡು ನೋಡ್ತಿದ್ದ ಮಕ್ಕಳಿಗೆ ಅವರಜ್ಜಿ ಹೇಳ್ತಿದ್ದ ಕರಡಿಗೆ ಪ್ರಿಯವಾದ ಅಳಸಿನ ಹಣ್ಣಿನ ಕಥೆ ರೆಲೆ ಆಗ್ತಿತ್ತೊ ಏನೊ! ಹೊಸ ಫಲವನ್ನ ದೇವ್ರಿಗೆ ಅಂತ ಎಡೆ ಕೊಡೋರು. ಅಲ್ಲಿ ಪೂಜಾರ್ರು ತೊಳೆ ಸೀಳಿ ಕಾಯಿ ಬೆಲ್ಲ ಹಾಕಿ ಇನ್ನೂ ರುಚಿ ಕಟ್ಟಂಗೆ ಮಾಡಿರರು.

ಆಗಿನ ಹಣ್ಣುಗಳು, ಈಗಿನಂಗೆ ಹೈಬ್ರಿಡ್ ಅದು ಇದು ಉದ್ದುಕೆ ದಪ್ಪಗೆ ಇದ್ದುದು ಕಮ್ಮಿ ಅನುಸ್ತೆ. ಸಣ್ಣದಾಗಿದ್ರು ತೊಳೆಗಳು ತುಂಬಿರವು. ಒಳಗಡೆ ತೊಳೆಗಳು ಅವಿತಿರುವ ಬಗೆಯನ್ನು ಅದರ ಬಾಹ್ಯ ಆಕಾರದಲ್ಲೆ ಕೆಲವುಕಡೆ ಉಂಡುಂಡ್ಗೆ, ಇನ್ನ ಕೆಲವು ಕಡೆ ಹೊಟ್ಟೆ ಒಳಿಕೋದಂಗೆ ಇದ್ದು ಬಿಟ್ಟುಕೊಡವು. ನಾವೆಲ್ಲ ಒಂದೆರೆಡು ಪಟ್ಟೆ ತಿಂದು, ಸಾಕಾಗದಿದ್ದರೆ ತೊಳೆ ಪಕ್ಕದಲ್ಲೇ ಇರ್ತಿದ್ದ ಹಣ್ಣಿನ ಬಣ್ಣದ್ದೇ ಇದ್ದ ಗಟ್ಟಿ ಸ್ವಾಡೆಗಳನ್ನ ಜಬ್ಬುತ್ತಿದ್ದೆವು. ಹಣ್ಣು ತಿನ್ನೋರು ತಿಂತಾ ಇದ್ರೆ ಅವ್ವ ಬಿಸಾಡುವ ಬೀಜಗಳನ್ನ ಒಂದ್ಕಡೆ ಗುಡ್ಡಿಗೆ ಆಕ್ಯಂಡು ಅವುನ್ನ ಒಣಗಿಸಿ ಸುಟ್ಟುಕೊಡೋದರ ಕಡೆಗೆ ಇಲ್ಲವೇ ಅಳಸಿನ ಬೀಜದ ಬಸ್ಸಾರು ಮಾಡೋದ್ರ ಕಡೆಗೆ ಜಾಗ್ರತಿವಹಿಸುತ್ತಿತ್ತು. ‘ಈ ಅಳಿಸ್ನಣ್ಣು ಕುಯ್ದು ಪಾಲಾಕದು ಒಂದೇ ಆ ಹಂದಿ ಸೂಡಾಡದು ಒಂದೇ’ ಅಂತ ಕುಯ್ಯುತ್ತಿದ್ದ ಯಾರೋ ಹೇಳಿದ್ದ ನೆನಪು. ಆ ನಂತರ ತೊಳೆ ಖಾಲಿಯಾಗಿರುವ ಸ್ವಾಡೆಗಳನ್ನು ದನ ಕರಿಗೆ ಆಗ್ತವೆ ಅಂತ ಅದರ ಸ್ವಾಟೆಗೆ ಹಿಡಿಯೋ ಗಾತ್ರಕ್ಕು ಕುಯ್ದು ಒಂದು ಮೊರುಕ್ಕೆ ಅದ್ನೆಲ್ಲ ಎತ್ಕೆಂಡಿರರು. ಇನ್ನ ದನ ಕರ ಇಲ್ದರು ತಗಂಡೋಗಿ ಊರು ಮುಂದಲ ತಿಪ್ಪೆಗೆ ಸ್ವಾಡೆಗಳನ್ನ ಸುರ್ದಿರರು. ಆ ಸ್ವಾಡೆಗಳನ್ನ ನೋಡಿದಾಗ್ಲೆ ಗೊತ್ತಾಗ್ತಿತ್ತು ನೆನ್ನೆ ಮೊನ್ನೆಯಿಂದ ಘಮಗುಡುತ್ತಿದ್ದವ ಈ ಕರಡಿಯೇ ಎಂದು.

ಈಗ ಎಲ್ಲೆಲ್ಲೂ ಹಲಸೆ, ಆದರೆ ಆಗಿನಂತೆ ತಿನ್ನುವ ಬಾಯಿಗಳೇ ಇಲ್ಲದಂತಾಗಿವೆ.

ಮುನ್ನೋಟ 19-06-2022 ರಿಂದ 25-06-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಹೊಸದಾಗಿ ಆರಂಭಿಸಿರುವ ಉದ್ಯಮವು ನಿಧಾನವಾಗಿ ಪ್ರಗತಿಯತ್ತ ಸಾಗುತ್ತದೆ. ಆಸಕ್ತ ಮಹಿಳೆಯರಿಗೆ ರಾಜಕೀಯದಲ್ಲಿ ಅವಕಾಶಗಳು ದೊರೆಯುವ ಸಾಧ್ಯತೆ ಇದೆ. ಅನವಶ್ಯಕ ಮಾತುಗಳನ್ನಾಡಿ ಜನರ ನಡುವೆ ನಿಷ್ಠೂರಕ್ಕೆ ಒಳಗಾಗುವ ಸಾಧ್ಯತೆಯಿದೆ, ಎಚ್ಚರವಹಿಸಿರಿ. ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ. ಷೇರು ವ್ಯವಹಾರಗಳಲ್ಲಿ ಹೆಚ್ಚು ಹಣ ಹೂಡಿಕೆ ಮಾಡದಿರುವುದು ಒಳ್ಳೆಯದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಕೃಷಿ ಕಾರ್ಮಿಕರಿಗೆ ಅನಿರೀಕ್ಷಿತ ಬಿಡುವು ದೊರೆಯುತ್ತದೆ. ಹಣ್ಣು ಮತ್ತು ಹೂವಿನ ವ್ಯಾಪಾರಿಗಳಿಗೆ ಧನಲಾಭ ಹೆಚ್ಚುತ್ತದೆ. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಪ್ರಗತಿ ಇರುತ್ತದೆ. ಸರ್ಕಾರದಿಂದ ಆಗುವ ಕೆಲಸ ಕಾರ್ಯಗಳು ಸುಗಮವಾಗಿ ಆಗುತ್ತವೆ. ಹಣಕಾಸಿನ ವಿಚಾರದಲ್ಲಿ ಸ್ವಲ್ಪ ಎಚ್ಚರಿಕೆವಹಿಸುವುದು ಒಳ್ಳೆಯದು. ಉದ್ಯೋಗದಲ್ಲಿನ ಒಳ ಶತ್ರುಗಳ ಬಗ್ಗೆ ಎಚ್ಚರವಹಿಸಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ರಾಜಕೀಯ ಸೇರಬೇಕೆನ್ನುವವರು ಆ ವಿಚಾರದಲ್ಲಿ ಗಂಭೀರ ಚಿಂತನೆಯನ್ನು ಮಾಡುವುದು ಅಗತ್ಯ. ಸಾಮಾಜಿಕ ಕೆಲಸಗಳಲ್ಲಿ ಆಸಕ್ತಿ ಹೆಚ್ಚುತ್ತದೆ. ಆತ್ಮೀಯರ ಶುಭಕಾರ್ಯಗಳಲ್ಲಿ ಉತ್ತಮವಾಗಿ ಹೊಣೆ ನಿರ್ವಹಿಸುವಿರಿ. ಸರ್ಕಾರಿ ಕೆಲಸಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆಯನ್ನು ಕಾಣಬಹುದು. ದಿನನಿತ್ಯದ ವ್ಯವಹಾರಗಳಲ್ಲಿ ತೊಂದರೆ ಇರುವುದಿಲ್ಲ. ಚಿನ್ನಾಭರಣಗಳಿಗಾಗಿ ಹಣ ಹೂಡಿಕೆ ಮಾಡುವಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಸಂಬಂಧಿಕರ ನೆರವಿಗೆ ಹೋಗಲೇಬೇಕಾದ ಅನಿವಾರ್ಯ ಪರಿಸ್ಥಿತಿ ಎದುರಾಗಬಹುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಕೊಂಚ ಹಿನ್ನಡೆ ಇರುತ್ತದೆ. ಧನ ಸಂಪನ್ಮೂಲಗಳ ಕೊರತೆಯಿಂದಾಗಿ ಕೆಲವು ಕೆಲಸಗಳು ನಿಲ್ಲಬಹುದು. ತಾಂತ್ರಿಕ ಪರಿಣಿತರಿಗೆ ಹೆಚ್ಚಿನ ಮಾನ್ಯತೆ ಸಿಗುತ್ತದೆ. ಕಲಾವಿದರುಗಳಿಗೆ ಅವಕಾಶಗಳು ದೊರೆತು ಆದಾಯ ಹೆಚ್ಚುತ್ತದೆ. ಅಭಿವೃದ್ಧಿಗೆ ಅನುಕೂಲವಾಗುವ ಕೆಲವು ಅವಕಾಶಗಳು ದೊರೆಯುತ್ತವೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಕ್ರೀಡಾಪಟುಗಳಿಗೆ ಕ್ರೀಡಾಸ್ಪರ್ಧೆಯಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಇರುತ್ತದೆ. ವಿಜ್ಞಾನಿಗಳಿಗೆ ಅವರ ಆವಿಷ್ಕಾರದಲ್ಲಿ ಮೇಲುಗೈ ಇರುತ್ತದೆ. ಸಂಗಾತಿಯ ಆರೋಗ್ಯದಲ್ಲಿ ಏರುಪೇರಾಗಬಹುದು. ಹಣದ ಒಳಹರಿವು ಸಮಾಧಾನಕರವಾಗಿ ಇರುತ್ತದೆ. ಕುಟುಂಬದಲ್ಲಿರುವ ಹಿರಿಯರ ಕೆಲವು ಆಕಾಂಕ್ಷೆಗಳು ಈಡೇರುವ ಸಾಧ್ಯತೆ ಇದೆ. ರಕ್ಷಣಾ ವಿಭಾಗದಲ್ಲಿ ಕೆಲಸ ಮಾಡುತ್ತಿರುವವರಿಗೆ ಗೌರವ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕುಟುಂಬದಲ್ಲಿ ಹೊಂದಾಣಿಕೆಗಾಗಿ ಸಾಕಷ್ಟು ಪ್ರಯತ್ನ ಪಡುವಿರಿ. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿನ ಏರುಪೇರುಗಳನ್ನು ಕಾಣಬಹುದು. ಕೋರ್ಟ್ ಸಂಬಂಧಿ ಕಲಹಗಳಲ್ಲಿ ಅಲ್ಪಮಟ್ಟಿನ ಮುನ್ನಡೆಯನ್ನು ಕಂಡು ನಿರಾಳರಾಗುವಿರಿ. ವ್ಯವಹಾರದಲ್ಲಿ ಹೆಚ್ಚು ಲಾಭವನ್ನು ನಿರೀಕ್ಷೆ ಮಾಡಬಹುದು. ಹೊಸ ಉದ್ಯೋಗಕ್ಕೆ ಸೇರುವ ವಿಚಾರದಲ್ಲಿ ಸ್ನೇಹಿತರಿಂದ ಸಲಹೆಗಳನ್ನು ಪಡೆದು ಮುನ್ನಡೆಯುವುದು ಒಳ್ಳೆಯದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಅನವಶ್ಯಕ ಪ್ರಯಾಣದಿಂದ ಧನ ನಷ್ಟ ಆಗುವ ಸಾಧ್ಯತೆಗಳಿವೆ. ಹಣಕಾಸು ಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಆದಾಯದಲ್ಲಿ ಕೊರತೆ ಆಗಲಿದೆ. ಚಿನ್ನ, ಬೆಳ್ಳಿ ಆಭರಣಗಳನ್ನು ಮಾರಾಟ ಮಾಡುವವರಿಗೆ ನಿರೀಕ್ಷಿತ ಲಾಭವಿರುವುದಿಲ್ಲ. ಮನೆ ಮಾರಾಟ ಮಾಡುವ ಸಂಸ್ಥೆಗಳ ಮುಖ್ಯಸ್ಥರಿಗೆ ಅವರ ವ್ಯವಹಾರದಲ್ಲಿ ಹಿನ್ನಡೆ ಇರುತ್ತದೆ. ಆರ್ಥಿಕ ಸ್ಥಿತಿಯು ಮಂದಗತಿಯಲ್ಲಿ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಸಾಮಾಜಿಕ ಕಾರ್ಯಕ್ರಮಗಳಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳುವಿರಿ. ಸ್ವಪ್ರಯತ್ನದಿಂದ ಕಾರ್ಯಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸುವಿರಿ. ಅವಿವಾಹಿತರಿಗೆ ವಿವಾಹ ಭಾಗ್ಯ ಒದಗುವ ಸಾಧ್ಯತೆ ಇದೆ. ಸಂತಾನ ಅಪೇಕ್ಷಿತರಿಗೆ ಶುಭಸುದ್ದಿ ಕೇಳಿಬರುವ ಸಾಧ್ಯತೆಯಿದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚಿನ ಯಶಸ್ಸು ಸಿಗುವ ಸಾಧ್ಯತೆ ಇದೆ. ಗೃಹ ವಿನ್ಯಾಸವನ್ನು ಮಾಡುವವರಿಗೆ ಬೇಡಿಕೆ ಹೆಚ್ಚುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಉದ್ಯೋಗದಲ್ಲಿ ಯಶಸ್ಸನ್ನು ಕಾಣಬಹುದು. ಕುಟುಂಬದಲ್ಲಿ ಕಲಹ ಇದ್ದವರಿಗೆ ಅದರಿಂದ ಮುಕ್ತಿ ಸಿಗುತ್ತದೆ. ಮಹಿಳಾ ಉದ್ಯೋಗಿಗಳಿಗೆ ಪದೋನ್ನತಿ ಸಿಗುವ ಸಾಧ್ಯತೆಗಳಿವೆ. ಶುಭಸಮಾರಂಭಗಳಲ್ಲಿ ಭಾಗಿಯಾಗುವ ಅವಕಾಶಗಳಿವೆ. ಆದಾಯಗಳಿಸಲು ಹೊಸ ಯಂತ್ರವೊಂದನ್ನು ಖರೀದಿ ಮಾಡುವಿರಿ. ರೈತಾಪಿ ವರ್ಗದವರಿಗೆ ಆಶಾದಾಯಕ ಕಾಲವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಕೆಲವು ಬರಹಗಾರರಿಗೆ ಪ್ರಕಾಶಕರು ಮುಂಗಡ ಹಣ ಕೊಡುವ ಸಾಧ್ಯತೆ ಇದೆ. ಹಣಕಾಸಿನ ಸ್ಥಿತಿಯು ಸಾಮಾನ್ಯವಾಗಿರುತ್ತದೆ. ಖರ್ಚಿಗೆ ಸಾಕಷ್ಟು ಕಡಿವಾಣ ಹಾಕುವುದು ಅತಿ ಅಗತ್ಯ. ವಿಷಯಾಧಾರಿತ ಚರ್ಚೆಗಳಿಂದ ಜ್ಞಾನ ಅಭಿವೃದ್ಧಿ ಆಗುತ್ತದೆ. ಮನೆಯಲ್ಲಿ ಮಂಗಳ ಕಾರ್ಯಗಳು ಆಗುವ ಸಾಧ್ಯತೆ ಇದೆ. ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಸಾಕಷ್ಟು ಯಶಸ್ಸು ಸಿಗುವ ಕಾಲ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವೈಯಕ್ತಿಕ ವ್ಯವಹಾರಗಳಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ಹಿರಿಯರು ಸಾಮಾಜಿಕ ಚಿಂತನೆಗಳನ್ನು ಮಾಡಿ ಗೌರವ ಪಡೆಯುವರು. ಕೃಷಿ ಕ್ಷೇತ್ರದಲ್ಲಿ ಹೆಚ್ಚು ಆದಾಯವನ್ನು ಕಾಣಬಹುದು. ವಸ್ತ್ರ ವ್ಯಾಪಾರವನ್ನು ಮಾಡುವವರಿಗೆ ಲಾಭ ಹೆಚ್ಚುತ್ತದೆ. ಉದ್ದಿಮೆದಾರರಿಗೆ ಕಾರ್ಮಿಕರಿಂದ ಹೆಚ್ಚು ಸಹಕಾರ ದೊರೆಯುತ್ತದೆ. ತಾಂತ್ರಿಕ ಕ್ಷೇತ್ರದಲ್ಲಿರುವವರಿಗೆ ಸ್ವಲ್ಪಮಟ್ಟಿನ ಬಿಡುವು ದೊರೆತು ಸಂತಸವಾಗುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಈ ಹಿಂದೆ ಉಳಿಕೆ ಮಾಡಿದ್ದ ಹಣ ಈಗ ಉಪಯೋಗಕ್ಕೆ ಬರುತ್ತದೆ. ಪ್ರೀತಿ ಪ್ರೇಮದಲ್ಲಿ ಹೆಚ್ಚಿನ ಯಶಸ್ಸನ್ನು ಕಾಣಬಹುದು ಹಾಗೂ ಹಿರಿಯರ ಒಪ್ಪಿಗೆ ದೊರೆಯುವ ಸಾಧ್ಯತೆ ಇದೆ. ಮುಕ್ತ ಭಾವನೆಯಿಂದ ನೀವು ಆಲೋಚಿಸಿದಾಗ ನಿಮ್ಮಲ್ಲಿರುವ ನ್ಯೂನತೆಗಳು ನಿಮಗೆ ಗೋಚರಿಸುತ್ತವೆ. ನೀವು ಹಂಗಿಸಿದವರಿಂದಲೇ ಸಹಾಯಗಳನ್ನು ಪಡೆಯಬೇಕಾದಂತಹ ಪರಿಸ್ಥಿತಿ ಎದುರಾಗಬಹುದು. ವಿವಾಹದ ಬಗ್ಗೆ ಕನಸನ್ನು ಕಾಣುತ್ತಿರುವವರಿಗೆ ಸಂಬಂಧ ಕೂಡಿಬರುವ ಸಾಧ್ಯತೆ ಇದೆ.

ಪದಬಂಧ 2743



ಮೇಲಿನಿಂದ ಕೆಳಕ್ಕೆ
1. ಅಂತರಕ್ಕೆ ಉದಾಹರಣೆಯಾಗಿರುವ ಆಡು ಮತ್ತು ಆನೆ 4
2. ಹಣಬಂದಾಗ ಆಗುವ ಸಂಧಿ 4
3. ಮರ್ಯಾದೆಯ ಮಾಪನಕ್ಕೆ ತೆರಬೇಕಾದ ಬೆಲೆ 4
4. ಕಡ್ಡಾಯವಾಗಿ ಶಕ್ತಿ ಪ್ರಯೋಗ 4
7. ಹಣೆಯ ಮೇಲೆ ಎಳೆಯುವ ಹೆಸರಿನ ಬೋರ್ಡ್ 5
8. ಹುಟ್ಟಿದೂರಿನ ಹಾದಿ 5
9. ಗಂಧದ ಕಾಡು ಕನ್ನಡ ಸಿನಿಮಾ ಬೀಡು 5
10. ಉಗ್ರ ರೂಪಿ ಶಿವನ ಕುಣಿತ 5
16. ವಿಶ್ವದಲ್ಲಿ ವ್ಯವಹರಿಸಲು ಬೇಕಾಗುವ ಸಾಮಾನ್ಯ ತಿಳುವಳಿಕೆ 4
17. ಮೈಸೂರು ಪರಂಪರೆಯ ಸುಂದರ ದೊರೆ 4
19. ಕಾಪಿನ ಕಟಾಕ್ಷದಲ್ಲಿರುವವರು 4
20. ಹಿಂದೆ ಸಾಮ್ರಾಜ್ಯಷಾಹಿಗಳು ಆಕ್ರಮಿಸಿ ಬೀಡುಬಿಡುತ್ತಿದ್ದ ಪ್ರಾಂತ್ಯ 4

ಎಡದಿಂದ ಬಲಕ್ಕೆ
1. ಕುದುರೆಯನ್ನು ಕಟ್ಟಿ ಮಾಡುವ ಯಾಗ 4
3. ಮಾರಿ ಕಣಿವೆಯ ಅಮ್ಮ ಈ ದೇವತೆ 4
5. ಹಾವನ್ನು ಹಾಸಿಗೆ ಮಾಡಿಕೊಂಡವ 5
6. ಮಂದಿಯಿಂದ ಒಪ್ಪಿಗೆಯಾದ ಧರ್ಮ 5
9. ಉಂಡೆಯಾಕಾರದಲ್ಲಿ ಬಿರುಸಾಗಿ ಬೀಸಿದ ಗಾಳಿ 5
11. ವರವನ್ನು ನೀಡುವ ವೆಂಕಟ 3
13. ಮಧ್ವಾಚಾರ್ಯರು ಸ್ಥಾಪಿಸಿದ ಅಷ್ಟಮಠಗಳಲ್ಲಿ ಫಲಿಸುವ ಮಠ 4
14. ಅಭಿಮಾನದ ಮಾತಿನಲ್ಲಿ ನಮ್ಮವರೇ ಆಗಿರುವ ಮಂದಿ 4
15. ದಾನದಿಂದ ಬರುವ ರಾಕ್ಷಸ 3
16. ಪ್ರಪಂಚದಲ್ಲೆಲ್ಲಾ ತಿರುಗಾಡುವವ 5
18. ನಾಡಿ ತಂತುಗಳಿಂದ ಕೂಡಿದ ಮರ್ಯಾದಾ ಮನುಜ 5
21. ದೊರೆಯ ಗೌರವ ಮನ್ನಣೆಗೆ ಪಾತ್ರನಾಗಿ ವಂದಿತ 5
22. ನಾಟ್ಯ ಸ್ವರೂಪಿ ಶಿವ 4
23. ಹಸ್ತಾಕ್ಷರದ ಸಾಕ್ಷ್ಯವೇ ಇದು 4

ಪದಬಂಧ ಉತ್ತರ -2742

ಮೇಲಿಂದ ಕೆಳಕ್ಕೆ

1. ರಾಮನಾಮ 2.ರಕ್ಷಕರು 3.ಪೂರ್ವಜ 5.ಲಕುಮಿ 7.ವಾರಾಹ 9.ನಕ್ಷತ್ರಪುಂಜ 11.ಭೂಕಬಳಿಕೆ 12.ಸಕಲ 13.ಜನನ 17.ಸುಕೀಟಾ 18.ಸುವ್ವಾಲೆ 19.ಕಲರವ 20. ಹಸುಕರು 21.ಲಕ್ಷಣ

ಎಡದಿಂದ ಬಲಕ್ಕೆ

1. ರಾಜೋಪಚಾರ 3. ಪೂರ್ವಾಶ್ರಮ 4.ಕ್ಷಣಕಾಲ 6.ನಾಮವಾಚಕ 8.ಜನಸ್ತೋಮ 10.ರುದ್ರಭೂಮಿ 12.ಸಹಜ 14.ತ್ರಯಂಬಕ 15.ನಡುಕಂಬ 16.ಲಸುನ 18. ಸುಜನಕ 20.ಹಲಕೆಲ 22.ಲಪಟಾಯಿಸು 23.ಲೆಕ್ಕಾಚಾರ 24.ಕಡಿವಾಣ 25.ವಯೋವೃದ್ಧರು

ಮಹಾಭಾರತದ ದೃಶ್ಯಕಾವ್ಯ

ದ್ರೌಪದಿಯನ್ನು ಕುರುಸಭೆಗೆ ಎಳೆದು ತರುತ್ತಿರುವ ದುಶ್ಶಾಸನ

ಎಸ್. ಸೂರ್ಯಪ್ರಕಾಶ ಪಂಡಿತ್

ಮಹಾಭಾರತದ ಕಥೆ ನಮ್ಮಲ್ಲಿ ಯಾರಿಗೆ ತಾನೆ ಗೊತ್ತಿಲ್ಲ! ಕಥೆಗಳ ಮೂಲಕವೋ, ಓದಿನ ಮೂಲಕವೋ, ನಮ್ಮ ಊರುಗಳ ಸ್ಥಳಪುರಾಣಗಳ ಮೂಲಕವೋ – ಅಂತೂ ಕಥೆಯ ಹಂದರವನ್ನು ದಕ್ಕಿಸಿಕೊಂಡಿರುತ್ತೇವೆ; ಜೊತೆಗೆ ನಮ್ಮದೇ ಕಲ್ಪನೆಗಳನ್ನು ಸೇರಿಸಿಕೊಂಡು ಮಹಾಭಾರತವನ್ನು ಭಾವಭಿತ್ತಿಯಲ್ಲಿ ಚಿತ್ರಿಸಿಕೊಳ್ಳುತ್ತಲೇ ಇರುತ್ತೇವೆ. ಹೀಗೆ ನಮ್ಮ ಕಾಲದಲ್ಲಿ ನಮ್ಮ ಪುರಾಣಲೋಕದ ಕಲ್ಪನೆಗಳನ್ನು ಅರಳಿಸುವ ಕೆಲಸವನ್ನು ಹಲವು ಪತ್ರಿಕೆಗಳೂ ಮಾಡಿವೆ; ಅವುಗಳ ಮೂಲಕ ಹಲವರು ಕಲಾವಿದರೂ ಮಾಡಿದ್ದಾರೆ. 'ಚಂದಮಾಮ'ದಂಥವುಗಳ ಜೊತೆಗೆ 'ಸುಧಾ'ದಂಥ ಪತ್ರಿಕೆಗಳು ಕಲೆಯನ್ನು ಜನರಲ್ಲಿಗೇ ಒಯ್ಯುವಂಥ ಕೆಲಸನ್ನು ಅನನ್ಯವಾಗಿ ಮಾಡಿವೆ; ಈ ಪತ್ರಿಕೆಗಳೊಂದಿಗೆ ಗುರುತಿಸಿಕೊಂಡಿದ್ದ ಕಲಾವಿದರ ಕಲಾಕೌಶಲವು ನಮ್ಮ ಪುರಾಣಲೋಕವನ್ನು ವಿಸ್ತರಿಸಿದೆ.

ಎಂ.ಟಿ.ವಿ. ಆಚಾರ್ಯರಂಥ ಹಲವರು 'ಇಲಸ್ಟ್ರೇಷನ್' ಪ್ರಕಾರದ ಮೂಲಕ ಭಾರತೀಯ ಚಿತ್ರಕಲೆಗೆ ಕೊಟ್ಟ ಕೊಡುಗೆ ಅಪೂರ್ವವಾದುದು. ಇದೇ ಸಾಲಿಗೆ ಸೇರುತ್ತಾರೆ ಚಂದ್ರನಾಥ ಆಚಾರ್ಯ; ಅವರು 'ಸುಧಾ' ವಾರಪತ್ರಿಕೆಗಾಗಿ ರಚಿಸಿದ್ದ ಮಹಾಭಾರತ ಸರಣಿಯ ಚಿತ್ರಗಳು ಇದೀಗ ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್'ನ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನಗೊಳ್ಳುತ್ತಿವೆ; ಸಾವಿರಾರು ಸಹೃದಯರನ್ನು ಆಕರ್ಷಿಸುತ್ತಿವೆ.



ಚಂದ್ರನಾಥ ಆಚಾರ್ಯ

ಚಂದ್ರನಾಥ ಆಚಾರ್ಯ ನಮ್ಮ ದೇಶದ ಶ್ರೇಷ್ಠ ಚಿತ್ರಕಲಾವಿದರರಲ್ಲಿ ಒಬ್ಬರು; ಪ್ರಾಚೀನ–ನವೀನ ಮತ್ತು ಪೌರ್ವಾತ್ಯ–ಪಾಶ್ಚಾತ್ಯ ಕಲಾತತ್ತ್ವಗಳ ಸಿದ್ಧಿಯನ್ನು ಅವರಲ್ಲಿ ಕಾಣಬಹುದು. ಅವರ ಜಲವರ್ಣಚಿತ್ರಗಳಂತೂ ಅತ್ಯಂತ ಆಕರ್ಷಣೀಯ. ಇದೀಗ ಅವರ ಮಹಾಭಾರತ ಸರಣಿಯ ಚಿತ್ರಗಳು ಒಂದೆಡೆ ಕಾಣುವ ಅವಕಾಶ ಒದಗಿದೆ. ಆ ಅದ್ಭುತ ಕಲಾಪ್ರಪಂಚದಲ್ಲಿ ವಿಹರಿಸಿ, ನನ್ನ ಭಾವಪ್ರಪಂಚ ಸುಖಿಸಿದೆ, ಸಂತೋಷಿಸಿದೆ, ಆನಂದಿಸಿ ವಿಸ್ತಾರವಾಗಿದೆ; ಅಲ್ಲಿ ನನಗೆ ಒದಗಿದೆ ಕೆಲವೊಂದು ರಸಕ್ಷಣಗಳನ್ನು ಇಲ್ಲಿ ಹಂಚಿಕೊಳ್ಳುವ ಉತ್ಸಾಹ ನನ್ನದು; ಹೀಗೆಂದು ಇದೇನೂ ಕಲಾವಿಮರ್ಶೆಯಲ್ಲ, ಕಲಾಸ್ಪಂದನವಷ್ಟೆ.

ಕಲಾಭವನವನ್ನು ಪ್ರವೇಶಿಸುತ್ತಿದ್ದಂತೆ ನಮ್ಮನ್ನು ಮೂರು ಚಿತ್ರಗಳು ಎದುರುಗೊಳ್ಳುತ್ತವೆ; ಇವು ಒಟ್ಟು ಮಹಾಭಾರತದ, ಅಷ್ಟೇಕೆ ನಮ್ಮ ಜೀವನದ ಗೊತ್ತು–ಗುರಿಗಳ ಮೀಮಾಂಸೆಯನ್ನೇ ಸಾರುವಂತಿವೆ; 'ದುಷ್ಯಂತ–ಶಕುಂತಲೆ', 'ಪರಾಶರ–ಸತ್ಯವತಿ' ಮತ್ತು 'ಯಯಾತಿ–ದೇವಯಾನಿ'. ಈ ಮೂರು ಕೂಡ ಸ್ತ್ರೀ–ಪುರುಷ ಸಮಾಗಮವನ್ನೇ ಪ್ರತಿನಿಧಿಸುವಂಥವು. ಆದರೆ ಈ ಒಂದೊಂದು ಕಥನಕ್ಕೂ ಎಷ್ಟೊಂದು ಆಯಾಮಗಳು! ಕಲಾನಿರ್ಮಾಣದ ಮೂಲಕವೇ ಕಥಾನಕಗಳ ಮತ್ತು ಪಾತ್ರಗಳ ಸ್ವಭಾವವನ್ನೂ ಮೌಲ್ಯವನ್ನೂ ದಿಕ್ಕನ್ನೂ ಸೂಚಿಸುವ ಅಪೂರ್ವ ಸಿದ್ಧಿಯನ್ನು ದಕ್ಕಿಸಿಕೊಂಡಿದ್ದಾರೆ, ಚಂದ್ರನಾಥ ಆಚಾರ್ಯ. ಕೆಲವೊಂದು ಸೂಕ್ಷ್ಮಗಳನ್ನಷ್ಟೆ ಇಲ್ಲಿ ಮೆಲುಕು ಹಾಕಬಹುದು. ಶಕುಂತಲೆಯ ವಸ್ತ್ರಗಳ ಪಾರದರ್ಶಕತೆ ಸಹಜವಾಗಿಯೇ ನಮ್ಮನ್ನು ಸೆಳೆಯುತ್ತವೆಯೆನ್ನಿ! ಆದರೆ ಅವಳ ವ್ಯಕ್ತಿತ್ವದ ಪಾರದರ್ಶಕತೆ ಮತ್ತು ಪ್ರಾಂಜಲತೆಗಳನ್ನು ಮುಖಭಾವದಲ್ಲಿ ಆಚಾರ್ಯರು ಅಪೂರ್ವವಾಗಿ ಕಂಡರಿಸಿದ್ದಾರೆ. ಸ್ತ್ರೀಸಾಮಿಪ್ಯದಲ್ಲಿದ್ದಾಗಲೂ ಮುಕ್ಕಾಗದ ಪರಾಶರರ ದೇಹದ ಭಂಗಿ ಅವರ ತಪಸ್ಸಿನ ಶಕ್ತಿಯ ಸ್ವರೂಪವಾಗಿ ತೋರುತ್ತದೆ. ದೇವಯಾನಿಗೆ ಆಸರೆಯಾಗಿರುವ ಯಯಾತಿ ತಾನು ಬಳ್ಳಿಯ ಆಸರೆಯಲ್ಲಿಯೇ ಇದ್ದಾನೆ; ಅವನ ಸುಖ ಇನ್ನೊಬ್ಬರ ಆಶ್ರಯವನ್ನೇ ನೆಚ್ಚಿಕೊಂಡಿತ್ತು ಎಂಬುದರ ಧ್ವನಿಯನ್ನು ಈ ಚಿತ್ರದಲ್ಲಿ ತೋರುವುದು ಆಕಸ್ಮಿಕ ವಿವರವೇನಲ್ಲ.

ಕಲಾನಿರ್ಮಾಣದಲ್ಲಿ ಕಲಾವಿದರಿಗೆ ಆವಶ್ಯಕವಾದ ಭಿತ್ತಿ ಎಂದರೆ 'ಕ್ಯಾನ್ವಾಸ್'. ಇದು ಕಾಗದ ಮಾತ್ರವೇ ಅಲ್ಲ, ಲೋಕವೇ ಕಲಾವಿದನಿಗೆ ದಿಟವಾದ ಕ್ಯಾನ್ವಾಸ್ ಆಗಿ ಒದಗುತ್ತದೆ. ಲೋಕವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ, ಅದರ ಜೀವರೇಖೆಗಳನ್ನು ಕಲಾವಿದ ಕಾಗದದ ಮೂಲಕ ಅಭಿವ್ಯಕ್ತಿಸುತ್ತಾನೆ. ಈ ದೃಷ್ಟಿಯಿಂದಲೂ ಆಚಾರ್ಯರ ಲೋಕಸಂಗ್ರಹವೂ ವಿಶಿಷ್ಟ; ಅವರು ಸಂಪಾದಿಸಿಕೊಂಡಿರುವ ಕಲೆಯ 'ಟೆಕ್ನಿಕ್'ಗಳೂ ವಿಶೇಷ. ಅವರು ಬಳಸುವ ಒಂದೊಂದು ಕಾಗದದ ಮಾದರಿಯ ಸ್ವಭಾವಗಳನ್ನು ವ್ಯಕ್ತಿಗಳ ಸ್ವಭಾವದಂತೆಯೇ, ದೀರ್ಘಕಾಲದ ಒಡನಾಟದ ದೆಸೆಯಿಂದ ಆಳವಾಗಿ ಮನದಟ್ಟು ಮಾಡಿಕೊಂಡಿದ್ದಾರೆ; ಹೀಗಾಗಿಯೇ ಅವರ ಕಲಾತಂತ್ರಗಾರಿಕೆ ನವನವೋನ್ಮೇಷಶಾಲಿನಿಯಾಗಿ ಹೊಳೆಯುತ್ತಿರುವುದು. ಉದಾಹರಣೆಗೆ ನೋಡಿ: ನವಜಾತ ಕೃಷ್ಣನನ್ನು ವಸುದೇವನು ಗೋಕುಲಕ್ಕೆ ಒಯ್ಯುತ್ತಿರುವ ಚಿತ್ರವೊಂದಿದೆ. ಇದಕ್ಕಾಗಿ ಆಚಾರ್ಯರು ಬಳಸಿರುವ ಕಾಗದ 'ಡೆಕಾರ್ಪೋ'. ಅದರ ಸ್ವಭಾವವನ್ನು ಚೆನ್ನಾಗಿ ಹೃದ್ಗತ ಮಾಡಿಕೊಂಡು, 'ಕುಂಚವಿಟ್ಟಲುಪದೊಂದ ಅಗ್ಗಳಿಕೆ'ಯಂತೆ ಅವರು ಸಮುದ್ರದ ಅಲೆಗಳನ್ನು ಮೂಡಿಸಿರುವ ಪರಿ ಅಪೂರ್ವವಾಗಿದೆ. ಜಲವರ್ಣಚಿತ್ರಗಳ ಅಂತರಂಗದರ್ಪಣಕ್ಕೆ ಇಂಥ ರಸಸನ್ನಿವೇಶಗಳೇ ರಸಕ್ಷಣಗಳಲ್ಲವೆ? ಕಲಾವಿದನ ಲೋಕಸಹಾನುಭೂತಿಯ ಜೊತೆಗೆ ಅವನ ವ್ಯಕ್ತಿತ್ವದ ಹೃದಯದರ್ಶನಕ್ಕೂ ಅವನ ಕಲಾಕೃತಿಗಳೇ ಸಾಕ್ಷಿಯಾಗಿ ನಿಂತಿರುತ್ತವೆ. ಆಚಾರ್ಯರು ತಮ್ಮ ಕಲಾಕೃತಿಗಳಲ್ಲಿ ಸಹಿಯನ್ನು ಬಳಸುವ ವಿಧಾನದಲ್ಲಿ ಅವರ ಕಲಾದರ್ಶನವೂ ವ್ಯಕ್ತಿತ್ವದ ಪಾಕವೂ ಕಾಣುತ್ತದೆ. ಚಿತ್ರದಿಂದ ಪ್ರತ್ಯೇಕವಾಗಿಯೋ ಅಥವಾ ಎದ್ದುಕಾಣುವಂತೆಯೋ ಅವರ ಸಹಿ ಇರುವುದಿಲ್ಲ; ಚಿತ್ರದ ಸೌಂದರ್ಯಕ್ಕೆ 'ಕಲೆ'ಯಾಗದಂತೆ, ಸಹಜವಾಗಿ ಕಲೆಯ ಭಾಗವಾಗಿಯೇ ಅದು ಸೇರಿಕೊಂಡಂತೆ ಇರುತ್ತದೆ. ಆಚಾರ್ಯರು ನೇರವಾಗಿ ಬಿಳಿಬಣ್ಣವನ್ನು ತಮ್ಮ ಚಿತ್ರರಚನೆಯಲ್ಲಿ ಬಳಸಿಕೊಳ್ಳುವುದು ವಿರಳ; ಕ್ಯಾನ್ವಾಸಿನ ಮೂಲವರ್ಣವನ್ನೇ ಚಿತ್ರದ ಭಾಗವಾಗಿ ಉಳಿಸಿಕೊಳ್ಳುತ್ತಾರೆ; ಲೋಕವನ್ನೂ ಕಲೆಯನ್ನೂ ಜೀವನವನ್ನೂ ಹೀಗೆ ಒಂದಾಗಿ ಬೆಸೆಯುವ ಮಹಾತಂತ್ರ ಅವರ ಕಲಾಕೌಶಲದ ಮಹಾದರ್ಶನವೇ ಹೌದು. ಈ ಕಲಾಯಾತ್ರೆ ಇದೇ 23ರವರೆಗೂ ಇರುತ್ತದೆ. ನೀವೂ ಒಮ್ಮೆ ಮಹಾಭಾರತದ ಕಲಾನುಭವದಲ್ಲಿ ವಿಹರಿಸಿ ಬನ್ನಿ.



ದುಶ್ಯಂತ ಮತ್ತು ಶಕುಂತಲೆ



ಧೃಷ್ಟದ್ಯುಮ್ನನು ದ್ರೌಪದಿಯನ್ನು ಸ್ವಯಂವರ ಮಂಟಪಕ್ಕೆ ಕರೆತರುತ್ತಿರುವುದು

ನವಜಾತ ಕೃಷ್ಣನನ್ನು ವಸುದೇವ ಗೋಕುಲಕ್ಕೆ ಒಯ್ಯುತ್ತಿರುವುದು

ಕರ್ಣನನ್ನು ಪಡೆದ ಬಳಿಕ ಚಕಿತಳಾಗಿ ನೋಡುತ್ತಿರುವ ಕುಂತಿ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಿಸ್ಸಾಗ ಚಿಕ್ಕ ಶ್ರೀಕೃಷ್ಣ ಕಥೆಯ — ದಾನ ಚಿಂತಾಮಣಿ ಅತ್ತಿಮಬ್ಬೆ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಇವರು ಅತ್ತಿಮಬ್ಬೆ. ಈಕೆ ತೈಲಪ ಚಕ್ರವರ್ತಿ ಅಹವಮಲ್ಲ ತೈಲಪ ಮತ್ತು ಮಗ ಇರಿವ ಬೆಡಂಗ ಸತ್ಯಾಶ್ರಯ (973-1008)ರ ಕಾಲದಲ್ಲಿ ಬಾಳಿದವರು. ತಂದೆ ಮಲ್ಲಪಯ್ಯ ತಾಯಿ ಅಪ್ಪಕಬ್ಬೆ. ಬಾಲ್ಯದಲ್ಲಿ ಚತುರೆ, ವಿನಯವಂತೆ, ವಿವೇಕಿಯಾಗಿದ್ದರು

ರನ್ನ, ಪೊನ್ನನಂಥ ಕವಿಗಳಿಗೆ ಆಶ್ರಯ ನೀಡಿದವರು. ಶಾಂತಿಪುರಾಣ, ಅಜಿತ ಪುರಾಣ ಕಾವ್ಯಗಳ ಹಲವಾರು ಪ್ರತಿಗಳನ್ನು ಬರೆಸಿ ಕನ್ನಡ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಿದ ಕೀರ್ತಿ ಅತ್ತಿಮಬ್ಬೆಗೆ ಸಲ್ಲುತ್ತದೆ

ಅತ್ತಿಮಬ್ಬೆಯ ಆಶ್ರಯದಲ್ಲಿ ಪೊನ್ನ 'ಶಾಂತಿ ಪುರಾಣ' ಬರೆದರು. ಅದರ ಒಂದು ಸಾವಿರ ಪ್ರತಿಗಳನ್ನು ತಾಳೆ ಗರಿಗಳ ಮೇಲೆ ಬರೆಸಿ ವಿದ್ವಾಂಸರಿಗೆ ವಿತರಿಸಿದರು. 2ನೇ ಜೈನ ತೀರ್ಥಂಕರ ಅಜಿತಸ್ವಾಮಿಯ ಕುರಿತ 12 ಆಶ್ವಾಸಗಳ ವಿಸ್ತ್ರತ ಕಥೆಯನ್ನು ರನ್ನನಿಂದ ಬರೆಸಿದರು

ತನ್ನ ಪತಿ ನಾಗದೇವ ಮತ್ತು ಸೋದರಿಯರನ್ನು ಕಳೆದುಕೊಂಡ ವಿಷಾದದಲ್ಲಿ ಮುಳುಗಿದ ಅತ್ತಿಮಬ್ಬೆಯು ಮುಂದೆ ಧಾರ್ಮಿಕ ಜೀವನವನ್ನು ನಡೆಸಿದರು. ಅವರ ಅವಧಿಯಲ್ಲಿ ಲಕ್ಕುಂಡಿಯಲ್ಲಿ ಜೈನ ಬಸದಿಗಳು ನಿರ್ಮಾಣವಾದವು

ಹೀಗೆ ಹಲವು ಬಗೆಯ ದಾನಗಳು, ಸಾಹಿತ್ಯ, ಸಮಾಜ, ರಾಜಕಾರಣದ ಸೇವೆಯ ಕಾರಣಕ್ಕಾಗಿ ಹತ್ತಾರು ಶಾಸನಗಳು, ಗ್ರಂಥಗಳು ಅತ್ತಿಮಬ್ಬೆಯನ್ನು ಕೊಂಡಾಡಿವೆ. ಹೀಗೆ ಅವರು ಇನ್ನೂ ಜನಮಾನಸದಲ್ಲಿ ಉಳಿದಿದ್ದಾರೆ

ಅತ್ತಿಮಬ್ಬೆ ಬಾಳಿ 1994ನೇ ಇಸವಿಗೆ ಒಂದು ಸಾವಿರ ವರ್ಷಗಳಾಗಿದ್ದರಿಂದ ಆ ವರ್ಷವನ್ನು ಕರ್ನಾಟಕ ರಾಜ್ಯ ಸರ್ಕಾರ 'ಅತ್ತಿಮಬ್ಬೆ ವರ್ಷ' ಎಂದು ಘೋಷಿಸಿತ್ತು. ಅವರ ಸ್ಮರಣಾರ್ಥ ಅತ್ತಿಮಬ್ಬೆ ಪ್ರಶಸ್ತಿಯನ್ನೂ ಸ್ಥಾಪಿಸಿದೆ. ಇದು ಆ ಪ್ರಶಸ್ತಿಯ ಲಾಂಛನ

ಗಣಿತದಲ್ಲಿ ಗರ್ದಿ ಗಮ್ಮತ್ತು

ಫೋರ್ ಇನ್ ಒನ್

ಮಾಯಾಚೌಕದೊಳಗೊಂದು ಮಾಯಾಚೌಕ

ಇದೊಂದು ಅದ್ಭುತ ಮಾಯಾಚೌಕ. ಏಕೆಂದರೆ ಒಂದು ಸಾಮಾನ್ಯವಾದ ಮಾಯಾಚೌಕದಲ್ಲಿ ಮೇಲಿನಿಂದ ಕೆಳಕ್ಕೆ ಹಾಗೂ ಎಡದಿಂದ ಬಲಕ್ಕೆ ಹಾಗೂ ಮೂಲೆಯಿಂದ ಮೂಲೆಗೆ ಹೇಗೆ ಕೂಡಿದರೂ ಮೊತ್ತ ಒಂದೇ ಆಗಿರುವಂಥ ಗುಣ ಇರುತ್ತದೆ. ಆದರೆ, ಈ ವಿಶೇಷ ಮಾಯಾಚೌಕದಲ್ಲಿ ತನ್ನ ಮೂಲಗುಣ ಅಂದರೆ ಇಡೀ 9X9 ಅಂಕಣಗಳ ಮಾಯಾ ಚೌಕದಲ್ಲಿ ಹೇಗೆ ಕೂಡಿದರೂ ಮೊತ್ತ ಒಂದೇ ಬರುತ್ತದೆ. ಹಾಗೆಯೇ ಒಳಾಂಗಣದಲ್ಲಿ ಮತ್ತೆ ತಾನು ಮೂರು ಮರಿ ಮಾಯಾ ಚೌಕಗಳನ್ನು ಹುದುಗಿಸಿಕೊಂಡಿದೆ. (7X7, 5X5, 3X3 ಅಂಕಣಗಳುಳ್ಳ ಮಾಯಾಚೌಕಗಳು ಕೆಂಪು ಗೆರೆಗಳಲ್ಲಿವೆ ಗಮನಿಸಿರಿ). ಅಂದರೆ ಪ್ರತಿ ಒಳಗಿನ ಮಾಯಾ ಚೌಕವು ಮೂಲಗುಣವಾದ ಹೇಗೆ ಕೂಡಿದರೂ ಮೊತ್ತ ಒಂದೇ ಎಂಬುದನ್ನು ಸಾದರಪಡಿಸುತ್ತವೆ. ಆದರೆ ಉತ್ತರ ಪ್ರತಿ ಮಾಯಾ ಚೌಕದಲ್ಲೂ ಪ್ರತ್ಯೇಕವಾಗಿವೆ. ಒಟ್ಟಾರೆ ಇದನ್ನು ನಾಲ್ಕು ಸುತ್ತಿನ ಕೋಟೆಯ ಮಾಯಾ ಚೌಕವೆಂದು ಹೇಳಬಹುದು.

2	11	12	13	77	78	79	81	16
6	18	27	26	61	62	65	28	76
7	59	30	35	51	53	36	23	75
8	58	32	38	45	40	50	24	74
73	57	49	43	41	39	33	25	9
72	22	48	42	37	44	34	60	10
68	19	46	47	31	29	52	63	14
67	54	55	56	21	20	17	64	15
66	71	70	69	5	4	3	1	80

ಪದವಿನೋದ

ಇಲ್ಲಿ ಕೆಲವು ಇಂಗ್ಲಿಷ್ ಪದಗಳ ಉಚ್ಚಾರವನ್ನು ಕನ್ನಡದಲ್ಲಿ ಬರೆಯಬೇಕಿದೆ. ಅವುಗಳ ಕೊನೆಯ ಅಕ್ಷರಗಳ ಕನ್ನಡ ಪದ ಕೊಡಲಾಗಿದೆ. ನೀವು ಆ ಉಚ್ಚಾರವನ್ನು ಪೂರ್ಣಗೊಳಿಸಿ. ಉದಾ: ನರಿ = ಆರ್ಡಿನರಿ

1___ = ನರಿ
2___ = ಮರಿ
3___ = ಸರಿ
4___ = ಕರಿ
5___ = ಗರಿ

ಟ್ವೆಂಟಿ – 20 ಮ್ಯಾಚ್

ಎಡಭಾಗದಲ್ಲಿ ಕೊಟ್ಟಿರುವ ಲೆ ಅಕ್ಷರಗಳಿಗೆ ಸುಳಿವು ಆಧರಿಸಿ ಮಲಭಾಗದ ಅಕ್ಷರ ಹೊಂದಿಸಿ ಎರಡಕ್ಷರಗಳ ಪದ ರಚಿಸಿ

1	_ಲೆ (ಶಿರ)	A	ಲೀ
2	_ಲೆ (ಜಾಲ)	B	ಒ
3	_ಲೆ (ಆಶ್ರಯ)	C	ಜ್ವಾ
4	_ಲೆ (ಮೂಲ)	D	ಮಾ
5	_ಲೆ (ಕುಶಲ ವಿದ್ಯೆ)	E	ಸೆ
6	_ಲೆ (ನೀರು ಕಾಯಿಸಲು ಬೇಕಾದುದು)	F	ನಾ
7	_ಲೆ (ಹುಡುಗಿ)	G	ಶೋ
8	_ಲೆ (ಮನೆಯ ಜಂತಿ)	H	ನೆ
9	_ಲೆ (ಕಾಗದ, ಅಂಚೆ)	I	ಬ
10	_ಲೆ (ಕೆಳಗೆ ಪದದ ವಿರುದ್ಧ ಪದ)	J	ಓ
11	_ಲೆ (ಒಂದು ಧೂಮಕೇತುವಿನ ಹೆಸರು)	K	ಮೇ
12	_ಲೆ (ವಿದ್ಯಾಮಂದಿರ)	L	ಹ್ಯಾ
13	_ಲೆ (ಉರಿ)	M	ಶಾ
14	_ಲೆ (ಕಾಲುವೆ)	N	ತೊ
15	_ಲೆ (ಪವಾಡ)	O	ಅ
16	_ಲೆ (ಸರ)	P	ತ
17	_ಲೆ (ಒಂದು ಹಿಂದಿ ಸಿನಿಮಾ ಹೆಸರು)	Q	ಬೆ
18	_ಲೆ (ನೋವು)	R	ಕ
19	_ಲೆ (ದರ)	S	ಶೂ
20	_ಲೆ (ನೀರಿನ ತರಂಗ)	T	ಬಾ

ನಾಲಗೆ ತೊಡರು

ಇಲ್ಲಿ ಕೊಟ್ಟಿರುವ ಇಂಗ್ಲಿಷ್ ಪದಗಳನ್ನು ಬೇಗಬೇಗನೆ ಹೇಳಲು ಪ್ರಯತ್ನಿಸಿರಿ
FREE SHRUNK SHIRT

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳಿಗೆ ಪಕ್ಕದಲ್ಲಿ ಕೊಟ್ಟ ಸುಳಿವು ಆಧರಿಸಿ ಎರಡು ಅಕ್ಷರಗಳ ಪದ ರಚಿಸಿ

	ತ	ರ	ಸುಳಿವು
1			ಕಾಣು
2			ದಡ
3			ಪರವೆ
4			ರಥ
5			ನಕ್ಷತ್ರ

ಅದಲು ಬದಲು ಕಂಚಿ ಕದಲು

1 ಕಾಲಿಡಬೇಡಿ = ______
2 ಸಸಿ ಹೊಂದಿರಿ = ______
3 ಸದಾಪದರ = ______
4 ಕಳೆಹರಣ = ______

ಕಳೆದ ಸಂಚಿಕೆಯ ಸರಿ ಉತ್ತರಗಳು

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಟ್ವೆಂಟಿ –20 ಮ್ಯಾಚ್: 1 –E 2-H 3-F 4-J 5-C 6- B 7-K 8-M 9-O 10-I 11-P 12-S 13-L 14-R 15-N 16-Q 17-T 18-G 19-A 20- D

ಜಾಣಪದ ಆಟ: 1 ಕಾಸು 2 ಕೂಸು 3 ಕೋಸು 4 ಕಸಿ 5 ಕಂಸ

ಅದಲು ಬದಲು: 1 ದಿನದಾಟ 2 ದಾಳಿಕೋರ 3 ಪಾದಯಾತ್ರೆ 4 ಮಹಾಗುರು

ಹೊಂದಿಸು ಆನಂದಿಸು

ಬಿಲ್ವ	ಬೇವು	ಅತ್ತಿ	ಅಶ್ವತ್ಥ	ಬನ್ನಿ
ಅತ್ತಿ	ಬಿಲ್ವ	ಬನ್ನಿ	ಬೇವು	ಅಶ್ವತ್ಥ
ಬನ್ನಿ	ಅತ್ತಿ	ಅಶ್ವತ್ಥ	ಬಿಲ್ವ	ಬೇವು
ಅಶ್ವತ್ಥ	ಬನ್ನಿ	ಬೇವು	ಅತ್ತಿ	ಬಿಲ್ವ
ಬೇವು	ಅಶ್ವತ್ಥ	ಬಿಲ್ವ	ಬನ್ನಿ	ಅತ್ತಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಐಶ್ವರ್ಯ ಜಿ.ಆರ್, ಆನಂದಪುರ (ಶಿವಮೊಗ್ಗ)

ವಿಸ್ಮಯ ಆರ್.ವೈ., ದಾವಣಗೆರೆ

ಭೂಮಿಕಾ ನಾಗಾವಿ, ತಾಳಿಕೋಟಿ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.
ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಜನನ: 13-05-1930 ಮರಣ: 18-06-2022

ಡಾ॥ ಎಲ್. ಶಿವಲಿಂಗಯ್ಯ, B.E, F.I.E

ನಿವೃತ್ತ ಇಂಜಿನಿಯರ್ ಇನ್ ಚೀಫ್ ಮತ್ತು ವಿಶೇಷ ಕಾರ್ಯದರ್ಶಿಗಳು,
ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ
ಸಂಸ್ಥಾಪಕ ಅಧ್ಯಕ್ಷರು, ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ (ರಿ),
ಮಹಾಲಕ್ಷ್ಮೀಪುರಂ, ಬೆಂಗಳೂರು-560086

ಇಂತಿ ದುಃಖತಪ್ತರು

ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು
ಪ್ರಾಂಶುಪಾಲರು ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ

ಸೂಚನೆ: ಇಂದು ಮಧ್ಯಾಹ್ನ 03 ಗಂಟೆವರೆಗೆ ಮೃತರ ಸ್ವಗೃಹ ಸದಾಶಿವನಗರದಲ್ಲಿ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ

ಸವಿನೆನಪು

ಆರ್. ಸುಬ್ಬರಾಜು

ನಿಧನ: 19-06-2005

ನೀವು ನಮ್ಮನ್ನಗಲಿ ಇಂದಿಗೆ ಹದಿನೇಳು ವರ್ಷಗಳು ನಿಮ್ಮ ನೆನಪು ಸದಾ ಹಸಿರು. ನಿಮ್ಮ ತಾಳ್ಮೆ, ತ್ಯಾಗ, ಪ್ರೀತಿ, ಆದರ್ಶಮಯ ಜೀವನ ನಮಗೆ ದಾರಿದೀಪ... ಪ್ರತಿ ದಿನವೂ ಪ್ರತಿ ಕ್ಷಣವೂ ಹೆಮ್ಮೆಯಿಂದ ಸ್ಮರಿಸುವ..
ಮಗ ಬಿ.ಎಸ್. ಕೃಷ್ಣ ಮತ್ತು ಕುಟುಂಬವರ್ಗ
ಸಿಬ್ಬಂದಿ ವರ್ಗ, ಬನಶಂಕರಿ ಗ್ಲಾಸ್ ಅಂಡ್ ಪ್ಲೈವುಡ್ಸ್

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಚಿನ್ನ, ಬೆಳ್ಳಿ

(ಬೆಂಗಳೂರು)

ಸ್ಟ್ಯಾಂಡರ್ಡ್ ಚಿನ್ನ (10 ಗ್ರಾಂ)	₹52,840
ಆಭರಣ ಚಿನ್ನ (1 ಗ್ರಾಂ)	₹4,908
ಬೆಳ್ಳಿ (ಕೆ.ಜಿಗೆ)	₹62,700

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹525
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹525

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1590)
ಸೋಯಾ (ರಿಫೈನ್ಡ್)	₹1425 (1445)
ಸೂರ್ಯಕಾಂತಿ (ರಿಫೈನ್ಡ್)	₹1735 (1740)
ಪಾಮೋಲಿನ್	₹1375(1387)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹388-635
ದ್ವಿತಳಿ (ಬಿ.ವಿ)	₹315-803

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹173
ಆರ್‌ಎಸ್‌ಎಸ್-5	₹165
ಗುಡ್ ಲಾಟ್	₹157

ಫಾರ್ಚೂನ್ ಅಡುಗೆ ಎಣ್ಣೆಗಳ ಬೆಲೆ ₹ 10 ಇಳಿಕೆ

ಮುಂಬೈ (ಪಿಟಿಐ): ಅದಾನಿ ವಿಲ್ಮರ್ ಕಂಪನಿಯು ಅಡುಗೆ ಎಣ್ಣೆಗಳ ಮೇಲಿನ ಮಾರಾಟ ದರವನ್ನು ಪ್ರತಿ ಲೀಟರಿಗೆ ₹10 ಇಳಿಕೆ ಮಾಡಿದೆ.

1 ಲೀಟರಿನ ಫಾರ್ಚೂನ್ ರಿಫೈನ್ ಸನ್‌ಫ್ಲವರ್ ಆಯಿಲ್‌ನ ದರವನ್ನು (ಎಂಆರ್‌ಪಿ) ₹ 220 ರಿಂದ ₹ 210ಕ್ಕೆ ಇಳಿಕೆ ಮಾಡಲಾಗಿದೆ. ಅದೇ ರೀತಿ, 1 ಲೀಟರಿಗೆ ಫಾರ್ಚೂನ್ ಸೋಯಾಬೀನ್ ಮತ್ತು ಸಾಸಿವೆ ಎಣ್ಣೆಗಳ ಬೆಲೆಯನ್ನು ₹ 205 ರಿಂದ 195ಕ್ಕೆ ಇಳಿಕೆ ಮಾಡಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ. ಹೊಸ ದರ ಇರುವ ಅಡುಗೆ ಎಣ್ಣೆಗಳು ಶೀಘ್ರವೇ ಮಾರುಕಟ್ಟೆಗೆ ಬರಲಿವೆ ಎಂದು ಹೇಳಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕೇಂದ್ರ ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ

ವರ್ಷಾಂತ್ಯಕ್ಕೆ 25 ನಗರಗಳಲ್ಲಿ 5ಜಿ

ನವದೆಹಲಿ (ಪಿಟಿಐ): 'ದೇಶದ 25 ನಗರಗಳು ಮತ್ತು ಪಟ್ಟಣಗಳಲ್ಲಿ ವರ್ಷಾಂತ್ಯದ ವೇಳೆಗೆ 5ಜಿ ಸೇವೆಗಳು ಲಭ್ಯವಾಗಲಿವೆ' ಎಂದು ಕೇಂದ್ರ ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಶನಿವಾರ ತಿಳಿಸಿದ್ದಾರೆ.

'ಆಗಸ್ಟ್–ಸೆಪ್ಟೆಂಬರ್ ಅವಧಿಯಲ್ಲಿ 5ಜಿ ತಂತ್ರಜ್ಞಾನ ಅಳವಡಿಕೆ ಆರಂಭ ಆಗಲಿದೆ ಎಂದು ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಭಾರತವು ಅಭಿವೃದ್ಧಿಪಡಿಸಿರುವ 4ಜಿ ಮತ್ತು 5ಜಿ ಉತ್ಪನ್ನಗಳು ಮತ್ತು ತಂತ್ರಜ್ಞಾನಗಳಿಗೆ ಆದ್ಯತೆ ನೀಡಲು ಹಲವು ದೇಶಗಳು ಉತ್ಸುಕವಾಗಿವೆ. ಡಿಜಿಟಲ್ ನೆಟ್‌ವರ್ಕ್‌ಗಳಲ್ಲಿ ಜಗತ್ತಿನ ವಿಶ್ವಾಸಾರ್ಹ ಮೂಲವಾಗಿ ತನ್ನ ಸ್ಥಾನವನ್ನು ಹೆಚ್ಚಿಸಿಕೊಳ್ಳುವತ್ತ ಭಾರತವು ಸಾಗುತ್ತಿದೆ' ಎಂದು ಹೇಳಿದ್ದಾರೆ.

'ಸದ್ಯ ಭಾರತದಲ್ಲಿ ಇರುವ ಡೇಟಾ ದರವು ಜಾಗತಿಕ ಮಟ್ಟದಲ್ಲಿ ಇರುವ ಸರಾಸರಿ ದರಕ್ಕಿಂತಲೂ ಕಡಿಮೆ ಇದೆ. ಹೀಗಾಗಿ 5ಜಿ ಸೇವೆಗಳು ಆರಂಭ ಆದ ಬಳಿಕ ದರವನ್ನು ಹೊಂದಿಸಲಾಗುವುದು' ಎಂದು ಅವರು ಹೇಳಿದ್ದಾರೆ. 'ಭಾರತದಲ್ಲಿ ಈಗಲೂ 1ಜಿಬಿ ಡೇಟಾ ದರ 2 ಡಾಲರ್ ಇದೆ. ಜಾತಿಕವಾಗಿ 1 ಜಿಬಿ ಡೇಟಾ ದರವು 25 ಡಾಲರ್ ಇದೆ. ಹೀಗಾಗಿ 10 ಪಟ್ಟು ಏರಿಕೆ ಮಾಡಿದರೂ ಜಾಗತಿಕ ದರಕ್ಕಿಂತಲೂ ಕಡಿಮೆಯೇ ಇರಲಿದೆ' ಎಂದು ಅವರು ತಿಳಿಸಿದ್ದಾರೆ.

ಭಾರತದಲ್ಲಿ ಜನರು ಪ್ರತಿ ತಿಂಗಳು ಸರಾಸರಿ 18 ಜಿಬಿ ಡೇಟಾ ಬಳಕೆ ಮಾಡುತ್ತಿದ್ದಾರೆ. ಜಾಗತಿಕವಾಗಿ ಬಳಕೆ ಆಗುತ್ತಿರುವ ಸರಾಸರಿ 11ಜಿಬಿಗಿಂತಲೂ ಇದು ಹೆಚ್ಚಿಗೆ ಇದೆ.

'ಭಾರತದಲ್ಲಿ ಡೇಟಾ ಬಳಕೆಯು ಅಭಿವೃದ್ಧಿ ಹೊಂದಿದ ದೇಶಗಳಿಗಿಂತಲೂ ಹೆಚ್ಚಿಗೆ ಇದೆ. ಹೀಗಾಗಿ ಡೇಟಾ ದರ, ಕರೆ ಕಡಿತ, ಕರೆಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಹೂಡಿಕೆಯ ಅಗತ್ಯ ಇದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ದೆಹಲಿ, ಹೈದರಾಬಾದ್, ಮುಂಬೈ ಸೇರಿದಂತೆ ಇನ್ನೂ ಕೆಲವು ನಗರಗಳಲ್ಲಿ ಟವರ್ ಅಳವಡಿಕೆ ಮಾಡಲು ಜನರು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಹೀಗಾಗಿ ಟವರ್ ಅಳವಡಿಕೆ ಕಷ್ಟವಾಗಿದೆ ಎಂದು ಅವರು ಹೇಳಿದ್ದಾರೆ.

ಮುಖ್ಯಾಂಶಗಳು

- ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಹೂಡಿಕೆ ಅಗತ್ಯ
- ದೇಶದಲ್ಲಿ ಸರಾಸರಿ ಡೇಟಾ ಬಳಕೆ ಪ್ರತಿ ತಿಂಗಳಿಗೆ 18 ಜಿಬಿ

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹18000-20000
2ನೇ ದರ್ಜೆ	₹12000-15000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-1700
ಮಧ್ಯಮ	₹1000-1400
ಸಣ್ಣ	₹400-800

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಚಿತ್ರದುರ್ಗ	
ಆಪಿ	49229-49666
ಬೆಟ್ಟೆ	38119-38559
ಕೆಂಪುಗೋಟು	27709-28110
ರಾಶಿ	48739-49189
ಕಾರ್ಕಳ	
ಹಳೆಚಾಲಿ	46000-54500
ಹೊಸಚಾಲಿ	46000-54500
ಶಿರಸಿ	
ಬೆಟ್ಟೆ	37809-43166
ಬಿಳಿಗೋಟು	22011-32986
ಚಾಲಿ	33899-39719
ರಾಶಿ	33099-48508
ತಿಪಟೂರು ಕೊಬ್ಬರಿ	
ಕನಿಷ್ಠ	13900
ಗರಿಷ್ಠ	14506
ಮಾದರಿ	14000
ಒಟ್ಟು ಆವಕ	476
	(ಕ್ವಿಂಟಲ್)

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	15900	16100	227.65 ಸೆಂಟ್ಸ್
ಎಸಿ	8960	8600	8900	
ಆರ್‌ಪಿ	9750	9850	9975	ಲಂಡನ್
ಆರ್‌ಸಿ	4800	4500	4600	2065 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

18-6-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10200-10250
ದಪ್ಪ ಮಧ್ಯಪ್ರದೇಶ(ಹೊಸ)	10200-10250
ದಪ್ಪ ಗುಜರಾತ್(ಹೊಸ)	11000-11050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1600)
ಒಂದು ವಾರದ ಡೆಲಿವರಿ	1585 (1595)
ಸೋಯಾ ಕಚ್ಚಾ	1357 (1360)
ಪಾಮ್ ವಾರದ ಡೆಲಿವರಿ	1373 (1385)
ಸೂರ್ಯಕಾಂತಿ ಎಣ್ಣೆ ಕಚ್ಚಾ	1710 (1715)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	50,800 (51,050)
ಬೆಳ್ಳಿ ಕೆ.ಜಿ	61,000 (61,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರತ್ನ, ಆಭರಣ ರಫ್ತು ಹೆಚ್ಚಳ

ಮುಂಬೈ (ಪಿಟಿಐ): ರತ್ನ ಮತ್ತು ಆಭರಣ ರಫ್ತು ಕಳೆದ ವರ್ಷದ ಮೇ ತಿಂಗಳಿಗೆ ಹೋಲಿಸಿದರೆ ಈ ವರ್ಷದ ಮೇನಲ್ಲಿ ಶೇ 20ರಷ್ಟು ಹೆಚ್ಚಾಗಿದೆ ಎಂದು ರತ್ನ ಮತ್ತು ಆಭರಣ ರಫ್ತು ಉತ್ತೇಜನ ಮಂಡಳಿ (ಜಿಜೆಇಪಿಸಿ) ಶನಿವಾರ ಹೇಳಿದೆ.

2021ರ ಮೇನಲ್ಲಿ ₹ 21,156 ಕೋಟಿ ಮೌಲ್ಯದ ರತ್ನ ಮತ್ತು ಆಭರಣ ರಫ್ತಾಗಿತ್ತು. 2022ರ ಮೇನಲ್ಲಿ ₹ 25,365 ಕೋಟಿಗೆ ಏರಿಕೆ ಆಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅಮೆರಿಕ, ಹಾಂಕಾಂಗ್, ಯುಎಇ, ಬೆಲ್ಜಿಯಂ ಸೇರಿದಂತೆ ಪ್ರಮುಖ ಮಾರುಕಟ್ಟೆಗಳಿಂದ ಬೇಡಿಕೆ ಹೆಚ್ಚಾಗಿದೆ. ಹೀಗಾಗಿ ರಫ್ತು ವಹಿವಾಟಿನಲ್ಲಿ ಏರಿಕೆ ಆಗಿದೆ ಎಂದು ಮಂಡಳಿಯ ಅಧ್ಯಕ್ಷ ಕೋಲಿನ್ ಶಾ ಹೇಳಿದ್ದಾರೆ.

ಹಿಂದಿನ ಹಣಕಾಸು ವರ್ಷದಲ್ಲಿ ಉದ್ಯಮದ ರಫ್ತು ವಹಿವಾಟನ್ನು ಪರಿಗಣಿಸಿದ ಕೇಂದ್ರ ಸರ್ಕಾರವು, ಪ್ರಸಕ್ತ ಹಣಕಾಸು ವರ್ಷಕ್ಕೆ ರಫ್ತು ಗುರಿಯನ್ನು ಶೇ 17ರಷ್ಟು ಹೆಚ್ಚಿಸಿ ₹ 3.54 ಲಕ್ಷ ಕೋಟಿಗೆ ಏರಿಕೆ ಮಾಡಿದೆ ಎಂದು ಅವರು ತಿಳಿಸಿದ್ದಾರೆ.

ಪ್ರಮುಖ ದೇಶಗಳಿಗೆ ರಫ್ತು (ಕೋಟಿಗಳಲ್ಲಿ)

ಅಮೆರಿಕ	₹19,995
ಹಾಂಕಾಂಗ್	₹10,695
ಯುಎಇ	₹6,277
ಬೆಲ್ಜಿಯಂ	₹3,417

ಯುಎಇ ಮತ್ತು ಆಸ್ಟ್ರೇಲಿಯಾದ ಜೊತೆಗೆ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದವು ಸರ್ಕಾರ ನಿಗದಿ ಮಾಡಿರುವ ಗುರಿಯನ್ನು ತಲುಪಲು ನೆರವಾಗುವ ವಿಶ್ವಾಸ ಇದೆ ಎಂದು ಹೇಳಿದ್ದಾರೆ.

ಚಿನ್ನಾಭರಣಗಳ ರಫ್ತು ಶೇ 50ರಷ್ಟು ಹೆಚ್ಚಾಗಿ ₹ 5,273ಕ್ಕೆ ತಲುಪಿದೆ. 2021ರ ಮೇನಲ್ಲಿ ₹ 3,513 ಕೋಟಿ ಮೌಲ್ಯದ ಚಿನ್ನಾಭರಣ ರಫ್ತಾಗಿತ್ತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಬೇಕಾಗಿದ್ದಾರೆ
ನೆಲಮಂಗಲ ಶ್ರೀಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠಕ್ಕೆ ಬ್ರಾಹ್ಮಣ ಅಥವಾ ಲಿಂಗಾಯಿತ ಅಡುಗೆಯವರು ಮತ್ತು ಶ್ರೀ ವೆಂಕಟೇಶ್ವರ ದೇವಸ್ಥಾನಕ್ಕೆ ಪುರೋಹಿತರು ಬೇಕಾಗಿದ್ದಾರೆ.
ಸಂಪರ್ಕಿಸಿ: 63606 42618, 94802 59762

ಬೇಕಾಗಿದ್ದಾರೆ: ವೃದ್ಧರನ್ನು, ರೋಗಿಗಳನ್ನು ಮತ್ತು ಮಗುವನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಮತ್ತು ತರಬೇತಿ ನೀಡಲಾಗುವುದು. ಸಂಬಳ: 15,000/- ರಿಂದ 20,000/-. ಆಸಕ್ತರು ಸಂಪರ್ಕಿಸಿ: 9620557000, 9620985000, 080-41115200. ಮೆರಿಟ್ಟಾ ಕೇರ್, ದೊಡ್ಡ ಬಾಣಸವಾಡಿ, ಬೆಂಗಳೂರು-43.

WANTED
For Immediate appointment, Electroplating on Plastics/ CED Coating / General Plating Personnel.
Senior Cadre Experienced Managers for Sole independent Management of Surface Treatment New Plants at Penukonda / Harohhalli / Maloor/ Oragadam.
Age:- Max 45 yrs. (nearby candidates preferred)
Call: 9845017762
e-mail: platingcv@gmail.com

ಕರ್ನಾಟಕದಾದ್ಯಂತ ಕೆಲಸ ಮಾಡಲು ಡಿಪ್ಲೊಮ ಸಿವಿಲ್ ಇಂಜಿನಿಯರ್ ಬೇಕಾಗಿದ್ದಾರೆ. ಹೊಸಬರಿಗೆ ಆದ್ಯತೆ ನೀಡಲಾಗುವುದು. ವಸತಿ ಇರುತ್ತದೆ. ಆಸಕ್ತರು ಸಂಪರ್ಕಿಸಿ: 9341301490

ಬೇಕಾಗಿದ್ದಾರೆ. ಇಸ್ತ್ರೀ ಮಾಡುವ ಸಿಬ್ಬಂದಿ (ಅನುಭವದೊಂದಿಗೆ) ದಿನಕ್ಕೆ ರೂ. 800 ಸಂಬಳ ಮತ್ತು ಶಾಪ್ ಸಹಾಯಕರು ತಿಂಗಳಿಗೆ ರೂ. 13,000. ಜಯನಗರ ಮತ್ತು ಕೋರಮಂಗಲದಲ್ಲಿ ಡ್ರೈ ಕ್ಲೀನಿಂಗ್ ಶೋ ರೂಂಗಾಗಿ, ವಯಸ್ಸು 18 ವರ್ಷದಿಂದ 40 ವರ್ಷಗಳು ಮಾತ್ರ. ಬೆಂಗಳೂರಿನ ಜಯನಗರ ಮತ್ತು ಸುತ್ತಮುತ್ತಲಿನ ಜನರು ಮಾತ್ರ ಸಂಪರ್ಕಿಸಿ: 9880266007

Accounts & Finance

ACCOUNTANT REQD for Seema Traders, APMC Yard, Yeshwantpur. Female candidates only. Contact: 9448077986, raviseema14@gmail.com

Teachers/ Professors

VIDYA SOUDHA PUBLIC SCHOOL
Affiliated to the CBSE, New Delhi
Plot No 563/A, KIADB Growth Centre, H.N. Pura Road, Hassan – 573 201
Phone: 8971566659 Website: www.vidyasoudha.edu.in
REQUIRES TEACHERS FOR Primary / High School
Subjects:
- English
- Mathematics
- Social Science
- Physical Education (Female)
Qualification: Master's / Bachelor's Degree with B.Ed,
Experience: Minimum 0 -2 Years
Salaries and benefits will be on par with industry standards.
Interested Candidates can email their CV to hr@vidyasoudha.edu.in
Apply Immediately

Cook

ಮಂಗಳೂರಿನಲ್ಲಿ ಕೇಕು ಮಾಸ್ಟರ್ ಬೇಕಾಗಿದ್ದಾರೆ. ಸಂಬಳ 20 to 25000. ವಸತಿ ಮತ್ತು ಊಟ ಕೊಡಲಾಗುವುದು. 9008713596

Drivers

HAEID REQUIRES Experienced Educated 4WH Automatic Car Driver at Rajajinagar Bangalore. Attractive Package & Immediate Placement Contact:+91 6366443134.

ಅನುಭವವುಳ್ಳ ವಾಹನ ಚಾಲಕರು ಬೇಕಾಗಿದ್ದಾರೆ. Heavy vehicle ಲೈಸನ್ಸ್ ಹೊಂದಿರಬೇಕು. ಸಂಪರ್ಕಿಸಿ: ಕೆನರಾ ಪ್ರಾಜೆಕ್ಟ್ಸ್, ಪೀಣ್ಯ, ಬೆಂಗಳೂರು. Ph 9900240446

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ಕಂಪನಿಯು ಮಹಿಳಾ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ. ಉದ್ಯೋಗ ಪಾತ್ರ: ಮಸಾಜ್ ಥೆರಪಿಸ್ಟ್, ತಾಯಿಯಾಗಿರಬೇಕು ಅಥವಾ ನವಜಾತ ಶಿಶುಗಳನ್ನು ನಿರ್ವಹಿಸುವಲ್ಲಿ ಅನುಭವ ಹೊಂದಿರಬೇಕು. ಕಂಪನಿಯಿಂದ ಮಸಾಜ್ ತರಬೇತಿಯನ್ನು ನೀಡಲಾಗುತ್ತದೆ. ಆಸಕ್ತರು ದಯವಿಟ್ಟು ಸಂಪರ್ಕಿಸಿ: 8105467343.

ವಿಶ್ವಾಸಕ್ಕೆ ಅರ್ಹರಾದ ಹೌಸ್ ಕೀಪಿಂಗ್ ಮಹಿಳೆಯರು ಕಚೇರಿ ಕೆಲಸಕ್ಕೆ ತುರ್ತಾಗಿ ಆಕರ್ಷಕ ಸಂಬಳ ನೀಡಲಾಗುವುದು. ಸಂಪರ್ಕಿಸಿ: ರಾಜಾಜಿನಗರ,+91 6366443134.

ಮನೆಯಲ್ಲಿಯೇ ಬಟ್ಟೆ ಹೊಲಿಯುವ ತಿಂಡಿ ತಿನಿಸು ಮಾಡುವ, ಮಹಿಳಾ ಉತ್ಪನ್ನ ತಯಾರಿಸುವ, ಸಾಮಾಜಿಕ ಸೇವೆಗೆ ಟ್ರಸ್ಟಿಗಳಾಗುವ ಮಹಿಳೆಯರು ಸಂಪರ್ಕಿಸಿ: 6366197165.

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Out-Station

ವಾಣಿಜ್ಯ ಸೈಟ್ ಮಾರಾಟಕ್ಕಿದೆ ಹಗರಿಬೊಮ್ಮನಹಳ್ಳಿಯಲ್ಲಿ 3600 ಚ, ಅಡಿ ವಾಣಿಜ್ಯ ಸೈಟ್ ಮಾರಾಟಕ್ಕಿದೆ ವಿಳಾಸ : ಹೊಸ ಬಸ್ ನಿಲ್ದಾಣದ ಎದುರು, ಐಷರ್ ಟ್ರ್ಯಾಕ್ಟರ್ ಶೋರೂಮ್, ಪಕ್ಕ, ಹಗರಿಬೊಮ್ಮನಹಳ್ಳಿ ಮೊ: 7975501378/ 9620722229

Industrial & Factory

Outskirts

DISTRESS SALE factory at Kssidc industrial estate KGFKolar land 32000sqft on a 15000sqft factory shed call 9845005593

ಶಿಕ್ಷಣಕ್ಕೆ

ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ: 9845114560

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರೆಂಟಲ್ ಪ್ರಾಪರ್ಟೀಸ್

Accommodation Wanted

Godown

REQUIRED OPEN & Covered Godown Space between Hiriyur and Sira Interested Parties Call: 9845039680.

ಶಿಕ್ಷಣ

Admission

ಕರ್ನಾಟಕ ಅಂಧರ ಕ್ಷೇಮಾಭ್ಯುದಯ ಸಂಸ್ಥೆಯ ವಸತಿಯುತ ಶಾಲೆಗೆ 5 ರಿಂದ 14 ವರ್ಷದವರೆಗಿನ ಗಂಡು ಮತ್ತು ಹೆಣ್ಣು ಮಕ್ಕಳ ಪ್ರವೇಶಕ್ಕೆ ಅವಕಾಶವಿದೆ ಸಂಪರ್ಕಿಸಿ: 9741122706, 9743708290

ವ್ಯಾಪಾರ

Business Offers

Finance

FINANCE AGAINST PROPERTY / BUSINESS / PROJECTS: +918610936362/ +917708215904 /+917200242522

ವೈಯಕ್ತಿಕ

Change of Name

ನಾನು ವಿನುತಾ ಪಾಟೀಲ್ ತಂದೆ ಪ್ರಕಾಶ್ ಪಾಟೀಲ್ ಮದುವೆಯ ನಂತರ ನನ್ನ ಹೆಸರನ್ನು ವಿನುತಾ ಕಲ್ಮನಿ ಕೋಂ ಕಿರಣ ಕಲ್ಮನಿ, ಎಂದು ಬದಲಾಯಿಸಿಕೊಂಡಿದ್ದೇನೆ ಇದನ್ನು ಅಫಿಡವಿಟ್ ಮೂಲಕ ಧೃಡಿಕರಿಸುತ್ತಿದ್ದೇನೆ.

ವೈವಾಹಿಕ

Brides Wanted

Hindu

ವಧು ಬೇಕಾಗಿದೆ: 36 ವರ್ಷ ಪ್ರಾಯದ ಉತ್ತಮ ಉದ್ಯೋಗದಲ್ಲಿರುವ (ಸ್ವಂತ ಮನೆ ಇರುವ) ಜಿ.ಎಸ್.ಬಿ. ವರನಿಗೆ. 9482180611

Kannada

GOWDA FAMILY is Looking for a suitable, cultured match for their 1989 born son Product Engineer, Bangalore/5'9". Father-Retired GOVT. Employee (080-69144003)

BANGALORE BASED Reputed Vishwakarma family invites an alliance for their 1988 born B.Tech IIT, MS Son Working for Google(080-69103046)

36 YEAR old Lingayath boy MBBS /MD From a Well Established Bangalore based family is looking for a match for their only son. (080-69074915)

Muslim

37 URDU Sunni Muslim MS MCh Ortho Surgeon Chennai Divorced seeking MD/MS DOCTOR bride. Contact jafahmed33@gmail.com

Grooms Wanted

Hindu

WANTED
BRIDEGROOM from Vokkaliga Community, from a decent well educated family, for my daughter, aged 23 years, Good Looking, Height 5.3 ft, working in a Software company.
Interested Contact 98805 81377

Kannada

26 YEAR old Vishwakarma girl ,Working for a Nationalized Bank is looking for an educated match for marriage. Father Retired Govt Employee (080-69103046)

1996 BORN beautiful Lingayath girl BE/ MBA associated with an MNC, Bangalore invites an alliance for early marriage(080-69074915)

WEEKEND CORNER

ಇಡೀ ವಿಶ್ವದಲ್ಲಿ ನಂ.1 ಚಿಕಿತ್ಸೆ
ಶ್ರೀ ಶಕ್ತಿ ಹೆಲ್ತ್ ಕೇರ್ (ರಿ.)
ಕೀಲು ಮೂಳೆಗಳ ಚಿಕಿತ್ಸಾಲಯ ಉಚಿತವಾಗಿ ಕೊಡಲಾಗುವುದು.
ಮಂಡಿ, ಬೆನ್ನು, ಕತ್ತುನೋವು, ಹಿಮ್ಮಡಿ ನೋವು, ಟೆನ್ನಿಸ್ ಎಲಬೋಪೇನ್, ತಲೆನೋವು, ಮೈಗ್ರೇನ್, ಮಾನಸಿಕ ಸಮಸ್ಯೆ, ಚಿಕನ್‌ಗುನ್ಯಾ, ಗಂಟುನೋವು, ರೂಮೆಟೆಡ್ ಅರ್ಥೈಟಿಸ್, ವೆರಿಕೋಸ್ ವೇಯನ್ಸ್ ಸಮಸ್ಯೆ ಕಾಲುಗಳಲ್ಲಿ ಊತ ಮತ್ತು ರಕ್ತ ಚಲನೆ ಇಲ್ಲದವರಿಗೆ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ, ಸಯಾಟಿಕ್ ಇತ್ಯಾದಿ... ವಿಶೇಷವಾದ ಎಲೆಕ್ಟ್ರೋಮ್ಯಾಗ್ನೆಟಿಕ್ ಥೆರಪಿಯಿಂದ ಯಾವುದೇ ರೀತಿಯ ಔಷಧಿ ಮತ್ತು ಶಸ್ತ್ರಚಿಕಿತ್ಸೆ ಇಲ್ಲದೇ ನೂತನ ಉಪಕರಣಗಳಿಂದ ಚಿಕಿತ್ಸೆ ದೊರೆಯುತ್ತದೆ.
ಮೊ: 9036316959 | ಪ್ರತಿದಿನ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ
ವಿಳಾಸ : ಸ್ವಸ್ತಿಕ್ ಕಾಂಪ್ಲೆಕ್ಸ್, ಪೊಲೀಸ್ ಠಾಣೆ ಎದುರು, ಶೇಷಾದ್ರಿಪುರಂ, ಬೆಂಗಳೂರು–560 020.

ಪ್ರವಾಸ

Travel

ಶ್ರೀ ಗುರುರಾಜ ಟ್ರಾವಲ್ಸ್. 8.7.2022ರಿಂದ 12ದಿನ ಕೇದಾರನಾಥ್, ಗಂಗೋತ್ರಿ, ಬದರಿನಾಥ,ಯಮನೋತ್ರಿ, ದೆಹಲಿ, ಹರಿದ್ವಾರ. 9.7.2022ರಿಂದ 6 ದಿನ ರಾಮೇಶ್ವರ, ಕನ್ಯಾಕುಮಾರಿ, ತಿವೇಂದ್ರಂ, ಅಲಪಿಬೋಟಿಂಗ್, ಗುರುವಾಯೂರು. 18.7.2022 ರಿಂದ 7ದಿನ ಭದ್ರಾಚಲಂ,ಹೈದ್ರಾಬಾದ, ಮಂತ್ರಾಲಯ,ಸುರೇಂದ್ರಪುರಿ, ವಿಜಯವಾಡ,ಶ್ರೀಶೈಲ. 11.8.2022 ರಿಂದ 5ದಿನ ಕಾಶಿ, ಅಯೋಧ್ಯ,ಗಯಾ,ಅಲಹಾಬಾದ. 9900124333, 812309993, 9611082432

Pilgrimage Tours

ಶ್ರೀಮಹಾಲಕ್ಷ್ಮೀ ಟ್ರಾವೆಲ್ಸ್. 09/07/22 ಪೂರಿ ಜಗನ್ನಾಥ್, ಕೊನಾರ್ಕ್, ಭುವನೇಶ್ವರ್. 12/07/22 ಮಧ್ಯಪ್ರದೇಶ 2 ಜ್ಯೋತಿರ್ಲಿಂಗ ಉಜ್ಜಯಿನಿ ಮಹಕಾಲೇಶ್ವರ್, ಓಂಕಾರೇಶ್ವರ. 9964527782

ಭವಿಷ್ಯ

Astrology

ಶ್ರೀ ಜೈಶಂಕರಿ ಜ್ಯೋತಿಷ್ಯ ಕೇಂದ್ರ. ವಿದ್ಯೆ, ಉದ್ಯೋಗ, ಸ್ತ್ರೀ-ಪುರುಷ ವಶೀಕರಣ, ಇಷ್ಟಪಟ್ಟವರು ನಿಮ್ಮಂತಾಗಲು, ಕೇವಲ ಮೂರು ದಿನಗಳಲ್ಲಿ ಶಾಶ್ವತವಾದ ಪರಿಹಾರ. PH:9980057857 (ಫೋನಿನ ಮುಖಾಂತರ ಪರಿಹಾರ ಮಾಡಿಕೊಡುತ್ತಾರೆ).

homefirst We'll take you home
ಆದಾಯದ ಪುರಾವೆ ಇಲ್ಲದಿದ್ದರೂ HOME LOAN!
740 6949 900
ತ್ವರಿತ ಸಾಲ ಪ್ರಕ್ರಿಯೆಗಾಗಿ ನಿಮ್ಮ KYC ಅನ್ನು ಸಿದ್ಧವಾಗಿರಿಸಿಕೊಳ್ಳಿ

ಸ್ಪರ್ಧಾಮಿತ್ರ ACADEMY
IAS / KAS
CSAT Class: By, Mr. VINAY KUMAR (Hyderabad Faculty)
From - June-21st TO 25th
PSI / PDO / FDA
Near Attiguppe Metro Station, opp. Maruti Medicals (338 Pillar) Vijayanagar, Bengaluru - 40.
9535111166 / 9535111188

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

"ಶ್ರೀಭಗವತಿ ಜ್ಯೋತಿಷ್ಯಾಲಯ" ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಉದ್ಯೋಗ, ಪ್ರೇಮವಿಚಾರ, ಇನ್ನಿತರ ಸಮಸ್ಯೆಗಳಿಗೆ 100% ಪರಿಹಾರ. ಪಂಡಿತ್ ಪರಶುರಾಮಶಾಸ್ತ್ರೀ. 8618839027

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭಾರತ–ದಕ್ಷಿಣ ಆಫ್ರಿಕಾ ಟಿ20 ಸರಣಿ ಕೊನೆ ಪಂದ್ಯ ಇಂದು; ದಿನೇಶ್ ಕಾರ್ತಿಕ್ ಆಕರ್ಷಣೆ; ಮಳೆ ಬರುವ ಸಾಧ್ಯತೆ

ಚಿನ್ನಸ್ವಾಮಿ ಅಂಗಳದಲ್ಲಿ 'ಫೈನಲ್'

ನಾಯಕ ರಿಷಭ್ ಪಂತ್ ಮತ್ತು ದಿನೇಶ್ ಕಾರ್ತಿಕ್ –ಪಿಟಿಐ ಚಿತ್ರ

ದಕ್ಷಿಣ ಆಫ್ರಿಕಾ ತಂಡದ ನಾಯಕ ಬವುಮಾ

• ಗಿರೀಶ ದೊಡ್ಡಮನಿ

ಬೆಂಗಳೂರು: ಸಿಲಿಕಾನ್ ನಗರಿಯ ಎಲ್ಲ ಹಾದಿಗಳೂ ಈಗ ಚಿನ್ನಸ್ವಾಮಿ ಕ್ರೀಡಾಂಗಣದತ್ತ ಬಂದು ಸೇರುತ್ತಿವೆ. ಅಷ್ಟೇ ಅಲ್ಲ; ಮಳೆ ಮೋಡಗಳ ಚಿತ್ತ ಕೂಡ ಈ ಕ್ರಿಕೆಟ್ ಅಂಗಳದತ್ತಲೇ ನೆಟ್ಟಿವೆ!

ಭಾನುವಾರ ರಾತ್ರಿ ಇಲ್ಲಿ ನಡೆಯಲಿರುವ ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಣ ಟಿ20 ಸರಣಿಯ ಕೊನೆಯ ಪಂದ್ಯವು ರೋಚಕ ರಸದೌತಣ ನೀಡುವ ನಿರೀಕ್ಷೆಯಲ್ಲಿ ಕ್ರಿಕೆಟ್‌ಪ್ರೇಮಿಗಳಿದ್ದಾರೆ. ಆದರೆ ಕಳೆದ ಮೂರು ದಿನಗಳಿಂದ ರಾತ್ರಿ ಹೊತ್ತಿನಲ್ಲಿ ಧಾರಾಕಾರ ಮಳೆ ಸುರಿಯುತ್ತಿದೆ. ಪಂದ್ಯ ದಿನ ಕೂಡ ಮಳೆಯಾಗುವ ಸಾಧ್ಯತೆ ಇದೆ.

ಆದರೆ, ಮಹಾನಗರಿಯ ಕ್ರಿಕೆಟ್ ರಸಿಕರ ಉತ್ಸಾಹ ಮಾತ್ರ ಕುಂದಿಲ್ಲ. ಟಿಕೆಟ್ ಪಡೆಯುವ ಪ್ರಯತ್ನವನ್ನು ಮುಂದುವರಿಸಿದ್ದಾರೆ. ಇಷ್ಟೊಂದು ಬೇಡಿಕೆ ಕುದುರಲು ಪ್ರಮುಖ ಕಾರಣವೆಂದರೆ, ಐದು ಪಂದ್ಯಗಳ ಸರಣಿಯ ಉಭಯ ತಂಡಗಳು 2–2ರಿಂದ ಸಮಬಲ ಸಾಧಿಸಿರುವುದು. ಇದರಿಂದಾಗಿ ಇಲ್ಲಿಯ ಪಂದ್ಯವು ನಿರ್ಣಾಯಕವಾಗಲಿದೆ.

ಅಲ್ಲದೇ; ಮೂರು ವರ್ಷಗಳ ನಂತರ ನಗರದಲ್ಲಿ ಅಂತರರಾಷ್ಟ್ರೀಯ ಟಿ20 ಪಂದ್ಯ ನಡೆಯುತ್ತಿರುವುದರಿಂದಲೂ ಜನರ ಕುತೂಹಲ ಹೆಚ್ಚಿದೆ. ಕೋವಿಡ್ ಕಾರಣದಿಂದ ಎರಡು ವರ್ಷ ಇಲ್ಲಿ ಐಪಿಎಲ್ ಮತ್ತು ಏಕದಿನ ಪಂದ್ಯಗಳೂ ನಡೆದಿಲ್ಲ. ಕಳೆದ ಮಾರ್ಚ್‌ನಲ್ಲಿ ನಡೆದಿದ್ದ ಭಾರತ–ಶ್ರೀಲಂಕಾ ಹೊನಲು ಬೆಳಕಿನ ಟೆಸ್ಟ್ ಪಂದ್ಯಕ್ಕೂ ಜನಸಾಗರ ಹರಿದು ಬಂದಿತ್ತು.

ಡಿ.ಕೆ ಆಕರ್ಷಣೆ: ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ ಅವರಂತಹ ಖ್ಯಾತನಾಮರು ಈ ಸರಣಿಯಲ್ಲಿ ಆಡುತ್ತಿಲ್ಲ. ಯುವ ನಾಯಕ ರಿಷಭ್ ಪಂತ್ ಮುನ್ನಡೆಸುತ್ತಿರುವ ಈ ತಂಡದಲ್ಲಿ ದಿನೇಶ್ ಕಾರ್ತಿಕ್ ಅವರೇ ಪ್ರಮುಖ ಆಕರ್ಷಣೆಯಾಗಿದ್ದಾರೆ. ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಮಿಂಚಿದ್ದರು. ಈ ತಂಡಕ್ಕೆ ಬಂದ ಮೇಲೆ ಮೊದಲ ಸಲ ಅವರು ಇಲ್ಲಿ ಆಡಲಿದ್ದಾರೆ.

ಸರಣಿಯ ಮೊದಲೆರಡೂ ಪಂದ್ಯಗಳಲ್ಲಿ ಭಾರತ ಸೋಲನುಭವಿಸಿತ್ತು. ಮೂರನೇ ಪಂದ್ಯದಲ್ಲಿ ಆತಿಥೇಯ ತಂಡದ ಆರಂಭಿಕ ಬ್ಯಾಟರ್‌ಗಳು ಮತ್ತು ಬೌಲರ್‌ಗಳು ಪ್ರತಾಪ ಮೆರೆದು ಜಯಕ್ಕೆ ಕಾರಣರಾಗಿದ್ದರು. ರಾಜ್‌ಕೋಟ್‌ನಲ್ಲಿ ನಡೆದಿದ್ದ ನಾಲ್ಕನೇ ಪಂದ್ಯದಲ್ಲಿ ಮಿಂಚಿನ ಅರ್ಧಶತಕ ಹೊಡೆದಿದ್ದ ದಿನೇಶ್ ಗೆಲುವಿನ ರೂವಾರಿಯಾಗಿದ್ದರು. ಅವರೊಂದಿಗೆ ಹಾರ್ದಿಕ್ ಪಾಂಡ್ಯ ಕೂಡ ಮಿಂಚಿದ್ದರು.

ಆದರೆ, ನಾಯಕ ರಿಷಭ್ ಬ್ಯಾಟಿಂಗ್‌ನಲ್ಲಿ ಲಯ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ಸರಣಿಯಲ್ಲಿ ಎರಡು ಅರ್ಧಶತಕ ಹೊಡೆದಿರುವ ಇಶಾನ್ ಉತ್ತಮ ಲಯದಲ್ಲಿದ್ದು, ಋತುರಾಜ್ ಮತ್ತು ಶ್ರೇಯಸ್ ಅಸ್ಥಿರ ಪ್ರದರ್ಶನ ನೀಡಿದ್ದಾರೆ. ಆರ್‌ಸಿಬಿಯ ಪ್ರತಿಭೆ, ಮಧ್ಯಮವೇಗಿ ಹರ್ಷಲ್ ಪಟೇಲ್, ಆವೇಶ್ ಖಾನ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ಪ್ರವಾಸಿ ಬಳಗದ ಬ್ಯಾಟಿಂಗ್ ಪಡೆ ಬಲಿಷ್ಠವಾಗಿದೆ. ಕ್ವಿಂಟನ್ ಡಿಕಾಕ್, ರಸಿ ವ್ಯಾನ್ ಡರ್ ಡಸೆ, ಕ್ಲಾಸನ್, ಡೇವಿಡ್ ಮಿಲ್ಲರ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿದರೆ ಆತಿಥೇಯ ಬೌಲರ್‌ಗಳಿಗೆ ಕಷ್ಟವಾಗುವುದು ಖಚಿತ. ಬೌಲಿಂಗ್ ಪಡೆಯು ಸಮತೋಲನದಿಂದ ಕೂಡಿದೆ. ಆತಿಥೇಯ ಬ್ಯಾಟರ್‌ಗಳಿಗೆ ಸವಾಲೊಡ್ಡಲು ಸಿದ್ಧವಾಗಿದೆ.

ಉಭಯ ತಂಡಗಳು 2019ರಲ್ಲಿ ಇಲ್ಲಿ ಮುಖಾಮುಖಿಯಾಗಿದ್ದವು. ಅದರಲ್ಲಿ ದಕ್ಷಿಣ ಆಫ್ರಿಕಾ ಜಯಭೇರಿ ಬಾರಿಸಿತ್ತು. ಆ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ಭಾರತ ತಂಡವಿದೆ.

ದ್ರಾವಿಡ್ ಭೇಟಿ

ಶುಕ್ರವಾರ ರಾಜ್‌ಕೋಟ್‌ನಲ್ಲಿ ಪಂದ್ಯ ಆಡಿದ ಉಭಯ ತಂಡಗಳು ಶನಿವಾರ ಸಂಜೆಯ ವೇಳೆಗೆ ಬೆಂಗಳೂರಿಗೆ ಬಂದಿಳಿದವು. ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಸಂಜೆ ಆರು ಗಂಟೆಗೆ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಭೇಟಿ ನೀಡಿ ಮರಳಿದರು.

ರಾಹುಲ್ ಭಾರತ ತಂಡದ ಕೋಚ್ ಆದ ನಂತರ ಅವರ ತವರಿನಂಗಳದಲ್ಲಿ ನಡೆಯುತ್ತಿರುವ ಮೊದಲ ಟಿ20 ಪಂದ್ಯ ಇದಾಗಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಟಿ20

ತಂಡ	ಎದುರಾಳಿ	ವಿಜೇತ	ವರ್ಷ
ಭಾರತ	ಪಾಕಿಸ್ತಾನ	ಪಾಕಿಸ್ತಾನ	ಡಿಸೆಂಬರ್ 2012
ಶ್ರೀಲಂಕಾ	ವೆಸ್ಟ್ ಇಂಡೀಸ್	ವೆಸ್ಟ್ ಇಂಡೀಸ್	ಮಾರ್ಚ್ 2016
ಆಸ್ಟ್ರೇಲಿಯಾ	ಬಾಂಗ್ಲಾದೇಶ	ಆಸ್ಟ್ರೇಲಿಯಾ	ಮಾರ್ಚ್ 2016
ಭಾರತ	ಬಾಂಗ್ಲಾದೇಶ	ಭಾರತ	ಮಾರ್ಚ್ 2016
ಭಾರತ	ಇಂಗ್ಲೆಂಡ್	ಭಾರತ	ಫೆಬ್ರುವರಿ 2017
ಭಾರತ	ಆಸ್ಟ್ರೇಲಿಯಾ	ಆಸ್ಟ್ರೇಲಿಯಾ	2019
ಭಾರತ	ದಕ್ಷಿಣ ಆಫ್ರಿಕಾ	ದಕ್ಷಿಣ ಆಫ್ರಿಕಾ	ಸೆಪ್ಟೆಂಬರ್ 2019

ಬಲಾಬಲ

ಪಂದ್ಯಗಳು	19
ಭಾರತ ಜಯ	11
ದ.ಆಫ್ರಿಕಾ ಜಯ	8

ಪಂದ್ಯ ಆರಂಭ: ರಾತ್ರಿ 7

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಉತ್ತಮ ಬೌಲಿಂಗ್

ಬೌಲರ್	ಪಂದ್ಯ	ವಿಕೆಟ್
ಭಾರತ		
ಹರ್ಷಲ್ ಪಟೇಲ್	4	7
ಭುವನೇಶ್ವರ್‌ಕುಮಾರ್	4	6
ಯಜುವೇಂದ್ರ ಚಾಹಲ್	4	6
ದಕ್ಷಿಣ ಆಫ್ರಿಕಾ		
ಡ್ವೇನ್ ಪ್ರಿಟೋರಿಯಸ್	4	5
ಎನ್ರಿಚ್ ನಾರ್ಕಿಯಾ	4	4
ಕೇಶವ್ ಮಹಾರಾಜ್	4	4

ಸರಣಿಯಲ್ಲಿ ಹೆಚ್ಚು ರನ್ ಗಳಿಸಿದವರು

ಬ್ಯಾಟರ್	ಪಂದ್ಯ	ರನ್	ಶ್ರೇಷ್ಠ
ಭಾರತ			
ಇಶಾನ್ ಕಿಶನ್	4	191	76
ಹಾರ್ದಿಕ್ ಪಾಂಡ್ಯ	4	117	46
ಶ್ರೇಯಸ್ ಅಯ್ಯರ್	4	94	40
ದಿನೇಶ್ ಕಾರ್ತಿಕ್	4	92	55
ದಕ್ಷಿಣ ಆಫ್ರಿಕಾ			
ಹೆನ್ರಿಚ್ ಕ್ಲಾಸೆನ್	3	118	81
ರಸಿ ವ್ಯಾನ್ ಡರ್ ಡಸೆ	4	97	75
ಡೇವಿಡ್ ಮಿಲ್ಲರ್	4	96	64
ತೆಂಬಾ ಬವುಮಾ	4	61	35

ಪಿಚ್ ಹೇಗಿದೆ?

ಬ್ಯಾಟರ್‌ಗಳಿಗೆ ಹೆಚ್ಚು ನೆರವು ನೀಡುವ ಪಿಚ್ ಇದಾಗಿದೆ. ಚಾಣಾಕ್ಷತನದಿಂದ ಬೌಲಿಂಗ್ ಮಾಡುವ ಮಧ್ಯಮವೇಗಿಗಳಿಗೆ ಒಂದಿಷ್ಟು ನೆರವು ಸಿಗಬಹುದು. ಆದರೆ ಸ್ಪಿನ್ನರ್‌ಗಳಿಗೆ ತುಸು ಕಷ್ಟ. ಮೂರು ವರ್ಷಗಳಿಂದ ಇಲ್ಲಿ ಸೀಮಿತ ಓವರ್‌ಗಳ ಪಂದ್ಯಗಳುನಡೆದಿಲ್ಲ.

ಭಾರತ ಹಾಕಿ ತಂಡದ ಆಟಗಾರ್ತಿಯರ ಸಂಭ್ರಮ

ಹಾಕಿ: ಪುರುಷರಿಗೆ ನಿರಾಸೆ

ಭಾರತ ಮಹಿಳಾ ತಂಡಕ್ಕೆ ಮಣಿದ ಅರ್ಜೆಂಟಿನಾ

ರಾಟರ್‌ಡ್ಯಾಮ್ (ಪಿಟಿಐ): ಗುರ್ಜಿತ್ ಕೌರ್ ಅಮೋಘ ಆಟದ ನೆರವಿನಿಂದ ಭಾರತ ಮಹಿಳಾ ಹಾಕಿ ತಂಡವು ಶನಿವಾರ ನಡೆದ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ ಬಲಿಷ್ಠ ಅರ್ಜೆಂಟಿನಾ ಎದುರು ಶೂಟೌಟ್‌ನಲ್ಲಿ 2–1ರಿಂದ ಜಯಿಸಿತು.

ಶನಿವಾರ ನಡೆದ ಪಂದ್ಯದಲ್ಲಿ ನಿಗದಿಯ ವೇಳೆಯಲ್ಲಿ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ಅರ್ಜೆಂಟಿನಾ ಮತ್ತು ಭಾರತ ತಂಡಗಳು 3–3ರಿಂದ ಸಮಬಲ ಸಾಧಿಸಿದವು. ಗುರ್ಜಿತ್ ಕೌರ್ (37 ಮತ್ತು 61ನೇ ನಿಮಿಷ) ಎರಡು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಲ್ಲಿ ಪರಿವರ್ತಿಸಿತು. ಲಾಲರೆಮ್ಸಿಯಾಮಿ ನಾಲ್ಕನೇ ನಿಮಿಷದಲ್ಲಿ ಫೀಲ್ಡ್ ಗೋಲು ಗಳಿಸಿ ಉತ್ತಮ ಆರಂಭ ನೀಡಿದ್ದರು. ಪೆನಾಲ್ಟಿ ಕಾರ್ನರ್‌ಗಳಲ್ಲಿ ಸಮರ್ಥವಾಗಿ ಆಡಿದ ಭಾರತದ ವನಿತೆಯರು ಉತ್ತಮ ಹೊಂದಾಣಿಕೆಯೊಂದಿಗೆ ಆಡಿದರು. ಯಾವುದೇ ಹಂತದಲ್ಲಿಯೂ ಎದುರಾಳಿ ತಂಡವು ಮೇಲುಗೈ ಪಡೆಯಲು ಬಿಡಲಿಲ್ಲ. ಸಬ್‌ಸ್ಟಿಟ್ಯೂಟ್ ಗಳ ಸಂಯೋಜನೆಯನ್ನೂ ಸಮರ್ಥವಾಗಿ ಬಳಸಿಕೊಂಡರು.

ಅರ್ಜೆಂಟಿನಾದ ಆಗಸ್ಟಿನಾ ಗಾರ್ಜಲೆನ್ಯ (22ನಿ, 37ನಿ ಮತ್ತು 45ನೇ ನಿ) ಹ್ಯಾಟ್ರಿಕ್ ಗೋಲು ಗಳಿಸಿ ಸಮಬಲಕ್ಕೆ ಕಾರಣರಾದರು. ಇದರಿಂದಾಗಿ ಶೂಟೌಟ್ ನಡೆಸಲಾಯಿತು. ರೋಚಕವಾಗಿದ್ದ ಈ ಸುತ್ತಿನಲ್ಲಿ ನೇಹಾ ಗೋಯಲ್ ಮತ್ತು ಸೋನಿಕಾ ತಲಾ ಒಂದು ಗೋಲು ಗಳಿಸಿದರು. ಅರ್ಜೆಂಟಿನಾ ಪರವಾಗಿ ವಿಕ್ಟೋರಿಯಾ ಗ್ರಾನೆಟೊ ಒಂದು ಗೋಲು ಹೊಡೆದರು.

ಗೋಲ್‌ಕೀಪರ್ ಕೂಡ ಆಗಿರುವ ಭಾರತ ತಂಡದ ನಾಯಕಿ ಸವಿತಾ ಪೂನಿಯಾ ಎದುರಾಳಿಗಳ ಗೋಲು ಗಳಿಸುವ ಪ್ರಯತ್ನಗಳನ್ನು ವಿಫಲಗೊಳಿಸಿದರು. ಇದರಿಂದಾಗಿ ತಂಡವು ಐತಿಹಾಸಿಕ ಜಯ ದಾಖಲಿಸಿತು.

ಹೋದ ವರ್ಷ ನಡೆದಿದ್ದ ಟೋಕಿಯೊ ಒಲಿಂಪಿಕ್ಸ್‌ನ ಸೆಮಿಫೈನಲ್‌ನಲ್ಲಿ ಭಾರತವು 1–2ರಿಂದ ಇದೇ ಅರ್ಜೆಂಟಿನಾ ಎದುರು ಸೋತಿತ್ತು.

ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಉಭಯ ತಂಡಗಳು ಮತ್ತೆ ಮುಖಾಮುಖಿಯಾಗಲಿವೆ.

ಪುರುಷರ ತಂಡಕ್ಕೆ ನಿರಾಸೆ: ಭಾರತ ಪುರುಷರ ತಂಡದವರು ಇದೇ ಟೂರ್ನಿಯ ಪಂದ್ಯದಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ ನೆದರ್ಲೆಂಡ್ಸ್ ಎದುರು 1–4 ಗೋಲುಗಳಿಂದ ನಿರಾಸೆ ಅನುಭವಿಸಿದರು.

ತುರುಸಿನ ಪೈಪೋಟಿ ಕಂಡುಬಂದ ಪಂದ್ಯವು ನಿಗದಿತ ಅವಧಿಯಲ್ಲಿ 2–2 ಗೋಲುಗಳ ಸಮಬಲದಲ್ಲಿ ಕೊನೆಗೊಂಡಿತು. ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತಕ್ಕೆ ನಿರಾಸೆ ಎದುರಾಯಿತು. ಸೋಲು ಅನುಭವಿಸಿದ ಕಾರಣ ಭಾರತ, ಪ್ರಶಸ್ತಿ ಗೆಲ್ಲುವ ಅವಕಾಶ ಕಳೆದುಕೊಂಡಿದೆ.

ಬ್ಯಾಡ್ಮಿಂಟನ್: ಪ್ರಣಯ್ ಸವಾಲು ಅಂತ್ಯ

ಜಕಾರ್ತ (ಪಿಟಿಐ): ಭಾರತದ ಎಚ್.ಎಸ್.ಪ್ರಣಯ್ ಅವರು ಇಂಡೊನೇಷ್ಯಾ ಸೂಪರ್ ಸೀರಿಸ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಸೋತು ಹೊರಬಿದ್ದರು.

ಶನಿವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಹಣಾಹಣಿಯಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ 23ನೇ ಸ್ಥಾನದಲ್ಲಿರುವ ಪ್ರಣಯ್ 16–21, 15–21 ರಲ್ಲಿ ಚೀನಾದ ಜುನ್ ಪೆಂಗ್ ಎದುರು ಪರಾಭವಗೊಂಡರು.

ಎರಡೂ ಗೇಮ್‌ಗಳಲ್ಲಿ ಸಾಕಷ್ಟು ಸ್ವಯಂಕೃತ ತಪ್ಪುಗಳನ್ನು ಮಾಡಿದ ಪ್ರಣಯ್, 40 ನಿಮಿಷಗಳಲ್ಲಿ ಸೋಲು ಒಪ್ಪಿಕೊಂಡರು. ಇಂಡೊನೇಷ್ಯಾ ಓಪನ್ ಟೂರ್ನಿಯಲ್ಲಿ ತಮ್ಮ ಎರಡನೇ ಸೆಮಿಫೈನಲ್ ಆಡಿದ ಅವರು ಮೊದಲ ಗೇಮ್‌ನ ಆರಂಭದಲ್ಲೇ 6–11 ರಲ್ಲಿ ಹಿನ್ನಡೆ ಅನುಭವಿಸಿದರು.

ಆ ಬಳಿಕ ಕೆಲಹೊತ್ತು ಮರುಹೋರಾಟದ ಸೂಚನೆ ನೀಡಿದ ಹಿನ್ನಡೆಯನ್ನು 14–16ಕ್ಕೆ ತಗ್ಗಿಸಿದರು. ಆದರೆ ಎದುರಾಳಿಗೆ ಹೆಚ್ಚಿನ ಅವಕಾಶ ನೀಡದ ಜುನ್ ಮೇಲಿಂದ ಮೇಲೆ ಪಾಯಿಂಟ್ ಕಲೆಹಾಕಿ ಗೇಮ್ ಗೆದ್ದುಕೊಂಡರು. ಎರಡನೇ ಗೇಮ್‌ನ ಆರಂಭದಿಂದಲೂ ಮುನ್ನಡೆ ಕಾಯ್ದುಕೊಂಡು ಫೈನಲ್‌ಗೆ ಲಗ್ಗೆಯಿಟ್ಟರು.

ಜುನ್ ಪೆಂಗ್ ಅವರು ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ವಿಶ್ವದ ಅಗ್ರ ರ‍್ಯಾಂಕಿಂಗ್‌ನ ಆಟಗಾರ ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸೆನ್ ಸವಾಲು ಎದುರಿಸಲಿದ್ದಾರೆ.

ಅಕ್ಸೆಲ್ಸೆನ್ ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ 19-21, 21-11, 23-21 ರಲ್ಲಿ ಮಲೇಷ್ಯಾದ ಲೀ ಜಿ ಜಿಯಾ ಎದುರು ಪ್ರಯಾಸದ ಜಯ ಸಾಧಿಸಿದರು. ಮೊದಲ ಗೇಮ್ ಸೋತರೂ ಮರುಹೋರಾಟ ನಡೆಸಿದ ಅಕ್ಸೆಲ್ಸನ್ ಪ್ರಶಸ್ತಿ ಸುತ್ತಿಗೆ ತಲುಪುವಲ್ಲಿ ಯಶಸ್ವಿಯಾದರು.

ಟೇಬಲ್ ಟೆನಿಸ್ ನಾಲ್ಕರ ಘಟ್ಟದಲ್ಲಿ ಸತ್ಯನ್‌ಗೆ ನಿರಾಸೆ

ನವದೆಹಲಿ (ಪಿಟಿಐ): ಕ್ರೊವೇಷ್ಯದ ಜಗ್ರೆಬ್‌ನಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಭಾರತದ ಸತ್ಯನ್ ಜ್ಞಾನೇಶ್ವರನ್ ಅವರ ಅಮೋಘ ಆಟಕ್ಕೆ ತೆರೆಬಿದ್ದಿದೆ.

ಶನಿವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಆಟಗಾರ 7–11, 9–11, 5–11 ರಲ್ಲಿ ವಿಶ್ವದ 18ನೇ ರ‍್ಯಾಂಕ್‌ನ ಆಟಗಾರ ಚೀನಾದ ಚುವಾಂಗ್ ಚಿ ಯುವಾನ್ ಎದುರು ಸೋತರು.

ಇದಕ್ಕೂ ಮುನ್ನ ನಡೆದಿದ್ದ 16ರ ಘಟ್ಟದ ಪಂದ್ಯದಲ್ಲಿ ಸತ್ಯನ್ 11–9, 11–7, 12–10 ರಲ್ಲಿ ಚೀನಾದ 16 ವರ್ಷದ ಆಟಗಾರ ಚೆನ್ ಯುವಾನ್‌ಯು ಅವರನ್ನು ಮಣಿಸಿದ್ದರು.

ಸತ್ಯನ್ ಮೊದಲ ಸುತ್ತಿನ ಹಣಾಯಣಿಯಲ್ಲಿ ವಿಶ್ವದ 6ನೇ ರ‍್ಯಾಂಕ್‌ನ ಆಟಗಾರ, ಸ್ಲೊವೇನಿಯದ ಜಾರ್ಜಿಕ್ ಡಾರ್ಕೊ ಅವರಿಗೆ ಆಘಾತ ನೀಡಿದ್ದರು. ಆದರೆ ಕ್ವಾರ್ಟರ್ ಫೈನಲ್‌ನಲ್ಲಿ ಅವರಿಗೆ ನಿರೀಕ್ಷಿತ ಪ್ರದರ್ಶನ ನೀಡಲು ಆಗಲಿಲ್ಲ.

ಬರ್ಮಿಂಗ್‌ಹ್ಯಾಂನಲ್ಲಿ ಜುಲೈ 28 ರಿಂದ ಆಗಸ್ಟ್ 8ರ ವರೆಗೆ ನಡೆಯಲಿರುವ ಕಾಮನ್‌ವೆಲ್ತ್ ಕೂಟದಲ್ಲಿ ಪಾಲ್ಗೊಳ್ಳುವ ಭಾರತ ಟಿಟಿ ತಂಡದಲ್ಲಿ ಸತ್ಯನ್ ಅವರು ಸ್ಥಾನ ಪಡೆದಿದ್ದಾರೆ.

ಪ್ರಶಸ್ತಿ ಸುತ್ತಿಗೆ ಮಧ್ಯಪ್ರದೇಶ, ಮುಂಬೈ

ರಣಜಿ ಕ್ರಿಕೆಟ್: ಸೆಮಿಫೈನಲ್‌ನಲ್ಲಿ ಮಣಿದ ಬಂಗಾಳ, ಸುಸ್ತಾದ ಉತ್ತರಪ್ರದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಲ್ವತ್ತೊಂದು ಸಲದ ಚಾಂಪಿಯನ್ ಮುಂಬೈ ಮತ್ತು ಒಂದು ಬಾರಿಯ ರನ್ನರ್ಸ್ ಅಪ್ ಮಧ್ಯಪ್ರದೇಶ ತಂಡಗಳು ಈ ಬಾರಿಯ ರಣಜಿ ಟ್ರೋಫಿ ಟೂರ್ನಿಯ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಆಲೂರು ಕ್ರೀಡಾಂಗಣದಲ್ಲಿ ಶನಿವಾರ ಮುಕ್ತಾಯವಾದ ಸೆಮಿಫೈನಲ್ ಪಂದ್ಯದಲ್ಲಿ ಮಧ್ಯಪ್ರದೇಶ ತಂಡವು 174 ರನ್‌ಗಳಿಂದ ಬಂಗಾಳ ತಂಡವನ್ನು ಮಣಿಸಿತು. 350 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಬಂಗಾಳ ತಂಡವು ಶುಕ್ರವಾರ ದಿನದಾಟದ ಮುಕ್ತಾಯಕ್ಕೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ಕ್ರೀಸ್‌ನಲ್ಲಿ ಉಳಿದಿದ್ದ ನಾಯಕ ಅಭಿಮನ್ಯು ಈಶ್ವರನ್ ಐದನೇ ದಿನದಾಟದಲ್ಲಿಯೂ ತುಸು ಹೋರಾಟ ತೋರಿದರು. ಆದರೆ, ಕುಮಾರ್ ಕಾರ್ತಿಕೇಯ ಸಿಂಗ್ (67ಕ್ಕೆ5) ಮತ್ತು ಗೌರವ್ ಜೈನ್ (19ಕ್ಕೆ3) ಅವರ ಉತ್ತಮ ಬೌಲಿಂಗ್ ಮುಂದೆ ಬಂಗಾಳ ತಂಡವು 175 ರನ್‌ಗಳ ಮೊತ್ತಕ್ಕೆ ಆಲೌಟ್ ಆಯಿತು.

1944 ರಿಂದ 1955ರವರೆಗೂ ಹೋಳ್ಕರ್ ನಾಲ್ಕು ಬಾರಿ ಚಾಂಪಿಯನ್ ಮತ್ತು ಆರು ಸಲ ರನ್ನರ್ಸ್ ಅಪ್ ಆಗಿತ್ತು. ತದನಂತರ ಈ ತಂಡವನ್ನು ಮಧ್ಯಪ್ರದೇಶವೆಂದು ಮರುನಾಮಕರಣ ಮಾಡಲಾಯಿತು. ಆಗಿನಿಂದ ಒಂದು ಬಾರಿ ಮಾತ್ರ ತಂಡವು ಫೈನಲ್ ತಲುಪಿತ್ತು. 23 ವರ್ಷಗಳ ನಂತರ ತಂಡದ ಪ್ರಶಸ್ತಿ ಜಯದ ಕನಸು ಮತ್ತೆ ಗರಿಗೆದರಿದೆ.

ಮುಂಬೈ ಪಾರಮ್ಯ: ಜಸ್ಟ್ ಕ್ರಿಕೆಟ್ ಮೈದಾನದಲ್ಲಿ ನಡೆದ ಇನ್ನೊಂದು ಸೆಮಿಫೈನಲ್‌ನಲ್ಲಿ ರನ್‌ಗಳ ಹೊಳೆ ಹರಿಸಿದ ಮುಂಬೈ ತಂಡವು ಉತ್ತರ ಪ್ರದೇಶ ಎದುರಿನ ಪಂದ್ಯದಲ್ಲಿ ಡ್ರಾ ಮಾಡಿಕೊಂಡಿತು. ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಫೈನಲ್ ಪ್ರವೇಶಿಸಿತು. ಎರಡನೇ ಇನಿಂಗ್ಸ್‌ನಲ್ಲಿ ಮುಂಬೈ ತಂಡವು 156 ಓವರ್‌ಗಲ್ಲಿ 4ಕ್ಕೆ533 ರನ್ ಗಳಿಸಿತು. ಕೊನೆಯ ದಿನ ಮಧ್ಯಾಹ್ನ ಡಿಕ್ಲೇರ್ ಮಾಡಿಕೊಂಡಿತು.

ಆದರೆ, ಉತ್ತರ ಪ್ರದೇಶ ತಂಡವು ಬ್ಯಾಟಿಂಗ್‌ಗೆ ಬರದೇ ಡ್ರಾಗೆ ಸಮ್ಮತಿಸಿತು.

ಮುಂಬೈ ತಂಡವು ಐದು ವರ್ಷಗಳ ನಂತರ ಫೈನಲ್ ಪ್ರವೇಶಿಸಿತು. 2016–17ರಲ್ಲಿ ರನ್ನರ್ಸ್ ಅಪ್ ಆಗಿತ್ತು. ರಣಜಿ ಇತಿಹಾಸದಲ್ಲಿ ಮುಂಬೈ ತಂಡವು 41 ಬಾರಿ ಚಾಂಪಿಯನ್ ಮತ್ತು ಐದು ಸಲ ರನ್ನರ್ ಅಪ್ ಆಗಿದೆ.

ಶುಕ್ರವಾರ ರಾತ್ರಿ ಸುರಿದ ಮಳೆಯಿಂದಾಗಿ ಮೈದಾನಗಳು ಒದ್ದೆಯಾಗಿದ್ದರಿಂದ ಎರಡೂ ಪಂದ್ಯಗಳ ಐದನೇ ದಿನದಾಟವು ವಿಳಂಬವಾಗಿ ಆರಂಭವಾದವು.

ಸಂಕ್ಷಿಪ್ತ ಸ್ಕೋರು: ಆಲೂರು ಕ್ರೀಡಾಂಗಣ–ಮೊದಲ ಇನಿಂಗ್ಸ್: ಮಧ್ಯಪ್ರದೇಶ 341, ಬಂಗಾಳ: 273, ಎರಡನೇ ಇನಿಂಗ್ಸ್: ಮಧ್ಯಪ್ರದೇಶ: 281, ಬಂಗಾಳ: 65.2 ಓವರ್‌ಗಳಲ್ಲಿ 175 (ಅಭಿಮನ್ಯು ಈಶ್ವರನ್ 78, ಶಾಬಾಜ್ ಔಟಾಗದೆ 22, ಆಕಾಶದೀಪ್ 20, ಕುಮಾರ್ ಕಾರ್ತಿಕೇಯ ಸಿಂಗ್ 67ಕ್ಕೆ5, ಸಾರಾಂಶ್ ಜೈನ್ 69ಕ್ಕೆ2, ಗೌರವ್‌ಯಾದವ್ 19ಕ್ಕೆ3) ಫಲಿತಾಂಶ: ಮಧ್ಯಪ್ರದೇಶಕ್ಕೆ 174 ರನ್‌ಗಳ ಜಯ.

ಜಸ್ಟ್ ಕ್ರಿಕೆಟ್ ಮೈದಾನ: ಮೊದಲ ಇನಿಂಗ್ಸ್– ಮುಂಬೈ: 393, ಉತ್ತರಪ್ರದೇಶ: 180, ಮುಂಬೈ: 156 ಓವರ್‌ಗಳಲ್ಲಿ 4ಕ್ಕೆ533 (ಶಮ್ಸ್ ಮುಲಾನಿ ಔಟಾಗದೆ 51, ಸರ್ಫರಾಜ್ ಖಾನ್ ಔಟಾಗದೆ 59, ಪ್ರಿನ್ಸ್ ಯಾದವ್ 92ಕ್ಕೆ2) ಫಲಿತಾಂಶ: ಡ್ರಾ. ಮೊದಲ ಇನಿಂಗ್ಸ್ ಮುನ್ನಡೆಯಿಂದ ಮುಂಬೈ ಫೈನಲ್‌ಗೆ.

ಫೈನಲ್: ಜೂನ್ 22 ರಿಂದ 26

ಸ್ಥಳ: ಎಂ. ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು

ಮಧ್ಯಪ್ರದೇಶ ತಂಡದ ಬೌಲರ್ ಕುಮಾರ್ ಕಾರ್ತಿಕೇಯ ಸಿಂಗ್ –ಪ್ರಜಾವಾಣಿ ಸಂಗ್ರಹ ಚಿತ್ರ

ಮುಖ್ಯಾಂಶಗಳು

- ಉತ್ತರ ಪ್ರದೇಶ ವಿರುದ್ಧ ಇನಿಂಗ್ಸ್ ಮುನ್ನಡೆ
- ಐದು ವರ್ಷಗಳ ನಂತರ ಫೈನಲ್ ಪ್ರವೇಶಿಸಿದ ಮುಂಬೈ
- ಮಧ್ಯಪ್ರದೇಶಕ್ಕೆ 174 ರನ್ ಜಯ

ಏಷ್ಯನ್ ಸೈಕ್ಲಿಂಗ್: ಭಾರತಕ್ಕೆ 10 ಪದಕ

ನವದೆಹಲಿ: ಭಾರತ ತಂಡ ಇಲ್ಲಿ ಆರಂಭವಾದ ಏಷ್ಯನ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ದಿನ ಒಂದು ಚಿನ್ನ ಒಳಗೊಂಡಂತೆ ಒಟ್ಟು 10 ಪದಕಗಳನ್ನು ಗೆದ್ದುಕೊಂಡಿತು.

ಜೂನಿಯರ್ ಮತ್ತು ಸೀನಿಯರ್ ವಿಭಾಗದಲ್ಲಿ ಒಂದು ಬೆಳ್ಳಿ ಹಾಗೂ ಆರು ಕಂಚಿನ ಪದಕಗಳನ್ನು ಜಯಿಸಿತು. ಇತರ ಮೂರು ಪದಕಗಳು ಪ್ಯಾರಾ ಸೈಕ್ಲಿಂಗ್ ವಿಭಾಗದಲ್ಲಿ ಬಂದವು.

ಪಾಕ್ ಸೈಕ್ಲಿಸ್ಟ್‌ಗಳಿಗೆ ವೀಸಾ (ಕರಾಚಿ ವರದಿ): ಏಷ್ಯನ್ ಎಲೈಟ್ ಮತ್ತು ಜೂನಿಯರ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಏಳು ಸದಸ್ಯರ ಪಾಕಿಸ್ತಾನ ತಂಡ ಪಾಲ್ಗೊಳ್ಳಲಿದೆ.

ಪಾಕ್ ತಂಡದ ಸದಸ್ಯರಿಗೆ ಇಸ್ಲಾಮಾಬಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ವೀಸಾ ನೀಡಿದೆ. 'ಐವರು ಸೈಕ್ಲಿಸ್ಟ್‌ಗಳು ಮತ್ತು ಇಬ್ಬರು ಅಧಿಕಾರಿಗಳನ್ನೊಳಗೊಂಡ ನಮ್ಮ ತಂಡ ವಾಘಾ ಗಡಿ ಮೂಲಕ ಭಾರತಕ್ಕೆ ಪ್ರಯಾಣ ಬೆಳೆಸಿದೆ' ಎಂದು ಪಾಕಿಸ್ತಾನ ಸೈಕ್ಲಿಂಗ್ ಫೆಡರೇಷನ್‌ನ ಕಾರ್ಯದರ್ಶಿ ಮೊಅಝ್ಝಮ್ ಖಾನ್ ಹೇಳಿದ್ದಾರೆ.

'ತಂಡದ ಜತೆ ಭಾರತಕ್ಕೆ ಪ್ರಯಾಣಿಸಬೇಕಿದ್ದ ಒಬ್ಬ ಅಧಿಕಾರಿಗೆ ಮಾತ್ರ ವೀಸಾ ದೊರೆತಿಲ್ಲ. ಆದರೆ ತಂಡದ ಇತರ ಸದಸ್ಯರಿಗೆ ವೀಸಾ ನೀಡುವಂತೆ ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿ, ವೀಸಾ ನೀಡಿರುವುದು ಒಳ್ಳೆಯ ಬೆಳವಣಿಗೆ' ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಟೆನಿಸ್: ರೋಹಿತ್‌ಗೆ 'ವೈಟ್‌ಬ್ಯಾಡ್ಜ್'

ರೋಹಿತ್

ಬೆಂಗಳೂರು: ಟೆನಿಸ್ ಅಂಪೈರ್, ಧಾರವಾಡದ ರೋಹಿತ್ ಬಾಲಾಗವಿ ಅವರು ವಿಯೆಟ್ನಾಂನಲ್ಲಿ ನಡೆದ ಐಟಿಎಫ್ ಲೆವೆಲ್–2 ಅಂಪೈರಿಂಗ್ ಕೋರ್ಸ್‌ನಲ್ಲಿ ಉತ್ತೀರ್ಣರಾಗಿದ್ದು 'ವೈಟ್ ಬ್ಯಾಡ್ಜ್ ಅಂಪೈರ್' ಮಾನ್ಯತೆ ಪಡೆದುಕೊಂಡಿದ್ದಾರೆ.

ಐಟಿಎಫ್ ಮಾನ್ಯತೆ ಪಡೆದ ಕರ್ನಾಟಕದ ನಾಲ್ಕನೇ ಹಾಗೂ ಧಾರವಾಡದ ಮೊದಲ ಅಂಪೈರ್ ಎಂಬ ಗೌರವ ಅವರಿಗೆ ಒಲಿದಿದೆ. 34 ವರ್ಷದ ರೋಹಿತ್, ಈ ಬಾರಿಯ ವಿಂಬಲ್ಡನ್ ಟೂರ್ನಿಯಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸಲಿದ್ದಾರೆ.

'ಸಣ್ಣ ಜಿಲ್ಲೆಯಿಂದ ಬಂದು, ಸಾಕಷ್ಟು ಇತಿಮಿತಿಗಳ ನಡುವೆಯೂ ಐಟಿಎಫ್ ಲೆವೆಲ್2 ಮಾನ್ಯತೆ ಪಡೆಯಲು ಸಾಧ್ಯವಾಗಿರುವುದು ಅತೀವ ಸಂತಸ ಉಂಟುಮಾಡಿದೆ' ಎಂದು ರೋಹಿತ್ ಪ್ರತಿಕ್ರಿಯಿಸಿದ್ದಾರೆ.

'ಕರ್ನಾಟಕವು ಕೇವಲ ಚಾಂಪಿಯನ್ ಆಟಗಾರರನ್ನು ಮಾತ್ರ ಬೆಳೆಸುತ್ತಿಲ್ಲ. ರೆಫರಿಗಳು ಮತ್ತು ಅಂಪೈರ್‌ಗಳನ್ನೂ ದೇಶಕ್ಕೆ ನೀಡುತ್ತಿದೆ' ಎಂದು ಕೆಎಸ್‌ಎಲ್‌ಟಿಎ ಕಾರ್ಯದರ್ಶಿ ಮಹೇಶ್ವರ್ ರಾವ್ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಫುಟ್‌ಬಾಲ್: ಮಂಡ್ಯಕ್ಕೆ ಜಯ

ಬೆಂಗಳೂರು: ಮಂಡ್ಯ ಜಿಲ್ಲಾ ಫುಟ್‌ಬಾಲ್ ಸಂಸ್ಥೆ ತಂಡ ಇಲ್ಲಿ ನಡೆಯುತ್ತಿರುವ ಅಂತರ ಜಿಲ್ಲಾ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಸಾಧಿಸಿತು.

ಶನಿವಾರ ರೋಚಕ ಹಣಾಹಣಿ ಕಂಡುಬಂದ ಪಂದ್ಯದಲ್ಲಿ ಮಂಡ್ಯ ತಂಡದವರು 2–1 ಗೋಲುಗಳಿಂದ ಬೆಳಗಾವಿ ಜಿಲ್ಲಾ ಫುಟ್‌ಬಾಲ್ ಸಂಸ್ಥೆ ತಂಡವನ್ನು ಮಣಿಸಿದರು. ಹೇಮದೀಪ್ (35 + 1 ನಿ.) ಮತ್ತು ಸಂತೋಷ್ (60 ನಿ.) ಅವರು ತಂಡದ ಗೆಲುವಿಗೆ ಕಾರಣರಾದರು. ಬೆಳಗಾವಿ ತಂಡದ ಏಕೈಕ ಗೋಲನ್ನು ಪ್ರದ್ಯುಮ್ ಗಳಿಸಿದರು.

ಮೊದಲ ಪಂದ್ಯದಲ್ಲಿ ದಕ್ಷಿಣ ಕನ್ನಡ ತಂಡದ ಎದುರು ಸೋಲು ಅನುಭವಿಸಿದ್ದ ಮಂಡ್ಯ, ಶನಿವಾರ ಸಂಘಟಿತ ಪ್ರದರ್ಶನ ನೀಡಿ ಜಯ ಸಾಧಿಸಿತು.

ಭಾನುವಾರ ನಡೆಯುವ ಪಂದ್ಯದಲ್ಲಿ ದಕ್ಷಿಣ ಕನ್ನಡ ಹಾಗೂ ಬೆಳಗಾವಿ ತಂಡಗಳು ಪೈಪೋಟಿ ನಡೆಸಲಿವೆ.

ಬ್ಯಾಸ್ಕೆಟ್‌ಬಾಲ್: ಇರಾನ್‌ಗೆ ಆಘಾತ ನೀಡಿದ ಭಾರತ

ಬೆಂಗಳೂರು: ಭಾರತ ಬಾಲಕರ ತಂಡದವರು ದೋಹಾದಲ್ಲಿ ನಡೆಯುತ್ತಿರುವ 16 ವರ್ಷದೊಳಗಿನ ಫಿಬಾ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಇರಾನ್‌ಗೆ ಆಘಾತ ನೀಡಿದರು.

ಶನಿವಾರ ನಡೆದ ಪಂದ್ಯದಲ್ಲಿ ಭಾರತ 83–78 ರಲ್ಲಿ ಜಯ ಸಾಧಿಸಿತು. ಇರಾನ್ ತಂಡ ಏಷ್ಯಾದಲ್ಲಿ ಅಗ್ರಸ್ಥಾನ ಹೊಂದಿದ್ದರೆ, ವಿಶ್ವ ರ‍್ಯಾಂಕಿಂಗ್‌ನಲ್ಲಿ 17ನೇ ಸ್ಥಾನ ಪಡೆದುಕೊಂಡಿದೆ.

ವಿರಾಮದ ವೇಳೆಗೆ ಇರಾನ್ 40–20 ರಲ್ಲಿ ಮುನ್ನಡೆ ಸಾಧಿಸಿತ್ತು. ಆದರೆ ಕೊನೆಯ ಎರಡು ಕ್ವಾರ್ಟರ್‌ಗಳಲ್ಲಿ ಅಮೋಘ ಪ್ರದರ್ಶನ ನೀಡಿದ ಭಾರತ ಜಯ ಸಾಧಿಸಿತು.

ಭಾರತದ ಪರ ಹರ್ಷ್ ದಾಗರ್ (25) ಅತಿಹೆಚ್ಚು ಪಾಯಿಂಟ್ಸ್ ಗಳಿಸಿದರು. ಕುಶಾಲ್ ಸಿಂಗ್ 19, ಲೋಕೇಂದ್ರ ಸಿಂಗ್ 15 ಪಾಯಿಂಟ್ಸ್ ಕಲೆಹಾಕಿದರು.

ಟೆನಿಸ್: ಸೆಮಿಫೈನಲ್‌ಗೆ ಗಾಫ್

ಬರ್ಲಿನ್ (ಎಪಿ): ಅಮೆರಿಕದ ಕೊಕೊ ಗಾಫ್ ಬರ್ಲಿನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಕ್ರವಾರ ಸೆಮಿಫೈನಲ್‌ಗೆ ಲಗ್ಗೆ ಇಟ್ಟರು.

ಇದೇ ಮೊದಲ ಸಲ ಅವರು ಹುಲ್ಲಿನಂಕಣದಲ್ಲಿ ಈ ಸಾಧನೆ ಮಾಡಿದರು. ಎಂಟರ ಘಟ್ಟದ ಪಂದ್ಯದಲ್ಲಿ 7–5, 6–4ರಿಂದ ಕ್ಯಾರೊಲಿನಾ ಪ್ಲಿಸ್ಕೋವಾ ವಿರುದ್ಧ ಜಯಿಸಿದರು.

ಗಾಫ್ ಫ್ರೆಂಚ್ ಓಪನ್ ಟೂರ್ನಿಯ ಫೈನಲ್ ಪ್ರವೇಶಿಸಿದ್ದರು. ಅವರು ಸೆಮಿಫೈನಲ್‌ನಲ್ಲಿ ಒನ್ಸ್ ಜಬೇರ್ ವಿರುದ್ಧ ಸೆಣಸಲಿದ್ದಾರೆ.

ಜಬೇರ್ 6–7, 6–2, 6–2ರಿಂದ ಅಲಿಯಾಕಸ್ಸಾಂಡ್ರಾ ಸಾಸ್ನೊವಿಚ್ ವಿರುದ್ಧ ಜಯಿಸಿದರು.

ಬೆಂಗಳೂರು ರೇಸ್

ಕಿಂಗ್ಸ್ ರಾನ್ಸಮ್ ಗೆಲ್ಲುವ ನಿರೀಕ್ಷೆ

ಫಿಲ್ಲೀಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಿಂಗ್ಸ್ ರಾನ್ಸಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ಕೈ ಪ್ರಿನ್ಸೆಸ್ 2, ಡಾನ್ಸ್ ಡೆನ್ 4, ಅರೇಕಾ ಎಂಜೆಲ್ 5
2ನೇ ರೇಸ್: ಅಶ್ವ ಮಗಧೀರ 1, ಸ್ಪೆಕ್ಟಾಕ್ಯುಲರ್ 4, ನಿಕೊಲಿನ 2
3ನೇ ರೇಸ್: ಟೈಕೂನಿಸ್ಟ್ 9, ಕೀಫರ್ 10, ದಿ ಸೆನ್ಸೇಷನ್ 8
4ನೇ ರೇಸ್: ಲಕ್ಕಿ ಚಾನ್ಸ್ 6, ಕೆವಾಲಿನಿ 5, ಆಬ್ಸಿಡಿಯನ್ 4
5ನೇ ರೇಸ್: ಕಿಂಗ್ಸ್ ರಾನ್ಸಮ್ 5, ಫಿಲಾಸಫಿ 6, ಕ್ರೌನ್ ಕಾನ್ಸರ್ಟ್ 1
6ನೇ ರೇಸ್: ಇಂಪೀರಿಯಲ್ ಬ್ಲೂ 2, ಪ್ರಾಮಿಸ್ ಕೆಪ್ಟ್ 7, ಪೇಯೊ 5
7ನೇ ರೇಸ್: ಮಲ್ಟಿಸ್ಟಾರರ್ 6, ಸೀರ್ಯುಸ್ ಪೆರಿಲಸ್ 3, ಪಿಂಕ್ ಜಾಸ್ಮೈನ್ 7
8ನೇ ರೇಸ್: ಮಟೇರಾ 3, ಮೆಗಾ ಸಕ್ಸಸ್ 6, ಗೋಲ್ಡ್ ಗ್ರೇ 9

ಉತ್ತಮ ಬೆಟ್: ಕಂಪೀರಿಯಲ್ ಬ್ಲೂ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ನೀರಜ್ ಚೋಪ್ರಾಗೆ ಚಿನ್ನ



ನೀರಜ್

ನವದೆಹಲಿ (ಪಿಟಿಐ): ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಅವರು ಫಿನ್ಲೆಂಡ್‌ನಲ್ಲಿ ನಡೆದ ಕೊರ್ಟೇನ್ ಗೇಮ್ಸ್‌ನ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು.

ಶನಿವಾರ ನಡೆದ ಸ್ಪರ್ಧೆಯಲ್ಲಿ ನೀರಜ್ 86.69 ಮೀ. ಸಾಧನೆ ಮಾಡಿದರು. ಟ್ರಿನಿಡಾಡ್‌ನ ಕೆಶೊರ್ನ್ ವಾಲ್ಕಟ್ (86.64 ಮೀ.) ಬೆಳ್ಳಿ ಗೆದ್ದರೆ, ಹಾಲಿ ವಿಶ್ವಚಾಂಪಿಯನ್ ಗ್ರೆನಾಡದ ಆ್ಯಂಡರ್ಸನ್ ಪೀಟರ್ಸ್ (84.75 ಮೀ.) ಮೂರನೇ ಸ್ಥಾನ ಪಡೆದುಕೊಂಡರು.

ಚೋಪ್ರಾ ಅವರ ಮೊದಲ ಪ್ರಯತ್ನ ಚಿನ್ನ ತಂದುಕೊಟ್ಟಿತು. ಅವರ ಎರಡು ಮತ್ತು ಮೂರನೇ ಪ್ರಯತ್ನಗಳು ಫೌಲ್ ಆದವು.

ಕೆಲ ದಿನಗಳ ಹಿಂದೆ ನಡೆದ ಪಾವೊ ನೂರ್ಮಿ ಗೇಮ್ಸ್‌ನಲ್ಲಿ ಅವರು 89.30 ಮೀ. ಸಾಧನೆಯೊಂದಿಗೆ ಬೆಳ್ಳಿ ಜಯಿಸಿದ್ದರು.

ಜೂನ್ 30 ರಂದು ನಡೆಯಲಿರುವ ಸ್ಟಾಕ್‌ಹೋಂ ಡೈಮಂಡ್ ಲೀಗ್‌ನಲ್ಲಿ ಚೋಪ್ರಾ ಪಾಲ್ಗೊಳ್ಳಲಿದ್ದಾರೆ.